ಗುರುವಾರ, ಏಪ್ರಿಲ್ 25, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚುನಾವಣಾ ಪ್ರಚಾರ

ಉತ್ತರಪ್ರದೇಶದ ಅಮ್ರೋಹಾ ಜಿಲ್ಲೆಯಲ್ಲಿ ಬಿಜೆಪಿ ಅಭ್ಯರ್ಥಿ ಕನ್ವರ್ ಸಿಂಗ್ ಅವರ ಬೆಂಬಲವಾಗಿ ರಾಷ್ಟ್ರೀಯ ಲೋಕದಳದ ಮುಖಂಡ ಜಯಂತ್ ಸಿಂಗ್ ಚೌಧರಿ ಅವರು ಏರ್ಪಡಿಸಿದ ಸಮಾರಂಭದಲ್ಲಿ ಕಾರ್ಯಕರ್ತರು ಕಂಡುಬಂದದ್ದು ಹೀಗೆ

ಜಾಹೀರಾತು

ಬರ ಪರಿಹಾರ: ಕೇಂದ್ರದ ಮೇಲೆ ಗೂಬೆ ಕೂರಿಸಲು ಯತ್ನ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಆರೋಪ

‘ರಾಜ್ಯದ ಖಜಾನೆ ಸಂಪೂರ್ಣ ಖಾಲಿ’

ಪ್ರಜಾವಾಣಿ ವಾರ್ತೆ

ಬಿ.ವೈ. ವಿಜಯೇಂದ್ರ

ಶಿವಮೊಗ್ಗ: ‘ರಾಜ್ಯದ ಖಜಾನೆ ಸಂಪೂರ್ಣ ಖಾಲಿ ಯಾಗಿದೆ. ರೈತರಿಗೆ ನೀಡಲೂ ಸರ್ಕಾರದ ಬಳಿ ಹಣ ಇಲ್ಲ. ಹೀಗಾಗಿ ಬರ ಪರಿಹಾರ ಹಂಚಿಕೆ ವಿಚಾರದಲ್ಲಿ ಕೇಂದ್ರವನ್ನು ತಪ್ಪಿತಸ್ಥ ಸ್ಥಾನದಲ್ಲಿ ನಿಲ್ಲಿಸಲು ಪ್ರಯತ್ನಿಸುತ್ತಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಬುಧವಾರ ಮಾತನಾಡಿ, ‘ಖಜಾನೆ ಬರಿದಾಗಿರುವ ಕಾರಣ ಪರಿಶಿಷ್ಟರ ಪಾಲಿನ ಎಸ್‌ಇಪಿ, ಟಿಎಸ್‌ಪಿ ಅನುದಾನವನ್ನು ರಾಜ್ಯ ಸರ್ಕಾರವು ಇತರ ಯೋಜನೆಗಳಿಗೆ ವರ್ಗಾಯಿಸಿದೆ. ರೈತರಿಗೆ ಬರ ಪರಿಹಾರ ಕೊಡಲು ಹಣ ಇಲ್ಲ. ಮುಂದಿನ ದಿನಗಳಲ್ಲಿ ಸರ್ಕಾರಿ ನೌಕರರಿಗೆ ಸಂಬಳ ಕೊಡಲು ಹಣ ಇರುವುದಿಲ್ಲ’ ಎಂದರು.

ರೈತರಿಗೆ ಬರ ಪರಿಹಾರ ಕೊಡುವುದಿಲ್ಲ ಎಂದು ಕೇಂದ್ರ ಸರ್ಕಾರ ಯಾವತ್ತೂ ಹೇಳಿಲ್ಲ. ಪರಿಹಾರ ಬಿಡುಗಡೆಗೆ ಅದರದ್ದೇ ಆದ ಮಾನದಂಡ ಇದೆ. ಕಾಲಾವಕಾಶ ಬೇಕಾಗುತ್ತದೆ. ಹೀಗಾಗಿ ತಡವಾಗಿದೆ. ಈ ಹಿಂದೆ ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗಲೂ ಕೇಂದ್ರದಿಂದ ನೆರೆ ಪರಿಹಾರದ ವಿತರಣೆ ವಿಳಂಬವಾಗಿತ್ತು. ಆಗಲೂ ಕೇಂದ್ರದಲ್ಲಿ ಬಿಜೆಪಿಯೇ ಅಧಿಕಾರದಲ್ಲಿದ್ದರೂ ತಡ ಆಗಿತ್ತು. ಯಡಿಯೂರಪ್ಪ ಆಗ ಕೇಂದ್ರದ ನೆರವಿಗೆ ಕಾಯದೇ ರಾಜ್ಯದ ಖಜಾನೆಯಿಂದಲೇ ಸಂತ್ರಸ್ತರಿಗೆ ಪರಿಹಾರ ಕೊಟ್ಟಿದ್ದರು. ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದೇಕೆ ಎಂದು ಪ್ರಶ್ನಿಸಿದರು.

ಅಲ್ಪಸಂಖ್ಯಾತರ ಕಲ್ಯಾಣಕ್ಕೆ ₹10,000 ಕೋಟಿ ಕೊಡುವುದಾಗಿ ಹೇಳಿ ಸಿದ್ದರಾಮಯ್ಯ ತಕ್ಷಣ ₹2,000 ಕೋಟಿ ಬಿಡುಗಡೆ ಮಾಡುತ್ತಾರೆ. ಆದರೆ, ರೈತರಿಗೆ ಬರ ಪರಿಹಾರ ಕೊಡಲು ಯಾಕೆ ಮೀನ–ಮೇಷ ಎಣಿಸಬೇಕು, ಅದರಲ್ಲೂ ರಾಜಕಾರಣ ಮಾಡುವ ಪ್ರಯತ್ನ ಏಕೆ ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು. ಅಲ್ಪಸಂಖ್ಯಾತರ ಅಭಿವೃದ್ಧಿಗೆ ತೋರುತ್ತಿರುವ ಉತ್ಸಾಹವನ್ನು ಸಂಕಷ್ಟದಲ್ಲಿರುವ ರೈತರ ವಿಚಾರದಲ್ಲೂ ಸಿದ್ದರಾಮಯ್ಯ ತೋರಿಸಬಹುದಿತ್ತು. ಅವರಿಗೆ ಪರಿಹಾರ ಕೊಡಬಹುದಿತ್ತು. ರಾಜ್ಯ ಸರ್ಕಾರ ರೈತರ ಬಗ್ಗೆ ಅಸಡ್ಡೆ ತೋರುತ್ತಿದೆ ಎಂದು ಆರೋಪಿಸಿದರು.

‘ಸುಪ್ರೀಂ ಕೋರ್ಟ್‌ನಲ್ಲಿ ಕೇಂದ್ರ ಸರ್ಕಾರ ಬರ ಪರಿಹಾರ ಕೊಡುವುದಾಗಿ ಸ್ವಯಂ ಪ್ರೇರಿತವಾಗಿ ಅಫಿಡವಿಟ್ ಸಲ್ಲಿಸಿದೆಯೇ ಹೊರತು ರಾಜ್ಯ ಸರ್ಕಾರದ ಒತ್ತಡದ ಕಾರಣಕ್ಕೆ ಅಲ್ಲ’ ಎಂದರು.

‘ಒಬಿಸಿ ಪಟ್ಟಿಗೆ ಮುಸ್ಲಿಮರನ್ನು ಸೇರಿಸಲು ಸಿ.ಎಂ ರಹಸ್ಯ ಪತ್ರ’

ವಿ.ಸುನಿಲ್ ಕುಮಾರ್

ಬೆಂಗಳೂರು: ‘ಮುಸ್ಲಿಮರನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸುವಂತೆ ರಾಷ್ಟ್ರೀಯ ಹಿಂದುಳಿದ ಆಯೋಗಕ್ಕೆ ಗುಟ್ಟಾಗಿ ಶಿಫಾರಸು ಮಾಡುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹಿಂದುಳಿದ ವರ್ಗಕ್ಕೆ ಅನ್ಯಾಯ ಮಾಡಿದ್ದಾರೆ’ ಎಂದು ಬಿಜೆಪಿ ಚುನಾವಣಾ ಸಮಿತಿ ಸಂಚಾಲಕ ವಿ.ಸುನಿಲ್‌ಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ಹಿಂದುಳಿದ ವರ್ಗಗಳ ಸಂವಿಧಾನಬದ್ಧ ಹಕ್ಕನ್ನು ಕಸಿದುಕೊಂಡು ಅದನ್ನು ಮುಸ್ಲಿಮರಿಗೆ ಹಂಚುವ ಕುತ್ಸಿತ ಹಾಗೂ ಓಲೈಕೆಯ ರಾಜಕಾರಣದ ಸಂಚು ಇದರಲ್ಲಿ ಅಡಗಿದೆ’ ಎಂದು ಆರೋಪಿಸಿದ್ದಾರೆ.

‘ಹಿಂದುಳಿದ ವರ್ಗಗಳ ಹಿತಾಸಕ್ತಿ ರಕ್ಷಣೆಯ ಚಾಂಪಿಯನ್ ತಾನೆಂದು ಘೋಷಿಸಿಕೊಂಡಿರುವ ಸಿದ್ದರಾಮಯ್ಯ ಅವರಿಗೆ ಹಿಂದುಳಿದ ಸಮುದಾಯಕ್ಕಿಂತ ಮುಸ್ಲಿಂ ಓಲೈಕೆಯೇ ಮುಖ್ಯ ಎಂಬುದು ಸಾಬೀತಾಗಿದೆ. ಕದ್ದುಮುಚ್ಚಿ ಪತ್ರ ಬರೆಯುವುದು ಬಿಟ್ಟು ಬಹಿರಂಗವಾಗಿ ಏಕೆ ಬರೆದಿಲ್ಲ’ ಎಂದು ಅವರು ಪ್ರಶ್ನಿಸಿದ್ದಾರೆ.

‘ಒಬಿಸಿ ಸಮುದಾಯದ ಪರ ಮಾತ್ರ ಹೃದಯ ಪ್ರದರ್ಶನ ಮಾಡುವುದನ್ನು ಬಿಟ್ಟು ಪಕ್ಷಪಾತ ಧೋರಣೆ ಅನುಸರಿಸಿದ್ದಾರೆ. ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ ಈ ಬಗ್ಗೆ ಆಕ್ಷೇಪ ಎತ್ತದೇ ಹೋಗಿದ್ದರೆ ಭವಿಷ್ಯದಲ್ಲಿ ಹಿಂದುಳಿದ ವರ್ಗ ಬೆಲೆ ತೆರಬೇಕಾಗಿತ್ತು. ಅದರ ಪರಿಣಾಮ ಊಹಿಸಲೂ ಅಸಾಧ್ಯ’ ಎಂದು ಅವರು ತಿಳಿಸಿದ್ದಾರೆ.

‘ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಮತ್ತು ಯುವಕರ ಶೈಕ್ಷಣಿಕ ಮತ್ತು ಉದ್ಯೋಗದ ಮೀಸಲಾತಿ ಪಾಲನ್ನು ಮುಸ್ಲಿಮರಿಗೆ ಹಂಚುವ ಅಧಿಕಾರ ಸಿದ್ದರಾಮಯ್ಯ ಅವರಿಗೆ ಕೊಟ್ಟವರು ಯಾರು? ಹಿಂದುಳಿದ ವರ್ಗಗಳ ಮೇಲೆ ನಿಮಗೇಕೆ ಸಿಟ್ಟು’ ಎಂದು ಸುನಿಲ್ ಪ್ರಶ್ನಿಸಿದ್ದಾರೆ.

ಕುಂಕುಮ, ವಿಭೂತಿ ಉಳಿಯಲು ಬಿಜೆಪಿ ಬೆಂಬಲಿಸಿ: ಬೊಮ್ಮಾಯಿ



ಡಂಬಳ (ಗದಗ ಜಿಲ್ಲೆ): ‘ದೇಶದಲ್ಲಿ ಮಹಿಳೆಯರಿಗೆ ಅರಿಷಿಣ, ಕುಂಕುಮ, ವಿಭೂತಿ ಉಳಿಯಬೇಕಾದರೆ ಬಿಜೆಪಿ ಬೆಂಬಲಿಸಿ. ದೇಶದ ಅಭಿವೃದ್ಧಿ ಹಾಗೂ ಸುರಕ್ಷತೆ ದೃಷ್ಟಿಯಿಂದ ಮೋದಿ ಆಡಳಿತ ಅನಿವಾರ್ಯ. ಕಾಂಗ್ರೆಸ್ ಪಕ್ಷದ ರಾಹುಲ್ ಗಾಂಧಿ ಅಸಮರ್ಥ ನಾಯಕ’ ಎಂದು ಹಾವೇರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಹೇಳಿದರು.

ಡಂಬಳ ಗ್ರಾಮದ ತೋಂಟದಾರ್ಯ ಕಲಾಭವನದಲ್ಲಿ ಬುಧವಾರ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ಪರಿಶಿಷ್ಟರು, ಹಿಂದುಳಿದ ವರ್ಗದವರ ಹೆಸರಿನಲ್ಲಿ ಕಾಂಗ್ರೆಸ್ ದೊಡ್ಡ ಮೋಸ ಮಾಡಿದೆ. ಲೋಕಸಭಾ ಚುನಾವಣೆ ಬಳಿಕ ರಾಜ್ಯದಲ್ಲಿ ಒಂದು ವರ್ಷದ ಅವಧಿಯೊಳಗೆ ವಿಧಾನಸಭಾ ಚುನಾವಣೆ ನಡೆಯಲಿದೆ. ಪಕ್ಷದ ಮುಖಂಡರು ವಿಧಾನಸಭಾ ಚುನಾವಣೆಗೆ ಸಿದ್ಧರಾಗಬೇಕು’ ಎಂದರು.

ಸುದ್ದಿ 2 ನಿಮಿಷ

ಕರ್ನಾಟಕಕ್ಕೆ ಚೊಂಬು ನೀಡಿದ ಮೋದಿ: ಸುರ್ಜೇವಾಲಾ

ಹುಬ್ಬಳ್ಳಿ: ‘10 ವರ್ಷಗಳಿಂದ ಕೇಂದ್ರದಲ್ಲಿ ಸರ್ಕಾರ ನಡೆಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಕರ್ನಾಟಕ ರಾಜ್ಯಕ್ಕೆ ಅನುದಾನ ನೀಡದೆ, ಚೊಂಬು ನೀಡಿದೆ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ, ರಾಜ್ಯದ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ವ್ಯಂಗ್ಯವಾಡಿದರು.

‘ದೇಶದಲ್ಲಿ ಈಗ ಎರಡು ಮಾದರಿಯ ಸರ್ಕಾರ ಇವೆ. ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿದ ಕರ್ನಾಟಕದ ಕಾಂಗ್ರೆಸ್ ಸರ್ಕಾರದ ಮಾದರಿ ಒಂದಾದರೆ, ಭರವಸೆಗಳನ್ನು ಈಡೇರಿಸದೇ ಚೊಂಬು ನೀಡಿದ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಮಾದರಿ ಇನ್ನೊಂದು’ ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

‘ನಮ್ಮ ಗ್ಯಾರಂಟಿ ಯೋಜನೆಗಳು ಯಶಸ್ವಿಯಾಗಿದ್ದನ್ನು ನೋಡಿದ ಮೋದಿ ಅವರು, ‘ಗ್ಯಾರಂಟಿ’ ಪದವನ್ನು ಕಳವು ಮಾಡಿ ‘ಮೋದಿ ಗ್ಯಾರಂಟಿ’ ಎಂದು ಪ್ರಚಾರ ಮಾಡುತ್ತಿದ್ದಾರೆ’ ಎಂದು ಅವರು ಟೀಕಿಸಿದರು.

‘2014ರಲ್ಲಿ ಮೋದಿ ಅವರು ಭರವಸೆ ನೀಡಿದಂತೆ ಈವರೆಗೆ ₹ 15 ಲಕ್ಷ ಹಣ ಯಾರ ಖಾತೆಗೂ ಬಂದಿಲ್ಲ. ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿಯಾಗಿಲ್ಲ, 2022ರ ವೇಳೆಗೆ ರೈತರ ಆದಾಯ ದ್ವಿಗುಣವಾಗಿಲ್ಲ. ಕರ್ನಾಟಕದ ಜನತೆಗೆ ಚೊಂಬು ನೀಡಿದ್ದಾರೆ. ಇದೇ ಚೊಂಬನ್ನು ಜನರು ಚುನಾವಣೆಯಲ್ಲಿ ಮರಳಿಸುವರು’ ಎಂದರು.

‘ನಮ್ಮ ಹೆಣದ ಮೇಲೆ ಕೃಷ್ಣಾ ನೀರು ತೆಗೆದುಕೊಂಡು ಹೋಗಲಿ’

ಬಾಗಲಕೋಟೆ: ‘ಕೃಷ್ಣಾ ನದಿ ನೀರನ್ನು ದಕ್ಷಿಣ ಕರ್ನಾಟಕಕ್ಕೆ ನಮ್ಮ ಹೆಣದ ಮೇಲೆ ಒಯ್ಯಬೇಕು. ನಮ್ಮ ಹಕ್ಕು ಕಸಿದುಕೊಳ್ಳಲು ಬಿಡುವುದಿಲ್ಲ’ ಎಂದು ಮಾಜಿ ಸಚಿವ ಎಸ್.ಆರ್.ಪಾಟೀಲ ಎಚ್ಚರಿಸಿದರು.

‘ಪ್ರಧಾನಿ ಮೋದಿ ಅವರಿದ್ದ ವೇದಿಕೆಯಲ್ಲಿ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರು 28 ಕ್ಷೇತ್ರದಿಂದ ಅಭ್ಯರ್ಥಿಗಳನ್ನು ಗೆಲ್ಲಿಸಿದರೆ ದಕ್ಷಿಣ ಕರ್ನಾಟಕದ 10 ಜಿಲ್ಲೆಗಳಿಗೆ ಕೃಷ್ಣಾದಿಂದ ನೀರು ತರೋಣ ಎಂದಿದ್ದಾರೆ. ಮೋದಿ ಮೇಲೆ ಪ್ರಭಾವ ಬೀರುವ ಶಕ್ತಿ ಇರುವವರು ಮಾತನಾಡಿದ್ದರಿಂದ ಉತ್ತರ ಕರ್ನಾಟಕದ ಜನ ಎಚ್ಚೆತ್ತುಕೊಳ್ಳಬೇಕು. ನೀರು ಒಯ್ಯುವ ಹುನ್ನಾರ, ಸಂಚು ನಡೆದಿದೆ’ ಎಂದು ಅವರು ತಿಳಿಸಿದರು. ‘ಸುಪ್ರೀಂಕೋರ್ಟ್ ಆದೇಶಕ್ಕೆ ಒಳಪಟ್ಟು ಕೂಡಲೇ ಗೆಜೆಟ್ ನೋಟಿಫಿಕೇಷನ್ ಹೊರಡಿಸಬೇಕು. ಕೇಂದ್ರ ಮನಸ್ಸು ಮಾಡಿದರೆ ವ್ಯಾಜ್ಯ ಇತ್ಯರ್ಥಪಡಿಸಬಹುದು. ಉತ್ತರ ಕರ್ನಾಟಕದಲ್ಲಿ ಇವತ್ತಿಗೂ ಗುಳೆ ಹೋಗುವ ಸ್ಥಿತಿ ಇದೆ. ನೀರು ಒಯ್ದರೆ, ಇಲ್ಲಿನವರ ಗತಿ ಏನು’ ಎಂದು ಪ್ರಶ್ನಿಸಿದರು.

‘ಯುಕೆಪಿ ಯೋಜನೆ ಪೂರ್ಣಗೊಳಿಸುವುದು ವಿಳಂಬ ಆದಷ್ಟು ನೀರಿನ ಮೇಲೆ ಬೇರೆಯವರ ಕಣ್ಣು ಬೀಳಲಿದೆ ಎಂದು ಹಿಂದೆಯೇ ಹೇಳಿದ್ದೆ. ಈಗ ಅದು ನಿಜವಾಗುತ್ತಿದೆ. ಕಾವೇರಿ ವ್ಯಾಜ್ಯವಿರುವಾಗಲೇ ನೋಟಿಫಿಕೇಷನ್ ಹೊರಡಿಸಲಾಗಿತ್ತು. ಕಾವೇರಿಯಿಂದ 2 ಟಿಎಂಸಿ ಅಡಿ ನೀರು ಹೋದರೆ ಬೆಂಗಳೂರು ಹೊತ್ತಿ ಉರಿಯುತ್ತದೆ. ಇಲ್ಲಿ ₹130 ಟಿಎಂಸಿ ಅಡಿ ನೀರು ಹೋದರೂ ಕೇಳುವವರಿಲ್ಲ. ಎಲ್ಲರೂ ಸೇರಿ ಒಗ್ಗಟ್ಟಿನ ಹೋರಾಟ ರೂಪಿಸಬೇಕಿದೆ’ ಎಂದರು.

ಆಧಾರ ನೀಡಿ: ಸಿ.ಎಂ ಸವಾಲು

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: ‘ಹಿಂದುಳಿದ ಜಾತಿ ಮತ್ತು ದಲಿತರ ಮೀಸಲಾತಿಯನ್ನು ಕಿತ್ತು ಮುಸ್ಲಿಮರಿಗೆ ನೀಡಲು ಕಾಂಗ್ರೆಸ್ ಹೊರಟಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳುತ್ತಿರುವ ಹಸಿ ಸುಳ್ಳು ಅವರ ಅಜ್ಞಾನವನ್ನಷ್ಟೇ ಅಲ್ಲ, ಸೋಲಿನ ಭೀತಿಯಲ್ಲಿರುವ ಅವರ ಹತಾಶೆಯನ್ನೂ ಸೂಚಿಸುತ್ತದೆ. ಇಲ್ಲಿಯವರೆಗಿನ ಯಾರೂ ಪ್ರಧಾನಿ ಪಟ್ಟವನ್ನು ಇಂತಹ ಕೀಳುಮಟ್ಟಕ್ಕೆ ಇಳಿಸಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

‘ಜವಾಬ್ದಾರಿ ಸ್ಥಾನದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಒಂದೋ ಈ ಬೇಜವಾಬ್ದಾರಿತನದ ಆರೋಪವನ್ನು ಆಧಾರಗಳನ್ನು ನೀಡಿ ಸಾಬೀತುಪಡಿಸಬೇಕು. ಇಲ್ಲದೆ ಇದ್ದರೆ ದೇಶದ ಜನರ ಕ್ಷಮೆ ಕೇಳಬೇಕು’ ಎಂದು ಪತ್ರಿಕಾ ಹೇಳಿಕೆಯಲ್ಲಿ ಅವರು ಆಗ್ರಹಿಸಿದ್ದಾರೆ.

‘ಹಿಂದುಳಿದ ಜಾತಿ ಮತ್ತು ಎಸ್‌ಸಿ, ಎಸ್‌ಟಿ ಮೀಸಲಾತಿಯನ್ನು ಕಿತ್ತು ಮುಸ್ಲಿಮರಿಗೆ ನೀಡುವುದಾಗಿ ಕಾಂಗ್ರೆಸ್ ಎಲ್ಲಿ ಹೇಳಿದೆ. ಯಾವ ರಾಜ್ಯದ ಕಾಂಗ್ರೆಸ್ ಸರ್ಕಾರ ಮಾಡಿದೆ. ಅದಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶದ ಪತ್ರ ಇದೆಯೇ’ ಎಂದು ಪ್ರಶ್ನಿಸಿರುವ ಮುಖ್ಯಮಂತ್ರಿ, ಈ ಎಲ್ಲ ವಿವರವನ್ನು ಪ್ರಧಾನಿಯವರು ದೇಶದ ಮುಂದಿಡಬೇಕು ಎಂದಿದ್ದಾರೆ.

‘ಸಂವಿಧಾನದತ್ತವಾದ ಮೀಸಲಾತಿಯನ್ನು ಮನಬಂದಂತೆ ಬದಲಿಸಲು ಸಾಧ್ಯವಿಲ್ಲ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿಯನ್ನು ಪರಿಷ್ಕರಿಸುವ ಅಧಿಕಾರ ರಾಜ್ಯ ಸರ್ಕಾರದ ಕೈಯಲ್ಲಿ ಇಲ್ಲ. ಅದಕ್ಕಾಗಿ ಸಂಸತ್‌ನ ಉಭಯ ಸದನಗಳ ಒಪ್ಪಿಗೆಯೊಂದಿಗೆ ಸಂವಿಧಾನ ತಿದ್ದುಪಡಿ ಮಾಡಬೇಕಾಗುತ್ತದೆ. ಇಂತಹದ್ದೊಂದು ಕನಿಷ್ಠ ಜ್ಞಾನ ಒಬ್ಬ ಪ್ರಧಾನಿಗೆ ಇಲ್ಲದಿರುವುದು ದುರಂತವೇ ಸರಿ’ ಎಂದು ಕುಟುಕಿದ್ದಾರೆ.

‘ಮುಸ್ಲಿಂ ಮೀಸಲಾತಿ ವಿರೋಧಿಸುತ್ತಿರುವ ಮೋದಿಯವರ ಹೇಳಿಕೆ ಬಗ್ಗೆ ಎಚ್.ಡಿ. ದೇವೇಗೌಡರ ಪ್ರತಿಕ್ರಿಯೆ ಏನು ಎನ್ನುವುದನ್ನು ತಿಳಿದುಕೊಳ್ಳಲು ಬಯಸುತ್ತೇನೆ’ ಎಂದಿದ್ದಾರೆ.

₹28 ಕೋಟಿಯ ನಗದು, ಚಿನ್ನ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಅಕ್ರಮ ತಡೆ ಕಾರ್ಯಾಚರಣೆಯನ್ನು ತೀವ್ರಗೊಳಿಸಿರುವ ಆದಾಯ ತೆರಿಗೆ (ಐ.ಟಿ) ಇಲಾಖೆ, ಬೆಂಗಳೂರು ದಕ್ಷಿಣ ಮತ್ತು ಉತ್ತರ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ₹ 28.07 ಕೋಟಿ ಮೌಲ್ಯದ ನಗದು, ಚಿನ್ನ ಹಾಗೂ ವಜ್ರವನ್ನು ವಶಪಡಿಸಿಕೊಂಡಿದೆ.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಾಲ್ಕು ದಿನಗಳಿಂದ ನಿರಂತರ ಶೋಧ ನಡೆಸಲಾಗಿದೆ. ಕೆಲವು ಬ್ಯಾಂಕ್‌ಗಳು, ಲೇವಾದೇವಿದಾರರ ಮನೆಗಳು, ಹಣಕಾಸು ಸಂಸ್ಥೆಗಳಲ್ಲಿ ಶೋಧ ನಡೆಸಲಾಗಿದೆ. ಒಟ್ಟು ₹ 4.69 ಕೋಟಿ ನಗದು, ₹16.92 ಕೋಟಿ ಮೌಲ್ಯದ ಚಿನ್ನಾಭರಣ, ಚಿನ್ನದ ಗಟ್ಟಿಗಳು ಹಾಗೂ ₹ 6.46 ಕೋಟಿ ಮೌಲ್ಯದ ವಜ್ರ ವಶಪಡಿಸಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬಸವನಗುಡಿ, ಜಯನಗರ, ಶಂಕರಪುರ, ಚಿಕ್ಕಪೇಟೆ, ಚಾಮರಾಜಪೇಟೆ ಸೇರಿದಂತೆ ಹಲವು ಕಡೆಗಳಲ್ಲಿ ಶೋಧ ನಡೆಸಲಾಗಿದೆ. ಬೃಹತ್ ಪ್ರಮಾಣದ ಹಣಕಾಸು ಲೇವಾದೇವಿ ನಡೆಸುತ್ತಿರುವ ಉತ್ತರ ಭಾರತದ ಮೂಲದ ವರ್ತಕರ ಮನೆಗಳ ಮೇಲೆ ದಾಳಿ ಮಾಡಿದ್ದು, ಅವರ ಬಳಿ ಇದ್ದ ಚಿನ್ನಾಭರಣ ಮತ್ತು ಚಿನ್ನದ ಗಟ್ಟಿಗಳನ್ನು ವಶಕ್ಕೆ ಪಡೆಯಲಾಗಿದೆ. ಪುಲಕೇಶಿನಗರ ಮತ್ತು ಮಹಾಲಕ್ಷ್ಮಿಪುರ ದಲ್ಲೂ ಶೋಧ ನಡೆಸಿದ್ದು, ನಗದು ಹಾಗೂ ವಜ್ರದ ಆಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ಬಿಲ್ಡರ್‌ಗಳ ಮೇಲೂ ದಾಳಿ: ನಗರದ ವಿವಿಧೆಡೆ ದೊಡ್ಡ ಪ್ರಮಾಣದ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿರುವ ಬಿಲ್ಡರ್‌ಗಳ ಮೇಲೂ ದಾಳಿ ನಡೆಸಲಾಗಿದೆ. ಕೆಲವೆಡೆ ನಗದು ಪತ್ತೆಯಾಗಿದ್ದರೆ, ಇನ್ನು ಕೆಲವೆಡೆ ಇತ್ತೀಚಿನ ತಿಂಗಳುಗಳಲ್ಲಿ ಭಾರಿ ಪ್ರಮಾಣದ ವಹಿವಾಟು ನಡೆಸಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ.

ರಾಜ್ಯದಲ್ಲಿ ಮೊದಲ ಹಂತದ ಮತದಾನ ಶುಕ್ರವಾರ ಮತ್ತು ಎರಡನೇ ಹಂತದ ಮತದಾನ ಮೇ 7ಕ್ಕೆ ನಡೆಯಲಿದೆ. ತಮಿಳುನಾಡು ಸೇರಿದಂತೆ ಈಗಾಗಲೇ ಮತದಾನ ಪೂರ್ಣಗೊಂಡಿರುವ ರಾಜ್ಯಗಳಿಂದ ಆದಾಯ ತೆರಿಗೆ ಅಧಿಕಾರಿಗಳನ್ನು ಬೆಂಗಳೂರಿಗೆ ಕರೆಸಿಕೊಳ್ಳಲಾಗಿದೆ. ಇನ್ನೂ ಕೆಲವು ದಿನಗಳ ಕಾಲ ಬಿರುಸಿನ ಕಾರ್ಯಾಚರಣೆಗೆ ಸಿದ್ಧತೆ ನಡೆದಿದೆ ಎಂದು ಮೂಲಗಳು ಹೇಳಿವೆ.

ಡಿ.ಕೆ. ಸುರೇಶ್ ಆಪ್ತರ ಮೇಲೆ ಐ.ಟಿ ದಾಳಿ

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಆಪ್ತರ ಮನೆ, ಕಚೇರಿಗಳ ಮೇಲೆ ಬುಧವಾರ ದಾಳಿ ಮಾಡಿರುವ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು ಶೋಧ ನಡೆಸಿದ್ದಾರೆ.

ಸುರೇಶ್ ಅವರಿಗೆ ಆಪ್ತರಾಗಿರುವ ಕೋಣನಕುಂಟೆ ನಿವಾಸಿ, ಬಿಬಿಎಂಪಿ ಮಾಜಿ ಸದಸ್ಯ ಗಂಗಾಧರ್, ಲಕ್ಷ್ಮಣ್ ಮತ್ತು ಗಣೇಶ್ ಎಂಬುವವರ ಮನೆಗಳಲ್ಲಿ ಶೋಧ ನಡೆಸಲಾಗಿದೆ. ಒಟ್ಟು ಆರು ಕಡೆಗಳಲ್ಲಿ ಶೋಧ ನಡೆದಿದೆ ಎಂದು ಮೂಲಗಳು ಹೇಳಿವೆ.

ಗಂಗಾಧರ್ ಮನೆಯಲ್ಲಿ ಐ.ಟಿ ಅಧಿಕಾರಿಗಳು ಶೋಧ ನಡೆಸುತ್ತಿದ್ದಾಗ ಹೊರಗೆ ಪೊಲೀಸರು ಬಿಗಿ ಭದ್ರತೆ ಒದಗಿಸಿದ್ದರು. ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಬಂದ ಕಾಂಗ್ರೆಸ್ ಕಾರ್ಯಕರ್ತರು, ಸುರೇಶ್ ಅವರಿಗೆ ಕಿರುಕುಳ ನೀಡಲು ಐ.ಟಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ ಎಂದು ಆರೋಪಿಸಿ ವಾಗ್ವಾದ ನಡೆಸಿದರು.

‘ಬಿಜೆಪಿ ನಿರ್ದೇಶನದಂತೆ ಐ.ಟಿ ದಾಳಿ’

ಕಡೆ ದಿನ ಡಿಕೆಶಿ ಅಬ್ಬರದ ಪ್ರಚಾರ ● ಕಾಂಗ್ರೆಸ್ ಕಟ್ಟಿ ಹಾಕಲು ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಕನಕಪುರ (ರಾಮನಗರ): ಬಹಿರಂಗ ಪ್ರಚಾರದ ಕೊನೆಯ ದಿನವಾದ ಬುಧವಾರ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ, ಸಹೋದರ ಡಿ.ಕೆ. ಸುರೇಶ್ ಪರ ವಿವಿಧೆಡೆ ಅಬ್ಬರದ ಪ್ರಚಾರ ನಡೆಸಿದರು.

ಹುಟ್ಟೂರು ದೊಡ್ಡ ಆಲಹಳ್ಳಿ, ಶಿವನಹಳ್ಳಿ, ಸಾತನೂರು ವೃತ್ತದಲ್ಲಿ ಮಿಂಚಿನ ಪ್ರಚಾರ ನಡೆಸಿದರು. ಹೋದಲ್ಲೆಲ್ಲಾ ಕಾಂಗ್ರೆಸ್ ಕಾರ್ಯಕರ್ತರು ಹಣ್ಣು ಹಾಗೂ ಹೂವಿನಿಂದ ತಯಾರಿಸಿದ ಬೃಹತ್ ಹೂವಿನಹಾರ ಹಾಕಿ ಸ್ವಾಗತ ನೀಡಿದರು. ಸಹೋದರನ ಅಭಿವೃದ್ಧಿ ಕಾರ್ಯ ಬಣ್ಣಿಸುತ್ತಲೇ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರ ಕುಟುಂಬವನ್ನು ಗುರಿಯಾಗಿಸಿಕೊಂಡು ವಾಗ್ದಾಳಿ ನಡೆಸಿದರು.

‘ಬಿಜೆಪಿ ಅಭ್ಯರ್ಥಿ ಡಾ.ಸಿ. ಎನ್.ಮಂಜುನಾಥ್ ಸೋಲುವ ಭಯದಿಂದಾಗಿ ಕೇಂದ್ರ ಸರ್ಕಾರ ನಮ್ಮ ಪಕ್ಷದ ಮುಖಂಡರ ಮನೆಗಳ ಮೇಲೆ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳನ್ನು ಬಿಟ್ಟು ದಾಳಿ ನಡೆಸುತ್ತಿದೆ. ಯಾರ ಮನೆ ಮೇಲೆ ದಾಳಿ ನಡೆಸಬೇಕು ಎಂದು ಬಿಜೆಪಿ–ಜೆಡಿಎಸ್ ತಯಾರಿಸಿ ಕೊಟ್ಟ ಪಟ್ಟಿ ಹಿಡಿದು ಐ.ಟಿ ಅಧಿಕಾರಿಗಳು ಕಾಂಗ್ರೆಸ್ ಪಕ್ಷದ ಮುಖಂಡರ ಮನೆಗಳ ಮೇಲೆ ದಾಳಿ ನಡೆಸುತ್ತಿದ್ದಾರೆ’ ಎಂದು ಶಿವಕುಮಾರ್ ಆರೋಪ ಮಾಡಿದರು.

ಕನಕಪುರ ತಾಲ್ಲೂಕಿನ ದೊಡ್ಡ ಆಲಹಳ್ಳಿಯಲ್ಲಿ ಬುಧವಾರ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೈಗೊಂಡ ಬಹಿರಂಗ ಪ್ರಚಾರದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ

‘ಯಾವುದೇ ಗುತ್ತಿಗೆದಾರರ ಮನೆಯಲ್ಲಿ ಹಣ ಸಿಕ್ಕರೂ ಅದು ಡಿ.ಕೆ. ಶಿವಕುಮಾರ್ ಅವರಿಗೆ ಸೇರಿದ ಹಣ ಎಂದು ಹೇಳಲು ಒತ್ತಡ ಹೇರಲಾಗುತ್ತಿದೆ. ಡಿ.ಕೆ. ಸುರೇಶ್ ಕಾರು ಚಾಲಕನ ಮನೆ ಮೇಲೆ ದಾಳಿ ಮಾಡಿದ ಐ.ಟಿ ಅಧಿಕಾರಿಗಳು ಆತನ ಹೆಂಡತಿಯ ತಲೆಗೂದಲು ಹಿಡಿದು ಎಳೆದಾಡಿದ್ದಾರೆ. ಮಕ್ಕಳ ಮೇಲೆ ಕೂಡ ಹಲ್ಲೆ ಮಾಡಿದ್ದಾರೆ. ಆದರೆ, ಎಲ್ಲೂ ಹಣ ಸಿಕ್ಕಿಲ್ಲ’ ಎಂದು ಆಕ್ರೋಶ ಹೊರ ಹಾಕಿದರು.

‘ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರ ಮನೆಗಳ ಮೇಲೆ ಐ.ಟಿ ದಾಳಿ ನಡೆಯುತ್ತಿದೆ. ನಮಗೆ ಕೆಟ್ಟ ಹೆಸರು ತರಬೇಕು ಮತ್ತು ಕಾರ್ಯಕರ್ತರು ಚುನಾವಣೆಯಲ್ಲಿ ಭಾಗವಹಿಸದಂತೆ ತಡೆಯಬೇಕು ಎಂದು ಈ ರೀತಿ ಮಾಡುತ್ತಿದ್ದಾರೆ’ ಎಂದರು.

‘ಬಿಜೆಪಿ ಹಾಗೂ ಜೆಡಿಎಸ್‌ನ ಯಾರೂ ಹಣ ಹಂಚುತ್ತಿಲ್ಲವೇ. ಅವರ ಮನೆಗಳ ಮೇಲೆ ಯಾಕೆ ದಾಳಿ ಯಾಗುತ್ತಿಲ್ಲ. ಅವರ ವಿಚಾರದಲ್ಲಿ ಐ.ಟಿ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರಾ’ ಎಂದು ಪ್ರಶ್ನಿಸಿದರು.

52 ಮತಗಟ್ಟೆಗಳ ಸುತ್ತಲೂ ಅರಣ್ಯ ಸಿಬ್ಬಂದಿಯ ಪಹರೆ!

● ಆರ್. ಜಿತೇಂದ್ರ

ಮೈಸೂರು: ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಿರುವ ಮತಗಟ್ಟೆಗಳಲ್ಲಿ ಈ ಬಾರಿ ಅರಣ್ಯ ಸಿಬ್ಬಂದಿ ಕಾವಲಿಗೆ ನಿಲ್ಲಲಿದ್ದು, ಹಕ್ಕು ಚಲಾಯಿಸಲು ಬರುವ ಮತದಾರರಿಗೆ ಭದ್ರತೆ ಒದಗಿಸಲಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ, ಚಾಮರಾಜನಗರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ 4 ತಾಲ್ಲೂಕುಗಳಲ್ಲಿ 52 ಮತಗಟ್ಟೆಗಳನ್ನು ಜಿಲ್ಲಾಡಳಿತ ಹಾಗೂ ಅರಣ್ಯ ಇಲಾಖೆಯು ಗುರುತಿಸಿದ್ದು, ಅಲ್ಲಿಗೆ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತಿದೆ.

ಚಾಮರಾಜನಗರ ಕ್ಷೇತ್ರಕ್ಕೆ ಸೇರಿದ ವರುಣ (ಮೈಸೂರು ತಾಲ್ಲೂಕು), ನಂಜನಗೂಡು, ಎಚ್.ಡಿ. ಕೋಟೆ ಹಾಗೂ ಸರಗೂರು ಭಾಗದಲ್ಲಿ ಈ ಮತಗಟ್ಟೆಗಳಿದ್ದು, ಆನೆ, ಚಿರತೆ ಹಾಗೂ ಹುಲಿಗಳ ಓಡಾಟ ಹೆಚ್ಚಿದೆ. ಅಲ್ಲೆಲ್ಲ ಆನೆ ಹಾಗೂ ಚಿರತೆ ಕಾರ್ಯಪಡೆಗಳ ಜೊತೆ ಅರಣ್ಯ ಸಿಬ್ಬಂದಿ ನಿಗಾ ವಹಿಸಲಿದ್ದಾರೆ.

‘ಜಿಲ್ಲೆಯಲ್ಲಿ ಇದಕ್ಕಾಗಿ 8 ತಂಡಗಳನ್ನು ರಚಿಸಲಾಗಿದೆ. ಸ್ಥಳೀಯ ಡಿಆರ್‌ಎಫ್‌ಒ ಪ್ರತಿ ತಂಡದ ನೇತೃತ್ವ ವಹಿಸಲಿದ್ದು, ಅರಣ್ಯ ವೀಕ್ಷಕರೂ ಸೇರಿದಂತೆ ಒಂದು ತಂಡದಲ್ಲಿ 5–6 ಸಿಬ್ಬಂದಿ ಇರಲಿದ್ದಾರೆ. ಒಂದು ತಂಡಕ್ಕೆ 4ರಿಂದ 6 ಮತಗಟ್ಟೆಗಳ ಉಸ್ತುವಾರಿ ನೀಡಲಾಗಿದೆ. ಅವರು ಈ ಮತಗಟ್ಟೆಗಳ ಸುತ್ತಲೇ ಓಡಾಡುತ್ತ ಅಲ್ಲಿ ವನ್ಯಜೀವಿಗಳ ಚಲನವಲನ ಗಮನಿಸಲಿದ್ದಾರೆ’ ಎಂದು ಮೈಸೂರು ಪ್ರಾದೇಶಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎನ್. ಬಸವರಾಜು ಅವರು ‘ಪ್ರಜಾವಾಣಿ’ಗೆ ಬುಧವಾರ ಮಾಹಿತಿ ನೀಡಿದರು.

‘ಒಂದು ವೇಳೆ ವನ್ಯಜೀವಿ ದಾಳಿಯಂತಹ ಸಂದರ್ಭ ಎದುರಾದಲ್ಲಿ ಯಾರಿಗೂ ತೊಂದರೆ ಆಗದಂತೆ ಅದನ್ನು ಸೂಕ್ಷ್ಮವಾಗಿ ಎದುರಿಸುವ ತರಬೇತಿ ಹಾಗೂ ಅಗತ್ಯ ಸಲಕರಣೆಗಳನ್ನು ತಂಡಗಳಿಗೆ ನೀಡಲಾಗಿದೆ. ಮತಗಟ್ಟೆಗಳತ್ತ ವನ್ಯಜೀವಿಗಳು ಸುಳಿಯದಂತೆ ಸಿಬ್ಬಂದಿ ನೋಡಿಕೊಳ್ಳಲಿದ್ದಾರೆ’ ಎಂದು ತಿಳಿಸಿದರು.

‘ಕಳೆದ ವಿಧಾನಸಭೆ ಚುನಾವಣೆ ಸಂದರ್ಭದಲ್ಲೂ ಇಂತಹ ಸಂಘರ್ಷ ಮತಗಟ್ಟೆಗಳನ್ನು ಗುರುತಿಸಲಾಗಿತ್ತು. ಆದರೆ ಮೊದಲ ಬಾರಿಗೆ ತಂಡಗಳನ್ನು ರಚಿಸಿ ಗಸ್ತಿನ ವ್ಯವಸ್ಥೆ ಮಾಡಿದ್ದೇವೆ’ ಎಂದು ಹೇಳಿದರು.

ಮೈಸೂರು–ಕೊಡಗು, ಚಾಮರಾಜನಗರ ಸೇರಿದಂತೆ 14 ಲೋಕಸಭಾ ಕ್ಷೇತ್ರಗಳಲ್ಲಿ ಮೊದಲ ಹಂತದ ಮತದಾನವು ಶುಕ್ರವಾರ (ಏ.26) ನಡೆಯಲಿದೆ. ಗುರುವಾರ ಸಂಜೆ ವೇಳೆಗೆ ಮತದಾನ ಸಿಬ್ಬಂದಿ ಸಲಕರಣೆಗಳನ್ನು ಹೊತ್ತು ಮತಗಟ್ಟೆಗಳನ್ನು ತಲುಪಲಿದ್ದಾರೆ. ಅವರೊಟ್ಟಿಗೆ ಅರಣ್ಯ ಇಲಾಖೆ ಸಿಬ್ಬಂದಿಯೂ ಗಸ್ತು ಆರಂಭಿಸಲಿದ್ದಾರೆ. ಶುಕ್ರವಾರ ಮತದಾನ ಪ್ರಕ್ರಿಯೆ ಮುಗಿದು ಸಿಬ್ಬಂದಿ ಮತಗಟ್ಟೆಗಳಿಂದ ವಾಪಸ್ ಆಗುವರೆಗೂ ಈ ತಂಡಗಳು ಅಲ್ಲಿಯೇ ಇರಲಿವೆ.

> ವನ್ಯಜೀವಿ ಓಡಾಟ ಹೆಚ್ಚಿರುವ ಕಡೆಗಳಲ್ಲೂ ಮತದಾನ ಪ್ರಮಾಣ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ. ಅರಣ್ಯ ಸಿಬ್ಬಂದಿ ಗಸ್ತು ತಿರುಗಲಿದ್ದು, ಮತದಾರರು ನಿರ್ಭೀತಿಯಿಂದ ಮತ ಚಲಾಯಿಸಬೇಕು
> **ಡಾ. ಕೆ.ವಿ. ರಾಜೇಂದ್ರ ಜಿಲ್ಲಾಧಿಕಾರಿ,** ಮೈಸೂರು

> ಮೈಸೂರು ಜಿಲ್ಲೆ ವ್ಯಾಪ್ತಿಯಲ್ಲಿ 52 ಮತಗಟ್ಟೆಗಳಲ್ಲಿ ವನ್ಯಜೀವಿ ಓಡಾಟ ಹೆಚ್ಚಿದ್ದು, ಅಂತಹ ಕಡೆಗಳಲ್ಲಿ ಗುರುವಾರ ಸಂಜೆಯಿಂದಲೇ ನಮ್ಮ ಸಿಬ್ಬಂದಿ ಇರಲಿದ್ದಾರೆ. ಕಾಡುಪ್ರಾಣಿಗಳ ಓಡಾಟದ ಮೇಲೆ ನಿಗಾ ವಹಿಸಲಿದ್ದಾರೆ
> **ಕೆ.ಎನ್. ಬಸವರಾಜು ಡಿಸಿಎಫ್,** ಮೈಸೂರು

42 ಡಿಗ್ರಿ ಬಿಸಿಲಲ್ಲಿ ಪ್ರಚಾರದ ಕಾವು

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ರಾಜ್ಯದಲ್ಲಿ ಎರಡನೇ ಹಂತದಲ್ಲಿ ನಡೆಯುವ ಲೋಕಸಭಾ ಚುನಾವಣೆಗೆ ಉತ್ತರ ಕರ್ನಾಟಕದ 14 ಕ್ಷೇತ್ರಗಳು ಸಜ್ಜಾಗುತ್ತಿದ್ದು, ಮಧ್ಯಾಹ್ನದ ಏರುಬಿಸಿಲಲ್ಲೇ ಚುನಾವಣಾ ಪ್ರಚಾರ ಮುಂದುವರೆದಿದೆ.

ಬಳ್ಳಾರಿ–ವಿಜಯನಗರ ಭಾಗದಲ್ಲಿ ಬುಧವಾರ 42 ಡಿಗ್ರಿ ಉಷ್ಣಾಂಶ ದಾಖಲಾಗಿದ್ದು, ಬೆಳಿಗ್ಗೆ 11 ರಿಂದ ಸಂಜೆ 4ರವರೆಗೆಪ್ರಚಾರ ಸಭೆಗಳಿಗೆ ಜನ ಹೋಗಲಾಗದ ಸ್ಥಿತಿ ಇದೆ. ಹೀಗಾಗಿ ಪ್ರಚಾರ ಸಭೆಗಳಿಗೆ ಬರುವ ಜನರ ಸಂಖ್ಯೆ ಕಡಿಮೆ ಆಗಿದೆ. ‘ಸಂಜೆಯ ಪ್ರಚಾರ ಸಭೆಗಳಿಗೆ ಜನ ಬರುತ್ತಾರೆ. ಮಧ್ಯಾಹ್ನದ ಪ್ರಚಾರ ಸಭೆಗಳಿಗೆ ಜನರನ್ನು ಸೇರಿಸಲು ಕಷ್ಟವಾಗುತ್ತದೆ’ ಎಂದು ಪಕ್ಷಗಳ ಮುಖಂಡರು ತಿಳಿಸಿದರು.

‘ಬಿಸಿಲಿನಿಂದ ಜನರಿಗೆ ತೊಂದರೆ ಆಗದಿರಲಿಯೆಂದು ನಾವು ಹಗಲಿನಲ್ಲಿ ಸಭೆ, ಸಮಾರಂಭ ಮಾಡುತ್ತಿಲ್ಲ. ಬೆಳಿಗ್ಗೆ 8.30 ರಿಂದ 10ರವರೆಗೆ ಮತ್ತು ಸಂಜೆ 4.30 ರಿಂದ 7ರ ನಡುವೆ ಜನರನ್ನು ಸೇರಿಸಿ ಪ್ರಚಾರ ಮಾಡುತ್ತಿದ್ದೇವೆ’ ಎಂದು ವಿಜಯನಗರ ಜಿಲ್ಲಾ ಕಾಂಗ್ರೆಸ್ ಘಟಕದ ಪ್ರಧಾನ ಕಾರ್ಯದರ್ಶಿ ನಿಂಗಬಲ್ ರಾಮಕೃಷ್ಣ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬಿಸಿಲು ಎಂಬ ಕಾರಣಕ್ಕೆ ಪ್ರಚಾರ ಕಡಿಮೆಗೊಳಿಸಿಲ್ಲ. ಆದರೂ ಮಧ್ಯಾಹ್ನದ ಬಿರು ಬಿಸಿಲಲ್ಲಿ ಜನರನ್ನು ಸೇರಿಸಿ ಅವರಿಗೆ ತೊಂದರೆ ಕೊಡುತ್ತಿಲ್ಲ’ ಎಂದು ಬಿಜೆಪಿ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಕೆ.ಎಸ್.ರಾಘವೇಂದ್ರ ಹೇಳಿದರು.

ರಾಹುಲ್‌ಗಾಂಧಿ ನಾಳೆ ಬಳ್ಳಾರಿಗೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ‘ಕಾಂಗ್ರೆಸ್‌ನ ನಾಯಕ ರಾಹುಲ್‌ಗಾಂಧಿ ಅವರು ಶುಕ್ರವಾರ (ಏಪ್ರಿಲ್ 26) ಬಳ್ಳಾರಿಗೆ ಬರಲಿದ್ದು, ಅಂದು ಸಂಜೆ 4 ಗಂಟೆಗೆ ನಗರದ ಮುನ್ಸಿಪಲ್ ಕಾಲೇಜು ಮೈದಾನದಲ್ಲಿ ನಡೆಯುವ ಲೋಕಸಭಾ ಚುನಾವಣಾ ಕಾಂಗ್ರೆಸ್ ಪ್ರಚಾರದ ಸಮಾವೇಶದಲ್ಲಿ ಪಾಲ್ಗೊಳ್ಳುವರು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ ತಿಳಿಸಿದರು.

‘ರಾಹುಲ್ ಗಾಂಧಿ ಅವರು ಬಳ್ಳಾರಿ ಮತ್ತು ಕೊಪ್ಪಳ ಕ್ಷೇತ್ರಗಳ ಕಾಂಗ್ರೆಸ್ ಅಭ್ಯರ್ಥಿಗಳ ಪರ ಮತ ಯಾಚಿಸುವರು. ಸಮಾವೇಶಕ್ಕೆ ಒಂದು ಲಕ್ಷಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆಯಿದೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಬೆಂಗಳೂರು- ಮಂಗಳೂರು, ಮೈಸೂರು–ಮಂಗಳೂರು ಖಾಸಗಿ ಬಸ್‌ಗಳಿಗೆ ಹೆಚ್ಚಿದ ಬೇಡಿಕೆ

ಮತದಾರರಿಗೆ ಬಸ್ ದರ ಏರಿಕೆ ಬಿಸಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಲೋಕಸಭೆ ಚುನಾವಣೆ ಮತ್ತು ವಾರಾಂತ್ಯದ ರಜೆಗಳು ಒಟ್ಟೊಟ್ಟಿಗೆ ಬಂದಿದ್ದು, ಖಾಸಗಿ ಬಸ್‌ಗಳವರು ದರ ಹೆಚ್ಚಿಸಿದ್ದಾರೆ.

ಏ.26ರಂದು ದಕ್ಷಿಣ ಕನ್ನಡ, ಉಡುಪಿ– ಚಿಕ್ಕಮಗಳೂರು ಲೋಕಸಭಾ ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ. ಉದ್ಯೋಗಕ್ಕಾಗಿ ಬೆಂಗಳೂರು, ಮೈಸೂರು ಇನ್ನಿತರ ಕಡೆಗಳಲ್ಲಿ ನೆಲೆಸಿರುವವರು ತಮ್ಮ ಹಕ್ಕು ಚಲಾಯಿಸಲು ಊರಿಗೆ ಬರಲು ಉತ್ಸುಕರಾಗಿದ್ದಾರೆ. ಶುಕ್ರವಾರ ಮತದಾನ, ನಂತರ ವಾರದ ಕೊನೆಯ ಎರಡು ದಿನಗಳು ಸೇರಿ ಒಟ್ಟಿಗೆ ಮೂರು ರಜಾದಿನಗಳು ಸಿಗುವುದರಿಂದ ಊರಿಗೆ ಬರಲು ಹೊರಟವರು ಖಾಸಗಿ ಬಸ್‌ಗಳ ಟಿಕೆಟ್ ದರ ನೋಡಿ ಕಂಗಾಲಾಗಿದ್ದಾರೆ.

ಸಾಮಾನ್ಯ ದಿನಗಳಲ್ಲಿ ಬೆಂಗಳೂರಿನಿಂದ ಮಂಗಳೂರಿಗೆ ಎಸಿರಹಿತ ಸ್ಲೀಪರ್ ಬಸ್ ದರ ಸರಾಸರಿ ₹750ರಿಂದ ₹800 ಇದ್ದರೆ, ಏ.25, 26ರಂದು 1,300ರಿಂದ ₹1,700ರವರೆಗೆ ಏರಿಕೆಯಾಗಿದೆ. ಎಸಿ ಸ್ಲೀಪರ್‌ಗೆ ಗರಿಷ್ಠ ₹2,999 ಟಿಕೆಟ್ ದರ ನಿಗದಿಯಾಗಿದೆ. ಈಗಾಗಲೇ ಬಹುತೇಕ ಬಸ್‌ಗಳು ಭರ್ತಿಯಾಗಿದ್ದು, ಆ್ಯಪ್‌ಗಳಲ್ಲಿ ತೋರುವಂತೆ ಹೆಚ್ಚಿನ ಬಸ್‌ಗಳಲ್ಲಿ ಒಂದೆರಡು ಸೀಟ್‌ಗಳು ಮಾತ್ರ ಲಭ್ಯ ಇವೆ.

‘ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಸಹ ಟಿಕೆಟ್ ದರ ಏರಿಕೆ ಆಗಿದೆ. ಸಾಮಾನ್ಯ ದಿನಗಳಲ್ಲಿ ಬೆಂಗಳೂರಿನಿಂದ ಕುಕ್ಕೆ ಸುಬ್ರಹ್ಮಣ್ಯಕ್ಕೆ ರಾಜಹಂಸ ಬಸ್ ಟಿಕೆಟ್ ದರ ₹580 ಇದ್ದರೆ, ವಾರದ ಕೊನೆಯಲ್ಲಿ ವಿಶೇಷ ಬಸ್ ಎಂದು ತೋರಿಸಿ ಟಿಕೆಟ್ ದರವನ್ನು ₹727ಕ್ಕೆ ಹೆಚ್ಚಿಸಿವೆ. ಎಸಿ ಸ್ಲೀಪರ್‌ಗೆ ಸಾಮಾನ್ಯ ದಿನಗಳಲ್ಲಿ ₹672 ಟಿಕೆಟ್ ದರ ಇದ್ದರೆ, ಬುಧವಾರ ₹885 ಇದೆ. ಪ್ರತಿಬಾರಿ ಹಬ್ಬಗಳು, ವಾರದ ಕೊನೆಯಲ್ಲಿ ನಿರಂತರ ರಜೆಗಳು ಬಂದಾಗ ಕೆಎಸ್‌ಆರ್‌ಟಿಸಿ ಕೂಡ ಟಿಕೆಟ್ ದರ ಹೆಚ್ಚಳ ಮಾಡುತ್ತದೆ’ ಎಂದು ಬೆಂಗಳೂರಿನಲ್ಲಿ ಎಂಜಿನಿಯರ್ ಆಗಿರುವ ರಕ್ಷಿತ್ ರೈ ಬೇಸರ ವ್ಯಕ್ತಪಡಿಸಿದರು.

‘ವಾರದ ಕೊನೆಯಲ್ಲಿ ಖಾಸಗಿ ಬಸ್ ದರಗಳಲ್ಲಿ ಶೇ 10ರಷ್ಟು ಹೆಚ್ಚಳ ಮಾಡಲಾಗುತ್ತದೆ. ವಾರದ ದಿನಗಳಲ್ಲಿ ಸೋಮವಾರದಿಂದ ಗುರುವಾರದ ತನಕ ಬೆಂಗಳೂರಿನಿಂದ ಬಸ್‌ಗಳು ಖಾಲಿ ಬರುತ್ತವೆ. ಈ ಅವಧಿಯಲ್ಲಿ ಆಗುವ ನಷ್ಟವನ್ನು ಸರಿದೂಗಿಸಿಕೊಳ್ಳಲು ವಾರದ ಕೊನೆಯಲ್ಲಿ ದರ ಹೆಚ್ಚಳ ಅನಿವಾರ್ಯ’ ಎಂದು ರಾಜ್ಯ ಖಾಸಗಿ ಬಸ್ ಮಾಲೀಕರ ಸಂಘದ ಉಪಾಧ್ಯಕ್ಷ ಸದಾನಂದ ಛಾತ್ರ ಪ್ರತಿಕ್ರಿಯಿಸಿದರು. ಖಾಸಗಿ ಬಸ್‌ಗಳ ಟಿಕೆಟ್ ದರ ವಿಪರೀತ ಹೆಚ್ಚಳ ಆಗಿಲ್ಲ. ಕೆಲವು ಬಸ್‌ಗಳು ಹೆಚ್ಚಳ ಮಾಡಿರಬಹುದು, ಸಾಮೂಹಿಕವಾಗಿ ಹೆಚ್ಚಳ ಆಗಿಲ್ಲ ಎಂದರು.

ವಿನಾಯಿತಿ ನೀಡಲಿ: ಮತದಾನ ಪ್ರೋತ್ಸಾಹಿಸುವ ಉದ್ದೇಶದಿಂದ ಮತ ಹಾಕಿ ಬಂದವರಿಗೆ ಹಲವಾರು ಹೋಟೆಲ್, ಅಂಗಡಿಯವರು ದರದಲ್ಲಿ ವಿನಾಯಿತಿ ನೀಡುತ್ತವೆ. ಅದೇ ರೀತಿ, ಟಿಕೆಟ್ ದರದಲ್ಲಿ ವಿನಾಯಿತಿ ನೀಡಬೇಕು. ಇದರ ಬದಲಾಗಿ ಖಾಸಗಿ ಬಸ್‌ಗಳು ಬೇಕಾಬಿಟ್ಟಿ ದರ ಏರಿಕೆ ಮಾಡಿವೆ. ಇದಕ್ಕೆ ಕಡಿವಾಣ ಹಾಕಬೇಕು ಎಂದು ಸಾಮಾಜಿಕ ಕಾರ್ಯಕರ್ತರೊಬ್ಬರು ಒತ್ತಾಯಿಸಿದರು.

> ಬೆಂಗಳೂರು– ಮಂಗಳೂರು ನಡುವೆ ಟಿಕೆಟ್ ದರ ಹೆಚ್ಚಳ ಆಗಿರುವುದು ಗಮನಕ್ಕೆ ಬಂದಿಲ್ಲ. ನಮ್ಮ ಸಿಬ್ಬಂದಿ ಚುನಾವಣಾ ಕರ್ತವ್ಯದಲ್ಲಿ ಇರುವುದರಿಂದ ಕ್ಷೇತ್ರ ಕಾರ್ಯ ಸಾಧ್ಯವಾಗಿಲ್ಲ.
> **ಶ್ರೀಧರ್ ಮಲ್ಲಾಡ,** ಹಿರಿಯ ಸಾರಿಗೆ ಅಧಿಕಾರಿ

‘ಹೆಚ್ಚುವರಿ ಬಸ್‌ಗೆ ಶೇ 20 ದರ ಹೆಚ್ಚಳ’

ಕೆಎಸ್‌ಆರ್‌ಟಿಸಿ ಮಂಗಳೂರು ವಿಭಾಗದಲ್ಲಿ 590 ಬಸ್‌ಗಳು ಇದ್ದು, 529 ಶೆಡ್ಯೂಲ್‌ಗಳು ಇವೆ. ಚುನಾವಣೆ ಮತ್ತು ರಜಾದಿನಗಳು ಇರುವ ಕಾರಣ ಬೆಂಗಳೂರು, ಮೈಸೂರು ಭಾಗದಲ್ಲಿ 40 ಹೆಚ್ಚುವರಿ ಬಸ್ ಓಡಿಸಲಾಗುತ್ತಿದೆ. ಏ.28ಕ್ಕೆ 30 ಹೆಚ್ಚುವರಿ ಬಸ್‌ಗಳನ್ನು ಕಾಯ್ದಿಡಲಾಗಿದೆ. ಮುಂಗಡ ಟಿಕೆಟ್ ಬುಕ್ಕಿಂಗ್ ಆಗುವ ಪ್ರಮಾಣ ಆಧರಿಸಿ ಇನ್ನಷ್ಟು ಹೆಚ್ಚು ಬಸ್ ಓಡಿಸಲಾಗುತ್ತದೆ. ಹೆಚ್ಚುವರಿ ಬಸ್ ಮತ್ತು ವಾರದ ಕೊನೆಯಲ್ಲಿ ನಿಗದಿತ ಟಿಕೆಟ್ ದರಕ್ಕಿಂತ ಶೇ 20ರಷ್ಟು ಹೆಚ್ಚಳ ಮಾಡಲಾಗುತ್ತದೆ. ಕಾಯಂ ಆಗಿ ಇರುವ ಬಸ್‌ಗಳ ಟಿಕೆಟ್ ದರದಲ್ಲಿ ವ್ಯತ್ಯಾಸ ಇಲ್ಲ ಎಂದು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ರಾಜೇಶ್ ಶೆಟ್ಟಿ ತಿಳಿಸಿದರು.

ನಮಾಜ್ ಸಮಯ ಬದಲು

ಪ್ರಜಾವಾಣಿ ವಾರ್ತೆ

ಮಂಗಳೂರು: ಲೋಕಸಭಾ ಚುನಾವಣೆಯ ಮತದಾನವು ಶುಕ್ರವಾರ (ಏ.29)ವೇ ಇರುವುದರಿಂದ, ಮತ ಚಲಾವಣೆಗೆ ಅನುಕೂಲ ಕಲ್ಪಿಸಲು ಅಂದು ದಕ್ಷಿಣ ಕನ್ನಡ ಜಿಲ್ಲೆಯ ಮಸೀದಿಗಳಲ್ಲಿ ನಮಾಜ್‌ನ ಸಮಯದಲ್ಲಿ ಮಾರ್ಪಾಡು ಮಾಡಲಾಗುತ್ತಿದೆ.

‘ಮುಸ್ಲಿಮರು ಶುಕ್ರವಾರ ಮಸೀದಿಗೆ ತೆರಳಿ ನಮಾಜ್ ಸಲ್ಲಿಸುತ್ತಾರೆ. ಬಹುತೇಕ ಮಸೀದಿಗಳಲ್ಲಿ ಶುಕ್ರವಾರದ ನಮಾಜ್ (ಪ್ರಾರ್ಥನೆ) ಸಮಯ ಒಂದೇ ಇರುತ್ತದೆ. ಈ ಶುಕ್ರವಾರ ಲೋಕಸಭಾ ಚುನಾವಣೆಯ ಮತದಾನ ಇರುವುದರಿಂದ ಒಂದೇ ಊರಿನ ಬೇರೆ ಬೇರೆ ಮಸೀದಿಗಳಲ್ಲಿ ಬೇರೆ ಬೇರೆ ಸಮಯದಲ್ಲಿ ನಮಾಜ್ ಮಾಡಲು ಅವಕಾಶ ಕಲ್ಪಿಸುವಂತೆ ಜಿಲ್ಲಾ ವಕ್ಫ್ ಸಲಹಾ ಸಮಿತಿಯು ಮಸೀದಿಗಳ ಆಡಳಿತ ಸಮಿತಿಗಳಿಗೆ ಸಲಹೆ ನೀಡಿದೆ’ ಎಂದು ಜಿಲ್ಲಾ ವಕ್ಫ್ ಸಲಹಾ ಸಮಿತಿ ಅಧ್ಯಕ್ಷ ಬಿ.ಎ.ಅಬ್ದುಲ್ ನಾಸಿರ್ ಲಕ್ಕಿಸ್ಟಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಶುಕ್ರವಾರ ಮಧ್ಯಾಹ್ನದ ವಿಶೇಷ ನಮಾಜ್‌ನಲ್ಲಿ ಪಾಲ್ಗೊಳ್ಳಲು ಕೆಲವರು ಮಧ್ಯಾಹ್ನ 12 ಗಂಟೆ ಬಳಿಕ ಮಸೀದಿಗೆ ತೆರಳುತ್ತಾರೆ. ಸುಮಾರು 1 ಗಂಟೆ ಖುತ್ಬಾ ಪಾರಾಯಣ ನಡೆದು, ನಂತರ ಸಾಮೂಹಿಕ ನಮಾಜ್ ನಡೆಯುವುದು ವಾಡಿಕೆ.

‘ಮತಗಟ್ಟೆಗೆ ತೆರಳಿದವರು ಮಸೀದಿಗೆ ಬರಲು ತಡವಾಗಬಹುದು. ಹಾಗಾಗಿ ಬೇರೆ ಬೇರೆ ಮಸೀದಿಗಳಲ್ಲಿ ಬೇರೆ ಬೇರೆ ಸಮಯದಲ್ಲಿ ನಮಾಜ್ ಏರ್ಪಡಿಸಲು ಸಲಹೆ ನೀಡಿದ್ದೇವೆ. ಕೆಲವು ಮಸೀದಿಗಳಲ್ಲಿ ಮಧ್ಯಾಹ್ನ 1 ಗಂಟೆಗೆ ನಮಾಜ್ ನಡೆದರೆ, ಇನ್ನು ಕೆಲವು ಮಸೀದಿಗಳಲ್ಲಿ ಮಧ್ಯಾಹ್ನ 1.15ಕ್ಕೆ, 1.30ಕ್ಕೆ ನೆರವೇರಲಿದೆ’ ಎಂದರು.

‘ಬಹುತೇಕ ಮಸೀದಿಗಳ ಖತೀಬರು ಮತ್ತು ಸಿಬ್ಬಂದಿ ಪರವೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಮತದಾನ ಮಾಡಲು ಅವರು ತಮ್ಮ ತಮ್ಮ ಊರುಗಳಿಗೆ ತೆರಳಬೇಕಾಗುತ್ತದೆ. ಹಾಗಾಗಿ ಜಿಲ್ಲೆಯ ಮಸೀದಿಗಳಲ್ಲಿ ಕಾರ್ಯನಿರ್ವಹಿಸುವ ಮೌಲ್ವಿಗಳು ಹಾಗೂ ಇತರ ಸಿಬ್ಬಂದಿಗೆ ಏ. 26ರಂದು ರಜೆ ನೀಡುವಂತೆ ನಿರ್ದೇಶನ ನೀಡಿದ್ದೇವೆ’ ಎಂದು ಹೇಳಿದರು.

ಗುರುವಾರ, ಏಪ್ರಿಲ್ 25, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 115 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ರುಬೆಲ್ಲಾ, ದಡಾರ ನಿರ್ವಹಣೆ: ಭಾರತಕ್ಕೆ ಪ್ರಶಸ್ತಿ

ಆಳ-ಅಗಲ
ಕೇರಳ: ತ್ರಿಕೋನ ಸ್ಪರ್ಧೆ ಬಹು ಆಯಾಮದ ಚುನಾವಣೆ

ಎಸ್‌ಐಟಿ ತನಿಖೆಗೆ ಸುಪ್ರೀಂ ಕೋರ್ಟ್ ಮೊರೆ 11

ಫಯಾಜ್ ಸಿಐಡಿ ವಶಕ್ಕೆ; ತನಿಖೆ ಚುರುಕು 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,852	22,402	₹74,510 (ಬೆಂಗಳೂರು)	₹83,600 (ಬೆಂಗಳೂರು)	83.30

ಈ QR ಕೋಡ್ ಸ್ಕ್ಯಾನ್ ಮಾಡಿ, ಪ್ರಕಟವಾಗುವ ಅರ್ಜಿ ಭರ್ತಿ ಮಾಡಿ, ಚಂದಾದಾರರಾಗಿ ನೋಂದಣಿ ಮಾಡಿಕೊಳ್ಳಿ

ಪ್ರಜಾವಾಣಿ
ಸ್ಪರ್ಧಾವಾಣಿ MASTERMIND
ಈ ಸಂಚಿಕೆಯಲ್ಲಿ 150 ಕ್ಕೂ ಹೆಚ್ಚು ಬಹು ಆಯ್ಕೆಯ ಪ್ರಶ್ನೆಗಳು, QR ಕೋಡ್ ಆಧಾರಿತ 100 ಪ್ರಶ್ನೆಗಳ ಮಾದರಿ ಪರೀಕ್ಷೆ ಹಾಗೂ ವಿಡಿಯೋ ಪಾಠಗಳು

ಪಿತ್ರಾರ್ಜಿತ ಆಸ್ತಿ ತೆರಿಗೆ ಹೇರಿಕೆ ಕುರಿತು ಬಿಜೆಪಿ, ಕಾಂಗ್ರೆಸ್ ಆರೋಪ– ಪ್ರತ್ಯಾರೋಪ

‘ಕೈ’–‘ಕಮಲ’ದ ತೆರಿಗೆ ಸಂಘರ್ಷ

ಅಂಬಿಕಾಪುರ/ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷವು ಜನರ ಆಸ್ತಿ ಕಸಿದುಕೊಳ್ಳುವ ಬಗೆಗಿನ ತಮ್ಮ ಆರೋಪಕ್ಕೆ ಹೊಸ ರೂಪ ನೀಡಿರುವ ಪ್ರಧಾನಿ ನರೇಂದ್ರ ಮೋದಿ, ‘ಪಕ್ಷವು ದೇಶದಲ್ಲಿ ಪಿತ್ರಾರ್ಜಿತ ಆಸ್ತಿ ತೆರಿಗೆ ಹೇರಿ, ಜನರು ಮತ್ತು ಅವರ ಮಕ್ಕಳ ಹಕ್ಕು ಕಸಿದುಕೊಳ್ಳಲು ಹೊರಟಿದೆ’ ಎಂದು ಆರೋಪಿಸಿದರು.

ಕಾಂಗ್ರೆಸ್ ಮುಖಂಡ ಸ್ಯಾಮ್ ಪಿತ್ರೋಡಾ ಅವರು ಅಮೆರಿಕದಲ್ಲಿ ನೀಡಿದ್ದರೆನ್ನಲಾದ ಹೇಳಿಕೆಯನ್ನು ಆಧರಿಸಿ ಮೋದಿ, ಬುಧವಾರ ವಾಗ್ದಾಳಿ ಮುಂದುವರಿಸಿದರು.

ಛತ್ತೀಸಗಢದ ಸುರ್ಗುಜಾ ಜಿಲ್ಲಾ ಕೇಂದ್ರವಾದ ಅಂಬಿಕಾಪುರದಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ‘ಕಾಂಗ್ರೆಸ್‌ನ ಅಪಾಯಕಾರಿ ಉದ್ದೇಶಗಳು ಒಂದೊಂದಾಗಿ ಹೊರಬರುತ್ತಿವೆ. ಈಗ ಅವರು ಪಿತ್ರಾರ್ಜಿತ ಆಸ್ತಿ ತೆರಿಗೆ ವಿಧಿಸುವುದಾಗಿ ಹೇಳುತ್ತಿದ್ದಾರೆ. ಅಧಿಕಾರಕ್ಕಾಗಿ ದೇಶವನ್ನು ನಾಶ ಮಾಡುವುದೇ ಕಾಂಗ್ರೆಸ್ ಚರಿತ್ರೆಯಾಗಿದೆ’ ಎಂದು ಟೀಕಿಸಿದರು.

‘ಶಾಹಿ’ ಪರಿವಾರದ ‘ಶೆಹಜಾದ’ನ ಸಲಹೆಗಾರ ಮತ್ತು ಅವರ ತಂದೆಯ ಸಲಹೆಗಾರರೂ ಆಗಿದ್ದ ವ್ಯಕ್ತಿಯೊಬ್ಬರು ಮಧ್ಯಮ ವರ್ಗ, ಶ್ರಮಿಕರ ಮೇಲೆ ಹೆಚ್ಚು ತೆರಿಗೆ ವಿಧಿಸಬೇಕು ಎಂದಿದ್ದಾರೆ’ ಎಂದು ಸ್ಯಾಮ್ ಪಿತ್ರೋಡಾ ಹಾಗೂ ರಾಹುಲ್ ಗಾಂಧಿ ಅವರ ಹೆಸರನ್ನು ಉಲ್ಲೇಖಿಸದೇ ಕುಟುಕಿದರು.

‘ಕಾಂಗ್ರೆಸ್ ಜನ ಅವರ ಪೋಷಕರಿಂದ ಪಿತ್ರಾರ್ಜಿತವಾಗಿ ಪಡೆದ ಆಸ್ತಿ ಮೇಲೆ ತೆರಿಗೆ ವಿಧಿಸಲಿದೆ. ಅದರ ‘ಪಂಜಾ’ (ಕಸಿಯುವ ಹಸ್ತ) ನಿಮ್ಮ ಮಕ್ಕಳಿಂದ ಆಸ್ತಿ ಕಸಿದುಕೊಳ್ಳಲಿದೆ’ ಎಂದು ಹೇಳಿದರು.

ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಘೋಷವಾಕ್ಯವನ್ನು ಬದಲಾಯಿಸಿದ ಮೋದಿ, ‘ಕಾಂಗ್ರೆಸ್ ಕಾ ಮಂತ್ರ್ ಹೈ ಕಾಂಗ್ರೆಸ್ ಕಿ ಲೂಟ್ ಜಿಂದಗೀ ಕೆ ಸಾಥ್ ಭೀ, ಜಿಂದಗೀ ಕೆ ಬಾದ್ ಭೀ’ (ಜನ ಬದುಕಿದ್ದಾಗಲೂ, ಸತ್ತ ಮೇಲೆಯೂ ಅವರನ್ನು ಸುಲಿಯುವುದೇ ಕಾಂಗ್ರೆಸ್ ಮಂತ್ರ) ಎಂದರು.

‘ನೀವು ಬದುಕಿರುವವರೆಗೆ ಕಾಂಗ್ರೆಸ್ ನಿಮ್ಮ ಮೇಲೆ ಹೆಚ್ಚು ತೆರಿಗೆ ವಿಧಿಸುತ್ತದೆ. ನೀವು ಸತ್ತ ನಂತರವೂ ಪಿತ್ರಾರ್ಜಿತ ತೆರಿಗೆಯ ಹೊರೆಯನ್ನು ಹೇರುತ್ತದೆ. ಅವರು ನಿಮ್ಮ ಆಸ್ತಿ ಮತ್ತು ನಿಮ್ಮ ಮಕ್ಕಳ ಹಕ್ಕುಗಳನ್ನು ಕಸಿದುಕೊಳ್ಳಲು ಹೊರಟಿದ್ದಾರೆ’ ಎಂದು ಆರೋಪಿಸಿದರು.

ಮಧ್ಯಪ್ರದೇಶದ ರ‍್ಯಾಲಿಯಲ್ಲಿಯೂ ಅವರು ಇಂಥವೇ ಆರೋಪಗಳನ್ನು ಮಾಡಿದ್ದರು.

‘ಭಾರತವು ‘ಆತ್ಮನಿರ್ಭರ’ವಾದರೆ (ಸ್ವಾವಲಂಬಿ), ತಮ್ಮ ಅಂಗಡಿಗಳನ್ನು ಮುಚ್ಚಬೇಕಾಗುತ್ತದೆ ಎಂದು ಅರಿತಿರುವ ಕೆಲವು ಶಕ್ತಿಗಳಿಗೆ ದೇಶದಲ್ಲಿ ಕಾಂಗ್ರೆಸ್ ಮತ್ತು ‘ಇಂಡಿ’ ಕೂಟದ ದುರ್ಬಲ ಸರ್ಕಾರ ಬೇಕು’ ಎಂದು ಆರೋಪಿಸಿದರು.

> **ಕಾಂಗ್ರೆಸ್‌ನ ಓಲೈಕೆ ರಾಜಕಾರಣ ಬಹಿರಂಗಗೊಂಡಿದೆ. ಬಹುಸಂಖ್ಯಾತರ ಆಸ್ತಿ ಕಸಿದುಕೊಂಡು ಅದನ್ನು ಅಲ್ಪಸಂಖ್ಯಾತರಿಗೆ ಹಂಚುವ ಪಕ್ಷದ ಉದ್ದೇಶವನ್ನು ಮತ್ತೆ ದೃಢಪಡಿಸಿದ್ದಾರೆ**
> **ಅಮಿತ್ ಶಾ,** ಗೃಹ ಸಚಿವ

> **ಕಾಂಗ್ರೆಸ್ ತಂತ್ರ ಏನೆಂದರೆ, ಬದುಕಿರುವಾಗ–ತೆರಿಗೆ. ಸತ್ತ ಮೇಲೆ–ತೆರಿಗೆ (ಪಿತ್ರಾರ್ಜಿತ ಆಸ್ತಿ). ಕಾಂಗ್ರೆಸ್ ಪಕ್ಷವು ಮಧ್ಯಮ ವರ್ಗದವರನ್ನು ಗುರಿಯಾಗಿಸಿಕೊಂಡಿದೆ**
> **ನಿರ್ಮಲಾ ಸೀತಾರಾಮನ್**
> ಕೇಂದ್ರ ಹಣಕಾಸು ಸಚಿವೆ

‘ಪಿತ್ರಾರ್ಜಿತ ಆಸ್ತಿ ತೆರಿಗೆ ಹೇರಲು ಹೊರಟಿದ್ದ ಬಿಜೆಪಿ’

ನವದೆಹಲಿ (ಪಿಟಿಐ): ಪಿತ್ರಾರ್ಜಿತ ಆಸ್ತಿ ತೆರಿಗೆ ವಿಧಿಸುವ ಯಾವುದೇ ಆಲೋಚನೆಯನ್ನು ಕಾಂಗ್ರೆಸ್ ಹೊಂದಿಲ್ಲ. ವಾಸ್ತವವಾಗಿ, ರಾಜೀವ್ ಗಾಂಧಿ 1985ರಲ್ಲಿ ಪಿತ್ರಾರ್ಜಿತ ಆಸ್ತಿ ತೆರಿಗೆಯನ್ನು ರದ್ದುಪಡಿಸಿದ್ದರು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಈ ಬಗ್ಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಮೋದಿ ಸರ್ಕಾರ ಪಿತ್ರಾರ್ಜಿತ ಆಸ್ತಿ ತೆರಿಗೆಯನ್ನು ಹೇರಲು ಮುಂದಾಗಿತ್ತು’ ಎಂದು ಆರೋಪಿಸಿದ್ದಾರೆ.

‘ವಾಸ್ತವಾಂಶ 1: ಜಯಂತ್ ಸಿನ್ಹ, ಆಗಿನ ಹಣಕಾಸು ರಾಜ್ಯ ಸಚಿವ, ಪಿತ್ರಾರ್ಜಿತ ಆಸ್ತಿ ತೆರಿಗೆ ವಿಧಿಸಲು ಬಯಸುವುದಾಗಿ 2014ರಲ್ಲಿ ಹೇಳಿದ್ದರು.

ವಾಸ್ತವಾಂಶ 2: 2017ರಲ್ಲಿ, ಮೋದಿ ಸರ್ಕಾರವು ಪಿತ್ರಾರ್ಜಿತ ಆಸ್ತಿ ತೆರಿಗೆಯ ಮರುಜಾರಿಗೆ ಮುಂದಾಗಿರುವುದಾಗಿ ವರದಿಗಳು ಬಂದಿದ್ದವು.

ವಾಸ್ತವಾಂಶ 3: 2018ರಲ್ಲಿ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು ಆಸ್ಪತ್ರೆಗಳು, ವಿಶ್ವವಿದ್ಯಾಲಯಗಳಿಗೆ ದೊಡ್ಡ ಮಟ್ಟದಲ್ಲಿ ದಾನ ನೀಡುವುದನ್ನು ಪ್ರಚೋದಿಸುವ ಪಶ್ಚಿಮದ ಪಿತ್ರಾರ್ಜಿತ ಆಸ್ತಿ ತೆರಿಗೆಯನ್ನು ಶ್ಲಾಘಿಸಿದ್ದರು.

ವಾಸ್ತವಾಂಶ 4: 2019ರ ಕೇಂದ್ರ ಬಜೆಟ್‌ನಲ್ಲಿ ಮೋದಿ ಸರ್ಕಾರವು ಪಿತ್ರಾರ್ಜಿತ ಆಸ್ತಿ ತೆರಿಗೆಯನ್ನು ಪರಿಚಯಿಸಲಿದೆ ಎಂದು ವರದಿಗಳು ಬಂದಿದ್ದವು’ ಎಂದು ಉಲ್ಲೇಖಿಸಿದ್ದಾರೆ.

‘ಮೋದಿಯವರೇ, ಇದರ ಬಗ್ಗೆ ನಿಮ್ಮ ನಿಲುವೇನು’ ಎಂದು ಪ್ರಶ್ನಿಸಿರುವ ಅವರು, ತಮ್ಮ ಆರೋಪ ಗಳಿಗೆ ಸಂಬಂಧಿಸಿದ ಪತ್ರಿಕಾ ವರದಿಗಳನ್ನು ಪೋಸ್ಟ್ ಮಾಡಿದ್ದಾರೆ.

‘ಪಿತ್ರೋಡಾ ಅವರ ದೃಷ್ಟಿಕೋನವು ಸದಾ ಕಾಂಗ್ರೆಸ್ ಪಕ್ಷವನ್ನು ಪ್ರತಿನಿಧಿಸುತ್ತದೆ ಎಂದು ಅರ್ಥವಲ್ಲ. ಹೆಚ್ಚಿನ ಸಲ ಹಾಗೆ ಇರುವುದಿಲ್ಲ. ಪಿತ್ರೋಡಾ ಅವರ ಹೇಳಿಕೆಗಳನ್ನು ವೈಭವೀಕರಿಸುವುದು ನರೇಂದ್ರ ಮೋದಿ ಅವರ ದುರುದ್ದೇಶಪೂರಿತ ಚೇಷ್ಟೆಯಾಗಿದೆ.’ ಎಂದು ಹೇಳಿದ್ದಾರೆ.

ಪಿತ್ರೋಡಾ ಸ್ಪಷ್ಟೀಕರಣ

ನವದೆಹಲಿ (ಪಿಟಿಐ): ಭಾರತೀಯ ಸಾಗರೋತ್ತರ ಕಾಂಗ್ರೆಸ್ ಅಧ್ಯಕ್ಷ ಸ್ಯಾಮ್ ಪಿತ್ರೋಡಾ ಅವರು ಅಮೆರಿಕದಲ್ಲಿ ಸಂಪತ್ತಿನ ಮರುಹಂಚಿಕೆಯ ಬಗ್ಗೆ ಚರ್ಚಿಸುವ ವೇಳೆ ಪಿತ್ರಾರ್ಜಿತ ಆಸ್ತಿ ತೆರಿಗೆಯ ಕುರಿತು ಮಾತನಾಡಿದ್ದರು.

ತಮ್ಮ ಹೇಳಿಕೆಯ ಸುತ್ತ ವಿವಾದ ಸೃಷ್ಟಿಯಾಗುತ್ತಿದ್ದಂತೆಯೇ ಪಿತ್ರೋಡಾ ಸ್ಪಷ್ಟೀಕರಣ ನೀಡಿದ್ದಾರೆ.

‘ಮೋದಿ ಅವರು ಕಾಂಗ್ರೆಸ್ ಪ್ರಣಾಳಿಕೆ ಬಗ್ಗೆ ಹರಡುತ್ತಿರುವ ಸುಳ್ಳುಗಳಿಂದ ಜನರ ಗಮನ ಬೇರೆಡೆ ಸೆಳೆಯಲು ನನ್ನ ಹೇಳಿಕೆಯನ್ನು ‘ಗೋದಿ ಮಾಧ್ಯಮ’ ತಿರುಚಿದೆ. ಮಂಗಳಸೂತ್ರ ಮತ್ತು ಚಿನ್ನ ಕಸಿದುಕೊಳ್ಳುವ ಬಗ್ಗೆ ಮೋದಿ ಹೇಳಿಕೆಗಳು ಅವಾಸ್ತವಿಕವಾಗಿವೆ’ ಎಂದು ಹೇಳಿದ್ದಾರೆ.

ನಾನು ಅಮೆರಿಕದ ಪಿತ್ರಾರ್ಜಿತ ಆಸ್ತಿ ತೆರಿಗೆಯನ್ನು ಅಮೆರಿಕದಲ್ಲಿ ಟಿ.ವಿಯ ಚರ್ಚೆಯಲ್ಲಿ ನಿದರ್ಶನವನ್ನಾಗಿ ಮಾತ್ರ ಪ್ರಸ್ತಾಪಿಸಿದ್ದೆ. ನಾನು ಸತ್ಯಸಂಗತಿಗಳನ್ನು ಪ್ರಸ್ತಾಪಿಸಬಾರದೇ? ಇಂಥ ವಿಚಾರಗಳ ಬಗ್ಗೆ ಜನ ಚರ್ಚೆ, ಸಂವಾದ ಮಾಡಬೇಕು ಎಂದು ಹೇಳಿದ್ದೆ. ನನ್ನ ಮಾತಿಗೂ ಕಾಂಗ್ರೆಸ್ ಪಕ್ಷದ ನೀತಿಗೂ ಸಂಬಂಧವಿಲ್ಲ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಶೇ 55ರಷ್ಟು ಕಸಿದುಕೊಳ್ಳುತ್ತಾರೆ ಎಂದು ಹೇಳಿದ್ದು ಯಾರು? ಇಂಥದ್ದನ್ನು ಭಾರತದಲ್ಲಿ ಜಾರಿ ಮಾಡಬೇಕು ಎಂದು ಹೇಳಿದ್ದು ಯಾರು? ಬಿಜೆಪಿ ಮತ್ತು ಮಾಧ್ಯಮಗಳು ಏಕೆ ಕಂಗಾಲಾಗಿವೆ’ ಎಂದು ಪ್ರಶ್ನಿಸಿದ್ದಾರೆ.

‘ವಿವಿ–ಪ್ಯಾಟ್‌ನಲ್ಲೂ ಮೈಕ್ರೊಕಂಟ್ರೋಲರ್’

ಮತಎಣಿಕೆ ವೇಳೆ ಇವಿಎಂಗಳಲ್ಲಿನ ಮತಗಳು ಮತ್ತು ವಿವಿ–ಪ್ಯಾಟ್‌ನಲ್ಲಿನ ಮತಗಳನ್ನು ಪರಸ್ಪರ ಹೋಲಿಸಿ ನೋಡಬೇಕು ಎಂದು ಕೋರಿದ್ದ ಅರ್ಜಿಗಳ ವಿಚಾರಣೆಯನ್ನು ಏಪ್ರಿಲ್ 18ರಂದೇ ಪೂರ್ಣಗೊಳಿಸಿದ್ದ ಸುಪ್ರೀಂ ಕೋರ್ಟ್ ಪೀಠವು, ತೀರ್ಪನ್ನು ಕಾಯ್ದಿರಿಸಿತ್ತು. ಆದರೆ, ಈ ಸಂಬಂಧ ಚುನಾವಣಾ ಆಯೋಗವು ನೀಡಿದ್ದ ವಿವರಣೆಯಲ್ಲಿ ಹಲವು ಕೊರತೆಗಳು ಇದ್ದ ಕಾರಣ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ದೀಪಂಕರ್ ದತ್ತಾ ಅವರಿದ್ದ ಪೀಠವು ಬುಧವಾರ ಮತ್ತೆ ವಿಚಾರಣೆ ನಡೆಸಿತು. ಅಂದರೆ ಆಯೋಗವು ಸುಪ್ರೀಂ ಕೋರ್ಟ್‌ಗೆ ಈ ಹಿಂದೆ ಪೂರ್ಣ ಮಾಹಿತಿ ನೀಡಿರಲಿಲ್ಲ. ಅರೆಮಾಹಿತಿಯ ಆಧಾರದಲ್ಲಿ ತೀರ್ಪು ನೀಡಲು ಸಾಧ್ಯವಿಲ್ಲ ಎಂದೇ ಪೀಠವು ಹೇಳಿತ್ತು. ವಿವಿ–ಪ್ಯಾಟ್‌ನಲ್ಲಿ 4 ಎಂಬಿಯಷ್ಟು ಫ್ಲ್ಯಾಷ್ ಮೆಮೊರಿ ಅಷ್ಟೇ ಇರುತ್ತದೆ ಎಂದು ಆಯೋಗ ಈ ಹಿಂದಿನ ವಿಚಾರಣೆ ವೇಳೆ ಹೇಳಿತ್ತು. ಈಗ ಪೀಠವು ಮರುಪ್ರಶ್ನಿಸಿದಾಗ, ವಿವಿ–ಪ್ಯಾಟ್‌ನಲ್ಲಿ ಮೈಕ್ರೊ ಕಂಟ್ರೋಲರ್ ಸಹ ಇರುತ್ತದೆ ಎಂದು ಹೇಳಿದೆ. ಈಗ ಎರಡನೇ ಬಾರಿಗೆ ವಿಚಾರಣೆ ಪೂರ್ಣಗೊಳಿಸಿರುವ ಪೀಠವು ತೀರ್ಪನ್ನು ಮತ್ತೆ ಕಾಯ್ದಿರಿಸಿದೆ

1. ಮೈಕ್ರೊಕಂಟ್ರೋಲರ್ ಅನ್ನು ಕಂಟ್ರೋಲ್ ಯೂನಿಟ್‌ನಲ್ಲಿ ಅಳವಡಿಸಲಾಗಿದೆಯೇ ಅಥವಾ ವಿವಿ–ಪ್ಯಾಟ್‌ನಲ್ಲಿ ಅಳವಡಿಸಲಾಗಿದೆಯೇ?

ಕಂಟ್ರೋಲ್ ಯೂನಿಟ್, ಇವಿಎಂ ಹಾಗೂ ವಿವಿ–ಪ್ಯಾಟ್ ಮೂರರಲ್ಲಿಯೂ ಪ್ರತ್ಯೇಕ ಮೈಕ್ರೊಕಂಟ್ರೋಲರ್ ಅನ್ನು ಅಳವಡಿಸಲಾಗಿದೆ. ಇವುಗಳನ್ನು ಸುರಕ್ಷಿತವಾಗಿ ಇರಿಸಲಾಗಿರುತ್ತದೆ. ಒಂದು ವೇಳೆ ಇವುಗಳನ್ನು ಮುಟ್ಟಲು ಪ್ರಯತ್ನಿಸಿದರೆ, ಇವಿಎಂ ಯಂತ್ರವು ಹಾಳಾಗುತ್ತದೆ

2. ಈ ಮೈಕ್ರೊ ಕಂಟ್ರೋಲರ್ ಗಳಲ್ಲಿ ಒಂದು ಬಾರಿಯಷ್ಟೇ ಪ್ರೋಗ್ರಾಮಿಂಗ್ ಮಾಡಲು ಸಾಧ್ಯವೇ?

ಹೌದು. ಈ ಮೂರು ಮೈಕ್ರೊಕಂಟ್ರೋಲರ್‌ಗಳನ್ನು ಒಂದು ಬಾರಿಯಷ್ಟೇ ಪ್ರೋಗ್ರಾಮಿಂಗ್ ಮಾಡಲು ಸಾಧ್ಯ. ಈ ಪ್ರೋಗ್ರಾಂಗಳನ್ನು ಈ ಯಂತ್ರಗಳ ತಯಾರಿಕೆ ವೇಳೆಯಲ್ಲಿಯೇ ಅವಳಡಿಸಲಾಗುತ್ತದೆ. ಅದನ್ನು ಬದಲಿಸಲಾಗದು

3. ಮತಎಣಿಕೆ ಬಳಿಕ 30 ದಿನಗಳವರೆಗೆ ಮಾತ್ರ ತಕರಾರು ಅರ್ಜಿಗೆ ಅವಕಾಶ ಇದೆ. ಹೀಗಾಗಿ 45 ದಿನದ ವರೆಗೆ ಇವಿಎಂಗಳನ್ನು ಹಾಗೇ ಇರಿಸುತ್ತೇವೆ ಎಂದು ನೀವು ಹೇಳಿದ್ದೀರಿ. ಆದರೆ ಜನಪ್ರಾತಿನಿಧ್ಯ ಕಾಯ್ದೆ ಪ್ರಕಾರ ತಕರಾರು ಸಲ್ಲಿಸಲು 45 ದಿನ ಅವಕಾಶವಿದೆ. ನೀವು ಹೆಚ್ಚಿನ ಅವಧಿಯವರೆಗೆ ಇವಿಎಂಗಳನ್ನು ಇರಿಸಬೇಕಲ್ಲವೇ?

ಮತ ಎಣಿಕೆ ಬಳಿಕ 45 ದಿನಗಳ ಒಳಗೆ ಚುನಾವಣಾ ತಕರಾರು ಅರ್ಜಿಯನ್ನು ಸಲ್ಲಿಸಲು ಅವಕಾಶ ಇರುತ್ತದೆ. ಯಾವುದಾರರೂ ತರಕಾರು ಅರ್ಜಿಗಳು ಬಂದಿವೆಯೇ ಎಂದು 46ನೇ ದಿನ ಮುಖ್ಯ ಚುನಾವಣಾ ಅಧಿಕಾರಿಯು ಹೈಕೋರ್ಟ್‌ನ ರಿಜಿಸ್ಟ್ರಾರ್ ಅವರಿಗೆ ಪತ್ರ ಬರೆಯುತ್ತಾರೆ. ಯಾವುದೇ ಅರ್ಜಿ ಸಲ್ಲಿಕೆಯಾಗದಿದ್ದಲ್ಲಿ, ರಿಜಿಸ್ಟ್ರಾರ್ ಅವರು ಜಿಲ್ಲಾ ಚುನಾವಣಾ ಅಧಿಕಾರಿಗೆ ಪತ್ರ ಬರೆದು, ಸ್ಟ್ರಾಂಗ್ ರೂಮ್ ಅನ್ನು ತೆರೆಯಲು ಅನುಮತಿ ನೀಡುತ್ತಾರೆ. ಒಂದು ವೇಳೆ ಅರ್ಜಿ ಸಲ್ಲಿಕೆಯಾಗಿದ್ದರೆ, ಇವಿಎಂಗಳನ್ನು ಸೀಲ್ ಮಾಡಿ, ಲಾಕ್ ಮಾಡಿ ಇಡಲಾಗುತ್ತದೆ

‘ಅನುಮಾನದ ಆಧಾರದಲ್ಲಿ ನಿರ್ದೇಶನ ಸಾಧ್ಯವಿಲ್ಲ’

‘ಕೇವಲ ಸಂದೇಹದ ಆಧಾರದ ಮೇಲೆ ಚುನಾವಣೆಯನ್ನು ನಿಯಂತ್ರಿಸಲು ಸಾಧ್ಯವಿಲ್ಲ ಅಥವಾ ಚುನಾವಣೆಗೆ ಸಂಬಂಧಿಸಿದಂತೆ ನಿರ್ದೇಶನ ನೀಡಲು ಸಾಧ್ಯವಿಲ್ಲ’ ಎಂದು ಸುಪ್ರೀಂ ಕೋರ್ಟ್ ಪೀಠವು ಅಭಿಪ್ರಾಯಪಟ್ಟಿದೆ.

ಎಡಿಆರ್ ಪರವಾಗಿ ಹಾಜರಿದ್ದ ವಕೀಲ ಪ್ರಶಾಂತ್ ಭೂಷಣ್, ‘ಈ ಮೈಕ್ರೊ ಕಂಟ್ರೋಲರ್‌ಗಳು ಫ್ಲ್ಯಾಷ್ ಮೆಮೊರಿಯನ್ನು ಹೊಂದಿದ್ದು, ಅದನ್ನು ಮರು ಪ್ರೋಗ್ರಾಂ ಮಾಡಬಹುದಾಗಿದೆ’ ಎಂದು ಒಂದು ವರದಿಯನ್ನು ಪೀಠದ ಎದುರು ಇರಿಸಿದರು. ಅದನ್ನು ಪರಿಶೀಲಿಸಿದ ಪೀಠವು, ವರದಿಯಲ್ಲಿ ‘ಅನುಮಾನಾಸ್ಪದ’ ಎಂದು ಹೇಳಲಾಗಿದೆ. ಅದನ್ನು ಪರಿಗಣಿಸುವುದು ಸಾಧ್ಯವಿಲ್ಲ. ಆಯೋಗ ನೀಡಿರುವ ತಾಂತ್ರಿಕ ವರದಿಯನ್ನೇ ನಾವು ಪರಿಗಣಿಸಬೇಕಾಗುತ್ತದೆ. ಸಾಂವಿಧಾನಿಕ ಸಂಸ್ಥೆಯಾದ ಚುನಾವಣಾ ಪ್ರಾಧಿಕಾರಕ್ಕೆ, ಹೀಗೇ ಮಾಡಿ ಎಂದು ತಾಕೀತು ಮಾಡಲೂ ಸಾಧ್ಯವಿಲ್ಲ ಎಂದು ಹೇಳಿತು.

ಆರ್‌ಟಿಐಗೆ ಮಾಹಿತಿ ನೀಡದ ಬಿಇಎಲ್, ಇಸಿಐಎಲ್: ಇವಿಎಂ ಮತ್ತು ವಿವಿ–ಪ್ಯಾಟ್‌ಗಳ ತಯಾರಕರು ಮತ್ತು ಪೂರೈಕೆದಾರರ ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ಬಹಿರಂಗಪಡಿಸಲು ಬಿಇಎಲ್ ಮತ್ತು ಇಸಿಐಎಲ್ ನಿರಾಕರಿಸಿವೆ.

ಆಧಾರ: ಪಿಟಿಐ

ಕರಗ ಸಂಭ್ರಮ ಬೆಂಗಳೂರಿನಲ್ಲಿ ಮಂಗಳವಾರ ತಡರಾತ್ರಿ 2 ಗಂಟೆಗೆ ತಿಗಳರಪೇಟೆಯ ದ್ರೌಪದಿದೇವಿ ಕರಗ ಶಕ್ತ್ಯೋತ್ಸವ ಅಂಗವಾಗಿ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದ ಮುಂಭಾಗ ನಡೆದ ಕರಗ ಮಹೋತ್ಸವದಲ್ಲಿ ಕರಗಧಾರಿ ಜ್ಞಾನೇಂದ್ರ ಕರಗ ಹೊತ್ತು ದೇವಸ್ಥಾನದಿಂದ ಹೊರಬಂದಾಗ ಭಕ್ತರು ಹೂವು ಎರಚಿ ಸ್ವಾಗತಿಸಿದರು –ಪ್ರಜಾವಾಣಿ ಚಿತ್ರ. ಪ್ರಶಾಂತ್ ಎಚ್.ಜಿ.

‘ಮೈಸೂರು ಅನಂತಸ್ವಾಮಿ ಧಾಟಿ ನಾಡಗೀತೆಯೇ ಅಂತಿಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿವಂಗತ ಮೈಸೂರು ಅನಂತಸ್ವಾಮಿ ಸಂಯೋಜಿಸಿದ ಧಾಟಿಯಲ್ಲಿಯೇ ನಾಡಗೀತೆ ಹಾಡಬೇಕು ಎಂದು ಸರ್ಕಾರ ಹೊರಡಿಸಿರುವ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

‘ನಾಡಗೀತೆಗೆ ಮೈಸೂರು ಅನಂತಸ್ವಾಮಿ ಅವರ ಧಾಟಿಯನ್ನು ಅಳವಡಿಸಿಕೊಂಡು ಅದರ ಪೂರ್ಣಪಾಠ ಬಳಸಬೇಕು ಹಾಗೂ ಆಲಾಪವಿಲ್ಲದೇ, ಪುನರಾವರ್ತನೆ ಇಲ್ಲದೆ 2 ನಿಮಿಷ 30 ಸೆಕೆಂಡುಗಳಲ್ಲಿ ಹಾಡಬೇಕು ಎಂದು ರಾಜ್ಯ ಸರ್ಕಾರ 2022ರ ಸೆಪ್ಟೆಂಬರ್ 25ರಂದು ಆದೇಶ ಹೊರಡಿಸಿತ್ತು. ಈ ಆದೇಶಕ್ಕೆ ತಡೆ ನೀಡಬೇಕು’ ಎಂದು ಕೋರಿ ಕಿಕ್ಕೇರಿ ಕೃಷ್ಣಮೂರ್ತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ಪೂರೈಸಿ ಕಾಯ್ದಿರಿಸಿದ್ದ ಮಹತ್ವದ ತೀರ್ಪನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಪ್ರಕಟಿಸಿತು.

‘ಇಂತಹ ಆದೇಶ ಹೊರಡಿಸಲು ಸರ್ಕಾರಕ್ಕೆ ಯಾವುದೇ ಶಾಸನ ರೂಪಿಸುವ ಅಗತ್ಯ ಇಲ್ಲ. ಸರ್ಕಾರಕ್ಕೆ ತನ್ನದೇ ಕಾರ್ಯಪಾಲನಾ ಆದೇಶ ಹೊರಡಿಸುವ ಅಧಿಕಾರವಿದೆ. ರಾಷ್ಟ್ರಗೀತೆಯನ್ನು ಹೀಗೆಯೇ ಇಂತಿಷ್ಟೇ ಅವಧಿಯಲ್ಲಿ ಹಾಗೂ ಇಂತಹುದೇ ಧಾಟಿಯಲ್ಲಿ ಹಾಡಬೇಕು ಎಂಬಂತಹ ನಿಯಮಾವಳಿಗಳು ನಾಡಗೀತೆಯ ವಿಷಯದಲ್ಲೂ ಅನ್ವಯವಾಗುತ್ತವೆ’ ಎಂದು ನ್ಯಾಯಪೀಠ ಹೇಳಿದೆ.

‘ನಿರ್ದಿಷ್ಟ ರಾಗದಲ್ಲಿ ನಾಡಗೀತೆ ಹಾಡುವುದನ್ನು ಕಡ್ಡಾಯಗೊಳಿಸಿರುವುದರಿಂದ ಜನರ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತದೆ ಎಂಬ ಅರ್ಜಿದಾರರ ವಾದದಲ್ಲಿ ಹುರುಳಿಲ್ಲ.’

> **ರಾಷ್ಟ್ರಗೀತೆ ಹಾಡಲೇಬೇಕು ಎಂಬ ಕಡ್ಡಾಯ ನಿಯಮವಿಲ್ಲ. ಆದರೆ, ಅದಕ್ಕೆ ಅಗೌರವ ತೋರುವಂತಿಲ್ಲ ಎಂಬುದನ್ನು ಯಾರೂ ಮರೆಯಬಾರದು. ಅಂತೆಯೇ ನಾಡಗೀತೆ ವಿಷಯದಲ್ಲೂ ಇದು ಅನ್ವಯವಾಗುತ್ತದೆ**
> **ನ್ಯಾ. ಕೃಷ್ಣ ದೀಕ್ಷಿತ್**
> ಹೈಕೋರ್ಟ್ ನ್ಯಾಯಮೂರ್ತಿ

ಕೋರ್ಟ್ ಹೇಳಿದ್ದೇನು?

- ಅರ್ಜಿದಾರರು ನಾಡಗೀತೆಯನ್ನು ದಾರಿಯಲ್ಲಿ ಹೋಗುವಾಗ ಸಹ ತಮಗಿಷ್ಟ ಬಂದ ಧಾಟಿಯಲ್ಲಿ ಹಾಡಲು ಸ್ವತಂತ್ರರು
- ಸರ್ಕಾರದ ಆದೇಶದಿಂದ ಯಾರ ಭಾವನೆಗಳಿಗೂ ಧಕ್ಕೆಯಾಗಿಲ್ಲ

5ನೇ ಪುಟ ನೋಡಿ

ಬಿಜೆಪಿಯ ಕೆಲವರಿಂದ ಅಸಹಕಾರ: ಎಚ್‌ಡಿಡಿ

ಪ್ರಜಾವಾಣಿ ವಾರ್ತೆ

ಹಾಸನ: ‘ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯ ಕೆಲವರು ಸಹಕರಿಸುತ್ತಿಲ್ಲ’ ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ದೂರಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಹಾಸನದಲ್ಲಿ ಬಿಜೆಪಿಯ ಒಬ್ಬರು ವಿರೋಧಿಸುತ್ತಾರೆ... ಮಂಡ್ಯದಲ್ಲಿ ಸುಮಲತಾ ಸಹಕರಿಸುತ್ತಿಲ್ಲ. ಇದರಿಂದ ಅಪಾಯವೇನೂ ಆಗುವುದಿಲ್ಲ. ಕಾವೇರಿ ಜಲಾನಯನ ಪ್ರದೇಶದ ಎಲ್ಲ ಕ್ಷೇತ್ರಗಳನ್ನು ಗೆಲ್ಲುವ ಸಾಧ್ಯತೆ ಇದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ಕಾವೇರಿ ಅಚ್ಚುಕಟ್ಟು ಪ್ರದೇಶದ ಎಲ್ಲ ಕ್ಷೇತ್ರಗಳಲ್ಲಿ ಪ್ರವಾಸ ಮಾಡಿದ್ದೇನೆ. ಎಲ್ಲೆಡೆಯೂ ಗೆಲ್ಲುವ ಸಂಪೂರ್ಣ ವಿಶ್ವಾಸವಿದೆ’ ಎಂದರು.

‘ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಪ್ರಧಾನಿ ಗಮನಕ್ಕೆ ತಂದಿದ್ದೇನೆ. ಮೇಕೆದಾಟು ಅಣೆಕಟ್ಟೆ ನಿರ್ಮಾಣ ಸಂಬಂಧ ಕೇಂದ್ರ ಜಲ ಸಂಪನ್ಮೂಲ ಸಚಿವರ ಜೊತೆಗೂ ಮಾತನಾಡಿದ್ದೇನೆ. ಪ್ರಧಾನಿ ಮೋದಿಯವರಿಗೆ ಡಿಎಂಕೆ ಹಂಗಿನಲ್ಲಿ ಅಧಿಕಾರ ನಡೆಸುವ ಪರಿಸ್ಥಿತಿ ಇಲ್ಲ. ಈ ಬಾರಿ ತಮಿಳುನಾಡಿನಲ್ಲಿ ಬಿಜೆಪಿ ಖಾತೆ ತೆರೆಯಲಿದೆ’ ಎಂದರು.

ಕಾಂಗ್ರೆಸ್‌ನ ಪಿತೂರಿ: ವಿಜಯೇಂದ್ರ

ಶಿವಮೊಗ್ಗ: ‘ಜೆಡಿಎಸ್ ಅಭ್ಯರ್ಥಿಗಳು ಸ್ಪರ್ಧಿಸಿರುವ ಕ್ಷೇತ್ರಗಳಲ್ಲಿ ಬಿಜೆಪಿಯವರು ಅವರಿಗೆ ಸರಿಯಾದ ಸಹಕಾರ ನೀಡುತ್ತಿಲ್ಲ ಎಂಬುದೆಲ್ಲ ಬರೀ ಊಹಾಪೋಹ. ಅದು ಕಾಂಗ್ರೆಸ್‌ನವರ ರಾಜಕೀಯ ಪಿತೂರಿ’ ಎಂದು ಬಿ.ವೈ.ವಿಜಯೇಂದ್ರ ಪ್ರಶ್ನೆಯೊಂದಕ್ಕೆ ಇಲ್ಲಿ ಪ್ರತಿಕ್ರಿಯಿಸಿದರು. ‘ನಾವು ಹಾಗೂ ಜೆಡಿಎಸ್‌ನವರು ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ. ಹಾಸನ, ಮಂಡ್ಯ, ಕೋಲಾರದಲ್ಲಿ ಜೆಡಿಎಸ್ ಅಭ್ಯರ್ಥಿಗಳನ್ನು ಗೆಲ್ಲಿಸಲು ನಾವು (ಬಿಜೆಪಿ) ಶ್ರಮಿಸುತ್ತಿದ್ದೇವೆ. ಅವರು (ಜೆಡಿಎಸ್) ಪ್ರಾಬಲ್ಯ ಹೊಂದಿದ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ಸಹಕರಿಸುತ್ತಿದ್ದಾರೆ’ ಎಂದರು.

ಒಳಪುಟಗಳಲ್ಲಿ

‘ಒಬಿಸಿ ಮೀಸಲಾತಿ ಕಡಿತಗೊಳಿಸಿದ್ದ ಕಾಂಗ್ರೆಸ್’ 9
‘ಮುತ್ತುರಾಜ್ ಮುಖವಾಡ ತೆಗೆಯದ ರಾಜ್’ 5

ಚಿನಕುರುಳಿ
ಪ್ರಕಾಶ್ ಶೆಟ್ಟಿ



ಕೋಟಕ್ ಬ್ಯಾಂಕ್‌ಗೆ ನಿರ್ಬಂಧ

ಮುಂಬೈ (ಪಿಟಿಐ): ಕೋಟಕ್ ಮಹೀಂದ್ರ ಬ್ಯಾಂಕ್ ತನ್ನ ಆನ್‌ಲೈನ್ ಮತ್ತು ಮೊಬೈಲ್ ಬ್ಯಾಂಕಿಂಗ್ ವೇದಿಕೆ ಮೂಲಕ ಹೊಸ ಗ್ರಾಹಕರನ್ನು ಸೇರಿಸಿಕೊಳ್ಳುವುದಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬುಧವಾರ ನಿರ್ಬಂಧ ಹೇರಿದೆ. ಮಾಹಿತಿ ತಂತ್ರಜ್ಞಾನ ನಿಯಮಗಳನ್ನು ಅನುಸರಿಸುವಂತೆ ಪದೇ ಪದೇ ಸೂಚಿಸಿದರೂ ಅದನ್ನು ಪಾಲಿಸದಿರುವುದು ಆರ್‌ಬಿಐನ ಈಗಿನ ಕ್ರಮಕ್ಕೆ ಕಾರಣ. ಕ್ರೆಡಿಟ್ ಕಾರ್ಡ್‌ನ್ನು ಕೂಡ ಹೊಸದಾಗಿ ನೀಡುವಂತಿಲ್ಲ ಎಂದು ಆರ್‌ಬಿಐ ಹೇಳಿದೆ. ಇವೆಲ್ಲವೂ ತಕ್ಷಣದಿಂದಲೇ ಜಾರಿಗೆ ಬರಲಿವೆ.

ಬ್ಯಾಂಕ್‌ನ ಮಾಹಿತಿ ತಂತ್ರಜ್ಞಾನ ಅಪಾಯ ನಿರ್ವಹಣೆಯಲ್ಲಿ ಗಂಭೀರ ದೋಷಗಳಿವೆ ಎಂದು ಆರ್‌ಬಿಐ ಹೇಳಿದೆ. 2022 ಮತ್ತು 2023ರಲ್ಲಿ ಕೋಟಕ್ ಮಹೀಂದ್ರಾ ಬ್ಯಾಂಕ್‌ನ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಆರ್‌ಬಿಐ ಪರಿಶೀಲನೆಗೆ ಒಳಪಡಿಸಿತ್ತು. ಈ ಸಂದರ್ಭದಲ್ಲಿ ಹಲವು ದೋಷಗಳು ಪತ್ತೆಯಾಗಿದ್ದವು. ಈ ದೋಷಗಳನ್ನು ಸಮಗ್ರವಾಗಿ ಮತ್ತು ಸಕಾಲದಲ್ಲಿ ಸರಿಪಡಿಸಲು ಬ್ಯಾಂಕ್ ವಿಫಲವಾಗಿತ್ತು.

ಈಗ ಅಸ್ತಿತ್ವದಲ್ಲಿರುವ ಆನ್‌ಲೈನ್ ಗ್ರಾಹಕರಿಗೆ ಈ ಕ್ರಮವು ಅನ್ವಯಿಸುವುದಿಲ್ಲ. ಈಗಾಗಲೇ, ಕ್ರೆಡಿಟ್ ಕಾರ್ಡ್ ಹೊಂದಿರುವವರಿಗೆ ಸೇವೆಯನ್ನು ಮುಂದುವರಿಸಬಹುದಾಗಿದೆ ಎಂದು ಸ್ಪಷ್ಟಪಡಿಸಿದೆ. 2020ರ ಡಿಸೆಂಬರ್‌ನಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್‌ನ ಡಿಜಿಟಲ್ ಪೇಮೆಂಟ್ ಸೇವೆಯಲ್ಲಿಯೂ ಇದೇ ಮಾದರಿಯ ಸಮಸ್ಯೆ ತಲೆದೋರಿತ್ತು. ಆಗ ಅದರ ವಿರುದ್ಧವೂ ನಿರ್ಬಂಧ ಹೇರಲಾಗಿತ್ತು.

ಲೋಪ ಏನು?: ಬ್ಯಾಂಕ್‌ನ ಐ.ಟಿ ತಪಶೀಲು ನಿರ್ವಹಣೆ, ಬಳಕೆದಾರರ ದತ್ತಾಂಶ ನಿರ್ವಹಣೆ, ಕಾರ್ಯಾಚರಣೆಯ ಅಪಾಯದ ಮೇಲ್ವಿಚಾರಣೆ, ದತ್ತಾಂಶ ಭದ್ರತೆ, ದತ್ತಾಂಶ ಸೋರಿಕೆ ತಡೆಯ ಕಾರ್ಯತಂತ್ರಕ್ಕೆ ಸಂಬಂಧಿಸಿದ ಕ್ರಮಗಳು ಅಪಾಯದ ಸ್ಥಿತಿಯಲ್ಲಿವೆ ಎಂದು ಹೇಳಿದೆ.

‘ಈ ಎರಡು ವರ್ಷಗಳಿಗೆ ಸಂಬಂಧಿಸಿದಂತೆ ತಲೆದೋರಿರುವ ದೋಷಗಳ ಬಗ್ಗೆ ಬ್ಯಾಂಕ್ ಸಲ್ಲಿಸಿರುವ ವರದಿಯು ಸಮರ್ಪಕವಾಗಿಲ್ಲ.’

> **ವ್ಯವಸ್ಥೆಯನ್ನು ಬಲಪಡಿಸುವುದಕ್ಕೆ ಸಂಬಂಧಿಸಿದಂತೆ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ. ಆರ್‌ಬಿಐ ಸೂಚಿಸಿರುವ ನಿಯಮಾವಳಿಗಳ ಅನ್ವಯ ದೋಷಗಳನ್ನು ಸರಿಪಡಿಸಿಕೊಳ್ಳಲು ಬದ್ಧವಾಗಿದೆ**
> **ಕೋಟಕ್ ಮಹೀಂದ್ರ ಬ್ಯಾಂಕ್**

10ನೇ ಪುಟ ನೋಡಿ

ಬಹಿರಂಗ ಪ್ರಚಾರ ಅಂತ್ಯ: ಮನೆ ಮನೆಗೆ ತೆರಳಿ ಮತಯಾಚನೆ

14 ‘ಲೋಕ’ ಕ್ಷೇತ್ರ: ಮತ ಸೆಳೆತಕ್ಕೆ ‘ಒಳ’ತಂತ್ರ

ಮೊದಲ ಹಂತ						
14 ಕ್ಷೇತ್ರಗಳು	2,88,19,342 ಮತದಾರರು	30,602 ಮತಗಟ್ಟೆಗಳು	1.40 ಲಕ್ಷ ಮತಗಟ್ಟೆ ಸಿಬ್ಬಂದಿ	5,000 ಸೂಕ್ಷ್ಮ ವೀಕ್ಷಕರು	50,000 ಪೊಲೀಸ್ ಸಿಬ್ಬಂದಿ	65 ಅರೆಸೇನಾ ಪಡೆ ತುಕಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಗೆ ಅಧಿಸೂಚನೆ ಹೊರಬಿದ್ದ ನಂತರ ಬೇಸಿಗೆ ಬಿರುಬಿಸಿಲಿಗಿಂತ ಮಿಗಿಲಾಗಿ ಪ್ರಚಾರದ ಅಬ್ಬರ, ರಾಜಕೀಯ ಪಕ್ಷಗಳ ನಾಯಕರ ಮಾತಿನ ಮೇಲಾಟಗಳಿಗೆ ಭೂಮಿಕೆಯಾಗಿದ್ದ 14 ಕ್ಷೇತ್ರಗಳಲ್ಲಿನ ಬಹಿರಂಗ ಪ್ರಚಾರಕ್ಕೆ ಬುಧವಾರ ಸಂಜೆ 6ಕ್ಕೆ ತೆರೆ ಬಿದ್ದಿದೆ. ಮತಗಟ್ಟೆಗೆ ತೆರಳುವ ಮತದಾರರನ್ನು ನಾನಾ ರೀತಿ ‘ಓಲೈಸುವ’ ಒಳತಂತ್ರ ಆರಂಭವಾಗಿದೆ.

ಕಳೆದ ತಿಂಗಳು ಚುನಾವಣಾ ಅಧಿಸೂಚನೆ ಹೊರಗಿದ್ದ ನಂತರ ಹಳೇ ಮೈಸೂರು ಪ್ರಾಂತ್ಯದ ವ್ಯಾಪ್ತಿ ಒಳಗೊಂಡ ಲೋಕಸಭಾ ಕ್ಷೇತ್ರಗಳಲ್ಲಿ ಬಹಿರಂಗ ಪ್ರಚಾರದ ಅಬ್ಬರ ಮೇರೆ ಮೀರಿತ್ತು. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರು ಮೈತ್ರಿಕೂಟದ ಅಭ್ಯರ್ಥಿಗಳ ಪರ ರ‍್ಯಾಲಿ, ರೋಡ್ ಶೋ ನಡೆಸಿ ಎರಡೂ ಪಕ್ಷಗಳ ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ತವರು ಕ್ಷೇತ್ರಗಳೂ ಮೊದಲ ಹಂತದ ವ್ಯಾಪ್ತಿಯಲ್ಲಿರುವ ಕಾರಣ ಇಬ್ಬರೂ ಬಿರುಸಿನ ಪ್ರಚಾರ ಕೈಗೊಂಡಿದ್ದರು. ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಸ್ವತಃ ಮಂಡ್ಯದ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದು ಚುನಾವಣೆಯ ಕಾವನ್ನು ಇನ್ನಷ್ಟು ಹೆಚ್ಚಿಸಿತ್ತು. ಬಹಿರಂಗ ಪ್ರಚಾರದ ಕೊನೆಯ ದಿನವೂ ಕುಮಾರಸ್ವಾಮಿ ಮಂಡ್ಯದಲ್ಲಿ ರೋಡ್ ಶೋ ನಡೆಸಿ, ಬಿರುಸಿನ ಪ್ರಚಾರ ನಡೆಸಿದರು.

ಬೆಂ. ಗ್ರಾಮಾಂತರದಲ್ಲಿ ತೀವ್ರ ನಿಗಾ

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ತೀವ್ರ ನಿಗಾ ವಹಿಸಲಿದ್ದು, ಎಲ್ಲ 2,829 ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್ ಮಾಡಲಾಗುವುದು. ಭದ್ರತೆಗಾಗಿ ಅರೆ ಸೇನಾಪಡೆಗಳ ಏಳು ತುಕಡಿಗಳನ್ನು ನಿಯೋಜಿಸಲಾಗುವುದು ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸ್ಥಳೀಯ ಚುನಾವಣಾಧಿಕಾರಿಗಳು ಮತ್ತು ವೀಕ್ಷಕರ ಕೋರಿಕೆ, ವರದಿ ಆಧರಿಸಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಹೆಚ್ಚುವರಿ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಹಿಂದಿನ ಚುನಾವಣೆಗಳಿಗೆ ಹೋಲಿಸಿದರೆ ಅರೆ ಸೇನಾಪಡೆ ತುಕಡಿಗಳ ನಿಯೋಜನೆ ಎರಡು ಪಟ್ಟು ಇರಲಿದೆ’ ಎಂದರು.

ಮೈಸೂರು- ಕೊಡಗು ಲೋಕಸಭಾ ಕ್ಷೇತ್ರದಲ್ಲೂ ಎಲ್ಲ 2,202 ಮತಗಟ್ಟೆಗಳಲ್ಲಿ ವೆಬ್ ಕಾಸ್ಟಿಂಗ್ ಮಾಡಲಾಗುವುದು ಎಂದರು.

ಮತಗಟ್ಟೆಯಲ್ಲಿನ ಪ್ರತಿ ಸೆಕೆಂಡ್ ಅವಧಿಯ ಬೆಳವಣಿಗೆಯು ವೆಬ್ ಕಾಸ್ಟಿಂಗ್‌ನಲ್ಲಿ ಲಭ್ಯವಾಗಲಿದೆ.

5ನೇ ಪುಟ ನೋಡಿ

ದ್ವೇಷ ಭಾಷಣ: 23 ಪ್ರಕರಣ

ರಾಜ್ಯದಲ್ಲಿ ಲೋಕಸಭಾ ಚುನಾವಣಾ ಪ್ರಚಾರದಲ್ಲಿ ದ್ವೇಷ ಭಾಷಣ ಮಾಡಿದ ಆರೋಪದ ಮೇಲೆ ವಿವಿಧ ರಾಜಕೀಯ ಪಕ್ಷಗಳ ವಿರುದ್ಧ 23 ಪ್ರಕರಣಗಳು ದಾಖಲಾಗಿವೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ದ್ವೇಷ ಭಾಷಣದ ಆರೋಪದಡಿ ಬಿಜೆಪಿ ನಾಯಕರ ವಿರುದ್ಧ 12, ಕಾಂಗ್ರೆಸ್ ನಾಯಕರ ವಿರುದ್ಧ ಒಂಬತ್ತು ಮತ್ತು ಜೆಡಿಎಸ್ ನಾಯಕರ ವಿರುದ್ಧ ಎರಡು ಪ್ರಕರಣಗಳನ್ನು ದಾಖಲಿಸಲಾಗಿದೆ’ ಎಂದು ಹೇಳಿದರು.

ಮತದಾರರಿಗೆ ಆಮಿಷ ಒಡ್ಡಿದ ಆರೋಪದಡಿ 28 ಪ್ರಕರಣ ದಾಖಲಿಸಲಾಗಿದೆ. ಬಿಜೆಪಿ ವಿರುದ್ಧ 8, ಕಾಂಗ್ರೆಸ್ ವಿರುದ್ಧ 9 ಮತ್ತು ಜೆಡಿಎಸ್ ವಿರುದ್ಧ 3 ಹಾಗೂ ಪಕ್ಷೇತರರ ವಿರುದ್ಧ ಎಂಟು ಪ್ರಕರಣಗಳು ದಾಖಲಾಗಿವೆ. ಪ್ರಚಾರಕ್ಕೆ ಧಾರ್ಮಿಕ ಸ್ಥಳಗಳನ್ನು ಬಳಸಿಕೊಂಡ ಆರೋಪದಡಿ ಬಿಜೆಪಿ ವಿರುದ್ಧ 8, ಕಾಂಗ್ರೆಸ್ ವಿರುದ್ಧ 6 ಮತ್ತು ಜೆಡಿಎಸ್ ವಿರುದ್ಧ 1 ಪ್ರಕರಣ ದಾಖಲಿಸಲಾಗಿದೆ ಗಂಭೀರ ಸ್ವರೂಪದ ಚುನಾವಣಾ ಮಾದರಿ ಸಂಹಿತೆ ಉಲ್ಲಂಘನೆ ಆರೋಪದಡಿ ಈವರೆಗೆ 189 ಪ್ರಕರಣ ದಾಖಲು ಮಾಡಲಾಗಿದೆ ಎಂದು ವಿವರಿಸಿದರು.

5ನೇ ಪುಟ ನೋಡಿ

ಸುಧಾ ಮಯೂರ ಓದಿರಿ

ನಿಧನ ವಾರ್ತೆ

ಜಗನ್ಮಾತಾ (ಮಾತಮ್ಮ)

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆ ನಿವೃತ್ತ ಅಧಿಕಾರಿ ದಿವಂಗತ ಅಂಜನಪ್ಪ ಅವರ ಪತ್ನಿ ಜಗನ್ಮಾತಾ (ಮಾತಮ್ಮ) (84) ಅವರು ಬುಧವಾರ ನಿಧನರಾದರು. ಅವರಿಗೆ ಮೂವರು ಪುತ್ರಿಯರು ಹಾಗೂ ಓರ್ವ ಪುತ್ರ ಇದ್ದಾರೆ.

ಗುರುವಾರ ಮುಂಜಾನೆ10 ಗಂಟೆಗೆ ಹೆಬ್ಬಾಳದ ಚಿತಾಗಾರದಲ್ಲಿ ಜಗನ್ಮಾತಾ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ.

ಸಿಇಟಿ ಪರೀಕ್ಷೆ, ವೈದ್ಯಕೀಯ ತಪಾಸಣೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ ಏ.25 ಮತ್ತು 26ರಂದು ನಡೆಯಬೇಕಿದ್ದ ಸಿಇಟಿಗೆ ಹಾಜರಾಗಿದ್ದ ಅಂಗವಿಕಲ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆ ಹಾಗೂ ಮೇ 4ರಂದು ನಡೆಯಬೇಕಿದ್ದ ದ್ವಿತೀಯ ಪಿಯು (ವಾರ್ಷಿಕ ಪರೀಕ್ಷೆ–2) ಗೃಹ ವಿಜ್ಞಾನ ಪರೀಕ್ಷೆಯನ್ನು ಮುಂದೂಡಲಾಗಿದೆ.

ರಾಜ್ಯದಲ್ಲಿ ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನ ಏ. 26ರಂದು ನಡೆಯಲಿರುವ ಕಾರಣ ವೈದ್ಯಕೀಯ ತಪಾಸಣೆ ಮುಂದೂಡಲಾಗಿದೆ. ಹೊಸ ದಿನಾಂಕವನ್ನು ಪ್ರಾಧಿಕಾರದ ವೆಬ್‌ಸೈಟಲ್ಲಿ ಪ್ರಕಟಿಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ. ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆ–2 ಇದೇ ತಿಂಗಳ 29ರಿಂದ ರಾಜ್ಯದ 301 ಕೇಂದ್ರಗಳಲ್ಲಿ ಆರಂಭವಾಗಲಿದೆ. ಮೇ 4ರಂದು ನಿಗದಿಯಾಗಿದ್ದ ಗೃಹ ವಿಜ್ಞಾನ ಪರೀಕ್ಷೆ ಮೇ 9ರಂದು ಬೆಳಿಗ್ಗೆ 10.15ರಿಂದ ಮಧ್ಯಾಹ್ನ 1.30ರವರೆಗೆ ನಡೆಯಲಿದೆ. ಪರೀಕ್ಷೆ ತೆಗೆದುಕೊಂಡಿರುವ ವಿದ್ಯಾರ್ಥಿಗಳು http://kseab.karnataka.gov.in ಮೂಲಕ ಪ್ರವೇಶ ಪತ್ರ ಪಡೆಯಬಹುದು. ಹೆಚ್ಚಿನ ಮಾಹಿತಿಗೆ ತಮ್ಮ ಕಾಲೇಜುಗಳ ಪ್ರಾಂಶುಪಾಲರನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಹೇಳಿದೆ.

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ.: 15/2024 ದಿನಾಂಕ: 19.04.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ವಸ್ತುಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮುಖಾಂತರ ಮಾತ್ರ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಸಂಕ್ಷಿಪ್ತ ವಿವರಣೆ: 3–ಫೇಜ್ ಮೆಮು ಡಿಎಂಸಿಗಳಿಗೆ ಆರ್‌ಡಿಎಸ್‌ಒ ನಿರ್ದಿಷ್ಟತೆಯ ಸಂಖ್ಯೆ RDSO/PE/SPEC/EMU/0096-2008 (rev 4 ಅಥವಾ ಇತ್ತೀಚಿನ) ರ ಪ್ರಕಾರ 3–ಫೇಜ್ ಮೆಮು ಪ್ರೊಪಲ್ಷನ್ ಸಿಸ್ಟಮ್‌ಗೆ ಸೂಕ್ತವಾದ ಐಸಿಎಫ್‌ನ ಅನುಮೋದಿತ ಜಿಎ ಡ್ರಾಯಿಂಗ್ ಪ್ರಕಾರ ಬಿಡಿಭಾಗಗಳೊಂದಿಗೆ ಪೂರ್ಣಗೊಂಡ ಟ್ರಾಕ್ಷನ್ ಟ್ರಾನ್ಸ್‌ಫಾರ್ಮರ್

(ಟೆಂಡರ್ ಸೂಚನೆ ಸಂಖ್ಯೆ: L8249001) (ಪ್ರಮಾಣ: 04 ಸಂ.)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 13–05–2024, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಸಾಮಗ್ರಿಗಳ ಪ್ರಬಂಧಕರು ಬೆಂಗಳೂರು

PUB/31/AAV/PRB/SWR/2024-25

South Western Railway-SWR | SWRRLY | SWRRLY

ಚುನಾವಣೆ ಬಳಿಕ ತೀರ್ಮಾನ: ಡಿ.ಕೆ ಶಿವಕುಮಾರ್ ಹೇಳಿಕೆ

ಗುರು ರಾಘವೇಂದ್ರ ಬ್ಯಾಂಕ್ ಅಕ್ರಮ: ಎಸ್‌ಐಟಿ ತನಿಖೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭೆ ಚುನಾವಣೆ ಬಳಿಕ ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್ ಹಗರಣದ ತನಿಖೆಯನ್ನು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ವಹಿಸುವ ಬಗ್ಗೆ ನಿರ್ಧರಿಸಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಸಿಬಿಐ ತನಿಖೆಯಿಂದ ಸಂತ್ರಸ್ತರಿಗೆ ನ್ಯಾಯ ಸಿಗದಿದ್ದರೆ ರಾಜ್ಯ ಸರ್ಕಾರವೇ ಎಸ್‌ಐಟಿ ರಚಿಸಿ ನ್ಯಾಯ ಒದಗಿಸಿಕೊಡಬೇಕು ಎಂದು ಮುಖ್ಯಮಂತ್ರಿಗೆ ಪ್ರಿಯಾಂಕಾ ಗಾಂಧಿ ಸೂಚಿಸಿದ್ದಾರೆ. ಈ ವಿಚಾರವಾಗಿ ನನಗೂ ಅವರು ನಿರ್ದೇಶನ ನೀಡಿದ್ದಾರೆ. ಚುನಾವಣೆ ನಂತರ ಈ ಬಗ್ಗೆ ತೀರ್ಮಾನಿಸಿ ಸಂತ್ರಸ್ತರಿಗೆ ನ್ಯಾಯ ಒದಗಿಸಲಾಗುವುದು' ಎಂದರು.

'ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾರೆಡ್ಡಿ ಮತ್ತು ಸಂತ್ರಸ್ತರ ಪರವಾಗಿ ಹೋರಾಟ ಮಾಡುತ್ತಿರುವ ಹೋರಾಟಗಾರರ ನಿಯೋಗವು ಪ್ರಿಯಾಂಕಾ ಗಾಂಧಿ ಅವರನ್ನು ಭೇಟಿ ಮಾಡಿದೆ. ನ್ಯಾಯ ಕೊಡಿಸುವ ನಿಟ್ಟಿನಲ್ಲಿ ತಮ್ಮ ಪರವಾಗಿ ಧ್ವನಿ ಎತ್ತುವಂತೆ ನಿಯೋಗವು ಮನವಿ ಮಾಡಿದೆ. ಅದಕ್ಕೆ ಸ್ಪಂದಿಸಿದ ಪ್ರಿಯಾಂಕಾ ಗಾಂಧಿ, ಮುಖ್ಯಮಂತ್ರಿಗೆ ಪತ್ರ ಬರೆದು ಎಸ್‌ಐಟಿ ರಚಿಸುವಂತೆ ಸಲಹೆ ನೀಡುವುದಾಗಿ ತಿಳಿಸಿದ್ದಾರೆ' ಎಂದರು.

'ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್ ಮತ್ತು ವಸಿಷ್ಠ ಸಹಕಾರಿ ಬ್ಯಾಂಕಿನ 3 ಲಕ್ಷ ಠೇವಣಿದಾರರು ಮೋಸ ಹೋಗಿದ್ದು, 200ಕ್ಕೂ ಹೆಚ್ಚು ಸಂತ್ರಸ್ತರು ಮೃತಪಟ್ಟಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಂತ್ರಸ್ತರು ಈ ವಿಚಾರವಾಗಿ ಹೋರಾಟ ಮಾಡಿದ್ದರು. ಆಗ ಈ ಪ್ರಕರಣವನ್ನು ಸಿಬಿಐಗೆ ವಹಿಸುವುದಾಗಿ ಭರವಸೆ ನೀಡಿದರಾದರೂ ಸಿಬಿಐ ತನಿಖೆಗೆ ಆದೇಶ ನೀಡಲಿಲ್ಲ. ಆದರೆ, ಕಾಂಗ್ರೆಸ್ ಸರ್ಕಾರ ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲು ತೀರ್ಮಾನಿಸಿದೆ. ಸಿಬಿಐಗೆ ಕೊಟ್ಟರೂ ಕೂಡ ಈ ಹಗರಣದಲ್ಲಿ ಬಿಜೆಪಿ ನಾಯಕರೇ ಭಾಗಿಯಾಗಿದ್ದಾರೆ ಎಂಬ ಆರೋಪವಿದೆ. ಹೀಗಾಗಿ, ಪ್ರಕರಣದ ತನಿಖೆಯನ್ನು ಕೈಗೊಂಡಿಲ್ಲ. ಇದರಿಂದಾಗಿ ಲಕ್ಷಾಂತರ ಠೇವಣಿದಾರರು ಬೀದಿಗೆ ಬಿದ್ದಿದ್ದಾರೆ. ಅವರಿಗೆ ನ್ಯಾಯ ಸಿಗಬೇಕಿದೆ' ಎಂದು ಶಿವಕುಮಾರ್ ಹೇಳಿದರು.

ಗುರು ರಾಘವೇಂದ್ರ ಬ್ಯಾಂಕ್ ಸಂತ್ರಸ್ತರ ಪರವಾಗಿ ಹೋರಾಟ ನಡೆಸುತ್ತಿರುವ ನಿಯೋಗ ಶಂಕರ್ ಗುಹಾ ನೇತೃತ್ವದಲ್ಲಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾರೆಡ್ಡಿ ಜೊತೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರನ್ನು ಭೇಟಿ ಮಾಡಿದರು

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

PUBLIC NOTICE

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore-34.

TENDER NOTICE

Quotations are invited from reputed Suppliers / Contractors for the following works.

1. Regarding Supply and Installation of Sewage Treatment Plant - Air Lifting Automatic System (ESBR) 150 KLD & ETP 30 KLD to KRJS Medial Hospital Building at Marasuru.

2. Regarding Purchase of Blue Books for "RJS Institute of Management Studies" for the year 2024-2025.

3. Supply and Installation of 30 Nos HP 3330 model Desktop Computers and 52 Nos. of HP 280 G1 & G3 model Desktop Computers to RJS F.G. College.

Submit your sealed quotations within 5 days from the date of this advertisement to General Secretary, KRJS.

More details : **www.reddyjanasangha.org**
Contact: 9945450345 / 8618096726.
President General Secretary

PUBLIC NOTICE

The General Public are hereby informed that our client intends to enter into a transaction in respect of the below mentioned property with its owners (1) Mrs. Amina Abdul Samad, wife of late Abdul Samad Avani Veetil and her chldern 2) Mrs.Leenaz K Bicha, 3) Mrs.Nazreen Bicha, 4) Mrs. Ayesha Rahim, 5) Mrs. Alia Abdul Samad and they having acquired ownership vide Sale Deed dated 22/08/1985, Bearing Document No.1591/85-86, in Book-1, Volume - 2435, Pages 83 to 94 in the office of the Sub-Registrar, Shivajinagar executed by Mr. Abdul Samad Avani Veetil.

All or any persons including any banks, financial institutions or any other party or person, having any valid and legal claim, right, title. demand or interest by virtue of any sale, gift, lease, tenancy, license, exchange, partition, mortgage, charge, lien, in heritance, succession, trust, maintenance, possession, easement, agreement, lis-pendence, stay order, attachment, decree, specific performance or otherwise or any other right of whatsoever nature are required/called upon to convey their objection/s in writing to the undersigned, within (15) Fifteen days from issuance of this notice, along with all supporting documents relating to such claim, failing which it shall be presumed that there is/are no claim/s and such claims/ if an, shall be considered to be waived and abandoned in respect of the 'Schedule Property'.

Schedule Property

All that residential property measuring 10,890 Sq.Ft., in municipal No23. (Old No.19/A) situated in Viviani Road, Richards Town, Ward No.90, Sagayapura, Bengaluru. bearing PID No.90-35-53, consisting of House/ Building measuring 2507 Sq.Ft., Outhouse measuring 370 Sq.Ft., and Garage measuring 260 Sq.Ft., and bounded by : East : Property bearing old No.19 Viviani Road., West : Property bearing old No.20,Viviani Road., North : Conservancy lane, South : Viviani Road, Richards Town.

Place : Bengaluru

DEEPAK BASAVARAJ, ADVOCATE
No.214, 2nd Floor, Richmond Towers, 12, Richmond Road, Bengaluru-560 0025.
Tel : 080-41209 651.

ನಗರದಲ್ಲಿ ಇಂದು

ಅವಿರತ ಹರೀಶ್ 60ರ ಸಾಂಸ್ಕೃತಿಕ ಸಂಭ್ರಮ: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅಭಿನಂದನಾ ನುಡಿ: ಜಿ.ಎನ್. ಮೋಹನ್, ಹರೀಶ್ ಅವರ ಬರಹಗಳ ಕುರಿತು: ರಾಜಶೇಖರ ಮಠಪತಿ, ಅತಿಥಿಗಳು: ಟಿ.ಎಸ್. ದಕ್ಷಿಣಾಮೂರ್ತಿ, ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಿ.ಎಚ್. ಭಾಗ್ಯ, ಕರಿಯಪ್ಪ ಎನ್., ಆಯೋಜನೆ: ಅವಿರತ ಹರೀಶ್ ಗೆಳೆಯರ ಬಳಗ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 5ರಿಂದ

ರಾಮನವಮಿ ಸಂಗೀತೋತ್ಸವ–2024: ವಿಶೇಷ ಸಂಗೀತ ಕಛೇರಿ: ಅಚ್ಯುತ್ ಎಂ. ಅತ್ರೇಯ ಮತ್ತು ತಂಡ, ವಿಶೇಷ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ವಿದ್ಯಾಭೂಷಣ, ಪ್ರಾದೇಶಾಚಾರ್, ಬೆಂಗಳೂರು ವಿ. ಪ್ರವೀಣ್, ಬಿ.ಆರ್. ರವಿಕುಮಾರ್, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 5ರಿಂದ

ಶ್ರೀರಾಮೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಅನಘಾ ಯೋಗಾನಂದ, ಪಿಟೀಲು: ಅನಿರುದ್ಧ, ಮೃದಂಗ: ದೀಪಿಕಾ ಶ್ರೀನಿವಾಸನ್, ಆಯೋಜನೆ ಹಾಗೂ ಸ್ಥಳ: ಜಯರಾಮ ಸೇವಾ ಮಂಡಳಿ, 1ನೇ ಮುಖ್ಯರಸ್ತೆ, 8ನೇ ಬಡಾವಣೆ, ಜಯನಗರ, ಸಂಜೆ 6.30

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಶಾರದಾ ನೃತ್ಯ ಅಕಾಡೆಮಿಯ ವಿದ್ಯಾರ್ಥಿಗಳಿಂದ, ನಿರ್ದೇಶನ: ಅಮೃತ ಶಶಾಂಕ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ 5ನೇ ಬಡಾವಣೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅಭಿಮತ

'ಕನ್ನಡಿಗರ ಅಭಿಮಾನದ ರೂಪಕ ರಾಜಕುಮಾರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿವಂಗತ ನಟ ರಾಜಕುಮಾರ್ ಅವರು ಕನ್ನಡಿಗರ ಅಭಿಮಾನದ ರೂಪಕವಾಗಿದ್ದಾರೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ತಿಳಿಸಿದರು.

ಕಸಾಪ ಬುಧವಾರ ಹಮ್ಮಿಕೊಂಡಿದ್ದ ರಾಜಕುಮಾರ್ ಅವರ 96ನೇ ಜನ್ಮದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

'ರಾಜಕುಮಾರ್ ಅವರು ಕನ್ನಡ ಸಂಸ್ಕೃತಿಯ ಪ್ರತೀಕ ದಂತಿದ್ದರು. ಅವರ ಅಭಿನಯ ಮತ್ತು ಬದುಕು ಮಾದರಿಯಾಗಿದೆ. ಅವರು ಸಂತ ಶ್ರೇಷ್ಠರಾದ ಕನಕದಾಸ, ಪುರಂದರದಾಸ, ಸರ್ವಜ್ಞ, ತುಕಾರಂ, ಕಬೀರ ಮೊದಲಾದವರ ಪಾತ್ರಗಳಿಗೆ ಜೀವ ತುಂಬಿದರು. ಇಮ್ಮಡಿ ಪುಲಕೇಶಿ, ಮಯೂರ, ಶ್ರೀಕೃಷ್ಣದೇವ ರಾಯ ಮೊದಲಾದ ಕನ್ನಡ ನಾಡಿನ ವೀರರನ್ನು ಬೆಳ್ಳಿತೆರೆಯ ಮೂಲಕ ಜೀವಂತವಾಗಿಸಿದರು. ಬಾಂಡ್‌ನಿಂದ ಭಕ್ತನವರೆಗೆ, ಚಮ್ಮಾರನಿಂದ ಚಕ್ರವರ್ತಿಯವರೆಗೆ ಎಲ್ಲ ಮಾದರಿಯ ಪಾತ್ರಗಳನ್ನು ಮಾಡಿ, ಕನ್ನಡ ಸಾಂಸ್ಕೃತಿಕ ಲೋಕವನ್ನು ಶ್ರೀಮಂತಗೊಳಿಸಿದರು' ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣಾ ವಿಭಾಗದ ಸಂಚಾಲಕ ಎನ್.ಎಸ್. ಶ್ರೀಧರ ಮೂರ್ತಿ, 'ರಾಜಕುಮಾರ್ ಅವರು ಚಲನಚಿತ್ರಕ್ಕೆ ಸೀಮಿತವಾಗದೆ ನಮ್ಮ ಕಾಲದ ಸಾಂಸ್ಕೃತಿಕ ರೂಪಕವಾಗಿ ಬೆಳೆದರು. ಎಲ್ಲ ತಲೆಮಾರಿನವರೂ ತಮ್ಮ ಪಾಲಿನ ಆದರ್ಶವನ್ನು ರಾಜಕುಮಾರ್ ಎನ್ನುವ ಕನ್ನಡಿಯಲ್ಲಿ ಕಂಡುಕೊಂಡಿದ್ದಾರೆ. ಅಣ್ಣ-ತಮ್ಮಂದಿರು ಹೇಗಿರಬೇಕು? ಗಂಡ-ಹೆಂಡತಿ ಒಡನಾಟ ಹೇಗಿರಬೇಕು? ತಂದೆ-ಮಕ್ಕಳ ಸಂಬಂಧದ ಸ್ವರೂಪ...ಹೀಗೆ ಎಲ್ಲಾ ಪ್ರಶ್ನೆಗಳಿಗೂ ಅವರ ಚಿತ್ರದಲ್ಲಿ ಉತ್ತರವಿದೆ' ಎಂದು ತಿಳಿಸಿದರು.

ಕನ್ನಡ ಪರ ಹೋರಾಟಗಾರ ರಾ.ನಂ.ಚಂದ್ರಶೇಖರ, 'ಗೋಕಾಕ್ ಚಳವಳಿಯ ಸಂದರ್ಭದಲ್ಲಿ ಕನ್ನಡಿಗರಿಗೆ ದೊಡ್ಡ ಭರವಸೆಯಾಗಿ ಬಂದವರು ರಾಜಕುಮಾರ್. ಅವರು ಯಾವುದೇ ಹೋರಾಟಕ್ಕೆ ಇಳಿದರೂ ಸರ್ಕಾರ ನಡುಗುತ್ತಿತ್ತು' ಎಂದು ಹಳೆಯ ಘಟನೆಗಳನ್ನು ಸ್ಮರಿಸಿಕೊಂಡರು.

ಕಾರ್ಯಕ್ರಮದಲ್ಲಿ ರಾಜಕುಮಾರ್ ಅವರ ಭಾವಚಿತ್ರಕ್ಕೆ ಮಹೇಶ ಜೋಶಿ ಪುಷ್ಪ ನಮನ ಸಲ್ಲಿಸಿದರು. ಎನ್.ಎಸ್.ಶ್ರೀಧರ ಮೂರ್ತಿ, ಕಸಾಪ ಕೋಶಾಧ್ಯಕ್ಷ ಪಟೇಲ್ ಪಾಂಡು ಹಾಗೂ ಗೌರವ ಕಾರ್ಯದರ್ಶಿ ನೇ.ಭ.ರಾಮಲಿಂಗ ಶೆಟ್ಟಿ ಪಾಲ್ಗೊಂಡಿದ್ದರು.

ಜೆಇಇ: 56 ಅಭ್ಯರ್ಥಿಗಳ ಸಾಧನೆ

ನವದೆಹಲಿ(ಪಿಟಿಐ): ಜೆಇಇ ಮೇನ್ ಫಲಿತಾಂಶ ಪ್ರಕಟವಾಗಿದ್ದು, 56 ಅಭ್ಯರ್ಥಿಗಳು ಪರಿಪೂರ್ಣ 100 ಅಂಕ ಗಳಿಸಿದ್ದಾರೆ. ಈ ಸಾಧನೆ ಮಾಡಿದವರ ಪೈಕಿ ಹೆಚ್ಚಿನ ಅಭ್ಯರ್ಥಿಗಳು ತೆಲಂಗಾಣದವರು ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಬುಧವಾರ ತಿಳಿಸಿದೆ.

ಪರೀಕ್ಷಾ ಅಕ್ರಮದಲ್ಲಿ ತೊಡಗಿದ್ದಕ್ಕಾಗಿ 39 ಅಭ್ಯರ್ಥಿಗಳು ಮುಂದಿನ ಮೂರು ವರ್ಷ ಕಾಲ ಜೆಇಇ–ಮೇನ್ ಪರೀಕ್ಷೆ ತೆಗೆದುಕೊಳ್ಳದಂತೆ ನಿಷೇಧ ಹೇರಲಾಗಿದೆ ಎಂದು ತಿಳಿಸಿದೆ.

ಪರಿಪೂರ್ಣ '100 ಅಂಕ' ಗಳಿಸಿದವರಲ್ಲಿ 15 ಜನರು ತೆಲಂಗಾಣದವರಿದ್ದರೆ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದ ತಲಾ 7 ಹಾಗೂ ದೆಹಲಿಯ 6 ಅಭ್ಯರ್ಥಿಗಳು ಇದ್ದಾರೆ.

ಜೆಇಇ–ಮೇನ್ ಪರೀಕ್ಷೆಯನ್ನು ಕನ್ನಡ ಸೇರಿದಂತೆ 13 ಭಾಷೆಗಳಲ್ಲಿ ನಡೆಸಲಾಗಿತ್ತು. ವಿದೇಶಗಳಲ್ಲಿ ಸಹ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ಒಟ್ಟು 10 ಲಕ್ಷಕ್ಕೂ ಅಧಿಕ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು.

ಯಲಹಂಕದ ನಗರ್ತಪೇಟೆ ರಸ್ತೆಯಲ್ಲಿ ರಾಜಕುಮಾರ್ ಅವರ 96ನೇ ಜನ್ಮ ದಿನವನ್ನು ವಿಜೃಂಭಣೆಯಿಂದ ಆಚರಿಸಲಾಯಿತು

'ಶಂಕರಮ್ಮ ಪ. ಬಳಿಗಾರ್' ಪ್ರಶಸ್ತಿ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಹಾಗೂ ನರಶಸ್ತ್ರ ಚಿಕಿತ್ಸಕರಾಗಿರುವ ಅವರ ಸಹೋದರ ಡಾ.ಎಸ್.ಪಿ. ಬಳಿಗಾರ್ ಅವರು ಕರ್ನಾಟಕ ಲೇಖಕಿಯರ ಸಂಘದಲ್ಲಿ 'ಮಾತೋಶ್ರೀ ಶಂಕರಮ್ಮ ಪ. ಬಳಿಗಾರ್' ದತ್ತಿ ಪ್ರಶಸ್ತಿ ಸ್ಥಾಪಿಸಿದ್ದಾರೆ.

ಪ್ರತಿ ವರ್ಷ ಮೂರು ಪ್ರಶಸ್ತಿಗಳನ್ನು ನೀಡಲು ಅವರು ನಿರ್ಧರಿಸಿದ್ದಾರೆ. ಈ ಸಂಬಂಧ ₹5,00,200 ದತ್ತಿ ಮೊತ್ತ ಇರಿಸಿದ್ದಾರೆ. ಗದ್ಯ ಸಾಹಿತ್ಯ, ಕಾವ್ಯ ಪ್ರಕಾರ ಹಾಗೂ ಸಮಾಜ ಸೇವೆ ಕ್ಷೇತ್ರದಲ್ಲಿ ಪ್ರಶಸ್ತಿ ಸ್ಥಾಪಿಸಲು ನಿರ್ಧರಿಸಲಾಗಿದೆ.

50 ವರ್ಷ ಮೇಲ್ಪಟ್ಟ ಸಾಧಕರನ್ನು ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ. ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಒಳಗೊಂಡಿರಲಿದೆ ಎಂದು ಪ್ರಕಟಣೆ ತಿಳಿಸಿದೆ.



ಮನು ಬಳಿಗಾರ್ ಅವರು ದತ್ತಿ ಮೊತ್ತದ ಚೆಕ್ ಅನ್ನು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಅವರಿಗೆ ಹಸ್ತಾಂತರಿಸಿದರು.

PUBLIC NOTICE

My client proposes to purchase from Mr. Hunasagatta Mallikarjunappa Basavaraja, S/o. Late Sri. H.M. Mallikarjunappa, residential site more particularly described in the Schedule hereunder. The present owner has represented that he has a clear and marketable title to the Schedule Property.

Any person(s) who claims any right, title or interest of any nature in or any lien, charge or enforceable right in relation to the Schedule Property and/or has any objections of any nature to the aforesaid transaction should lodge such claim and/or objections in writing to the undersigned, together with supporting documents within 10 days hereof, failing which it would be presumed that no valid claims or objections subsists; and my client would proceed to complete the transaction with the present owner thereof, subject to compliance with other legal and statutory formalities.

SCHEDULE PROPERTY

All that piece and parcel of Site No.2203/H, 6th Main, Banashankari 2nd Stage, Bangalore 560070, measuring East to West 19.31 Mtrs., North to South 12.19 Mtrs., totally measuring about 235.39 Sq. Mtrs or 2,533 Sq. Ft. and bounded on: East by: Site No. 2203/F, West by: Road, North by: Site No. 2203/G and South by: Site No.2203/M

CHETAN P. PADIVAL, Advocate,
107/58, 4th Cross, Gavipuram Extn.,
Bangalore - 560 004.
Ph.: +91 98450 53113. Email: cpadival@gmail.com
Date: April 25, 2024

JOB OPPORTUNITIES

Security & Detectives

REPUTED SECURITY Agency Requires Security Guards/ Supervisors, Field Officers, Area Managers, Operations/ Marketing Team for Bangalore. Contact: 8073668816.

PERSONAL

Change of Name

I, VISWANATH R Residing at No.36, 1st Floor, 9th Main, Bikasipura, Pal Chinappa Road, ISRO Layout,Bengaluru-560078. Have Changed my Name as VISHWANATH REDDY vide affidavit Dated:24.04.2024 before Notary A.S.NARAYANA REDDY,Bangalore

I, SHIVANAND S/o.Basayya R/a#19 Sri Veerabhadreshwara Nilaya, Airport Road, Near Chandru Hotel Brundavan Layout Kadiganahalli Bettahalasur Post Bangalore- 562157 have changed my Name to SHIVANAND MATHAPATI vide affidavit dated:13.4.2024 before Notary KB.Sadha Shivappa Bangalore

I, KANTINATH KIDRAPUR S/o SurappaKhidrapur Residing at Alagur, Bagalkot-587301. Have Changed my Name as KUNTINATH KHIDRAPUR vide affidavit Dated:24.04.2024 before Notary A.S.NARAYANA REDDY,Bangalore

Lost

I, KISHOR S have lost my Transfer Certificate issued by St. Paul's School, Bangalore passed out in 2008, Roll no. 20080829908. If found please contact: 7204502941.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

PUBLIC NOTICE

Notice is hereby given to the public at large that we are investigating the title and ownership rights in respect of the immovable properties belonging to **Mr. Mohsin Shariff, Bangalore,** morefully described in the Schedule hereunder and hereinafter referred to as "Schedule Property".

All persons/entities including an individual, Hindu Undivided Family, financial institutions, lenders and/or creditors having any right, title, interest, claim in respect of the Schedule Property thereof by way of inheritance, bequest, transfer, mortgage, pledge, charge, lien, license, assignment, tenancy, gift, encumbrance, family arrangements/ settlement, release, succession, decree or order of any competent court of law, contracts/agreements, development rights, partnership, right of way, contracts or any other liability or any commitment thereof by whatever nature, are hereby requested to intimate in writing along with documentary evidence to the undersigned at the address mentioned below within Fifteen (15) days from the date of this publication, failing which it shall be deemed that they have given up such claims, which shall not be enforceable/binding on the ownership rights of the land owners and the same shall be treated as clear and marketable.

SCHEDULE PROPERTY

All that piece and parcel of the Land bearing (i) Survey No.32/1, measuring 2-00 Acres, (ii) Survey No.32/3, measuring 1-00 Acre, (iii) Survey No.32/4, measuring 1-00 Acre, (iv) Suvey No. 32/5, measuring 0-24 Guntas, (v) Sy. No.33/2, measuring 0-30 Guntas & (vi) Survey No.33/3, measuring 1 Acre 21 Guntas, situated at Sonnappanahalli Village, Jala Hobli, Yelahanka Taluk, Bangalore Urban District, & on: **East by:**Jayaswamy's Land, **West by:** Shanthappa's Land, **North by:** Muthappa's Land, **South by:** Puttaraju's Land.

RPM ASSOCIATES, Advocates
#7, I Floor, Jayashri Building, Yamunabai Road, Madhavanagar, Bangalore–560 001
Mobile : 9980200300

ಪೇಟೆಗಳಲ್ಲಿ 'ಬೆಂಗಳೂರು ಕರಗ'ದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪೇಟೆಗಳಲ್ಲಿ ಮಂಗಳವಾರ ತಡರಾತ್ರಿ ನಡೆದ ಬೆಂಗಳೂರಿನ ಸಾಂಪ್ರದಾಯಿಕ, ಪ್ರಸಿದ್ಧ ಕರಗ ಉತ್ಸವದ ಸಂಭ್ರಮ, ರಥಗಳ ಮೆರವಣಿಗೆ ವೈಭವವನ್ನು ಸಾವಿರಾರು ನಾಗರಿಕರು ಬುಧವಾರ ಸಂಜೆಯವರೆಗೂ ಕಣ್ತುಂಬಿಕೊಂಡರು. ಎಲ್ಲೆಲ್ಲೂ ಗೋವಿಂದ... ಗೋವಿಂದಾ.. ಘೋಷಣೆ ಮೊಳಗಿತ್ತು.

ಕೆ.ಆರ್. ಮಾರುಕಟ್ಟೆ ಸುತ್ತಮುತ್ತ ಮಂಗಳವಾರ ರಾತ್ರಿಯಿಡೀ ಹಾಗೂ ಬುಧವಾರ ಸಂಜೆಯವರೆಗೆ ಜನಜಂಗುಳಿ ಯಿತ್ತು. ಚೈತ್ರ ಪೌರ್ಣಮಿಯಂದು ಅರ್ಚಕ ಎ. ಜ್ಞಾನೇಂದ್ರ ಅವರು ಪೂರ್ವ ಪೂಜಾಕ್ರಮಗಳನ್ನು ಪೂರೈಸಿ, ತಿಗಳರ ಪೇಟೆಯಲ್ಲಿರುವ ಧರ್ಮರಾಯ ಸ್ವಾಮಿ ದೇವಸ್ಥಾನಕ್ಕೆ ಬಂದರು. ಹಸಿ ಕರಗವನ್ನು ಸ್ಥಾಪಿಸಿದ್ದ ಸ್ಥಳದಲ್ಲಿ ಧಾರ್ಮಿಕ ವಿಧಿ-ವಿಧಾನಗಳನ್ನು ಪೂರೈಸಿದ ನಂತರ ಮಲ್ಲಿಗೆ ಹೂವಿನಿಂದ ಅಲಂಕೃತ ಗೊಂಡಿದ್ದ ದ್ರೌಪದಿದೇವಿ ಕರಗ ಉತ್ಸವ ಧರ್ಮರಾಯಸ್ವಾಮಿ ದೇವಸ್ಥಾನದಿಂದ ತಡರಾತ್ರಿ 2.15ರ ವೇಳೆಗೆ ಆರಂಭವಾಯಿತು.

ಸಹಸ್ರಾರು ಸಂಖ್ಯೆಯಲ್ಲಿದ್ದ ವೀರಕುಮಾರರು ದೀ ಧಿತ್ತಿ... ಎಂಬ ಉದ್ಗಾರದೊಂದಿಗೆ ಕತ್ತಿಯನ್ನು ಎದೆಗೆ ಬಡಿಕೊಂಡು ನಮಸ್ಕರಿಸಿದರು. ಗೋವಿಂದ... ಗೋವಿಂದಾ.. ಎಂಬ ಘೋಷಣೆ ಮೊಳಗುತ್ತಿತ್ತು. ಭಕ್ತರು ಕರಗದ ಮೇಲೆ ಮಲ್ಲಿಗೆ ಹೂವನ್ನು ಚೆಲ್ಲಿ ಭಕ್ತಿಭಾವ ಮೆರೆದರು. ಹಲವೆಡೆ ಗಲ್ಲಿಗಳಲ್ಲಿ ಮನೆಯ ಮೇಲೆನಿಂತಿದ್ದ ನಾಗರಿಕರು ಅಲ್ಲಿಂದಲೇ ಮಲ್ಲಿಗೆಯನ್ನು ಎರಚಿ, ಮಲ್ಲಿಗೆಯ ಅಭಿಷೇಕವನ್ನೂ ಮಾಡಿದರು.

ಬೆಂಗಳೂರು ಕರಗವನ್ನು ಅರ್ಚಕ ಜ್ಞಾನೇಂದ್ರ ಹೊತ್ತು ಸಾಗಿದದರು —ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

ಕರಗ ಸಾಗಿದ ಹಾದಿ: ಧರ್ಮರಾಯಸ್ವಾಮಿ ದೇವಸ್ಥಾನದ ಗರ್ಭಗುಡಿಯಲ್ಲಿ ಎರಡು ತಾಸು ನಡೆದ ಧಾರ್ಮಿಕ ವಿಧಿವಿಧಾನಗಳನ್ನು ಪೂರ್ಣಗೊಳಿಸಿ, ದೇವಸ್ಥಾನದ ಆವರಣದಲ್ಲಿ ಮೂರು ಸುತ್ತು ಪ್ರದಕ್ಷಿಣೆ ಹಾಕಿದ ಕರಗ ಗಣಪತಿ ದೇವಾಲಯ ಮತ್ತು ಮುತ್ಯಾಲಮ್ಮ ದೇವಾಲಯಗಳಲ್ಲಿ ಪೂಜೆ ಸ್ವೀಕರಿಸಿ ಪೇಟೆಗಳತ್ತ ಹೆಜ್ಜೆ ಹಾಕಿತು. ಹಲಸೂರುಪೇಟೆ ಆಂಜನೇಯಸ್ವಾಮಿ, ಶ್ರೀರಾಮದೇವಾಲಯ, ಪ್ರಸನ್ನ ಗಂಗಾಧರೇಶ್ವರಸ್ವಾಮಿ ದೇವಾಲಯ ಗಳಲ್ಲಿ ಪೂಜೆ ಸ್ವೀಕರಿಸಿತು. ನಗರ್ತಪೇಟೆಯ ವೇಣುಗೋಪಾಲ ಕೃಷ್ಣಸ್ವಾಮಿ, ನಗರೇಶ್ವರಸ್ವಾಮಿ, ಸಿದ್ದಣ್ಣ ಗಲ್ಲಿ ಭೈರದೇವರ ದೇವಾಲಯದ ಮಾರ್ಗವಾಗಿ ಸಾಗಿದ ಕರಗಕ್ಕೆ, ಕಬ್ಬನ್‌ಪೇಟೆ 14ನೇ ಅಡ್ಡರಸ್ತೆಯಲ್ಲಿರುವ ರಾಮಸೇವಾಮಂದಿರ, 15ನೇ ಗಲ್ಲಿ ಮತ್ತು ಆಂಜನೇಯಸ್ವಾಮಿ ದೇವಾಲಯಗಳಲ್ಲಿ ಪೂಜೆ ಸಲ್ಲಿಸಲಾಯಿತು.

ಮಕ್ಕಳ ಬಸವಣ್ಣ ಗುಡಿ, ಗಾಣಿಗರಪೇಟೆ ಚೆನ್ನರಾಯ ಸ್ವಾಮಿ ದೇವಸ್ಥಾನ, ಚಾಮುಂಡೇಶ್ವರಿ ದೇವಸ್ಥಾನದಿಂದ ಅವೆನ್ಯೂ ರಸ್ತೆಯ ಈಶ್ವರ ದೇವಾಲಯ, ದೊಡ್ಡಪೇಟೆಯಿಂದ ಕೋಟೆ ಆಂಜನೇಯಸ್ವಾಮಿ ದೇವಾಲಯ, ಕೃಷ್ಣರಾಜೇಂದ್ರ ಮಾರುಕಟ್ಟೆಯ ಉದ್ಭವ ಗಣಪತಿ ದೇಗುಲದಲ್ಲಿ ಪೂಜೆ ಸಲ್ಲಿಸಲಾಯಿತು. ಪೊಲೀಸ್ ರಸ್ತೆ ಮೂಲಕ ಮುರಹರಿಸ್ವಾಮಿ ಮಠ, ಬೀರದೇವರಗುಡಿ, ಅರಳೇಪೇಟೆ ಮುಖ್ಯರಸ್ತೆಯಲ್ಲಿ ಸಾಗಿದ ಕರಗ, ಲಕ್ಷ್ಮಿನಾರಾಯಣಸ್ವಾಮಿ ದೇವಾಲಯದಲ್ಲಿ ಪೂಜೆ ಸ್ವೀಕರಿಸಿತು. ಬಳೇಪೇಟೆ ಬಳೇಗರಡಿ ಮಾರ್ಗವಾಗಿ ಸಾಗಿ, ಮಸ್ತಾನ್ ಸಾಹೇಬರ ದರ್ಗಾಕ್ಕೆ ತೆರಳಿದ ಕರಗಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು.

ನಿಮಿಷಾಂಬ ದೇವಾಲಯ, ನಗರದೇವತೆ ಅಣ್ಣಮ್ಮ ದೇವಾಲಯ, ಕಿಲಾರಿ ರಸ್ತೆಯಲ್ಲಿರುವ ಚಿಕ್ಕ ಧರ್ಮ-ರಾಯಸ್ವಾಮಿ ದೇವಾಲಯ, ಯಲಹಂಕ ಗೇಟ್ ಆಂಜನೇಯಸ್ವಾಮಿ, ತುಪ್ಪದಾಂಜನೇಯ ಸ್ವಾಮಿಗುಡಿ, ರಂಗನಾಥಸ್ವಾಮಿ, ಚೌಡೇಶ್ವರಿ ಗುಡಿಗಳಲ್ಲಿ ಪೂಜೆ ಸ್ವೀಕರಿಸಿ, ಸಿ.ಟಿ. ರಸ್ತೆಯ ಮೂಲಕ ಕುಂಬಾರಪೇಟೆ ಮುಖ್ಯರಸ್ತೆ, ಗೊಲ್ಲರಪೇಟೆ, ತಿಗಳರಪೇಟೆಯ ಸಮುದಾಯ ಮನೆಗಳು ಹಾಗೂ ಭಕ್ತರಿಂದ ಪೂಜೆ ಸ್ವೀಕರಿಸಿತು. ಹಾಲುಬೀದಿ, ಕಬ್ಬನ್‌ಪೇಟೆ, ಸುಣ್ಣಕಲ್ ಪೇಟೆ, ನರಸಿಂಹ ಜೋಯಿಸ್ ಗಲ್ಲಿಗಳ ಮೂಲಕ ಹಾದು ಕೊನೆಗೆ ಬುಧವಾರ ಮುಂಜಾನೆ ಕರಗ ಧರ್ಮರಾಯಸ್ವಾಮಿ ದೇವಾಲಯ ಸೇರಿಕೊಂಡಿತು.

ರಥೋತ್ಸವ: ದೇವಸ್ಥಾನದ ಹೊರಭಾಗದಲ್ಲಿ ಧರ್ಮರಾಯಸ್ವಾಮಿ ಮಹಾರಥೋತ್ಸವ ಕರಗದ ಹಿಂದೆ ಹೊರಟಿತು. ಮುಖ್ಯ ರಸ್ತೆಗಳಲ್ಲಿ ಸಾಗಿದ ರಥಕ್ಕೆ ಭಕ್ತರು ಬಾಳೆಹಣ್ಣನ್ನು ಎಸೆದು ಭಕ್ತಿ ಮೆರೆದರು. ಈ ರಥದ ಹಿಂದೆ ನಗರದ ಹಲವು ಭಾಗಗಳಿಂದ ಬಂದಿದ್ದ ನೂರಾರು ರಥಗಳು ಸಾಗಿದವು. ಬುಧವಾರ ಬೆಳಿಗ್ಗೆಯಿಂದ ಸಂಜೆಯವರೆಗೆ ಈ ರಥಗಳು ಅವೆನ್ಯೂ ರಸ್ತೆ, ಕೆ.ಆರ್. ಮಾರುಕಟ್ಟೆ ಸುತ್ತಮುತ್ತ ನಿಂತಿದ್ದವು. ತಂಡೋಪತಂಡವಾಗಿ ಬಂದ ನಾಗರಿಕರು, ರಥಗಳಿಗೆ ಪೂಜೆ ಸಲ್ಲಿಸಿದರು. ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಮಹಾಪೂಜೆಯೊಂದಿಗೆ ಬುಧವಾರ ರಾತ್ರಿ ಕರಗ ಉತ್ಸವ ಸಂಪನ್ನಗೊಂಡಿತು.

ನೆಲಮಂಗಲ ಪಟ್ಟಣದ ಕವಾಡಿಮಠದ ರುದ್ರೇಶ್ವರ ಸ್ವಾಮಿ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಬುಧವಾರ ವಿಜೃಂಭಣೆಯಿಂದ ನಡೆಯಿತು

ಕ್ರಿಮಿನಲ್ ಪ್ರಕರಣಗಳ ಮಾಹಿತಿ ಮುಚ್ಚಿಟ್ಟ ಆರೋಪ ಪ್ರಕರಣ

ಉದಯ ಗರುಡಾಚಾರ್ ಶಿಕ್ಷೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚುನಾವಣೆ ವೇಳೆ ಸಲ್ಲಿಸಿದ ಪ್ರಮಾಣಪತ್ರ-ದಲ್ಲಿ ಶಾಸಕ ಉದಯ ಗರುಡಾಚಾರ್ ತಮ್ಮ ಮೇಲಿರುವ ಕ್ರಿಮಿನಲ್ ಪ್ರಕರಣಗಳ ಮಾಹಿತಿ ಮರೆಮಾಚಿದ್ದಾರೆ' ಎಂಬ ಆರೋಪದಡಿ ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಎರಡು ತಿಂಗಳು ಜೈಲು ಮತ್ತು ದಂಡ ಪಾವತಿ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಉದಯ ಗರುಡಾಚಾರ್ ಸಲ್ಲಿಸಿದ್ದ ಕ್ರಿಮಿನಲ್ ಮರುಪರಿಶೀಲನಾ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಪ್ರಕಟಿಸಿದೆ.

'ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ ದೋಷಾರೋಪಣೆ ಹೊರಿಸಿದ ಮತ್ತು ಆ ಸಂಬಂಧ ವಿಚಾರಣಾ ನ್ಯಾಯಾಲಯ ಸಂಜ್ಞೇಯ ಅಪರಾಧ ಎಂದು ಪರಿಗಣಿಸಿದ ಸಂದರ್ಭದಲ್ಲಿ ಮಾತ್ರವೇ ಅಭ್ಯರ್ಥಿಯು ತನ್ನ ಮೇಲಿನ ಆರೋಪಗಳ ಕುರಿತ ಮಾಹಿತಿಯನ್ನು ತಿಳಿಸಬೇಕಾಗುತ್ತದೆ. ಆಗ ಮಾತ್ರವೇ ಅವರನ್ನು ಕ್ರಿಮಿನಲ್ ಪ್ರಕರಣದಲ್ಲಿನ ಆರೋಪಿ ಎಂದು ವ್ಯಾಖ್ಯಾನಿಸಬಹುದು. ಎಫ್‌ಐಆರ್ ಅಥವಾ ಖಾಸಗಿ ದೂರು ದಾಖಲಾದ ಮಾತ್ರಕ್ಕೆ ಆರೋಪಿಯಾಗಿ ದೃಢಪಟ್ಟು, ಚುನಾವಣಾ ಪ್ರಮಾಣ ಪತ್ರದಲ್ಲಿ ಪ್ರಕರಣದ ಮಾಹಿತಿ ನೀಡಬೇಕು ಎಂದರ್ಥವಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಪ್ರಕರಣವೇನು?

'ಶಾಸಕ ಉದಯ್ ಗರುಡಾಚಾರ್ 2018ರಲ್ಲಿ ಚಿಕ್ಕಪೇಟೆ ಚುನಾವಣೆಗೆ ಸ್ಪರ್ಧಿಸಿದ್ದಾಗ ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ತಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣ ಹಾಗೂ ಪತ್ನಿಯ ಬ್ಯಾಂಕ್ ವಿವರಗಳನ್ನು ಬಹಿರಂಗಪಡಿಸಿಲ್ಲ' ಎಂದು ಆರೋಪಿಸಿ ಎಚ್‌.ಜಿ.ಪ್ರಶಾಂತ್ ಖಾಸಗಿ ದೂರು ದಾಖಲಿಸಿದ್ದರು.

ಇದರ ವಿಚಾರಣೆ ನಡೆಸಿದ್ದ 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯ (42ನೇ ಎಸಿಎಂಎಂ) ಚುನಾವಣಾ ಅಪರಾಧದ ಅಡಿಯಲ್ಲಿ ಎರಡು ತಿಂಗಳ ಸಾಧಾರಣ ಜೈಲು ಶಿಕ್ಷೆ ಮತ್ತು ₹ 10 ಸಾವಿರ ದಂಡ ವಿಧಿಸಿ 2022ರ ಅಕ್ಟೋಬರ್ 13ರಂದು

ಆದೇಶಿಸಿತ್ತು.

ಆ ಆದೇಶವನ್ನು ಜಿಲ್ಲಾ ಸೆಷನ್ಸ್ ನ್ಯಾಯಾಲಯ 2023ರ ಸೆಪ್ಟೆಂಬರ್ 11ರಂದು ಪುರಸ್ಕರಿಸಿತ್ತು. ಈ ಆದೇಶಗಳನ್ನು ರದ್ದುಪಡಿಸುವಂತೆ ಕೋರಿ ಉದಯ ಗರುಡಚಾರ್ ಹೈಕೋರ್ಟ್‌ಗೆ ಕ್ರಿಮಿನಲ್ ಮರುಪರಿಶೀಲನಾ ಅರ್ಜಿ ಸಲ್ಲಿಸಿದ್ದರು.

FARNAZ

ಜಾಹೀರಾತು

'ಜನರ ಭವಿಷ್ಯಕ್ಕೆ ಭದ್ರ ಬುನಾದಿ ಹಾಕುವ ಸಂಸದರು ಬೇಕು'

ಬೆಂಗಳೂರು ದಕ್ಷಿಣ ಕ್ಷೇತ್ರದ ನಾಗರಿಕರ ಧ್ವನಿ: ಟಿಂಟೀಷಾ ಹೇಮಚಂದ್ರ ಸಾಗರ್

"ಕಳೆದ ನಾಲ್ಕೈದು ವರ್ಷಗಳಲ್ಲಿ ನಮ್ಮ ಎಲ್ಲ ರಾಷ್ಟ್ರೀಯ ಪಕ್ಷಗಳು ಹೇಳುತ್ತಿವೆ. ನಮ್ಮ ಭಾರತ ದೇಶ ಜಿಡಿಪಿಯ (ಒಟ್ಟು ದೇಶೀಯ ಉತ್ಪಾದನೆ) ಲೆಕ್ಕಾಚಾರದಲ್ಲಿ ವಿಶ್ವದ 5ನೇ ಅತ್ಯಂತ ದೊಡ್ಡ ಆರ್ಥಿಕತೆ ಎಂದು ಅದು ನಿಜ. ಆದರೆ, ಸರಿಯಾಗಿ ನೋಡಬೇಕಾದ್ದು ತಲಾವಾರು ಜಿಡಿಪಿ. ತಲಾವಾರು ಜಿಡಿಪಿ ನೋಡಿದರೆ ನಾವು ಬಹಳ ದೇಶಗಳಿಗಿಂತ ಅಂದರೆ, ಉದಾ: ಬಾಂಗ್ಲಾದೇಶ, ವಿಯಾಟ್ನಾಂ ದೇಶಗಳಿಗಿಂತಲೂ ಕಡಿಮೆ ಇದ್ದೇವೆ."



ನಮ್ಮ ದೇಶ ಅಭಿವೃದ್ಧಿಯಾಗಿದೆ, ಮತ್ತಷ್ಟು ಅಭಿವೃದ್ಧಿ ಹೊಂದುತ್ತಿದೆ. ಮುಂದಿನ ವರ್ಷಗಳಲ್ಲಿ ವಿಶ್ವದ ಮೂರನೇ ಆರ್ಥಿಕತೆಯತ್ತ ಹೆಜ್ಜೆ ಇಡುತ್ತಿದೆ. ಅದೆಲ್ಲವೂ ನಿಜ. ಆದರೆ, ಇದೆಲ್ಲವು ಕೆಲವೇ ಕೆಲವು ಶ್ರೀಮಂತ ಕಂಪೆನಿಗಳು ಮತ್ತು ಸಂಘಟಿತ ಸಂಸ್ಥೆಗಳ ಮೇಲೆ ಕೇಂದ್ರಿಕೃತವಾಗಿದೆ. ನಿಜವಾದ ಪ್ರಯೋಜನಗಳು ನಮ್ಮ ನಾಗರಿಕರಿಗೆ ಸಿಗುತ್ತಿಲ್ಲ. ಇದರ ಬಗ್ಗೆ ಯಾರೂ ಗಮನಹರಿಸುತ್ತಿಲ್ಲ.

ಲೋಕಸಭೆ ದೃಷ್ಟಿಯಲ್ಲಿ ನೋಡಬೇಕಾದರೆ ನಮಗೆ ಎಂತಹ ಸಂಸದರು ಬೇಕೆಂದರೆ, ಅವರು ನಮ್ಮ ದೇಶದ ನೀತಿ ನಿರೂಪಕರು ಆಗಿರಬೇಕು. ಭವಿಷ್ಯದ ದೂರದೃಷ್ಟಿ ಇಟ್ಟುಕೊಂಡು ಯೋಜನೆ ರೂಪಿಸಿಕೊಂಡು ಅದರಂತೆ ನಡೆಯುವವರಾಗಿರಬೇಕು. ಇದು ಕೇವಲ ಸಂಸದರಿಗಷ್ಟೇ ಸೀಮಿತವಾಗಬಾರದು. ನಾಗರಿಕರನ್ನು ಸಹ ಜತೆಯಲ್ಲಿ ತೆಗೆದುಕೊಂಡು ಹೋಗುವಂತಿರಬೇಕು. ಇದು ಕೆಲವೇ ಜನರಿಗೆ ಮಾತ್ರ ಮೀಸಲಾಗಬಾರದು. ಈ ವಿಶಾಲ ದೃಷ್ಟಿಕೋನ ಇರಬೇಕಾದರೆ ಅದಕ್ಕಾಗಿ ವಿವಿಧ ಉದ್ಯಮಗಳ ಅನುಭವವಿರಬೇಕು. ವಿದೇಶಿ ಜನರ ನಡುವಿನ, ಒಡನಾಟ, ಸಂಪರ್ಕ, ಆ ದೇಶದ ರಾಜತಾಂತ್ರಿಕತೆ ಸ್ವರೂಪ, ಶಿಕ್ಷಣ ನೀತಿ–ನಿಯಮಗಳು, ಆರೋಗ್ಯ ವಲಯದಲ್ಲಿನ ಬೆಳವಣಿಗೆ, ಆರ್ಥಿಕತೆಯ ಅರಿವು ಇನ್ನೂ ಮುಂತಾದವು ಇರಬೇಕಾಗುತ್ತದೆ. ಅಂತಹ ಎಲ್ಲ ಅನುಭವಗಳು ಹಾಗೂ ಗುಣಗಳು ನನ್ನಲ್ಲಿವೆ. ಇವೆಲ್ಲವೂ ಇರುವುದರಿಂದಲೇ ನನಗೆ ಸಮಗ್ರವಾಗಿ ನಾಗರಿಕರ ಬಗ್ಗೆ ಕಾಳಜಿ ವಹಿಸಿ, ಅವರ ಸಂಕಷ್ಟ ಪರಿಹರಿಸಲು ಸಾಧ್ಯವಾಗುತ್ತಿದೆ ಎಂಬುದು ಟಿಂಟೀಷಾ ಅವರ ಮಾತು.

ಪಕ್ಷದ ಧ್ವನಿಯಾಗಿರುವ ಸಂಸದರು:

ಇಂದು ಬಡವರು ಮತ್ತು ಶ್ರೀಮಂತರ ನಡುವಿನ ಅಂತರ ಬ್ರಿಟೀಷರ ಕಾಲದಂತಾಗಿದೆ. ಒಂದು ರೀತಿ ಅದಕ್ಕಿಂತಲೂ ಮಿಗಿಲಾಗಿದೆ. ಈ ಅಸಮಾನತೆಗೆ ಕಾರಣ ಹುಡುಕುವುದು ಇಂದಿನ ಸಂಸದರಿಗೆ ಕಷ್ಟವಾಗಿದೆ. ಕಾರಣ ಅವರು ಯಾವುದೋ ಒಂದು ರಾಷ್ಟ್ರೀಯ ಪಕ್ಷದಿಂದ ಚುನಾಯಿತರಾಗಿ ಬಂದು ಸಂಸದರಾಗಿರುತ್ತಾರೆ. ಇಂತಹ ಜನಾನುಕೂಲ ಪ್ರಶ್ನೆಗಳನ್ನು ಸಂಸತ್ತಿನಲ್ಲಿ ಚರ್ಚಿಸಲು ಪಕ್ಷದ ಹಿಡಿತ ಕೆಲವು ಸಮಯ ಅಡ್ಡ ಬರುತ್ತದೆ. ಪಕ್ಷಗಳ ಅಥವಾ ಆ ಪಕ್ಷದ ಪ್ರಣಾಳಿಕೆಗೆ ಬದ್ಧವಾಗಿ ಮಾತ್ರ ಮಾತನಾಡುವ ಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಅಂತಹ ಪ್ರಶ್ನೆಗಳನ್ನು ಹಾಕುವ ಸಂಸದರು ಇಂದು ಬೇಕಾಗಿದ್ದಾರೆ. ಆದಕಾರಣ ನಾನು ಯಾವುದೇ ಪಕ್ಷದಿಂದ ಸ್ಪರ್ಧಿಸಲು ಹೋಗಲಿಲ್ಲ, ಪಕ್ಷೇತರ ಅಭ್ಯರ್ಥಿಯಾಗಿ, ನನ್ನ ತನವನ್ನು ಕಾಪಾಡಿಕೊಂಡು ಜನರ ಅನುಕೂಲಕ್ಕಾಗಿ ಪ್ರಶ್ನಿಸುವ ಸಂಸದೆಯಾಗಬೇಕೆನ್ನುವ ಇಚ್ಛೆಯಿಂದ **ಕ್ರ.ಸಂ.–15 'ತ್ರಿಕೋನ' ಚಿಹ್ನೆ** ಗುರುತಿನಡಿ ಕಣಕ್ಕಿಳಿದಿದ್ದೇನೆ.

ಇಂಡಿಯಾ ಜಾಗತಿಕ ಶಕ್ತಿ ಕೇಂದ್ರ:

ಭಾರತವು ಜಾಗತಿಕ ಶಕ್ತಿ ಕೇಂದ್ರವಾಗುವುದಂತೂ ನಿಜ. ಆ ಶಕ್ತಿ ಹೊಂದಲು ಸಂಸದರಾಗಿ ನಾವೇನು ಮಾಡಬೇಕು. ಅದಕ್ಕಾಗಿ ಯಾವ ರೀತಿ ಶ್ರಮ ಹಾಕಬೇಕು, ಯೋಜನೆ ರೂಪಿಸಬೇಕು. ಎಷ್ಟು ಬೇಗ ಗ್ಲೋಬಲ್ ಪವರ್ ಆಗಲು ಪ್ರಯತ್ನಿಸಬೇಕು ಎಂಬ ಬಗ್ಗೆ ಯೋಚಿಸುವವರಿರಬೇಕು.

ಇನ್ನು ಬೆಂಗಳೂರು ದಕ್ಷಿಣ ಕ್ಷೇತ್ರದ ಜನತೆ ಕೇಳಿಕೊಳ್ಳುವುದೇನೆಂದರೆ, ತಮ್ಮ ಕ್ಷೇತ್ರದ ಜನತೆಯ ಸರ್ವತೋಮುಖ ಅಭಿವೃದ್ಧಿ ಹಾಗೂ ದೇಶದ ಅಭಿವೃದ್ಧಿಗೆ ನಮ್ಮ ಕೊಡುಗೆ ಏನು? ಎಂಬುದನ್ನು ಯೋಚಿಸಬೇಕಾಗಿದೆ. ಅದಕ್ಕಾಗಿ ಏನು ಮಾಡಬೇಕು, ಯಾವ ವ್ಯಕ್ತಿ ನಮ್ಮ ಧ್ವನಿಯಾಗುತ್ತಾರೆ ಎಂಬುದನ್ನು ತಿಳಿದು ಮತ ನೀಡಬೇಕು. ಆಗಲೇ ತಾವು ನೀಡಿದ ಮತಕ್ಕೆ ಸೂಕ್ತ ಬೆಲೆ ಬರುತ್ತದೆ. ಕೇವಲ ಪಕ್ಷ, ಧರ್ಮ, ವಿಭಜಕ ನೀತಿ ರೂಪಿಸುವ ರಾಜಕೀಯವನ್ನು ತಿರಸ್ಕರಿಸುವ ಮನೋಭಾವ ಬೆಳೆಸಿಕೊಳ್ಳಬೇಕು.

'ಪೌರತ್ವ ಪಾಲುದಾರಿಕೆ ಆಡಳಿತ'ದ ಇಚ್ಛೆ

ನಾನು ಸಂಸದ ಆದರೆ, 'ಪೌರತ್ವ ಪಾಲುದಾರಿಕೆ ಆಡಳಿತ'ಕ್ಕೆ ಒತ್ತು ನೀಡುತ್ತೇನೆ. ಈ ರೀತಿ ಆಡಳಿತ ಗ್ರಾಮೀಣ ಮಟ್ಟದಲ್ಲಿ ಇದೆ. ಗ್ರಾಮ ಪಂಚಾಯಿಗಳಲ್ಲಿ ಅನುಷ್ಠಾನಕ್ಕೆ ತಂದಿದ್ದಾರೆ. ಅದನ್ನು ನಗರಾಡಳಿತದಲ್ಲಿ ಜಾರಿಗೆ ತರಲು ಇಚ್ಛಿಸುತ್ತೇನೆ. ಇದರಿಂದ ನಗರದ ನಾಗರಿಕರಲ್ಲಿ ಜವಾಬ್ದಾರಿ ಹೆಚ್ಚಿಸಲು ಸಾಧ್ಯವಾಗುತ್ತದೆ. ಚುನಾಯಿತ ಪ್ರತಿನಿಧಿ ಎಲ್ಲವನ್ನು ನೋಡಿಕೊಳ್ಳುತ್ತಾನೆ ಬಿಡಿ, ಎಂಬ ಮನೋಭಾವ ಕಡಿಮೆಯಾಗುತ್ತದೆ. ಅಷ್ಟೇ ಅಲ್ಲದೇ, ನೆಲ, ಜಲ, ಪರಿಸರ, ಆರ್ಥಿಕತೆ, ಆರೋಗ್ಯ, ಶಿಕ್ಷಣ ಇನ್ನಿತರ ಕ್ಷೇತ್ರಗಳಲ್ಲೂ ನಾಗರಿಕರನ್ನು ಜೊತೆಯಾಗಿ ಇರಿಸಿಕೊಂಡು ಹೆಜ್ಜೆ ಇಡಬೇಕು.ಸಾಮಾಜಿಕ ಕಳಕಳಿಯುಳ್ಳ ಜವಾಬ್ದಾರಿಯುತ ಹಾಗೂ ಉತ್ಸಾಹಭರಿತ ಕಾಯಕವಾಗಬೇಕು. ಆಗಲೇ ಗುರಿ ಮುಟ್ಟಲು ಸಾಧ್ಯ. ದೇಶವನ್ನು ಎತ್ತರಕ್ಕೆ ಬೆಳೆಸಲು ಸಾಧ್ಯ.

ಪ್ರಕಟಣೆ: ಟಿಂಟೀಷಾ ಹೇಮಚಂದ್ರ ಸಾಗರ್

ಮೇಲ್ಸೇತುವೆಯಿಂದ ಜಿಗಿದು ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೇಷಾದ್ರಿ ರಸ್ತೆಯ ಮೇಲ್ಸೇತುವೆಯಿಂದ ಜಿಗಿದು ತಿಮ್ಮರಾಜು (32) ಎಂಬುವವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಹಾಸನದ ತಿಮ್ಮರಾಜು, ನಗರದ ಹೋಟೆಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದರು. ವಿಜಯನಗರದಲ್ಲಿ ಕುಟುಂಬದ ಜೊತೆ ವಾಸವಿದ್ದರು. ಇವರ ಸಾವಿನ ಬಗ್ಗೆ ಯುಡಿಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಉಪ್ಪಾರಪೇಟೆ ಠಾಣೆ ಪೊಲೀಸರು ಹೇಳಿದರು.

'ಬುಧವಾರ ನಸುಕಿನಲ್ಲಿ ಮೇಲ್ಸೇತುವೆ ಬಳಿ ಬಂದಿದ್ದ ತಿಮ್ಮರಾಜು, ಅಲ್ಲಿಂದ ಕೆಳಗಿನ ರಸ್ತೆಗೆ ಜಿಗಿದಿದ್ದರು. ತೀವ್ರ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ.'

'ತಿಮ್ಮರಾಜು ಹಲವರ ಬಳಿ ಸಾಲ ಮಾಡಿದ್ದರೆಂದು ಗೊತ್ತಾಗಿದೆ. ಸಾಲ ವಾಪಸು ನೀಡಲು ಸಾಧ್ಯವಾಗಿರಲಿಲ್ಲ. ಸಾಲ ಕೊಟ್ಟವರು, ವಾಪಸು ನೀಡುವಂತೆ ಕಿರುಕುಳ ನೀಡಲಾರಂಭಿಸಿದ್ದರು. ಇದರಿಂದ ಬೇಸತ್ತ ತಿಮ್ಮರಾಜು, ಆತ್ಮಹತ್ಯೆ ಮಾಡಿಕೊಂಡಿರುವ ಅನುಮಾನವಿದೆ' ಎಂದು ತಿಳಿಸಿದರು.

ಸೆಂಟ್ರಿಂಗ್ ಮರಗಳ ಯಾರ್ಡ್‌ನಲ್ಲಿ ಬೆಂಕಿ ಅನಾಹುತ ● ₹2 ಕೋಟಿ ಮೌಲ್ಯದ ವಸ್ತುಗಳು ಭಸ್ಮ

ಹೊತ್ತಿ ಉರಿದ ಯಾರ್ಡ್, ಕಾರ್ಖಾನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಬಳಿಯ ಸಿಂಗಸಂದ್ರದ ಕಂಟ್ರಿ ರಸ್ತೆಯಲ್ಲಿ ಮಂಗಳವಾರ ತಡರಾತ್ರಿ ಬೆಂಕಿ ಅವಘಡ ಸಂಭವಿಸಿದ್ದು, ಸೆಂಟ್ರಿಂಗ್ ಮರಗಳ ಯಾರ್ಡ್ ಹಾಗೂ ಗಾರ್ಮೆಂಟ್ಸ್ ಕಾರ್ಖಾನೆ ಬೆಂಕಿಯಿಂದ ಹೊತ್ತಿ ಉರಿದವು. ಅವಘಡದಿಂದಾಗಿ ₹ 2 ಕೋಟಿ ಮೌಲ್ಯದ ವಸ್ತುಗಳು ಸುಟ್ಟು ಕರಕಲಾಗಿವೆ.

'ಸೆಂಟ್ರಿಂಗ್ ಮರಗಳ ಯಾರ್ಡ್‌ನಲ್ಲಿ ಕಾಣಿಸಿಕೊಂಡ ಬೆಂಕಿ, ಕೆಲವೇ ನಿಮಿಷಗಳಲ್ಲಿ ಹೆಚ್ಚಾಗಿತ್ತು. ಸೆಂಟ್ರಿಂಗ್ ಮರಗಳಿಗೆ ಬೆಂಕಿ ತಗುಲಿದ್ದರಿಂದ, ಧಗ ಧಗ ಉರಿಯಲಾರಂಭಿಸಿತ್ತು. ಇದೇ ಜಾಗಕ್ಕೆ ಹೊಂದಿಕೊಂಡಿದ್ದ ಗ್ಯಾರೇಜ್ ಹಾಗೂ ಸಮೀಪದಲ್ಲಿದ್ದ ಗಾರ್ಮೆಂಟ್ಸ್ ಕಾರ್ಖಾನೆಗೂ ಬೆಂಕಿ ವ್ಯಾಪಿಸಿತ್ತು' ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಹೇಳಿದರು.

'ಯಾರ್ಡ್‌ನಲ್ಲಿದ್ದ ಮರಗಳು ಸಂಪೂರ್ಣ ಸುಟ್ಟಿವೆ. ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿದ್ದ ಬಟ್ಟೆಗಳು, ಯಂತ್ರಗಳು ಹಾಗೂ ಗ್ಯಾರೇಜ್‌ನಲ್ಲಿದ್ದ ಎರಡು ಕಾರು, 45 ದ್ವಿಚಕ್ರ ವಾಹನಗಳು ಸುಟ್ಟು ಕರಕಲಾಗಿವೆ. ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ' ಎಂದು ತಿಳಿಸಿದರು.

ಎರಡು ಎಕರೆ ಜಾಗದಲ್ಲಿ ಯಾರ್ಡ್: 'ಕಂಟ್ರಿ ರಸ್ತೆಯಲ್ಲಿರುವ ಎರಡು ಎಕರೆ ಜಾಗದಲ್ಲಿ ಸೆಂಟ್ರಿಂಗ್ ಮರಗಳನ್ನು ಸಂಗ್ರಹಿಸಿಡಲಾಗಿತ್ತು. ಈ ಯಾರ್ಡ್ ಪಕ್ಕದಲ್ಲಿದ್ದ ಗ್ಯಾರೇಜ್‌ನಲ್ಲಿ ಕಾರು ಹಾಗೂ ದ್ವಿಚಕ್ರ ವಾಹನಗಳನ್ನು ನಿಲ್ಲಿಸಲಾಗಿತ್ತು' ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಹೇಳಿದರು.

'ಮಂಗಳವಾರ ತಡರಾತ್ರಿ 12.30 ಗಂಟೆ ಸುಮಾರಿಗೆ ಯಾರ್ಡ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ನಂತರ, ಪಕ್ಕದ ಗ್ಯಾರೇಜ್ ಹಾಗೂ ಗಾರ್ಮೆಂಟ್ಸ್ ಕಾರ್ಖಾನೆಗೂ ಬೆಂಕಿ ಹರಡಿತ್ತು. ದಟ್ಟ ಹೊಗೆಯೂ ಆವರಿಸಿತ್ತು. ಅದನ್ನು ನೋಡಿದ್ದ ಸ್ಥಳೀಯರು ಅಗ್ನಿಶಾಮಕ ದಳದ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದರು. ಸ್ಥಳಕ್ಕೆ ಹೋಗಿ, ಬುಧವಾರ ಬೆಳಿಗ್ಗೆವರೆಗೂ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಲಾಯಿತು. ಪೊಲೀಸರೂ ಸಹಕಾರ ನೀಡಿದರು' ಎಂದು ತಿಳಿಸಿದರು.

'ಬೆಂಕಿಯ ಪ್ರಮಾಣ ಹೆಚ್ಚಿತ್ತು. ಯಾರ್ಡ್, ಗ್ಯಾರೇಜ್ ಹಾಗೂ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿದ್ದ ಎಲ್ಲ ವಸ್ತುಗಳು ಸಂಪೂರ್ಣ ಸುಟ್ಟಿವೆ. ಯಾರ್ಡ್‌ನಿಂದ 100 ಮೀಟರ್ ದೂರದಲ್ಲಿ ಗಾರ್ಮೆಂಟ್ಸ್ ಕಾರ್ಖಾನೆ ಇದೆ. ಯಾರ್ಡ್‌ನಲ್ಲಿದ್ದ ಬೆಂಕಿಯ ಕಿಡಿಯಿಂದ ಕಾರ್ಖಾನೆಯಲ್ಲಿ ಬೆಂಕಿ ಹೊತ್ತಿಕೊಂಡಿತೆ, ಅಥವಾ ಬೇರೆ ಏನಾದರೂ ಕಾರಣವಿದೆಯಾ ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಹೇಳಿದರು.

ಬೆಂಕಿ ಅವಘಡ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯಾರ್ಡ್‌ನಲ್ಲಿ ಬುಧವಾರ ಬೆಳಿಗ್ಗೆಯೂ ಉರಿಯುತ್ತಿದ್ದ ಬೆಂಕಿ ಹಾಗೂ ಅವಘಡದಲ್ಲಿ ಸುಟ್ಟಿರುವ ಕಾರುಗಳು

ಮುಖ್ಯಾಂಶಗಳು

- ಸುಟ್ಟು ಕರಕಲಾದ 45 ದ್ವಿಚಕ್ರ ವಾಹನಗಳು ಹಾಗೂ ಎರಡು ಕಾರುಗಳು
- ಮಂಗಳವಾರ ತಡರಾತ್ರಿ ಕಾಣಿಸಿಕೊಂಡ ಬೆಂಕಿ
- ಬೆಂಕಿ ನಂದಿಸಲು ಪೊಲೀಸರ ಸಹಕಾರ

ಸುದ್ದಿ 2 ನಿಮಿಷ

ಕೆಎಂಸಿಗೆ ಹೈಕೋರ್ಟ್ ನೋಟಿಸ್

ಬೆಂಗಳೂರು: ಕರ್ನಾಟಕ ವೈದ್ಯಕೀಯ ಮಂಡಳಿ (ಕೆಎಂಸಿ) ಪದಾಧಿಕಾರಿಗಳ ಹುದ್ದೆಗೆ ಹೊಸದಾಗಿ ಚುನಾವಣೆ ನಡೆದು 12 ಸದಸ್ಯರು ಆಯ್ಕೆಯಾಗಿದ್ದರೂ ಈ ಹಿಂದಿನ ಪದಾಧಿಕಾರಿಗಳಿಬ್ಬರು ಅನಧಿಕೃತವಾಗಿ ಅಧ್ಯಕ್ಷ, ಉಪಾಧ್ಯಕ್ಷ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

'ಸರ್ಕಾರ ಕೆಎಂಸಿಗೆ ಐವರು ಸದಸ್ಯರನ್ನು ನಾಮನಿರ್ದೇಶನ ಮಾಡುವಲ್ಲಿ ವಿಫಲವಾಗಿದೆ' ಎಂದು ಆಕ್ಷೇಪಿಸಿ ಮಂಗಳೂರಿನ ಡಾ. ಶ್ರೀನಿವಾಸ ಬಿ.ಕಕ್ಕಿಲಾಯ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ, ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಾರ್ಯದರ್ಶಿ, ಕರ್ನಾಟಕ ವೈದ್ಯಕೀಯ ಮಂಡಳಿ ರಿಜಿಸ್ಟ್ರಾರ್, ಡಾ.ವಿ.ಕಂಚಿ ಪ್ರಲ್ಹಾದ್ ಮತ್ತು ಡಾ.ನಾಗರಾಜ್ ಅಣ್ಣೇಗೌಡ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

'ಅಧ್ಯಕ್ಷ, ಉಪಾಧ್ಯಕ್ಷ ಹುದ್ದೆಗೆ ಹೊಸದಾಗಿ ಚುನಾವಣೆ ನಡೆಯದ ಹಿನ್ನೆಲೆಯಲ್ಲಿ ಈ ಹಿಂದೆ 2011ರಲ್ಲಿ ಸದಸ್ಯರಾಗಿ ಆಯ್ಕೆಯಾಗಿದ್ದ ಡಾ.ವಿ.ಕಂಚಿ ಪ್ರಲ್ಹಾದ್ ಮತ್ತು ಡಾ.ನಾಗರಾಜ್ ಅಣ್ಣೇಗೌಡ ಅನಧಿಕೃತವಾಗಿ ಅಧ್ಯಕ್ಷ, ಉಪಾಧ್ಯಕ್ಷ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರನ್ನು ಆ ಸ್ಥಾನಗಳಿಂದ ತೆರವುಗೊಳಿಸಲು ನಿರ್ದೇಶಿಸಬೇಕು. ಶೀಘ್ರವೇ ಐವರು ಸದಸ್ಯರ ನಾಮ ನಿರ್ದೇಶನ ಮಾಡುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ರೇರಾ ನ್ಯಾಯಮಂಡಳಿ: 15 ದಿನಗಳಲ್ಲಿ ನೇಮಕ

ಬೆಂಗಳೂರು: ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ (ಕೆ-ರೇರಾ) ಮೇಲ್ಮನವಿ ನ್ಯಾಯಮಂಡಳಿಗೆ 15 ದಿನಗಳಲ್ಲಿ ಅಧ್ಯಕ್ಷರನ್ನು ನೇಮಿಸಲಾಗುವುದು ಎಂಬ ರಾಜ್ಯ ಸರ್ಕಾರದ ವಾಗ್ದಾನವನ್ನು ದಾಖಲೆಯಲ್ಲಿ ಸ್ವೀಕರಿಸಿದ ಹೈಕೋರ್ಟ್ ಈ ಕುರಿತಾದ ಅರ್ಜಿಗಳನ್ನು ವಿಲೇವಾರಿ ಮಾಡಿದೆ.

ರೇರಾ ಮೇಲ್ಮನವಿ ನ್ಯಾಯಮಂಡಳಿಗೆ ಮುಖ್ಯಸ್ಥರನ್ನು ನೇಮಿಸುವಂತೆ ಕೋರಿ ಮ್ಯಾಥ್ಯೂ ಥಾಮಸ್ ಮತ್ತಿತರರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು, 'ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯವರಿಗೆ ಅಧ್ಯಕ್ಷರ ಹೆಸರನ್ನು ಒಳಗೊಂಡ ಕಡತ ಕಳುಹಿಸಬೇಕಿದೆ. ನೇಮಕ ಮಾಡುವುದು ಮಾತ್ರ ಬಾಕಿ ಇದೆ' ಎಂದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿತು.

ಹಳೇ ವೈಷಮ್ಯದಿಂದ ಕೃತ್ಯ: ಸಹಪಾಠಿಗಳ ಬಂಧನ

ವಿದ್ಯಾರ್ಥಿಗಳಿಗೆ ಥಳಿತ, ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಡಿಗೆ ಮನೆ ನೋಡಲು ಹೋಗಿದ್ದ ಇಬ್ಬರು ವಿದ್ಯಾರ್ಥಿಗಳನ್ನು ಕೊಠಡಿಯಲ್ಲಿ ಕೂಡಿ ಹಾಕಿ ಥಳಿಸಿ ₹90 ಸಾವಿರ ಸುಲಿಗೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಏಳು ಆರೋಪಿಗಳನ್ನು ಯಲಹಂಕ ನ್ಯೂ ಟೌನ್ ಪೊಲೀಸರು ಬಂಧಿಸಿದ್ದಾರೆ.

'ಯಲಹಂಕ ನ್ಯೂ ಟೌನ್ ಅನಂತಪುರದ ವಿವೇಕ್ (20), ಅನಾಮಿತ್ರ (20), ಯುವರಾಜ್ ರಾಥೋಡ್ (20), ಹರಿ ಮುಖರ್ಜಿ (20), ಪ್ರಜಿತ್ ಚತುರ್ವೇದಿ (20), ಅಲೆನ್ ಹಾಗೂ ಕರಣ್ ಬಂಧಿತರು. ಇವರೆಲ್ಲರೂ ಸೇರಿಕೊಂಡು ಕೃಷ್ಣ ಬಾಜಪೇಯಿ ಮತ್ತು ಯುವರಾಜ್ ಸಿಂಗ್ ಎಂಬುವವರನ್ನು ಕೂಡಿಹಾಕಿ ಥಳಿಸಿದ್ದರು' ಎಂದು ಪೊಲೀಸರು ಹೇಳಿದರು.

'ಏಪ್ರಿಲ್ 18ರಂದು ನಡೆದಿದ್ದ ಕೃತ್ಯದ ಬಗ್ಗೆ ಕೃಷ್ಣ ಬಾಜಪೇಯಿ ಹಾಗೂ ಯುವರಾಜ್ ಸಿಂಗ್ ಅವರು ದೂರು ನೀಡಿದ್ದರು. ತನಿಖೆ ಕೈಗೊಂಡು ಏಳು ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳು, ದೂರುದಾರರ ಕಾಲೇಜು ಸಹಪಾಠಿಗಳೆಂಬುದು ಗೊತ್ತಾಗಿದೆ' ಎಂದು ತಿಳಿಸಿದರು.

ಮುಖ್ಯಾಂಶಗಳು

- 7 ಮಂದಿ ಆರೋಪಿಗಳನ್ನು ಬಂಧಿಸಿದ ಪೊಲೀಸರು
- ಕಬ್ಬಿಣದ ರಾಡ್‌ನಿಂದ ಹಲ್ಲೆ, ಸಿಗರೇಟ್‌ನಿಂದ ಗಾಯ
- ಹಣ ಕಸಿದುಕೊಂಡಿದ್ದ ಆರೋಪಿಗಳು

ಕಾಲೇಜಿನಲ್ಲಿ ಗಲಾಟೆ, ವೈಷಮ್ಯದಿಂದ ಕೃತ್ಯ: 'ದೂರುದಾರರು ಹಾಗೂ ಆರೋಪಿಗಳು, ಒಂದೇ ಕಾಲೇಜಿನಲ್ಲಿ ಓದುತ್ತಿದ್ದಾರೆ. ಇವರ ನಡುವೆ ಇತ್ತೀಚೆಗೆ ಗಲಾಟೆ ಆಗಿತ್ತು. ಇದರಿಂದಾಗಿ ಇಬ್ಬರ ನಡುವೆ ವೈಷಮ್ಯ ಬೆಳೆದಿತ್ತು' ಎಂದು ಪೊಲೀಸರು ಹೇಳಿದರು.

'ಕೃಷ್ಣ ಹಾಗೂ ಯುವರಾಜ್, ಅನಂತಪುರ ಬಳಿಯ ಕಟ್ಟಡವೊಂದರಲ್ಲಿ ಬಾಡಿಗೆ ಮನೆ ನೋಡಲು ಹೋಗಿದ್ದರು. ಅದೇ ಕಟ್ಟಡದ ಇನ್ನೊಂದು ಮನೆಯಲ್ಲಿ ಆರೋಪಿಗಳು ನೆಲೆಸಿದ್ದರು. ದೂರುದಾರರನ್ನು ನೋಡಿದ್ದ ಆರೋಪಿಗಳು, ಜಗಳ ತೆಗೆದಿದ್ದರು. ಕೃಷ್ಣ ಹಾಗೂ ಯುವರಾಜ್ ಅವರನ್ನು ತಮ್ಮ ಮನೆಯ ಕೊಠಡಿಗೆ ಎಳೆದೊಯ್ದಿದ್ದರು. ಇಬ್ಬರ ಮೇಲೂ ಕಬ್ಬಿಣದ ರಾಡ್‌ನಿಂದ ಹಲ್ಲೆ ಮಾಡಿದ್ದರು. ಸಿಗರೇಟ್‌ನಿಂದ ದೇಹದ ಹಲವೆಡೆ ಸುಟ್ಟಿದ್ದರು' ಎಂದು ತಿಳಿಸಿದರು.

'ಬಾಡಿಗೆ ಮನೆಗೆ ಮುಂಗಡವಾಗಿ ನೀಡಲೆಂದು ದೂರುದಾರರು ₹40 ಸಾವಿರ ತಂದಿದ್ದರು. ಅದನ್ನು ಆರೋಪಿಗಳು ಕಸಿದುಕೊಂಡಿದ್ದರು. ಜೊತೆಗೆ, ಜೀವ ಬೆದರಿಕೆಯೊಡ್ಡಿ ಆನ್‌ಲೈನ್ ಮೂಲಕವೂ ₹ 50 ಸಾವಿರ ವರ್ಗಾಯಿಸಿಕೊಂಡಿದ್ದರು.'

'ಮಾದಕ ವಸ್ತು ಎಂಬುದಾಗಿ ಹೇಳಿ ಪೊಟ್ಟಣವೊಂದನ್ನು ದೂರುದಾರರ ಕೈಗೆ ಕೊಟ್ಟಿದ್ದ ಆರೋಪಿಗಳು, ಅದರ ವಿಡಿಯೊ ಚಿತ್ರೀಕರಿಸಿಕೊಂಡಿದ್ದರು. 'ನೀವು ಡ್ರಗ್ಸ್ ಮಾರಾಟಗಾರರು ಎಂಬುದಾಗಿ ಹೇಳಿ ಪೊಲೀಸರಿಗೆ ವಿಡಿಯೊ ಕಳುಹಿಸುತ್ತೇವೆ' ಎಂದು ಆರೋಪಿಗಳು ಬೆದರಿಸಿದ್ದರು. ₹ 4 ಲಕ್ಷ ಹಣಕ್ಕೆ ಬೇಡಿಕೆ ಇರಿಸಿದ್ದರು. ಬಳಿಕ, ಹಲ್ಲೆ ಹಾಗೂ ಸುಲಿಗೆ ಸಂಗತಿ ಯಾರಿಗೂ ಹೇಳದಂತೆ ಬೆದರಿಸಿ ಬಿಟ್ಟು ಕಳುಹಿಸಿದ್ದರು' ಎಂದು ಪೊಲೀಸರು ಹೇಳಿದರು.

'ಘಟನೆ ಬಗ್ಗೆ ಕುಟುಂಬಸ್ಥರಿಗೆ ಮಾಹಿತಿ ನೀಡಿದ್ದ ಕೃಷ್ಣ ಹಾಗೂ ಯುವರಾಜ್, ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರು. ನಂತರವೇ ಠಾಣೆಗೆ ಬಂದು ದೂರು ನೀಡಿದ್ದಾರೆ' ಎಂದು ತಿಳಿಸಿದರು.

ಆರ್‌ಡಿಪಿಆರ್ ಕಡತ ನಾಪತ್ತೆ ಪಿಡಿಒ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ (ಆರ್‌ಡಿಪಿಆರ್) ಪ್ರಧಾನ ಕಚೇರಿಯಲ್ಲಿದ್ದ ಕೆಲ ಕಡತಗಳು ನಾಪತ್ತೆಯಾಗಿದ್ದು, ಈ ಸಂಬಂಧ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ದಿನೇಶ್‌ಕುಮಾರ್ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಇಲಾಖೆಯ ಅಧೀನ ಕಾರ್ಯದರ್ಶಿ ಬಿ. ನವೀನ್‌ಕುಮಾರ್ ಅವರು ಕಡತ ನಾಪತ್ತೆ ಬಗ್ಗೆ ದೂರು ನೀಡಿದ್ದಾರೆ. ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಭಾರತೀಪುರ ಕ್ರಾಸ್ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ದಿನೇಶ್‌ಕುಮಾರ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಿಧಾನಸೌಧ ಬಳಿಯ ಬಹುಮಹಡಿ ಕಟ್ಟಡದಲ್ಲಿ ಆರ್‌ಡಿಪಿಆರ್ ಪ್ರಧಾನ ಕಚೇರಿ ಇದೆ. 2018ರಲ್ಲಿ ಇಲಾಖೆಯ ಕೆಲ ನೌಕರರ ಕುಟುಂಬದ ಸದಸ್ಯರಿಗೆ ವೈದ್ಯಕೀಯ ಕಾರಣಕ್ಕಾಗಿ ಅನುಕಂಪದ ಸರ್ಕಾರಿ ಹುದ್ದೆ ನೀಡಲಾಗುತ್ತಿತ್ತು. ಇದಕ್ಕೆ ಸಂಬಂಧಪಟ್ಟಂತೆ ಎರಡು ಪ್ರತ್ಯೇಕ ಕಡತಗಳನ್ನು ಸೃಷ್ಟಿಸಲಾಗಿತ್ತು. ಇದೇ ಕಡತಗಳು ಇದೀಗ ಭೌತಿಕವಾಗಿ ಲಭ್ಯವಿಲ್ಲ. ಎಲ್ಲಿಯೋ ನಾಪತ್ತೆಯಾಗಿರುವುದಾಗಿ ದೂರುದಾರರು ಆರೋಪಿಸುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'2018ರ ಮೇ 31ರಿಂದ 2024ರ ಏಪ್ರಿಲ್ 7ರವರೆಗಿನ ಅವಧಿಯಲ್ಲಿ ಕಡತಗಳು ನಾಪತ್ತೆಯಾಗಿವೆ. ಈ ಅವಧಿಯಲ್ಲಿ ಇಲಾಖೆಯ ನಿರ್ದೇಶಕರ ಆಪ್ತ ಸಹಾಯಕ ಕಚೇರಿಯಲ್ಲಿ ಆರೋಪಿ ದಿನೇಶ್‌ಕುಮಾರ್ ಕೆಲಸ ಮಾಡುತ್ತಿದ್ದರು. ಜೊತೆಗೆ, ಕಡತಗಳನ್ನು ಇದೇ ಶಾಖೆಯಲ್ಲಿ ಸ್ವೀಕರಿಸಿದ್ದ ಬಗ್ಗೆ ದಾಖಲೆಗಳಿವೆ' ಎಂದು ಮೂಲಗಳು ಹೇಳಿವೆ.

'ಕಡತಗಳಿಗಾಗಿ ಹಲವು ದಿನ ಶೋಧಿಸಲಾಗಿತ್ತು. ಆದರೆ, ಕಡತಗಳು ಲಭ್ಯವಾಗಿರಲಿಲ್ಲ. ಈ ಬಗ್ಗೆ ಕಾರಣ ಕೇಳಿ ದಿನೇಶ್‌ಕುಮಾರ್‌ಗೆ ನೋಟಿಸ್ ನೀಡಲಾಗಿತ್ತು. ಇದಕ್ಕೆ ಅವರು ಯಾವುದೇ ಉತ್ತರ ನೀಡಿಲ್ಲ. ಕಡತಗಳ ನಾಪತ್ತೆ ಹಿಂದೆ ಹಲವರ ಕೈವಾಡವಿರುವ ಶಂಕೆ ಇದೆ. ಹೀಗಾಗಿ, ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಉಲ್ಲೇಖಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸಾರ್ವಜನಿಕ ಸೇವಕರಿಂದ ನಂಬಿಕೆಯ ಉಲ್ಲಂಘನೆ (ಐಪಿಸಿ 409) ಆರೋಪದಡಿ ದಿನೇಶ್‌ಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಪ್ರಕರಣದ ಪುರಾವೆಗಳನ್ನು ಸಂಗ್ರಹಿಸಿ, ಆರೋಪಿಯನ್ನು ವಿಚಾರಣೆ ನಡೆಸಲಾಗುವುದು' ಎಂದು ಹೇಳಿವೆ.

ಐ.ಟಿ ದಾಳಿ: ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಅಭ್ಯರ್ಥಿ ಡಿ.ಕೆ. ಸುರೇಶ್ ಅವರ ಆಪ್ತ, ಬಿಬಿಎಂಪಿ ಮಾಜಿ ಸದಸ್ಯ ಗಂಗಾಧರ್ ಸೇರಿದಂತೆ ಕೆಲವರ ಮನೆ ಮೇಲೆ ಐ.ಟಿ ದಾಳಿ ನಡೆದಿದ್ದು, ಇದು ಚುನಾವಣೆ ಸಮಯದಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಕಟ್ಟಿಹಾಕುವ ಪ್ರಯತ್ನ ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕೋಣನಕುಂಟೆ ಬ್ಲಾಕ್‌ನಲ್ಲಿರುವ ಗಂಗಾಧರ್ ಮನೆ ಮುಂಭಾಗದಲ್ಲಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಬಲಿಷ್ಠವಾಗಿ ಕಟ್ಟುತ್ತಿದ್ದೇವೆ. ಬಿಜೆಪಿಗೆ ಸೋಲಿನ ಭಯ ಕಾಡುತ್ತಿದೆ. ಹೀಗಾಗಿ ಕಾಂಗ್ರೆಸ್ ಮುಖಂಡರ ಮನೆ ಮೇಲೆ ಐ.ಟಿ ದಾಳಿಗಳು ನಡೆಯುತ್ತಿವೆ ಎಂದು ಆರೋಪಿಸಿದರು.

'ಗಂಗಾಧರ್ ಅವರು ಹಣಕಾಸಿನ ವಿಚಾರದಲ್ಲಿ ಅನುಕೂಲಸ್ಥರು. ಸಾಕಷ್ಟು ಜಮೀನು ಇದೆ. ಬೇರೆ ಪಕ್ಷಗಳಲ್ಲಿ ಅವರಿಗಿಂತಲೂ ಶ್ರೀಮಂತರಿದ್ದಾರೆ. ಅವರ ಮನೆಗಳ ಮೇಲೆ ದಾಳಿಯಾಗಿಲ್ಲ. ಕೇವಲ ಕಾಂಗ್ರೆಸ್ ನಾಯಕರ ಮೇಲೆ ದಾಳಿ ನಡೆಯುತ್ತಿದೆ. ಸುರೇಶ್ ಹಾಗೂ ಡಿ.ಕೆ. ಶಿವಕುಮಾರ್ ಅವರ ಆಪ್ತರನ್ನು ಗುರಿಯಾಗಿಸಿ ದಾಳಿ ಮಾಡಲಾಗುತ್ತಿದೆ' ಎಂದು ದೂರಿದರು.

ಗಂಗಾಧರ್ ಜತೆಗೆ ಗೊಟ್ಟಿಗೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಧರ್, ಸುರೇಶ್ ಅವರ ಆಪ್ತ ಸಹಾಯಕ ಸುಜಯ್, ಚಂದ್ರು, ಲಕ್ಷ್ಮಣ್, ಬಾಬು ಎಂಬವರ ಮನೆಗಳ ಮೇಲೆಯೂ ದಾಳಿ ನಡೆದಿದೆ.

ದಾಬಸ್‌ಪೇಟೆ ಬಳಿ ಚಿರತೆ ಓಡಾಟ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಸೋಂಪುರ ಹೋಬಳಿಯ ಗಡಿ ಗ್ರಾಮ ಕುರುವೆಲ್ ತಿಮ್ಮನಹಳ್ಳಿ ಗ್ರಾಮದ ಆನಂದ್ ಎಂಬುವವರ ತೋಟದಲ್ಲಿ ಹಗಲಿನ ವೇಳೆಯಲ್ಲಿ ಚಿರತೆ ಕಾಣಿಸಿಕೊಂಡಿದ್ದು ಗ್ರಾಮಸ್ಥರಲ್ಲಿ ಆತಂಕ ಮೂಡಿದೆ.

ಮಧ್ಯಾಹ್ನ 3 ಗಂಟೆಯಲ್ಲಿ ಆನಂದ್ ಅವರ ಮಕ್ಕಳು ಹಸುಗಳಿಗೆ ನೀರು ಕುಡಿಸಲು ತೋಟಕ್ಕೆ ಹೋಗಿದ್ದಾಗ ಅಡಿಕೆ ಗಿಡಗಳ ನಡುವೆ ಅಡಗಿದ್ದ ಚಿರತೆ ಹೊರಗಡೆ ಬಂದಿದೆ. ಚಿರತೆ ಕಂಡು ಮಕ್ಕಳು ಕಿರುಚುತ್ತಾ ಓಡಿದ್ದಾರೆ. ಅಕ್ಕ ಪಕ್ಕ ಇದ್ದವರು ಚಿರತೆಯನ್ನು ಓಡಿಸಿದ್ದಾರೆ.

'ಒಂದು ತಿಂಗಳಲ್ಲಿ ಮೂರು ಬಾರಿ ಚಿರತೆ ಇಲ್ಲಿ ಕಾಣಿಸಿಕೊಂಡಿದೆ. ಹದಿನೈದು ದಿನಗಳ ಹಿಂದೆಯೂ ಬೆಳಿಗ್ಗೆ ಹೀಗೆ ಪೊದೆಯಿಂದ ಚಿರತೆ ಓಡಿ ಹೋಗಿದ್ದನ್ನು ಜನ ನೋಡಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆ ಹಿಡಿದು ದೂರ ಬಿಡಬೇಕು' ಎಂದು ಆನಂದ್ ಆಗ್ರಹಿಸಿದರು.

ಮಳೆ ಕೊರತೆ, ಮಾಕೇನಹಳ್ಳಿ ಗೋಮಾಳದಲ್ಲಿ ನಡೆಯುತ್ತಿರುವ ಗಣಿಗಾರಿಕೆಯಿಂದ ಅರಣ್ಯ ಪ್ರದೇಶ ಕಡಿಮೆಯಾಗಿ ಆಹಾರ ಸಿಗದೇ ಊರುಗಳತ್ತ ಚಿರತೆಗಳು ವಲಸೆ ಬರುತ್ತಿರುವೆ. ಕುರಿ, ಮೇಕೆ, ನಾಯಿ ಹೊತ್ತೊಯ್ಯುತ್ತಿವೆ. ರಾತ್ರಿ ವೇಳೆ ಕಾಣಿಸಿಕೊಳ್ಳುತ್ತಿದ್ದ ಚಿರತೆ, ಈಗ ಹಗಲಿನಲ್ಲಿಯೇ ಕಾಣಿಸಿಕೊಳ್ಳುತ್ತಿವೆ ಎಂದು ರೈತ ವೀರಚಿಕ್ಕಯ್ಯ ಆತಂಕ ವ್ಯಕ್ತಪಡಿಸಿದರು.

'ಚಿರತೆಯ ಚಲನವಲನಗಳ ಬಗ್ಗೆ ಗಮನಹರಿಸಿ, ಬೋನ್ ಇಟ್ಟು ಚಿರತೆ ಹಿಡಿದು ಬೇರೆ ಕಡೆ ಬಿಡಲಾಗುವುದು' ಎಂದು ನೆಲಮಂಗಲ ವಲಯ ಅರಣ್ಯಾಧಿಕಾರಿ ಶ್ರೀಧರ್ ಎಸ್. ಮಾಹಿತಿ ನೀಡಿದರು.

ಚುನಾವಣೆ: 7,553 ಶಸ್ತ್ರಾಸ್ತ್ರ ಠೇವಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮ ಕೈಗೊಂಡಿರುವ ಪೊಲೀಸರು, ಸಾರ್ವಜನಿಕರ ಬಳಿಯ 7,553 ಶಸ್ತ್ರಾಸ್ತ್ರಗಳನ್ನು ತಮ್ಮ ಸುಪರ್ದಿಗೆ ಪಡೆದುಕೊಂಡಿದ್ದಾರೆ.

'ನಗರದ ಹಲವರು ಪರವಾನಗಿ ಪಡೆದು ಶಸ್ತ್ರಾಸ್ತ್ರ ಇಟ್ಟುಕೊಂಡಿದ್ದರು. ಲೋಕಸಭಾ ಚುನಾವಣೆ ವೇಳಾಪಟ್ಟಿ ಘೋಷಣೆಯಾಗುತ್ತಿದ್ದಂತೆ, ಪರವಾನಗಿ ಶಸ್ತ್ರಾಸ್ತ್ರಗಳನ್ನು ಠಾಣೆಗಳಲ್ಲಿ ಠೇವಣಿ ಇರಿಸುವಂತೆ ನೋಟಿಸ್ ನೀಡಲಾಗಿತ್ತು. ಅದರಂತೆ 7,553 ಮಂದಿ ತಮ್ಮ ಶಸ್ತ್ರಾಸ್ತ್ರಗಳನ್ನು ಠಾಣೆಯಲ್ಲಿ ಠೇವಣಿ ಇರಿಸಿದ್ದಾರೆ' ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಹೇಳಿದರು.

ಕೆಲವರಿಗೆ ರಿಯಾಯಿತಿ: 'ಕೇಂದ್ರ ಮತ್ತು ರಾಜ್ಯ ಸರ್ಕಾರದ ಇಲಾಖೆಗಳ ಅಧಿಕಾರಿಗಳು, ಬ್ಯಾಂಕ್ ಹಾಗೂ ಭದ್ರತಾ ಏಜೆನ್ಸಿಗಳು, ಶೂಟಿಂಗ್ ಕ್ರೀಡಾಪಟುಗಳು, ನ್ಯಾಷನಲ್ ರೈಫಲ್ ಅಸೋಸಿಯೇಷನ್ ಸದಸ್ಯರು ಹಾಗೂ ಕೊಡವ ಸಮಾಜದವರಿಗೆ ಶಸ್ತ್ರಾಸ್ತ್ರ ಹೊಂದಲು ಅವಕಾಶವಿದೆ. ಶಸ್ತ್ರಾಸ್ತ್ರ ಠೇವಣಿಯಿಂದ ಅವರಿಗೆ ವಿನಾಯಿತಿ ನೀಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಕೆಲವರು ಜೀವ ಭಯವಿರುವುದಾಗಿ ಹೇಳಿ ಪರವಾನಗಿ ಶಸ್ತ್ರಾಸ್ತ್ರ ಪಡೆದಿದ್ದರು. ಇಂಥ ಹಲವರು, ಶಸ್ತ್ರಾಸ್ತ್ರ ವಿನಾಯಿತಿ ಕೋರಿ ಮನವಿ ಸಲ್ಲಿಸಿದ್ದರು. ಅವರಿಗೆ ವಿನಾಯಿತಿ ನೀಡಲಾಗಿದೆ. ಉಳಿದಂತೆ ಹಲವು ಪರವಾನಗಿದಾರರು, ತಮ್ಮ ಬಂದೂಕು, ಪಿಸ್ತೂಲ್, ರಿವಾಲ್ವರ್ ಹಾಗೂ ಇತರೆ ಶಸ್ತ್ರಾಸ್ತ್ರಗಳನ್ನು ಠೇವಣಿ ಇರಿಸಿದ್ದಾರೆ. ಚುನಾವಣೆ ಬಳಿಕ ಎಲ್ಲವನ್ನೂ ಪರವಾನಗಿದಾರರಿಗೆ ವಾಪಸು ನೀಡಲಾಗುವುದು' ಎಂದು ಹೇಳಿದರು.

5,117 ಮಂದಿಯಿಂದ ಮುಚ್ಚಳಿಕೆ: ಚುನಾವಣೆ ಸಂದರ್ಭದಲ್ಲಿ ಜನರನ್ನು ಬೆದರಿಸುವ ಹಾಗೂ ಅಪರಾಧ ಕೃತ್ಯದಲ್ಲಿ ಭಾಗಿಯಾಗುವ ಮಾಹಿತಿ ಮೇರೆಗೆ ನಗರದ 5,117 ಮಂದಿವನ್ನು ವಶಕ್ಕೆ ಪಡೆದು ಮುಚ್ಚಳಿಕೆ ಬರೆಸಿಕೊಳ್ಳಲಾಗಿದೆ' ಎಂದು ಬಿ.ದಯಾನಂದ್ ಹೇಳಿದರು.

'ರೌಡಿ ಪಟ್ಟಿಯಲ್ಲಿ ಹೆಸರಿರುವ ಹಾಗೂ ಅಪರಾಧ ಹಿನ್ನೆಲೆಯುಳ್ಳ 5,117 ಮಂದಿಯಿಂದ ಮುಚ್ಚಳಿಕೆ ಬರೆಸಿಕೊಳ್ಳಲಾಗಿದೆ. ಇವರು ಯಾವುದಾದರೂ ಕೃತ್ಯದಲ್ಲಿ ಭಾಗಿಯಾದರೆ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಬಿ.ಎಚ್.ಶ್ರೀ ಪ್ರಶಸ್ತಿ ಪ್ರದಾನ

ಶಿರಸಿಯಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಸಾಹಿತಿ ಚಂದ್ರಕಾಂತ ಪೋಕಳೆ ಅವರಿಗೆ 'ಬಿ.ಎಚ್ ಶ್ರೀಧರ ಪ್ರಶಸ್ತಿ' ಪ್ರದಾನ ಮಾಡಲಾಯಿತು. ರಾಜಶೇಖರ ಹೆಬ್ಬಾರ್, ವಿಜಯಕುಮಾರ ಭಟ್, ಜಗದೀಶ ಭಂಡಾರಿ, ಕಿರಣ ಭಟ್, ವಿಷ್ಣುಹೆಗಡೆ, ಚಿಂತಾಮಣಿ ಕೊಡ್ಲೆಕೆರೆ, ಎಂ.ಜಿ.ಹೆಗಡೆ, ಸಿ.ಆರ್.ಶಾನಭಾಗ ಪಾಲ್ಗೊಂಡಿದ್ದರು. –ಪ್ರಜಾವಾಣಿ ಚಿತ್ರ

ಕಾಂಗ್ರೆಸ್‌ನಲ್ಲಿ ಮಾವೋವಾದಿ ಚಿಂತನೆ: ಸುರೇಶ್‌ಕುಮಾರ್

'ಸಂಪತ್ತು ಮರುಹಂಚಿಕೆ ಅಪಾಯಕಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಷ್ಟಪಟ್ಟು ಸಂಪಾದಿಸಿದ ಆಸ್ತಿಯನ್ನು ಮರುಹಂಚಿಕೆ ಮಾಡುವುದಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ಇದು ದೇಶಕ್ಕೆ ಅತ್ಯಂತ ಅಪಾಯಕಾರಿ ಚಿಂತನೆ' ಎಂದು ಬಿಜೆಪಿ ಶಾಸಕ ಎಸ್. ಸುರೇಶ್‌ಕುಮಾರ್ ಟೀಕಿಸಿದರು.

'ಕಾಂಗ್ರೆಸ್ ಡೇಂಜರ್' ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, 'ಯಾರಾದರೂ ದುಡಿದು ಆಸ್ತಿ ಸಂಪಾದನೆ ಮಾಡುವುದೇ ತಪ್ಪು ಎನ್ನುವ ಧೋರಣೆ ಕಾಂಗ್ರೆಸ್ ಪಕ್ಷದ್ದು. ಮತದಾರರು ಮತ ಚಲಾಯಿಸುವುದಕ್ಕೆ ಮುನ್ನ ಕಾಂಗ್ರೆಸ್ ಪ್ರಣಾಳಿಕೆಯನ್ನು ಒಮ್ಮೆ ಓದಿಕೊಳ್ಳುವುದು ಸೂಕ್ತ' ಎಂದರು.

'ಅಮೆರಿಕದಲ್ಲಿರುವ ಕಾಂಗ್ರೆಸ್ ನಾಯಕ ಸ್ಯಾಮ್ ಪಿತ್ರೋಡಾ ಅವರು ಸುದ್ದಿ ಸಂಸ್ಥೆಯೊಂದಿಗೆ ಮಾತನಾಡಿ, ಯಾವುದೇ ವ್ಯಕ್ತಿ ಮೃತಪಟ್ಟರೆ ಆತನ ಪಿತಾರ್ಜಿತ ಆಸ್ತಿಯಲ್ಲಿ ಶೇ 45 ರಷ್ಟು ಮಕ್ಕಳಿಗೆ ಉಳಿದ ಶೇ 55 ಸಾರ್ವಜನಿಕರಿಗೆ ಹಂಚಿಕೆ ಮಾಡಬೇಕು ಎಂದಿದ್ದಾರೆ. ಸಂಪತ್ತಿನ ಆಧಾರದಲ್ಲಿ ಜನರನ್ನು ಒಡೆಯಲು ಮುಂದಾಗಿರುವುದು ಉಗ್ರ ಎಡಪಂಥೀಯ ಚಿಂತನೆ' ಎಂದು ಅವರು ಹೇಳಿದರು.

'ಕಮ್ಯುನಿಸ್ಟ್ ಪಕ್ಷಗಳು ಭಾರತದ ಅಣ್ವಸ್ತ್ರ ಶಕ್ತಿಯನ್ನು ಅಳಿಸುವುದಾಗಿ ತನ್ನ ಪ್ರಣಾಳಿಕೆಯಲ್ಲಿ ಹೇಳಿವೆ. ಡಿಎಂಕೆ ಸನಾತನ ಧರ್ಮವನ್ನು ಹೊಸಕಿ ಹಾಕುವುದಾಗಿ ಹೇಳಿದೆ. ಈ ಮೂಲಕ 'ಇಂಡಿ' ಒಕ್ಕೂಟ ಭಾರತದ ಭವಿಷ್ಯ ಮತ್ತು ರಕ್ಷಣೆಯ ಬಗ್ಗೆ ಕಿಂಚಿತ್ತು ಕಾಳಜಿ ವಹಿಸಿದಂತೆ ಕಾಣುತ್ತಿಲ್ಲ' ಎಂದರು.

ಸುದ್ದಿಗೋಷ್ಠಿಯಲ್ಲಿ ಹಾಜರಿದ್ದ ಮಲ್ಲೇಶ್ವರ ಶಾಸಕ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ಮಾತನಾಡಿ, ಬೆಂಗಳೂರು ಗ್ರಾಮಾಂತರ ಮತ್ತು ಇತರ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಸಾರ್ವಜನಿಕರಿಗೆ ಗ್ಯಾರಂಟಿ ಕಾರ್ಡ್‌ಗಳನ್ನು ವಿತರಿಸುತ್ತಿದೆ. ಚುನಾವಣೆಯಲ್ಲಿ ಗೆದ್ದ ಬಳಿಕ ಪ್ರತಿ ಗ್ಯಾರಂಟಿ ಕಾರ್ಡ್‌ಗೆ ₹10 ಸಾವಿರ ಕೊಡುವುದಾಗಿ ಆಮಿಷ ಒಡ್ಡುತ್ತಿದೆ. ಈ ಸಂಬಂಧ ಚುನಾವಣಾ ಆಯೋಗಕ್ಕೆ ದೂರು ನೀಡಲಾಗುವುದು ಎಂದು ಹೇಳಿದರು.

ಶಾಸಕರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ಎಸ್. ಸುರೇಶ್‌ಕುಮಾರ್ ಅವರು 'ಕಾಂಗ್ರೆಸ್ ಡೇಂಜರ್' ಪೋಸ್ಟರ್ ಬಿಡುಗಡೆ ಮಾಡಿದರು.

ಪ್ರಜಾ ಮತ ಜನತಂತ್ರದ ಹಬ್ಬ

ಲೋಕಸಭಾ ಚುನಾವಣೆ - 2024

'ಸುಳ್ಳು ಹೇಳುತ್ತಿರುವ ಪ್ರಧಾನಿ'

ಬೆಂಗಳೂರು: ದೇಶದ ಸಂಪತ್ತನ್ನು ಕಾಂಗ್ರೆಸ್ ಮುಸ್ಲಿಮರಿಗೆ ಹಂಚುವುದಾಗಿ ಘೋಷಣೆ ಮಾಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸುಳ್ಳು ಹೇಳಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮಂಗಳ ಸೂತ್ರವನ್ನು ಕಸಿದುಕೊಳ್ಳುತ್ತದೆ ಎಂದು ದಾರಿ ತಪ್ಪಿಸುತ್ತಿದ್ದಾರೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಹೇಳಿದೆ. ನೀಚತನ ಮೆರೆಯಲು ಮಹಿಳೆಯರ ಹಣ, ತಾಳಿಯಂತಹ ಅಂಶಗಳೇ ಬೇಕಾ ಎಂದು ಸಂಘಟನೆಯ ಅಧ್ಯಕ್ಷೆ ಮೀನಾಕ್ಷಿ ಬಾಳಿ, ಪ್ರಧಾನ ಕಾರ್ಯದರ್ಶಿ ದೇವಿ ಪ್ರಶ್ನಿಸಿದ್ದಾರೆ.

'ಇಂಡಿಯಾ ಕೂಟ ಬೆಂಬಲಿಸಿ'

'ಕಾರ್ಮಿಕರ ಹಕ್ಕುಗಳನ್ನು ಕಿತ್ತುಕೊಂಡಿರುವ ನರೇಂದ್ರ ಮೋದಿ ಸರ್ಕಾರವನ್ನು ಸೋಲಿಸಬೇಕು. 'ಇಂಡಿಯಾ' ಮೈತ್ರಿಕೂಟದ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು' ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಶನ್ ಅಧ್ಯಕ್ಷ ಎಚ್.ವಿ. ಅನಂತ ಸುಬ್ಬರಾವ್ ಹೇಳಿದ್ದಾರೆ.

'ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಪ್ರಜಾಪ್ರಭುತ್ವ, ಸಂವಿಧಾನದ ಮೇಲೆ ಹಾಗೂ ಜನರ ಶಾಂತಿಯುತ ಬದುಕಿನ ಮೇಲೆ ಸಮರ ಸಾರಿದೆ. ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಕಾರ್ಪೊರೇಟ್ ಕಂಪನಿಗಳಿಗೆ ಮಾರಾಟ ಮಾಡುತ್ತಿದ್ದಾರೆ. ದೇಶದ ಕೃಷಿ ಕ್ಷೇತ್ರವನ್ನು ಅಂಬಾನಿ–ಅದಾನಿ ಅವರ ಕೈಗೆ ಒಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ, ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಬೆಂಬಲಿಸಬೇಕು' ಎಂದು ಹೇಳಿದ್ದಾರೆ.



ಎಚ್.ವಿ. ಅನಂತ ಸುಬ್ಬರಾವ್

'ಕಾಂಗ್ರೆಸ್ ಬೆಂಬಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಲು ಕಾಂಗ್ರೆಸ್ ಪಕ್ಷಕ್ಕೆ ಮತ ನೀಡುವಂತೆ ವಿವಿಧ ಸಂಘಟನೆಗಳು ಮನವಿ ಮಾಡಿವೆ.

ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಪಿಟಿಸಿಎಲ್ ಕಾಯ್ದೆ ಭೂಮಿ ವಂಚಿತರ ಹೋರಾಟ ಸಮಿತಿಯ ಅಧ್ಯಕ್ಷ ಪಿಟಿಸಿಎಲ್ ಮಂಜುನಾಥ್, 'ರಾಜ್ಯದಲ್ಲಿ ಕಾಂಗ್ರೆಸ್ ದಲಿತರಿಗೆ, ಬಡವರಿಗೆ ಅನುಕೂಲವಾಗುವ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ. ಪಿಟಿಸಿಎಲ್ ಕಾಯ್ದೆಗೆ ಕಾಲಮಿತಿ ಅನ್ವಯಿಸುವುದಿಲ್ಲವೆಂದು ತಿದ್ದುಪಡಿ ಮಾಡಿದೆ. ಆದ್ದರಿಂದ, ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಎಲ್ಲ ಸಮುದಾಯದವರು ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಬೆಂಬಲಿಸಬೇಕು' ಎಂದರು.

'ರಾಜ್ಯದ ಎಲ್ಲ ಲೋಕಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿಗೆ ಮತ ನೀಡಬೇಕು' ಎಂದು ಡಾ.ಬಿ.ಆರ್. ಅಂಬೇಡ್ಕರ್ ದಲಿತ ಸಂಘಟನೆಗಳ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಶ್ರೀಧರ ಕಲಿವೀರ ಮನವಿ ಮಾಡಿದರು.

'ಸಂವಿಧಾನ ಬದಲಾಯಿಸಲು ನಿರ್ಧರಿಸಿರುವ ಬಿಜೆಪಿಯ ಅಭ್ಯರ್ಥಿಗಳನ್ನು ಸೋಲಿಸಬೇಕು. ಎನ್‌ಡಿಎ ಮೈತ್ರಿಕೂಟವು ತನ್ನ ಪ್ರಣಾಳಿಕೆಯಲ್ಲಿ ಸುಳ್ಳುಗಳ ಭರವಸೆ ನೀಡಿದ್ದು, ಮತದಾರರನ್ನು ವಂಚಿಸುತ್ತಿದೆ. ಲೋಕಸಭಾ ಚುನಾವಣೆಯಲ್ಲಿ 400 ಸಂಸದರು ಆಯ್ಕೆಯಾದರೆ, ಸಂವಿಧಾನ ಬದಲಾಯಿಸುವ ಹುನ್ನಾರ ನಡೆಸಿದೆ' ಎಂದು ದೂರಿದರು.

'ಬಿಜೆಪಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೇರಿದಂತೆ ವಿವಿಧ ವಿಷಯಗಳಲ್ಲಿ ನಿರಂತರವಾಗಿ ಅನ್ಯಾಯ ಮಾಡಿಕೊಂಡು ಬಂದಿದೆ. ಕಳೆದ ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಯಲ್ಲಿ ಕೋಲಿ, ಕುರುಬ ಸಮಾಜವನ್ನು ಎಸ್.ಟಿ ಪಟ್ಟಿಗೆ ಸೇರ್ಪಡೆ ಮಾಡುವ ಭರವಸೆ ನೀಡಿತ್ತು. ಆದರೆ, ಇದುವರೆಗೂ ಈ ಬಗ್ಗೆ ಚಕಾರ ಎತ್ತುತ್ತಿಲ್ಲ. ಆದ್ದರಿಂದ, ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಅಹಿಂದ ಕರ್ನಾಟಕ ಅಲ್ಪಸಂಖ್ಯಾತರ ಹಿಂದುಳಿದವರ ದಲಿತರ ಒಕ್ಕೂಟವು ಕಾಂಗ್ರೆಸ್‌ಗೆ ಬೆಂಬಲಿಸಲು ನಿರ್ಧರಿಸಿದೆ' ಎಂದು ಒಕ್ಕೂಟದ ರಾಜ್ಯ ಉಪಾಧ್ಯಕ್ಷ ಶಿವಣ್ಣ ಹೇಳಿದರು.

'ಸಂವಿಧಾನ ರಕ್ಷಣೆಗಾಗಿ ಆದಿಜಾಂಬವ ಸಮುದಾಯವು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕು' ಎಂದು ಕಾಂಗ್ರೆಸ್ ಪಾರ್ಟಿ ಆದಿಜಾಂಬವ ಯುವ ಸಮನ್ವಯ ಸಮಿತಿ ಕರ್ನಾಟಕದ ರಾಜ್ಯ ಸಂಯೋಜಕ ಏಳುಕೋಟೆಪ್ಪ ಎಸ್. ಪಾಟೀಲ್ ಮನವಿ ಮಾಡಿದರು.

'ರಾಜ್ಯದ 31 ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿಗಳಲ್ಲಿ ಶೇ 57.2ರಷ್ಟು ಜನಸಂಖ್ಯೆ ಹೊಂದಿರುವ ಆದಿಜಾಂಬವ ಸಮುದಾಯವು ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ. ಸಂವಿಧಾನ ಮತ್ತು ಪ್ರಜಾಪ್ರಭುತ್ವ ರಕ್ಷಿಸಲು ಕಾಂಗ್ರೆಸ್ ಮತ್ತು 'ಇಂಡಿಯಾ' ಮೈತ್ರಿಕೂಟದ ಅಭ್ಯರ್ಥಿಗಳನ್ನು ಬೆಂಬಲಿಸಬೇಕು. ಸಂವಿಧಾನ ಮತ್ತು ಪ್ರಜಾಪ್ರಭುತ್ವ ಉಳಿದರೆ ಮಾತ್ರ ದೇಶದ ಬಡವರು, ರೈತರು, ಕಾರ್ಮಿಕರು, ಪರಿಶಿಷ್ಟರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ಸೇರಿದಂತೆ ಎಲ್ಲ ವರ್ಗದವರು ನೆಮ್ಮದಿಯಿಂದ ಜೀವನ ನಡೆಸಬಹುದು' ಎಂದರು.

'ಒಳಮೀಸಲಾತಿಯನ್ನು ಜಾರಿಗೊಳಿಸದೇ, ಉನ್ನತ ಶಿಕ್ಷಣದಲ್ಲಿ ಮೀಸಲಾತಿಯನ್ನು ರದ್ದುಪಡಿಸಿ, ಸಂವಿಧಾನವನ್ನು ಬದಲಿಸಲು ಹುನ್ನಾರ ನಡೆಸುತ್ತಿರುವ ಬಿಜೆಪಿ ಪಕ್ಷಕ್ಕೆ ಮಾದಿಗ ಸಮುದಾಯದವರು ಮತ ಹಾಕಬಾರದು. ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ನಮ್ಮ ಸಮಸ್ಯೆಗಳಿಗೆ ಸ್ಪಂದಿಸಿ ಭರವಸೆ ನೀಡುವ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ನೀಡಬೇಕು' ಎಂದು ಕರ್ನಾಟಕ ಮಾದಿಗ ಸಂಘಟನೆಗಳ ಒಕ್ಕೂಟವು ತಿಳಿಸಿದೆ.

'ಸಂವಿಧಾನ ವಿರೋಧಿಗಳಿಗೆ ಮತವಿಲ್ಲ'

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಸಂವಿಧಾನವನ್ನು ಬದಲಾಯಿಸಿ, ವರ್ಣಾಶ್ರಮ ಪದ್ಧತಿಯನ್ನು ಜಾರಿಗೊಳಿಸುವ ಗುಪ್ತ ಅಜೆಂಡಾದೊಂದಿಗೆ ಮತ್ತೆ ಚುನಾವಣೆಯನ್ನು ಗೆಲ್ಲುವ ಹವಣಿಕೆಯಲ್ಲಿ ಇರುವ ಬಿಜೆಪಿಗೆ ಈ ಬಾರಿ ದಲಿತರು ಮತ ಚಲಾಯಿಸುವುದಿಲ್ಲ' ಎಂದು ಬಹುಜನ ದಲಿತ ಸಂಘರ್ಷ ಸಮಿತಿ ರಾಜ್ಯಾಧ್ಯಕ್ಷ ಆರ್. ಎಂ.ಎನ್. ರಮೇಶ್ ಹೇಳಿದರು.

ಬುಧವಾರ ಹೆಚ್‌ಎಸ್‌ಆರ್ ಬಡಾವಣೆಯಲ್ಲಿ 'ಮೋದಿ ಆಳ್ವಿಕೆ ವಿರುದ್ಧ ಜನತಾ ಆರೋಪ ಪಟ್ಟಿ' ಬಿಡುಗಡೆ ಮಾಡಿ ಅವರು ಮಾತನಾಡಿದರು.

ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಿ ಸರ್ವಾಧಿಕಾರದತ್ತ ಹೋಗುತ್ತಿರುವ ಬಿಜೆಪಿಯ ನಡೆ ಅಪಾಯಕಾರಿಯಾದುದು. ಸಂಸದೀಯ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ ಎಂದು ಹೇಳಿದರು.

'ಬಹುಜನ ಸಂಘರ್ಷ ಸಮಿತಿಯು ಕಳೆದ ವಿಧಾನಸಭೆ ಚುನಾವಣೆಯಲ್ಲಿ ಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯನ್ನು ಬೆಂಬಲಿಸಿತ್ತು. ಹೀಗಾಗಿ ಈ ಬಾರಿಯೂ ಬಿಜೆಪಿ ಮೈತ್ರಿಕೂಟವನ್ನು ಬೆಂಬಲಿಸುತ್ತದೆ ಎಂದು ಸುಳ್ಳು ಸುದ್ದಿ ಹರಡಲಾಗುತ್ತಿದೆ. ಜೆಡಿಎಸ್ ಸದ್ಯ ಕೋಮುವಾದಿ, ಫ್ಯಾಸಿಸ್ಟ್ ಶಕ್ತಿಗಳ ಜತೆ ಹೊಂದಾಣಿಕೆ ಮಾಡಿಕೊಂಡಿರುವುದರಿಂದ ನಾವು ಬೆಂಗಳೂರು ದಕ್ಷಿಣ ಮತ್ತು ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತೇವೆ' ಎಂದು ತಿಳಿಸಿದರು.

ದಲಿತ ಸೇವಾ ಸಮಿತಿ ರಾಜ್ಯಾಧ್ಯಕ್ಷ ಚಂದ್ರಪ್ಪ, ಬಹುಜನ ದಲಿತ ಸಂಘರ್ಷ ಸಮಿತಿ ಮುಖಂಡರಾದ ರಾಮಚಂದ್ರ, ರವಿಕುಮಾರ್, ಮಾಲತಿ ನಂದೀಶ್, ಮುರಳಿ ವೆಂಕಟೇಶ್, ಅಗರ ಶಂಕರ್, ಮೀನಾಕ್ಷಿ, ಸುಶೀಲಾ ಕುಮಾರಿ ಅವರು ಇದ್ದರು.

ದಲಿತ ಸಂಘರ್ಷ ಸಮಿತಿಯಿಂದ 'ಮೋದಿ ಆಳ್ವಿಕೆ ವಿರುದ್ಧ ಜನತಾ ಆರೋಪ ಪಟ್ಟಿ' ಬಿಡುಗಡೆಗೊಳಿಸಲಾಯಿತು.

ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮನ್ಸೂರ್ ಅಲಿ ಖಾನ್

‘ಸುಸ್ಥಿರ ಅಭಿವೃದ್ಧಿಗೆ ‘ಕೈ’ಹಿಡಿಯುವ ವಿಶ್ವಾಸ’

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ಸಂದರ್ಶನ

ಬೆಂಗಳೂರು: ‘ಈ ಬಾರಿ ನನಗೊಂದು ಅವಕಾಶ ಕೊಡಿ’ ಎಂದು ಮತದಾರರ ಕದ ತಟ್ಟುತ್ತಿದ್ದಾರೆ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮನ್ಸೂರ್ ಅಲಿ ಖಾನ್. ಧಾರ್ಮಿಕ, ಭಾಷಾ ಅಲ್ಪಸಂಖ್ಯಾತರು ನಿರ್ಣಾಯಕ ಸಂಖ್ಯೆಯಲ್ಲಿರುವ ಈ ಕ್ಷೇತ್ರವನ್ನು ಸತತ ಮೂರು ಬಾರಿ ಪ್ರತಿನಿಧಿಸಿರುವ ಬಿಜೆಪಿಯ ಪಿ.ಸಿ. ಮೋಹನ್ ವಿರುದ್ಧದ ಆಡಳಿತ ವಿರೋಧಿ ಅಲೆ, ರಾಜ್ಯ ಕಾಂಗ್ರೆಸ್ ಸರ್ಕಾರದ ‘ಗ್ಯಾರಂಟಿ’ ಯೋಜನೆಗಳ ‘ಫಲ’ ಮತಗಳಾಗಿ ಪರಿವರ್ತನೆಯಾಗಿ ತನ್ನನ್ನು ಗೆಲುವಿನ ದಡ ಸೇರಿಸಬಹುದು ಎಂಬ ದೃಢ ವಿಶ್ವಾಸದಲ್ಲಿದ್ದಾರೆ ಅವರು.

ಬಹಿರಂಗ ಪ್ರಚಾರದ ಕೊನೆಯ ದಿನ ಬಿರುಸಿನ ಓಡಾಟದ ಮಧ್ಯೆ ‘ಪ್ರಜಾವಾಣಿ’ ಜೊತೆ ಅವರು ಮಾತನಾಡಿದರು.

• ಕ್ಷೇತ್ರದಲ್ಲಿ ನಿಮ್ಮ ಪ್ರಚಾರ ಹೇಗಿದೆ ?

ಕ್ಷೇತ್ರದಾದ್ಯಂತ ಸುತ್ತಾಡಿದ್ದೇನೆ. ಮತದಾರರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಚುನಾವಣಾ ಪ್ರಚಾರ ಸಮಾವೇಶ, ರ್‍ಯಾಲಿಗಳಲ್ಲಿ ನಾನು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಿದ್ದಾರೆ. ನಮ್ಮ ಸರ್ಕಾರದ ಐದು ‘ಗ್ಯಾರಂಟಿ’ ಯೋಜನೆಗಳು ಮನೆ ಮನೆ ತಲುಪಿವೆ. ಈ ಯೋಜನೆಗಳು ನನ್ನ ಪಾಲಿಗೆ ಮತಗಳಾಗಿ ಪರಿವರ್ತನೆಯಾಗಲಿದೆ. ತಳಮಟ್ಟದಲ್ಲಿ ನನ್ನ ಪರವಾದ ಒಲವಿದೆ. ಕಾಂಗ್ರೆಸ್ ಪರವಾಗಿ ಜನರು ಮತ ಚಲಾಯಿಸುತ್ತಾರೆಂಬ ವಿಶ್ವಾಸವಿದೆ.

• ಕ್ಷೇತ್ರದ ಶಾಸಕರು, ಮಾಜಿ ಶಾಸಕರು ನಿಮಗೆ ಸಾಥ್ ಕೊಟ್ಟಿಲ್ಲವಂತೆ. ನಿಜನಾ?

ಯಾರು ಹೇಳಿದ್ದು? ಹಾಗೆಂದು, ಸುದ್ದಿ ಹಬ್ಬಿಸಿದ್ದಾರೆ ಅಷ್ಟೆ. ಎಲ್ಲರೂ ಜೊತೆಗಿದ್ದಾರೆ. ಶಾಸಕರು, ಮಾಜಿ ಶಾಸಕರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಹೀಗೆ ಎಲ್ಲರೂ ಒಗ್ಗಟ್ಟಿನಿಂದ ಬೆನ್ನಿಗೆ ನಿಂತಿದ್ದಾರೆ.

• ಬಿಜೆಪಿ ಭದ್ರಕೋಟೆಯೆಂದೇ ಗುರುತಿಸಿಕೊಂಡಿರುವ ಕ್ಷೇತ್ರದಲ್ಲಿ ‘ಗ್ಯಾರಂಟಿ’ಗಳ ಹೊರತಾಗಿ ನಿಮ್ಮ ಗೆಲುವಿಗೆ ಸಹಕಾರಿಯಾಗುವ ಅಂಶಗಳು ಯಾವುವು?

ಬಿಜೆಪಿ ಭದ್ರಕೋಟೆ ಎನ್ನುವುದು ಸೃಷ್ಟಿ. 2009ರಲ್ಲಿ ಎಚ್.ಟಿ. ಸಾಂಗ್ಲಿಯಾನಾ, ಜಮೀರ್ ಅಹ್ಮದ್ ಖಾನ್ ಮತ್ತು ಪಿ.ಸಿ. ಮೋಹನ್ ಅವರ ಮಧ್ಯೆ ಮತ ವಿಭಜನೆಯಾಗಿತ್ತು. ಹೀಗಾಗಿ, ಮೋಹನ್ ಗೆದ್ದಿದ್ದರು. 2014ರಲ್ಲಿ ಮೋದಿ ಅಲೆ ಇತ್ತು. 2019ರಲ್ಲಿ ಪುಲ್ವಾಮಾ ದಾಳಿ ಪ್ರಕರಣ ಬಿಜೆಪಿಗೆ ಅನುಕೂಲ ಮಾಡಿಕೊಟ್ಟಿತ್ತು. ಆದರೆ, ಬಿಜೆಪಿ ಅಭ್ಯರ್ಥಿಯ (ಪಿ.ಸಿ. ಮೋಹನ್) ಗೆಲುವಿನ ಅಂತರ ಕಡಿಮೆಯಾಗಿತ್ತು. ಈ ಬಾರಿ ಮೋದಿ ಅಲೆ ಇಲ್ಲ. ಅಲ್ಲದೆ, ಕಾಂಗ್ರೆಸ್ ಪರ ವಾತಾವರಣವಿದೆ. ಸಂಸದರಾಗಿರುವ ಮೋಹನ್ ಅವರು ಕ್ಷೇತ್ರಕ್ಕೇ ಬಂದಿಲ್ಲ ಎಂಬ ಆರೋಪವಿದೆ. ಗೆದ್ದರೆ ನೀವೂ ಅದೇ ರೀತಿ ಮಾಡುತ್ತೀರಾ ಎಂದೂ ಜನ ನನ್ನನ್ನು ಪ್ರಶ್ನಿಸುತ್ತಿದ್ದಾರೆ.

• ನಿಮ್ಮನ್ನು ಜನ ಯಾಕೆ ಗೆಲ್ಲಿಸಬೇಕು?

ಮೂರು ಬಾರಿ ಸಂಸದರಾದ ಪಿ.ಸಿ. ಮೋಹನ್ ಅವರು ಅಭಿವೃದ್ಧಿಗಾಗಿ ಏನು ಕೆಲಸ ಮಾಡಿದ್ದಾರೆ? ಕೇಂದ್ರದಿಂದ ತೆರಿಗೆ ಹಂಚಿಕೆಯಲ್ಲಿ ಅನ್ಯಾಯ ಆದಾಗ, ಬರ ಪರಿಹಾರ ವಿಳಂಬವಾದಾಗ ಅವರು ಸಂಸತ್ತಿನ ಒಳಗೆ ಇದ್ದರಲ್ಲ, ರಾಜ್ಯದ ಪರ ಧ್ವನಿ ಎತ್ತಿದ್ದಾರಾ? ಬೆಂಗಳೂರು, ಕರ್ನಾಟಕದ ಅಭಿವೃದ್ಧಿಗೆ ನನ್ನಲ್ಲಿ ನನ್ನದೇ ಆದ ಚಿಂತನೆಗಳಿವೆ. ಸುಸ್ಥಿರ ಮೂಲಸೌಲಭ್ಯ ಅಭಿವೃದ್ಧಿ, ಶಿಕ್ಷಣ ಮತ್ತು ಆರೋಗ್ಯಕ್ಕೆ ಒತ್ತು ನೀಡುವ ಮೂಲಕ ಕಣ್ಣಿಗೆ ಕಾಣುವಂಥ ಕೆಲಸ ಮಾಡುತ್ತೇನೆ.

• ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರು ಕ್ಷೇತ್ರದಲ್ಲಿ ನಿರ್ಣಾಯಕ ಸಂಖ್ಯೆಯಲ್ಲಿದ್ದಾರೆಂಬ ಕಾರಣಕ್ಕೆ ನಿಮಗೆ ಕಾಂಗ್ರೆಸ್ ಟಿಕೆಟ್ ನೀಡಿದೆಯೇ?

ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರು ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ನಿಜ. ಅದೊಂದೇ ಕಾರಣ ಅಲ್ಲ. ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಮೂಲಕ ಸಾಮಾಜಿಕವಾಗಿಯೂ ನಾನು ಗುರುತಿಸಿಕೊಂಡಿದ್ದೇನೆ. ಜೊತೆಗೆ, ನನ್ನ ಸಾಮರ್ಥ್ಯವನ್ನು ಗಮನಿಸಿ ಪಕ್ಷ ಟಿಕೆಟ್ ನೀಡಿದೆ. ಅಲ್ಲದೆ, ಮುಸ್ಲಿಂ ಸಮುದಾಯಕ್ಕೆ ರಾಜಕೀಯ ಸ್ಥಾನಮಾನ ಕೊಡುವ ಪಕ್ಷ ಕಾಂಗ್ರೆಸ್ ಮಾತ್ರ. ಬಿಜೆಪಿಯವರು ಒಬ್ಬನೇ ಒಬ್ಬ ಮುಸ್ಲಿಂ ವ್ಯಕ್ತಿಗೆ ಅವಕಾಶ ನೀಡಿದೆಯೇ?

‘ಅರ್ಹತೆ ಮೇಲೆ ನನಗೆ ಟಿಕೆಟ್ ಸಿಕ್ಕಿದೆ’

• ಈ ಬಾರಿ ‘ಕುಟುಂಬ’ ಸದಸ್ಯರಿಗೆ ಬಿಜೆಪಿ ಹೆಚ್ಚಿನ ಸಂಖ್ಯೆಯಲ್ಲಿ ಟಿಕೆಟ್ ನೀಡಿದೆ. ನೀವೂ ಕೇಂದ್ರದ ಮಾಜಿ ಸಚಿವರ ಪುತ್ರ. ಈ ಬಗ್ಗೆ ಏನು ಹೇಳುತ್ತೀರಿ?

ನಾನು ಕೇಂದ್ರದ ಮಾಜಿ ಸಚಿವ (ಕೆ. ರೆಹಮಾನ್ ಖಾನ್) ಪುತ್ರ. ಆದರೆ, 20 ವರ್ಷಗಳಿಂದ ಪಕ್ಷದಲ್ಲಿ ಸಕ್ರಿಯವಾಗಿದ್ದೇನೆ. ಪಕ್ಷದಲ್ಲಿ ಹಲವು ಹುದ್ದೆಗಳನ್ನು ನಿಭಾಯಿಸಿದ್ದೇನೆ. ತೆಲಂಗಾಣ ಚುನಾವಣೆಯಲ್ಲಿ ಉಸ್ತುವಾರಿಯಾಗಿಯೂ ಕೆಲಸ ಮಾಡಿದ್ದೇನೆ. ಅರ್ಹತೆಯ ಮೇಲೆ ಪಕ್ಷ ನನಗೆ ಟಿಕೆಟ್ ನೀಡಿದೆಯೇ ಹೊರತು, ಕೇಂದ್ರದ ಮಾಜಿ ಸಚಿವರ ಪುತ್ರ ಎಂದು ಕೊಟ್ಟಿಲ್ಲ. ಹಾಗೆ ನೋಡಿದರೆ, ಬಿಜೆಪಿ ಕುಟುಂಬ ಪಕ್ಷ.

ಬಿಜೆಪಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಕಾಂಗ್ರೆಸ್ ಪ್ರಣಾಳಿಕೆ ಬಗ್ಗೆ ಪ್ರಚೋದನಾಕಾರಿ ಪೋಸ್ಟ್ ಪ್ರಕಟಿಸಿದ್ದ ಆರೋಪದಡಿ ಬಿಜೆಪಿಯ ‘ಎಕ್ಸ್’ ಖಾತೆ ನಿರ್ವಹಣೆ ಮಾಡುವವರ ವಿರುದ್ಧ ಮಲ್ಲೇಶ್ವರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಈ ಬಗ್ಗೆ ಮಾಹಿತಿ ನೀಡಿರುವ ಚುನಾವಣೆ ಆಯೋಗ, ‘ಬಿಜೆಪಿಯವರು ನಿರ್ವಹಣೆ ಮಾಡುವ ಎಕ್ಸ್ ಖಾತೆಯಲ್ಲಿ ಇತ್ತೀಚೆಗೆ ಪೋಸ್ಟ್ ಪ್ರಕಟಿಸಲಾಗಿತ್ತು. ಈ ಬಗ್ಗೆ ಪರಿಶೀಲನೆ ನಡೆಸಿದ್ದ ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ವಿಚಕ್ಷಣಾ ದಳದ ಅಧಿಕಾರಿಗಳು, ವರದಿ ಸಮೇತ ಪೊಲೀಸರಿಗೆ ದೂರು ನೀಡಿದ್ದಾರೆ’ ಎಂದು ತಿಳಿಸಿದೆ.

ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸರು, ‘ಚುನಾವಣೆಯ ವಿಚಕ್ಷಣಾ ತಂಡದ ಅಧಿಕಾರಿಗಳು ದೂರು ನೀಡಿದ್ದಾರೆ. ಐಪಿಸಿ 153 (ಎರಡು ಧರ್ಮಗಳ ಜನರ ನಡುವೆ ವೈಷಮ್ಯ ಸೃಷ್ಟಿಸಲು ಗಲಭೆಗೆ ಪ್ರಚೋದನೆ) ಆರೋಪದಡಿ ಬಿಜೆಪಿ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಹೇಳಿದರು.

‘ಕೈ’ ಅಭ್ಯರ್ಥಿಗಳಿಂದ ‘ಟೀಂ ಬೆಂಗಳೂರು’

‘ಟೀಂ ಬೆಂಗಳೂರು’ ಘೋಷಿಸಿದ ಸೌಮ್ಯಾ ರೆಡ್ಡಿ, ಎಂ.ವಿ. ರಾಜೀವ್ ಗೌಡ ಮತ್ತು ಕೆಪಿಸಿಸಿ ವಕ್ತಾರ ಎ.ಎನ್. ನಟರಾಜ್ ಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವು ಆಯ್ಕೆಯಾದರೆ ‘ಟೀಂ ಬೆಂಗಳೂರು’ ರಚಿಸಿಕೊಂಡು ಕೇಂದ್ರದಿಂದ ₹ 1 ಲಕ್ಷ ಕೋಟಿ ವಿಶೇಷ ಅನುದಾನವನ್ನು ಬೆಂಗಳೂರಿನ ಅಭಿವೃದ್ಧಿಗೆ ತರುತ್ತೇವೆ’ ಎಂದು ಬೆಂಗಳೂರು ಉತ್ತರ, ಕೇಂದ್ರ ಮತ್ತು ದಕ್ಷಿಣ ಲೋಕಸಭಾ ಕ್ಷೇತ್ರಗಳ ಕಾಂಗ್ರೆಸ್ ಅಭ್ಯರ್ಥಿಗಳು ಘೋಷಿಸಿದ್ದಾರೆ.

ಬೆಂಗಳೂರು ಉತ್ತರ ಕ್ಷೇತ್ರದ ಅಭ್ಯರ್ಥಿ ಎಂ.ವಿ. ರಾಜೀವ್ ಗೌಡ ಮತ್ತು ದಕ್ಷಿಣ ಕ್ಷೇತ್ರದ ಅಭ್ಯರ್ಥಿ ಸೌಮ್ಯಾ ರೆಡ್ಡಿ ಅವರು ಜಂಟಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಕೇಂದ್ರದ ಅಭ್ಯರ್ಥಿ ಚುನಾವಣಾ ಪ್ರಚಾರದಲ್ಲಿ ಇದ್ದುದರಿಂದ ಸುದ್ದಿಗೋಷ್ಠಿಗೆ ಗೈರಾದರು.

‘ಬೆಂಗಳೂರಿನ ಸಮಗ್ರ ಅಭಿವೃದ್ಧಿ ನಮ್ಮ ಗುರಿ. ದೂರದೃಷ್ಟಿ ಇಟ್ಟುಕೊಂಡು ಸುಸ್ಥಿರ ಅಭಿವೃದ್ಧಿಗೆ ನಾವು ಕಾರ್ಯಯೋಜನೆಗಳನ್ನು ರೂಪಿಸುತ್ತೇವೆ. ಕೇಂದ್ರದಿಂದ ವಿಶೇಷ ಅನುದಾನ ಸಿಕ್ಕಿದರೆ ರಸ್ತೆ, ಮೂಲಸೌಲಭ್ಯ, ಪರಿಸರ ಸಂರಕ್ಷಣೆ ಒತ್ತು ನೀಡುವ ಮೂಲಕ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡುತ್ತೇವೆ’ ಎಂದರು.

ಮಾವಳ್ಳಿಯಲ್ಲಿ ಪ್ರಚಾರ, ಕಾರ್ಮಿಕರ ಭೇಟಿ

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾ ರೆಡ್ಡಿ ಅವರು ಮಾವಳ್ಳಿಯಲ್ಲಿ ಪ್ರಚಾರ ನಡೆಸಿ ಮತಯಾಚಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾ ರೆಡ್ಡಿ ಅವರು ಮಾವಳ್ಳಿಯಲ್ಲಿ ಬುಧವಾರ ಪ್ರಚಾರ ನಡೆಸಿ, ಸಾರಿಗೆ ನೌಕರರು, ಚಾಲಕರು, ಕಾರ್ಮಿಕರು, ಗಿಗ್ ನೌಕರರು ಹಾಗೂ ಸ್ಥಳೀಯರನ್ನು ಭೇಟಿಯಾಗಿ ಮತಯಾಚಿಸಿದರು.

ಪ್ರಚಾರಕ್ಕೆ ಸಾರಿಗೆ ಸಚಿವರಾಗಿರುವ ತಂದೆ ರಾಮಲಿಂಗಾರೆಡ್ಡಿ ಹಾಗೂ ಸ್ಥಳೀಯ ಮುಖಂಡರು ಸಾಥ್ ನೀಡಿದರು.

‘ಶ್ರಮಿಕ ವರ್ಗದ ಪ್ರಗತಿ ನಮ್ಮ ಆದ್ಯತೆಯಾಗಿದೆ. ಪಕ್ಷ ಅಧಿಕಾರಕ್ಕೆ ಬಂದರೆ ಶ್ರಮಿಕ ನ್ಯಾಯ ಯೋಜನೆಯನ್ನು ಅನುಷ್ಠಾನಕ್ಕೆ ತರುವ ಮೂಲಕ ಆರೋಗ್ಯ ಭದ್ರತೆ, ಸಾಮಾಜಿಕ ಭದ್ರತೆ, ಜೀವ ವಿಮೆ ಮತ್ತು ಅಪಘಾತ ವಿಮೆಗಳನ್ನು ನೀಡಲಾಗುತ್ತದೆ’ ಎಂದು ಸೌಮ್ಯಾ ಭರವಸೆ ನೀಡಿದರು.

ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರ ಜತೆಗೆ ಸೌಮ್ಯಾ ರೆಡ್ಡಿ ಅವರು ಗುರು ರಾಘವೇಂದ್ರ ಬ್ಯಾಂಕಿನ ಸಂತ್ರಸ್ತ ಠೇವಣಿದಾರರ ಸಮಸ್ಯೆಗಳನ್ನು ಆಲಿಸಿದರು.

ದ್ರೌಪದಿದೇವಿ ಕರಗ ಶಕ್ತ್ಯೋತ್ಸವದಲ್ಲಿ (ಬೆಂಗಳೂರು ಕರಗ) ಮಂಗಳವಾರ ರಾತ್ರಿ ಭಾಗವಹಿಸಿದ್ದರು. ಉತ್ಸವಕ್ಕೆ ಆಗಮಿಸಿದ್ದ ಭಕ್ತರ ಜತೆಗೆ ಕೆಲಹೊತ್ತು ಸಮಯ ಕಳೆದ ಅವರು, ದೇವಸ್ಥಾನದ ಸಮಿತಿ ಸದಸ್ಯರ ಜತೆಗೆ ಸಮಾಲೋಚನೆ ನಡೆಸಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಪಿ.ಆರ್. ರಮೇಶ್, ಆರ್.ವಿ. ಯುವರಾಜ್ ಸಾಥ್ ನೀಡಿದರು.

‘ಉತ್ತರ’ ಕ್ಷೇತ್ರದಲ್ಲಿ ಶೋಭಾ ಮತಯಾಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ಅವರು ಬುಧವಾರ ಬಿರುಸಿನ ಪ್ರಚಾರ ನಡೆಸಿದರು.

ಕ್ಷೇತ್ರದ ಹಲವು ಪ್ರದೇಶಗಳಲ್ಲಿ ತೆರೆದ ವಾಹನ ಹಾಗೂ ಕಾಲ್ನಡಿಗೆಯಲ್ಲಿ ಸಂಚರಿಸಿದ ಶೋಭಾ, ‘ದೇಶಕ್ಕೆ ಮತ್ತೊಮ್ಮೆ ಮೋದಿ. ಈ ಬಾರಿಯೂ ಬಿಜೆಪಿಗೆ ಮತ ನೀಡಿ’ ಎಂದು ಮತದಾರರನ್ನು ಕೋರಿದರು. ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು–ಕಾರ್ಯಕರ್ತರು ಶೋಭಾ ಅವರ ಪ್ರಚಾರಕ್ಕೆ ಸಾಥ್ ನೀಡಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಕಲ್ಲಳ್ಳಿ ವೀರಭದ್ರಸ್ವಾಮಿ ದೇವಸ್ಥಾನ, ಸೂಲಿಕೆರೆ, ಚುಂಚನಕುಪ್ಪೆ, ಚಿಕ್ಕನಹಳ್ಳಿ, ಚಂದ್ರಪ್ಪ ಸರ್ಕಲ್ ಹಾಗೂ ಚೋಳನಾಯಕನಹಳ್ಳಿಯಲ್ಲಿ ಮುಖಂಡರ ಸಭೆ ನಡೆಸಿ ಶೋಭಾ ಮತಯಾಚಿಸಿದರು. ವಿದ್ಯಾರಣ್ಯಪುರ ವಾರ್ಡ್‌ನಲ್ಲಿ ಹಿರಿಯ ನಾಗರಿಕರ ವೇದಿಕೆಯಿಂದ ಆಯೋಜಿಸಿದ್ದ ಸಭೆಯಲ್ಲಿ ಶೋಭಾ ಪಾಲ್ಗೊಂಡಿದ್ದರು. ಕ್ಷೇತ್ರದಲ್ಲಿರುವ ಹಲವು ಅಪಾರ್ಟ್‌ಮೆಂಟ್ ಸಮುಚ್ಚಯಗಳಿಗೂ ಶೋಭಾ ಭೇಟಿ ನೀಡಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ಶೋಭಾ ಕರಂದ್ಲಾಜೆ ಅವರು ಪ್ರಚಾರ ಮಾಡಿದರು

ದಕ್ಷಿಣದಲ್ಲಿ ತೇಜಸ್ವಿ ಸೂರ್ಯ ಮತಯಾಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರ, ಬಿಟಿಎಂ ಲೇಔಟ್, ಗೋವಿಂದರಾಜ ನಗರ ಹಾಗೂ ವಿಜಯನಗರಗಳಲ್ಲಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ಹಾಗೂ ಬೆಂಬಲಿಗರು ಬುಧವಾರ ಬೈಕ್ ರ್‍ಯಾಲಿ ನಡೆಸಿ, ಮತಯಾಚಿಸಿದರು.

ಜಯನಗರದಲ್ಲಿ ಶಾಸಕ ಸಿ.ಕೆ. ರಾಮಮೂರ್ತಿ ಅವರು ಬೆಂಬಲಿಗರೊಂದಿಗೆ ಬೈಕ್ ರ್‍ಯಾಲಿ ನಡೆಸಿದರು. ‘ದೇಶಕ್ಕೆ ಮೋದಿ ದಕ್ಷಿಣಕ್ಕೆ ಸೂರ್ಯ’ ಎಂಬ ಘೋಷಣೆಯೊಂದಿಗೆ ಶಾಕಾಂಬರಿ ನಗರ ವಾರ್ಡ್, ಜಯನಗರ 8ನೇ ಬಡಾವಣೆ, ಸಿಆರ್ ಲೇಔಟ್, ವೈಶ್ಯ ಬ್ಯಾಂಕ್ ಕಾಲೊನಿ, ಗುರುಮೂರ್ತಪ್ಪ ಗಾರ್ಡನ್ ಸುತ್ತಮುತ್ತ ರಾಜ್ಯ ಒಬಿಸಿ ಪ್ರಧಾನ ಕಾರ್ಯದರ್ಶಿ ಬಿ. ಸೋಮಶೇಖರ್ ಅವರ ನೇತೃತ್ವದಲ್ಲಿ ಪಾದಯಾತ್ರೆ ಮುಖಾಂತರ ಮನೆ ಮನೆಗೆ ತೆರಳಿ ಮತಯಾಚಿಸಿದರು.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ಅವರ ಪರವಾಗಿ ಶಾಸಕ ಸಿ.ಕೆ. ರಾಮಮೂರ್ತಿ ನೇತೃತ್ವದಲ್ಲಿ ಜಯನಗರದಲ್ಲಿ ಕಾರ್ಯಕರ್ತರು ಬೈಕ್ ರ್‍ಯಾಲಿ ನಡೆಸಿದರು

ಬಿಟಿಎಂ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆದ ರ್‍ಯಾಲಿಯಲ್ಲಿ ವಿಧಾನಪರಿಷತ್ ಸದಸ್ಯ ಗೋಪಿನಾಥ್ ರೆಡ್ಡಿ, ಮುಖಂಡರಾದ ಶ್ರೀಧರ್ ರೆಡ್ಡಿ, ಸರಸ್ವತಮ್ಮ, ರಾಜೇಂದ್ರ ರೆಡ್ಡಿ, ಸುದರ್ಶನ್ ರೆಡ್ಡಿ, ಸುಧಾಕರ ರೆಡ್ಡಿ ಉಪಸ್ಥಿತರಿದ್ದರು.

ಗೋವಿಂದರಾಜ ನಗರ, ವಿಜಯನಗರದಲ್ಲಿ ಬೈಕ್ ರ್‍ಯಾಲಿ ಹಾಗೂ ಪ್ರಚಾರ ಸಭೆಯಲ್ಲಿ ತೇಜಸ್ವಿ ಸೂರ್ಯ ಮತಯಾಚಿಸಿದರು. ‘ದೇಶದ ಪ್ರಧಾನಿಯನ್ನು ಚುನಾಯಿಸುವ ಸಂದರ್ಭದಲ್ಲಿ, ಕಳೆದ 10 ವರ್ಷಗಳಲ್ಲಿ ಮೋದಿ ಸರ್ಕಾರದ ಅವಧಿಯಲ್ಲಿನ ಸುಧಾರಣೆಗಳನ್ನು ಪರಿಗಣಿಸಿ, ಈ ಬಾರಿ ಬಿಜೆಪಿಯನ್ನು ಅತ್ಯಧಿಕ ಮತಗಳ ಅಂತರದಲ್ಲಿ ಗೆಲ್ಲಿಸಿ’ ಎಂದರು.

‘ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವವೆನಿಸಿರುವ ಭಾರತದ ಪ್ರಸ್ತುತ ಸಾರ್ವತ್ರಿಕ ಚುನಾವಣೆ ಮೇಲೆ ವಿಶ್ವದ ಗಮನ ನೆಟ್ಟಿದೆ. ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾಯಿಸುವುದರ ಮೂಲಕ ಪ್ರಜಾಪ್ರಭುತ್ವವನ್ನು ಮತ್ತಷ್ಟು ಬಲಪಡಿಸಬೇಕು. ಮತದಾನದ ದಿನವನ್ನು ರಜೆಯೆಂದು ಭಾವಿಸದೆ, ಎಲ್ಲರೂ ಮತಕೇಂದ್ರಗಳಿಗೆ ತೆರಳಿ ತಪ್ಪದೇ ತಮ್ಮ ಹಕ್ಕು ಚಲಾಯಿಸಬೇಕು’ ಎಂದು ತೇಜಸ್ವಿ ಸೂರ್ಯ ಮನವಿ ಮಾಡಿದರು.

ಉಮೇಶ್ ಶೆಟ್ಟಿ, ವಿಶ್ವನಾಥ ಗೌಡ, ಎಚ್. ರವೀಂದ್ರ , ಟಿ.ವಿ. ಕೃಷ್ಣ, ಹನುಮಂತಯ್ಯ ಉಪಸ್ಥಿತರಿದ್ದರು.

‘ಮತ ಹಾಕಿ, ಉಚಿತ ತಿಂಡಿ ತಿನ್ನಿ’

ಬೆಂಗಳೂರು: ನಗರದಲ್ಲಿ ಮತದಾನ ಪ್ರಮಾಣ ಹೆಚ್ಚಿಸುವ ಉದ್ದೇಶದಿಂದ ನಗರದ ಕೆಲ ಹೋಟೆಲ್‌ಗಳ ಮಾಲೀಕರು ರಿಯಾಯಿತಿ ಹಾಗೂ ಉಚಿತ ಆಹಾರ ನೀಡುವುದಾಗಿ ಘೋಷಿಸಿವೆ.

ನಗರದಲ್ಲಿ ಮತದಾನವನ್ನು ಉತ್ತೇಜಿಸುವ ಉದ್ದೇಶ ದಿಂದ ನೃಪತುಂಗ ರಸ್ತೆಯಲ್ಲಿರುವ ಭಾರತೀಯ ರಿಸರ್ವ್ ಬ್ಯಾಂಕ್ ಬಳಿಯ ಹೋಟೆಲ್ ನಿಸರ್ಗ ಗ್ರ್ಯಾಂಡ್, ಮತದಾನ ಮಾಡಿ ಬಂದವರಿಗೆ ಉಚಿತ ತಿಂಡಿ ನೀಡುವುದಾಗಿ ಘೋಷಿಸಿದೆ.

‘ಏಪ್ರಿಲ್ 26ರಂದು ನಡೆಯುವ ಲೋಕಸಭಾ ಚುನಾವಣೆಯಲ್ಲಿ ಮತದಾರರು ಮತದಾನ ಮಾಡಿದ ಗುರುತು ತೋರಿಸಿ ನಿಸರ್ಗ ಗ್ರ್ಯಾಂಡ್‌ನಲ್ಲಿ ಉಚಿತವಾಗಿ ಬೆಣ್ಣೆ ಖಾಲಿ ದೋಸೆ, ತುಪ್ಪದ ಲಾಡು ಮತ್ತು ತಂಪು ಪಾನಕವನ್ನು ಸವಿಯಬಹುದು. ಇದೊಂದು ಅಪ್ಪಟ ಸಾಮಾಜಿಕ ಕಳಕಳಿಯುಳ್ಳ ರಾಜಕೀಯೇತರ ಕಾರ್ಯಕ್ರಮವಾಗಿದೆ. ಮತದಾನದ ಉತ್ತೇಜಿಸುವ ಸಲುವಾಗಿ ಈ ಕೊಡುಗೆ ನೀಡಲಾಗಿದೆ’ ಎಂದು ಹೋಟೆಲ್‌ನ ಮಾಲೀಕ ಎಸ್.ಪಿ. ಕೃಷ್ಣರಾಜು ತಿಳಿಸಿದರು.

2023ರಲ್ಲಿ ನಡೆದ ವಿಧಾನಸಭೆ ಚುನಾವಣೆಯ ದಿನದಂದು ನಿಸರ್ಗ ಗ್ರ್ಯಾಂಡ್ ಹೋಟೆಲ್‌ಗೆ 51 ಸಾವಿರ ಜನರು ಭೇಟಿ ನೀಡಿದ್ದರು. ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ಈ ಸಂಖ್ಯೆ ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಮಾಹಿತಿ ನೀಡಿದರು.

ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ. ರಾವ್, ‘ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ನಗರದ ಮತದಾನ ಪ್ರಮಾಣ ಶೇ 54ರಷ್ಟು ಆಗಿತ್ತು. ಈ ಬಾರಿ ಮತದಾನ ಪ್ರಮಾಣ ಹೆಚ್ಚಿಸಲು ಮತ್ತು ಪ್ರಜಾಪ್ರಭುತ್ವದ ಮಹತ್ವ ಸಾರುವ ಉದ್ದೇಶದಿಂದ ನಗರದ ಕೆಲ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಉಚಿತ ತಿಂಡಿ ಹಾಗೂ ರಿಯಾಯಿತಿ ನೀಡುವುದಾಗಿ ಘೋಷಿಸಿದ್ದು, ನಮ್ಮ ಈ ಕಾರ್ಯಕ್ಕೆ ಹೈಕೋರ್ಟ್ ಶ್ಲಾಘಿಸಿದೆ’ ಎಂದು ತಿಳಿಸಿದರು.

ಬೇಗೂರಿನ ಅಯ್ಯಂಗಾರ್ಸ್ ಓವನ್ ಫ್ರೆಶ್ ಎಲ್ಲ ಉತ್ಪನ್ನಗಳ ಮೇಲೆ ಶೇ 10ರಷ್ಟು ರಿಯಾಯಿತಿ ನೀಡುವುದಾಗಿ ಘೋಷಿಸಿದೆ. ಮತದಾರರು ಮತದಾನ ಮಾಡಿದ ಗುರುತು ತೋರಿಸಿದವರಿಗೆ ಈ ರಿಯಾಯಿತಿ ಸಿಗಲಿದೆ ಎಂದು ಓವನ್ ಫ್ರೆಶ್ ಸಂಸ್ಥಾಪಕ ಜಿ.ಕೆ. ಪ್ರಮೋದ್ ತಿಳಿಸಿದರು.

‘ಬಹುಮತದಿಂದ ಮಂಜುನಾಥ್ ಗೆಲ್ಲಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್. ಮಂಜುನಾಥ್ ಅವರನ್ನು ಲೋಕಸಭಾ ಚುನಾವಣೆಯಲ್ಲಿ ಬಹುಮತದಿಂದ ಆಯ್ಕೆ ಮಾಡಬೇಕು’ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಎಸ್. ವೀರಯ್ಯ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಲಕ್ಷಾಂತರ ಹೃದ್ರೋಗಿಗಳಿಗೆ ಜೀವದಾನ ನೀಡಿ, ನೊಂದವರ ಕಣ್ಣೀರು ಒರೆಸಿದ್ದ ಡಾ.ಸಿ.ಎನ್. ಮಂಜುನಾಥ್ ಅವರನ್ನು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಮತದಾರರು ಆಯ್ಕೆ ಮಾಡುವ ಮೂಲಕ ದೇಶ ಸೇವೆ ಮಾಡಲು ಅವಕಾಶ ಕಲ್ಪಿಸಬೇಕು’ ಎಂದು ಮನವಿ ಮಾಡಿದರು.

ವಿಶ್ವ ಕನ್ನಡ ಕಲಾ ಕೂಟದ ಅಧ್ಯಕ್ಷ ಹಲ್ಲೇಗೆರೆ ಕೃಷ್ಣ, ‘ಮಂಜುನಾಥ್ ಅವರು, ತಮ್ಮ ಸರಳ ಸೌಮ್ಯ ಸ್ವಭಾವದಿಂದಲೇ ಜನಪ್ರಿಯರಾಗಿದ್ದಾರೆ. ಸರ್ಕಾರಿ ಸ್ವಾಮ್ಯದ ಜಯದೇವ ಹೃದ್ರೋಗ ಸಂಸ್ಥೆಯನ್ನು ವಿಶ್ವಮಟ್ಟಕ್ಕೆ ಪರಿಚಯಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಆದ್ದರಿಂದ, ಚುನಾವಣೆಯಲ್ಲಿ ಅವರನ್ನು ಆಯ್ಕೆ ಮಾಡಬೇಕು’ ಎಂದು ಹೇಳಿದರು.

ವಿಶ್ವ ಕನ್ನಡ ಕಲಾ ಕೂಟದ ಉಪಾಧ್ಯಕ್ಷ ಸುರೇಶ್ ಬಾಬು ಸುದ್ದಿಗೋಷ್ಠಿಯಲ್ಲಿದ್ದರು.

‘ಆಮಿಷಕ್ಕೆ ಒಳಗಾಗದೆ ಮತ ಹಾಕಲು ಮನವಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾವುದೇ ರೀತಿಯ ಆಮಿಷಕ್ಕೆ ಒಳಗಾಗದೆ ಸ್ವಇಚ್ಛೆಯಿಂದ ಮತದಾನ ಮಾಡಬೇಕು’ ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಅವರು ಮತದಾರರಿಗೆ ಮನವಿ ಮಾಡಿದರು.

ಮಹದೇವಪುರದಲ್ಲಿ ಕೃಪಾನಿಧಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್‌ನಲ್ಲಿ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಲೋಕಸಭಾ ಚುನಾವಣೆಯಲ್ಲಿ ನಾವೆಲ್ಲರೂ ಮತದಾನದ ಪ್ರಮಾಣವನ್ನು ಹೆಚ್ಚಿಸಬೇಕು. ನಿಮಗೆ ಮತದಾನ ಮಾಡುವ ಮನಸ್ಸಿದ್ದು, ಅದರ ಬಗ್ಗೆ ಅರಿವಿಲ್ಲ ಎಂದಾದರೆ ‘ವೋಟರ್ ಹೆಲ್ಪ್ ಲೈನ್’ ತಂತ್ರಾಂಶವನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು. ನಂತರ ತಂತ್ರಾಂಶದಲ್ಲಿ ನಿಮ್ಮ ಮತದಾರರ ಗುರುತಿನ ಚೀಟಿಯ ಸಂಖ್ಯೆ ನಮೂದಿಸಿದರೆ, ಎಲ್ಲಾ ಮಾಹಿತಿ ನಿಮಗೆ ಸಿಗಲಿದೆ’ ಎಂದು ಹೇಳಿದರು.

‘ನಿಮ್ಮ ಹೆಸರು ಮತದಾರರ ಪಟ್ಟಿಯಲ್ಲಿದ್ದು, ನೀವು ಮತದಾನ ಮಾಡದಿದ್ದರೆ ತಪ್ಪಾಗುತ್ತದೆ. ಇನ್ನು ನೀವು ಆಮಿಷಕ್ಕೊಳಗಾಗಿ ಮತದಾನ ಮಾಡಿದರೆ ಅದು ಅಪರಾಧವಾಗಲಿದೆ. ನಿಮಗೆ ಉತ್ತಮ ಅಭ್ಯರ್ಥಿಯನ್ನು ಆಯ್ಕೆ ಮಾಡುವ ವಿವೇಚನೆಯಿದ್ದು, ನಿಮ್ಮ ವಿವೇಚನೆಯಿಂದ ಮತದಾನ ಮಾಡಬೇಕು’ ಎಂದು ತಿಳಿಸಿದರು.

‘ಮತದಾನಕ್ಕೆ ಆಮಿಷ ನೀಡುತ್ತಿರುವ ಬಗ್ಗೆ ನಿಮಗೆ ಮಾಹಿತಿ ಲಭ್ಯವಾದರೆ, ‘ಸಿವಿಜಿಲ್ ’ತಂತ್ರಾಂಶದಲ್ಲಿ ಅದನ್ನು ನಮೂದಿಸಬೇಕು. ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸೂಕ್ತ ಕ್ರಮ ಕೈಗೊಳ್ಳಲಿದ್ದಾರೆ’ ಎಂದರು.

‘ಬೆಂಗಳೂರಿನಲ್ಲಿ ನಿಮ್ಮ ಮತ ಇಲ್ಲವಾದರೆ, ನಿಮ್ಮ ಊರುಗಳಿಗೆ ತೆರಳಿ ಮತದಾನ ಚಲಾಯಿಸುವ ಮೂಲಕ ಪ್ರಜಾಪ್ರಭುತ್ವಕ್ಕೆ ಗೌರವ ತರುವ ಕೆಲಸ ಮಾಡಬೇಕು’ ಎಂದು ಹೇಳಿದರು.

ಮತಗಟ್ಟೆಗಳಿಗೆ ಇಂದು ಸಿಬ್ಬಂದಿ

ಬೆಂಗಳೂರು: ನಗರದಲ್ಲಿರುವ 8,984 ಮತಗಟ್ಟೆಗಳಲ್ಲಿ ಏ.26ರಂದು ಮತದಾನ ನಡೆಯಲಿದ್ದು, ಎಲ್ಲ ಸಿಬ್ಬಂದಿ ಏ.25ರಂದು ಬೆಳಿಗ್ಗೆ ಮಸ್ಟರಿಂಗ್ ಕೇಂದ್ರಗಳಿಂದ ಸಾಮಗ್ರಿಗಳನ್ನು ಸಂಗ್ರಹಿಸಿ ಮತಗಟ್ಟೆಗೆ ತೆರಳಲಿದ್ದಾರೆ.

ಎಲ್ಲಾ ಮಸ್ಟರಿಂಗ್ ಕೇಂದ್ರಗಳಲ್ಲೂ ಚುನಾವಣಾ ಕರ್ತವ್ಯನಿರತ ಮತದಾರರಿಗಾಗಿ ಮತದಾನ ಸೌಲಭ್ಯ ಕೇಂದ್ರ ತೆರೆಯಲಾಗಿದೆ.

ಪ್ರಚಾರ ಸಭೆಯಲ್ಲಿ ಬೆಂಗಳೂರು ಉತ್ತರ ಕಾಂಗ್ರೆಸ್ ಅಭ್ಯರ್ಥಿ ರಾಜೀವ್ ಗೌಡ

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕುಟುಂಬದ ಕುಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕುಟುಂಬದ ಕುಡಿ ನಾನು. ನನಗೆ ಪ್ರಜಾಪ್ರಭುತ್ವ, ಸಂವಿಧಾನದ ಬಗ್ಗೆ ಬದ್ಧತೆ ರಕ್ತಗತವಾಗಿ ಬಂದಿದೆ. ಬ್ರಿಟಿಷರಿಗೆ ತಪ್ಪೊಪ್ಪಿಗೆ ಬರೆದುಕೊಟ್ಟವರು ಕಟ್ಟಿದ ಪಕ್ಷದ ಅಭ್ಯರ್ಥಿಗೆ ಈ ಬದ್ಧತೆ ಇರಲು ಸಾಧ್ಯವೇ ಎಂದು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ವಿ. ರಾಜೀವ್ ಗೌಡ ಪ್ರಶ್ನಿಸಿದರು.

ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರದ ತರಕಾರಿ ಮಾರುಕಟ್ಟೆ, ಚಿಕ್ಕದೇವಸಂದ್ರ, ಟಿ.ಸಿ. ಪಾಳ್ಯ, ಕಲ್ಕೆರೆ ಮುಖ್ಯರಸ್ತೆ ಸುತ್ತಮುತ್ತ ಆಯೋಜಿಸಿದ್ದ ಪ್ರಚಾರ ಸಭೆಗಳಲ್ಲಿ ಅವರು ಮಾತನಾಡಿದರು.

‘ಈ ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದ ಕೇಶವ ಅಯ್ಯಂಗಾರ್, ಕೆಂಗಲ್ ಹನುಮಂತಯ್ಯ, ಜಾಫರ್ ಷರೀಫರಂತಹ ಸಜ್ಜನರು ನೀಡಿದ್ದ ಕೊಡುಗೆಗಳು ಈಗಲೂ ಜನಮಾನಸದಲ್ಲಿ ಉಳಿದಿದೆ. ಆದರೆ, ಇತ್ತೀಚಿನ ಎರಡು ದಶಕದಲ್ಲಿ ನಿಮಗೆಲ್ಲ ಸುಳ್ಳು ಭರವಸೆ ನೀಡಿ ಹೋದ ಸಂಸದರು ಏನೂ ಮಾಡಿಲ್ಲ. ಅವರಂತೆ ನಾನು ಮೋಸ ಮಾಡುವ, ಮೈಗೆ ಎಣ್ಣೆ ಹಚ್ಚಿಕೊಂಡು ತಪ್ಪಿಸಿಕೊಳ್ಳುವ ಜಾಯಮಾನದವನಲ್ಲ. ನಿಮ್ಮೆಲ್ಲರ ಧ್ವನಿಯಾಗಿ ಕೆಲಸ ಮಾಡುತ್ತೇನೆ’ ಎಂದು ತಿಳಿಸಿದರು.

ರಾಜರಾಜೇಶ್ವರಿನಗರ ವರದಿ: ಹೆಮ್ಮಿಗೆಪುರ ವಾರ್ಡ್ ವ್ಯಾಪ್ತಿಯಲ್ಲಿ ಎಂ.ವಿ. ರಾಜೀವ್ ಗೌಡ ಮತಯಾಚಿಸಿದರು. ‘ನನ್ನ ದೊಡ್ಡಪ್ಪ ಎಂ.ವಿ. ಕೃಷ್ಣಪ್ಪ ಅವರು ಜನಪ್ರತಿನಿಧಿಯಾಗಿದ್ದಾಗ ಹೈನು ಮತ್ತು ರೇಷ್ಮೆ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಿದ್ದರು. ಇದರಿಂದಾಗಿ ರೈತರು, ಯುವಜನರು, ಹೆಣ್ಣು ಮಕ್ಕಳು ಸ್ವಯಂ ಉದ್ಯೋಗ ಕಂಡುಕೊಂಡು ಉತ್ತಮ ಜೀವನ ಸಾಗಿಸುತ್ತಿದ್ದಾರೆ’ ಎಂದು ನೆನಪು ಮಾಡಿಕೊಂಡರು.

ನರೇಂದ್ರಮೋದಿ ಅವರು ಯಾವುದೇ ಅಭಿವೃದ್ಧಿ ಕೆಲಸ ಮಾಡದೆ, ಸುಳ್ಳು ಹೇಳುತ್ತಾ 10 ವರ್ಷ ಅಧಿಕಾರ ನಡೆಸಿದರು. ಈಗ ಮೋದಿ ಗ್ಯಾರಂಟಿ ಎಂದು ಹೇಳಿಕೊಂಡು ಮತದಾರರನ್ನು ದಾರಿ ತಪ್ಪಸುತ್ತಿದ್ದಾರೆ ಎಂದು ಟೀಕಿಸಿದರು.

ಕಾಂಗ್ರೆಸ್ ಮುಖಂಡ ಬಿ.ಆರ್. ಶಿವಮಾದಯ್ಯ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಎಂ. ಸದಾನಂದ, ಪಾಲಿಕೆ ಮಾಜಿ ಸದಸ್ಯ ಆರ್ಯ ಶ್ರೀನಿವಾಸ್ ಲಕ್ಕಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಮೃತ್ ಗೌಡ, ಬೆಂಗಳೂರು ಉತ್ತರ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ, ರೋಹಿಣಿ ಸುರೇಶ್, ಬ್ಲಾಕ್ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಮಮತಾ, ಕಾಂಗ್ರೆಸ್ ಮುಖಂಡ ಚಿಕ್ಕೇಗೌಡನ ಪಾಳ್ಯ, ರಾಮು ಭಾಗವಹಿಸಿದ್ದರು.

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ವಿ. ರಾಜೀವ್ ಗೌಡ ಕೆ.ಆರ್.ಪುರಂ ಕ್ಷೇತ್ರ ವ್ಯಾಪ್ತಿಯಲ್ಲಿ ಬುಧವಾರ ಪ್ರಚಾರ ನಡೆಸಿದರು

‘ಒಮ್ಮೆ ನನಗೂ ಅವಕಾಶ ಮಾಡಿಕೊಡಿ’

ರಾಜರಾಜೇಶ್ವರಿನಗರ: ಈ ಕ್ಷೇತ್ರದ ಅಭಿವೃದ್ಧಿಗೆ ನಮ್ಮ ಕುಟುಂಬ ಸೇವೆ ಮಾಡಿದ್ದು, ಮೂಲ ಸೌಕರ್ಯ ನೀಡಲು, ಒಮ್ಮೆ ನನಗೂ ಅವಕಾಶ ಮಾಡಿಕೊಡಿ ಎಂದು ಬೆಂಗಳೂರು ಉತ್ತರ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಎಂ.ವಿ. ರಾಜೀವ್‌ಗೌಡ ಅವರು ಮನವಿ ಮಾಡಿದರು.

ಹೆಮ್ಮಿಗೆಪುರ ವಾರ್ಡ್ ವ್ಯಾಪ್ತಿಯಲ್ಲಿ ಮತಯೊಚನೆಮಾಡಿದ ಅವರು ನಮ್ಮ ದೊಡ್ಡಪ್ಪ ಎಂ.ವಿ. ಕೃಷ್ಣಪ್ಪ ಅವರು ಹೈನು ಮತ್ತು ರೇಷ್ಮೆ ತರುವಲ್ಲಿ ಪ್ರಮುಖ ಪಾತ್ರವಹಿಸಿದರಿಂದ ರೈತರು, ಯುವಜನಾಂಗ, ಹೆಣ್ಣು ಮಕ್ಕಳು ಸ್ವಯಂ ಉದ್ಯೋಗ ಕಂಡು ಕೊಂಡು ಉತ್ತಮ ಜೀವನಸಾಗಿಸುತ್ತಿದ್ದಾರೆ. ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರ ಹಿಡಿಯುವುದು ಖಚಿತವಾಗಿದ್ದು. ಕೇಂದ್ರ, ರಾಜ್ಯದಲ್ಲಿ ಒಂದೇ ಸರ್ಕಾರ ವಿದ್ದರೆ, ಬೆಂಗಳೂರು ನಗರವನ್ನು ಮಾದರಿ ಕ್ಷೇತ್ರವಾಗಲು ಸಾಧ್ಯ ಆದರಿಂದ ಕಾಂಗ್ರೆಸ್ ಗೆಲ್ಲಿಸುವ ಮೂಲಕ ಅಭಿವೃದ್ದಿ ಬೆಂಬಲಿಸಿ ಹತ್ತು ವರ್ಷದಲ್ಲಿ ನರೇಂದ್ರಮೋದಿ ಅವರು ಯಾವುದೇ ಅಭಿವೃದ್ಧಿ ಕೆಲಸ ಮಾಡದೆ, ಸುಳ್ಳು ಹೇಳುತ ಮೋದಿ ಗ್ಯಾರಂಟಿ ಎಂದು ಹೇಳಿಕೊಂಡು ಮತದಾರರನ್ನು ದಾರಿ ತಪ್ಪಸುತ್ತಿದ್ದಾರೆ ಎಂದು ಟೀಕಿಸಿದರು.

ಕಾಂಗ್ರೆಸ್ ಮುಖಂಡ ಬಿ.ಆರ್, ಶಿವಮಾದಯ್ಯ ನುಡಿದಂತೆ ನಡೆಯುವ ಸರ್ಕಾರ ಕಾಂಗ್ರೆಸ್, ಕೇಂದ್ರದಲ್ಲಿಯೂ ಅಧಿಕಾರಕ್ಕೆ ಬಂದರೆ ಹೆಣ್ಣು ಮಕ್ಕಳಿಗೆ ವಾರ್ಷಿಕ ಒಂದು ಲಕ್ಷ, ಉದ್ಯೋಗ, 25ಲಕ್ಷ ಉಚಿತ ಆರೋಗ್ಯವಿಮೆ. ರೈತರ ಸಾಲಮನ್ನಾ, ಕೃಷಿ ಅಭಿವೃದ್ದಿಗಾಗಿ ಕಾಂಗ್ರೆಸ್‌ಗೆ ಮತ ನೀಡಿ ಎಂದರು.

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಎಂ,ಸದಾನಂದ, ಪಾಲಿಕೆ ಮಾಜಿ ಸದಸ್ಯ ಆರ್ಯ ಶ್ರೀನಿವಾಸ್ ಲಕ್ಕಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಮೃತ್ ಗೌಡ, ಬೆಂಗಳೂರು ಉತ್ತರ ಜಿಲ್ಲಾ ಮಹಿಳ ಕಾಂಗ್ರೆಸ್ ಅಧ್ಯಕ್ಷೆ, ರೋಹಿಣಿ ಸುರೇಶ್, ಬ್ಲಾಕ್ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಮಮತ, ಕಾಂಗ್ರೆಸ್ ಮುಖಂಡ ಚಿಕ್ಕೇಗೌಡನ ಪಾಳ್ಯ, ರಾಮು ಇದ್ದರು.

ಪಿ.ಸಿ. ಮೋಹನ್ ಮತಯಾಚನೆ

ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪಿ.ಸಿ. ಮೋಹನ್ ಅವರು ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದಲ್ಲಿ ರ್‍ಯಾಲಿ ನಡೆಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪಿ.ಸಿ. ಮೋಹನ್ ಅವರು ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ಎಚ್‌ಬಿಆರ್‌ಆರ್ ವಾರ್ಡ್‌ನ ಫಾರೆಸ್ಟ್ ಪಾರ್ಕ್, ಕಮ್ಮನಹಳ್ಳಿಯಲ್ಲಿ ಹಾಗೂ ಮಾರುತಿ ಸೇವಾನಗರ ವಾರ್ಡ್‌ನ ನಾಗಯ್ಯನಪಾಳ್ಯದಲ್ಲಿ ಬುಧವಾರ ಚುನಾವಣಾ ಪ್ರಚಾರ ನಡೆಸಿದರು.

ತಮಿಳು ಭಾಷಿಕರು ಹೆಚ್ಚಿರುವ ಈ ಪ್ರದೇಶದಲ್ಲಿ ಪುದುಚೇರಿ ಗೃಹ ಸಚಿವರಾದ ಎ. ನಮಶಿವಾಯಂ, ಮಂಡಲ ಅಧ್ಯಕ್ಷರಾದ ಮುನಿರಾಜ ಕಾರ್ಣಿಕ್, ಎಂ.ಸಿ.ಶ್ರೀನಿವಾಸ್, ಗೋವಿಂದರಾಜ್, ಮಾಜಿ ಕಾರ್ಪೊರೇಟರ್ ಮಂಜುನಾಥ್, ಮೋಹನ್ ಪರ ಮತಯಾಚನೆ ಮಾಡಿದರು.

‘ಪ್ರಧಾನಿ ಮೋದಿಯವರು ಬೆಂಗಳೂರಿಗಾಗಿ ಹೊಂದಿರುವ ‘ವಿಷನ್’ ಅನ್ನು ಕಾರ್ಯರೂಪಕ್ಕೆ ತರುವ ನನ್ನ ಪ್ರಯತ್ನವನ್ನು ಮುಂದುವರಿಸುತ್ತೇನೆ. ಜನಕಲ್ಯಾಣ ಯೋಜನೆಗಳು ಎಲ್ಲ ಫಲಾನುಭವಿಗಳಿಗೆ ದೊರಕುವಂತೆ ಮತ್ತು ಜನರ ಮನೆ ಬಾಗಿಲಿಗೆ ತಲುಪುವಂತೆ ಮಾಡಲು ನಾನು ಶ್ರಮಿಸುತ್ತೇನೆ’ ಎಂದು ಮೋಹನ್ ಭರವಸೆ ನೀಡಿದರು.

‘ಮೋದಿಯವರು ಹತ್ತು ವರ್ಷಗಳಲ್ಲಿ ಮೆಟ್ರೊ ರೈಲು, ಸಾರಿಗೆ ವ್ಯವಸ್ಥೆಯ ಆಧುನೀಕರಣ ಸೇರಿದಂತೆ ವಿಶ್ವ ದರ್ಜೆಯ ಮೂಲಸೌಕರ್ಯ ನಿರ್ಮಾಣ ಮತ್ತು ಆ ಮೂಲಕ ಮಹಿಳೆಯರು ಮತ್ತು ಯುವಕರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಿ ಬೆಂಗಳೂರಿನ ಜನತೆಯ ಜೀವನದ ಗುಣಮಟ್ಟವನ್ನು ಸುಧಾರಿಸಲು ಕೊಡುಗೆ ನೀಡಿದ್ದಾರೆ’ ಎಂದರು.

ಸ್ಪರ್ಧಾ ವಾಣಿ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ರುಬೆಲ್ಲಾ ಜಾಗೃತಿಗೆ ಪ್ರಶಸ್ತಿ

ಯು.ಟಿ.ಆಯಿಶಾ ಫರ್ಜಾನ

- ದಡಾರ ಮತ್ತು ರುಬೆಲ್ಲಾ ರೋಗಗಳ ವಿರುದ್ಧ ಹೋರಾಡಿದ ಭಾರತದ ಅವಿರತ ಪ್ರಯತ್ನಗಳನ್ನು ಗುರುತಿಸಿ, ಮಾರ್ಚ್ 6, 2024 ರಂದು USA, ವಾಷಿಂಗ್ಟನ್ D.C. ನಲ್ಲಿರುವ ಅಮೇರಿಕನ್ ರೆಡ್ ಕ್ರಾಸ್ ಪ್ರಧಾನ ಕಚೇರಿಯಲ್ಲಿ, ದಡಾರ ಮತ್ತು ರುಬೆಲ್ಲಾ ಪಾಲುದಾರಿಕಾ ಒಕ್ಕೂಟದಿಂದ, ಭಾರತವು ದಡಾರ ಮತ್ತು ರುಬೆಲ್ಲಾ ಚಾಂಪಿಯನ್ ಪ್ರಶಸ್ತಿಯನ್ನು ಗೌರವಿಸಿತು.
- ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಪರವಾಗಿ ವಾಷಿಂಗ್ಟನ್ ಡಿ.ಸಿನಲ್ಲಿರುವ ಭಾರತದ ರಾಯಭಾರ ಕಚೇರಿಯ ಉಪ ಮುಖ್ಯಸ್ಥರಾದ ರಾಯಭಾರಿ ಪ್ರಿಯಾ ರಂಗನಾಥನ್ ಪ್ರಶಸ್ತಿಯನ್ನು ಸ್ವೀಕರಿಸಿದರು.

> ಮುಂಜಾಗ್ರತೆಯೇ ಮೊದಲ ಚಿಕಿತ್ಸೆ ಎಂಬ ಮಾತಿನಂತೆ ದಡಾರ ಮತ್ತು ರುಬೆಲ್ಲಾಗಳಿಗೆ ಮುಂಜಾಗ್ರತೆಯೇ ಚಿಕಿತ್ಸೆಯಾಗಿದೆ. ಸಮುದಾಯಗಳಲ್ಲಿ ಈ ಕುರಿತು ಜಾಗೃತಿ ಮೂಡಿಸುವಲ್ಲಿ ಭಾರತವು ಮುಂಚೂಣಿಯಲ್ಲಿದೆ ಎಂದು ಅಮೆರಿಕನ್ ರೆಡ್‌ಕ್ರಾಸ್ ಸಂಸ್ಥೆಯು ಚಾಂಪಿಯನ್ ಪ್ರಶಸ್ತಿ ನೀಡಿ ಗೌರವಿಸಿದೆ.

- ದಡಾರ ಮತ್ತು ರುಬೆಲ್ಲಾ ಪಾಲುದಾರಿಕೆಯು ಅಮೇರಿಕನ್ ರೆಡ್ ಕ್ರಾಸ್, BMGF, GAVI, US CDC, UNF, UNICEF ಮತ್ತು WHO ಸೇರಿದಂತೆ ಬಹು-ಏಜೆನ್ಸಿ ಯೋಜನಾ ಸಮಿತಿಯನ್ನು ಒಳಗೊಂಡಿದೆ. ಇವೆಲ್ಲವೂ ಜಾಗತಿಕವಾಗಿ ದಡಾರ ಸಾವುಗಳನ್ನು ಕಡಿಮೆ ಮಾಡಲು ಮತ್ತು ರುಬೆಲ್ಲಾವನ್ನು ತಡೆಗಟ್ಟಲು ಒಗ್ಗೂಡಿ ನಿಂತ ಸಂಸ್ಥೆಗಳಾಗಿವೆ.
- ದಡಾರ ಮತ್ತು ರುಬೆಲ್ಲಾ ಪ್ರಾಥಮಿಕವಾಗಿ ಮಕ್ಕಳ ಮೇಲೆ ಪರಿಣಾಮ ಬೀರುವ ಎರಡು ಸಾಂಕ್ರಾಮಿಕ ವೈರಲ್ ಸೋಂಕು ರೋಗಗಳಾಗಿವೆ.
- ಎರಡೂ ಕಾಯಿಲೆಗಳು ಕೂಡಾ ನ್ಯುಮೋನಿಯಾ, ಎನ್ಸೆಫಾಲಿಟಿಸ್, ಮತ್ತು ಜನ್ಮಜಾತ ರುಬೆಲ್ಲಾ ಸಿಂಡ್ರೋಮ್ (CRS) ಸೇರಿದಂತೆ ಗಂಭೀರ ಶಿಶು ಆರೋಗ್ಯ ತೊಡಕುಗಳಿಗೆ ಕಾರಣವಾಗಬಹುದು.
- ಇದು ಪ್ರಪಂಚದಾದ್ಯಂತ ಸಾರ್ವಜನಿಕ ಆರೋಗ್ಯದ ಬಗ್ಗೆಗಿನ ಕಾಳಜಿಯ ವಿಚಾರವಾಗಿದೆ.
- ದಡಾರ ಮತ್ತು ರುಬೆಲ್ಲಾ ಲಸಿಕೆ ತಡೆಗಟ್ಟುವ ರೋಗಗಳು (VPDs) ಮತ್ತು MR ಲಸಿಕೆ 2017 ಇವುಗಳು ಭಾರತದ ಸಾರ್ವತ್ರಿಕ ಪ್ರತಿರಕ್ಷಣೆ ಕಾರ್ಯಕ್ರಮದ ಭಾಗವಾಗಿದೆ.

ದಡಾರ

- **ಸೋಂಕಿಗೆ ಕಾರಣ :** ದಡಾರವು ಪ್ಯಾರಾಮಿಕ್ಸೊವೈರಸ್ ಕುಟುಂಬದ ಸದಸ್ಯ ಎಂದು ಪರಿಗಣಿಸಲ್ಪಟ್ಟ ದಡಾರ ವೈರಸ್‌ನಿಂದ ಉಂಟಾಗುತ್ತದೆ.
  ಪ್ರಸರಣ: ವೈರಸ್ ಉಸಿರಾಟದ ಹನಿಗಳ ಮೂಲಕ ಹರಡುತ್ತದೆ ಮತ್ತು ಹೆಚ್ಚು ಸಾಂಕ್ರಾಮಿಕವಾಗಿದೆ. ವಿಶೇಷವಾಗಿ ಜನನಿಬಿಡ ಪ್ರದೇಶಗಳಲ್ಲಿ ಇದು ಹೆಚ್ಚಿನ ಪ್ರಸರಣಕ್ಕೆ ಕಾರಣವಾಗುತ್ತದೆ.
- **ರೋಗ ಲಕ್ಷಣಗಳು:** ರೋಗಲಕ್ಷಣಗಳು ಸಾಮಾನ್ಯವಾಗಿ ಜ್ವರ, ಕೆಮ್ಮು, ಮೂಗಿನಲ್ಲಿ ನೆಗಡಿ ಸ್ರಾವ, ಕಾಂಜಂಕ್ಟಿವಿಟಿಸ್ ಮತ್ತು ಚರ್ಮದಲ್ಲಿ ವಿಶಿಷ್ಟವಾದ ಕೆಂಪು ದದ್ದುಗಳು ಬೀಳುವುದು ಮುಂತಾದ ಲಕ್ಷಣಗಳನ್ನು ಒಳಗೊಂಡಿರುತ್ತದೆ.
- ನ್ಯುಮೋನಿಯಾ, ಎನ್ಸೆಫಾಲಿಟಿಸ್ ಮತ್ತು ಕಿವಿಯ ಉರಿಯೂತದಂಥ ಆರೋಗ್ಯ ಸಮಸ್ಯೆಗಳು ಕೂಡಾ ಉಂಟಾಗಬಹುದು.
- **ತಡೆಗಟ್ಟುವಿಕೆ :** ದಡಾರ-ಮಂಪ್ಸ್-ರುಬೆಲ್ಲಾ (MMR) ಲಸಿಕೆಯೊಂದಿಗೆ ವ್ಯಾಕ್ಸಿನೇಷನ್ ನೀಡುವುದು ಅತ್ಯಂತ ಪರಿಣಾಮಕಾರಿ ತಡೆಗಟ್ಟುವ ಕ್ರಮವಾಗಿದೆ.
- ಹೆಚ್ಚಿನ ವ್ಯಾಕ್ಸಿನೇಷನ್ ಕವರೇಜ್ ನೀಡಿದರೆ ಸಾಮಾನ್ಯವಾಗಿ ಶೇ 95ಕ್ಕಿಂತಲೂ ಹೆಚ್ಚು ಪ್ರತಿರಕ್ಷೆ ಮತ್ತು ರೋಗ ನಿಯಂತ್ರಣಕ್ಕೆ ಕಾರಣವಾಗಬಹುದು.
- ಚಿಕಿತ್ಸೆ: ದಡಾರಕ್ಕೆ ಯಾವುದೇ ನಿರ್ದಿಷ್ಟ ಆಂಟಿವೈರಲ್ ಚಿಕಿತ್ಸೆ ಇಲ್ಲ. ರೋಗಲಕ್ಷಣಗಳು ಮತ್ತು ತೊಡಕುಗಳನ್ನು ನಿರ್ವಹಿಸಲು ಮಾನಸಿಕ ಬೆಂಬಲ ಮತ್ತು ಆರೈಕೆ ಅತ್ಯಗತ್ಯ.

ಜಾಗತಿಕ ಪ್ರಯತ್ನಗಳು

- ದಡಾರ ಮತ್ತು ರುಬೆಲ್ಲಾ ಎರಡನ್ನೂ ಲಸಿಕೆ ಕಾರ್ಯಕ್ರಮಗಳು ಮತ್ತು ಹೆಚ್ಚಿನ ನಿಗಾ ಇಡುವ ಮೂಲಕ ನಿರ್ಮೂಲನೆ ಮಾಡುವ ಗುರಿಯನ್ನು ವಿಶ್ವ ಆರೋಗ್ಯ ಸಂಸ್ಥೆ (WHO) ಹೊಂದಿದೆ. WHO, UNICEF, CDC, ಮತ್ತು ಇತರ ಪಾಲುದಾರರನ್ನು ಒಳಗೊಂಡಿರುವ ದಡಾರ ಮತ್ತು ರುಬೆಲ್ಲಾ ಇನಿಶಿಯೇಟಿವ್ ಎಂಬ ಹೆಸರಿನ ಪ್ರಯತ್ನವು ಜಾಗತಿಕವಾಗಿ ದಡಾರ ಮತ್ತು ರುಬೆಲ್ಲಾ ನಿರ್ಮೂಲನೆಗೆ ಟೊಂಕಕಟ್ಟಿ ನಿಂತಿವೆ.

ಮಿಷನ್ ಇಂದ್ರಧನುಷ್ - ಸಾರ್ವತ್ರಿಕ ರೋಗನಿರೋಧಕ ಕಾರ್ಯಕ್ರಮ

- ಭಾರತದ ಯುನಿವರ್ಸಲ್ ಇಮ್ಯುನೈಸೇಶನ್ ಪ್ರೋಗ್ರಾಂ ವಿಶ್ವದಲ್ಲೇ ಅತಿ ದೊಡ್ಡ ಆರೋಗ್ಯ ಕಾರ್ಯಕ್ರಮವಾಗಿದ್ದು, ವಾರ್ಷಿಕವಾಗಿ ಇದು 26.5 ಮಿಲಿಯನ್ ಶಿಶುಗಳು ಮತ್ತು 29 ಮಿಲಿಯನ್ ಗರ್ಭಿಣಿಯರಿಗೆ ಈ ಕಾರ್ಯಕ್ರಮದ ಮುಲಕ ಲಸಿಕೆ ನೀಡಲಾಗುತ್ತದೆ.
- ಆರಂಭದಲ್ಲಿ ರಾಷ್ಟ್ರದಾದ್ಯಂತ ಲಸಿಕೆ ಹಾಕದ ಮತ್ತು ಭಾಗಶಃ ಲಸಿಕೆ ಹಾಕಿದ ಮಕ್ಕಳಿಗೆ ಪ್ರತಿರಕ್ಷಣೆ ನೀಡುವುದನ್ನು ಗುರಿಯಾಗಿಟ್ಟುಕೊಂಡು, ಈ ಕಾರ್ಯಕ್ರಮವು ಏಳು ಲಸಿಕೆಯ ಮೂಲಕ-ತಡೆಗಟ್ಟಬಹುದಾದ ರೋಗಗಳಾದ ಡಿಫ್ತೀರಿಯಾ, ನಾಯಿಕೆಮ್ಮು, ಧನುರ್ವಾಯು, ಪೋಲಿಯೊ, ಕ್ಷಯ, ದಡಾರ ಮತ್ತು ಹೆಪಟೈಟಿಸ್-ಬಿ ವಿರುದ್ಧ ರಕ್ಷಣೆ ನೀಡುವ ಗುರಿಯನ್ನು ಹೊಂದಿದೆ.
- ಕಾಲಾನಂತರದಲ್ಲಿ ಕೆಲವು ಜಿಲ್ಲೆಗಳಲ್ಲಿ ಪೆರ್ಟುಸಿಸ್, ಮೆನಿಂಜೈಟಿಸ್, ನ್ಯುಮೋನಿಯಾ (ಹಿಮೋಫಿಲಸ್ ಇನ್‌ಫ್ಲುಯೆನ್ಸ್ ಟೈಪ್ ಬಿ ಸೋಂಕುಗಳು), ಮತ್ತು ಜಪಾನೀಸ್ ಎನ್ಸೆಫಾಲಿಟಿಸ್ (ಜೆಇ) ಸೇರಿ ಒಟ್ಟು 12 ರೋಗಗಳನ್ನು ಒಳಗೊಳ್ಳುವಂತೆ ವ್ಯಾಕ್ಸಿನೇಷನ್ ವ್ಯಾಪ್ತಿಯನ್ನು ವಿಸ್ತರಿಸಲಾಯಿತು.
- ಈ ವಿಸ್ತರಣೆಯು ರೋಟವೈರಸ್ ಲಸಿಕೆ, ನಿಷ್ಕ್ರಿಯಗೊಂಡ ಪೋಲಿಯೊ ಲಸಿಕೆ (IPV), ವಯಸ್ಕ JE ಲಸಿಕೆ, ನ್ಯುಮೋಕೊಕಲ್ ಕಾಂಜುಗೇಟ್ ಲಸಿಕೆ (PCV) ಮತ್ತು ದಡಾರ-ರುಬೆಲ್ಲಾ (MR) ಲಸಿಕೆಗಳಂತಹ ಹೊಸ ಲಸಿಕೆಗಳ ಪರಿಚಯಿಸಲಾಯಿತು.
- ದಡಾರ ಮತ್ತು ರುಬೆಲ್ಲಾ ರೋಗಗಳು ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ದೊಡ್ಡ ಬೆದರಿಕೆಯಾಗಿ ಉಳಿದಿದ್ದು, ವಿಶೇಷವಾಗಿ ಅಸಮರ್ಪಕ ವ್ಯಾಕ್ಸಿನೇಷನ್ ವ್ಯಾಪ್ತಿಯ ಪ್ರದೇಶಗಳಲ್ಲಿ, ರೋಗನಿರೋಧಕ ಕಾರ್ಯಕ್ರಮಗಳನ್ನು ಬಲಪಡಿಸುವುದು, ಕಣ್ಗಾವಲು ಹೆಚ್ಚಿಸುವುದು ಮತ್ತು ವ್ಯಾಕ್ಸಿನೇಷನ್‌ನ ಪ್ರಾಮುಖ್ಯತೆಯ ಬಗ್ಗೆ ಜಾಗೃತಿ ಮೂಡಿಸುವುದು ಈ ರೋಗಗಳನ್ನು ನಿಯಂತ್ರಿಸಲು ಮತ್ತು ಅಂತಿಮವಾಗಿ ತೊಡೆದುಹಾಕಲು ಅಗತ್ಯವಾದ ತಂತ್ರಗಳಾಗಿವೆ.
- ದಡಾರ ಮತ್ತು ರುಬೆಲ್ಲಾ ನಿರ್ಮೂಲನೆಯ ಗುರಿಯನ್ನು ಸಾಧಿಸಲು ಮತ್ತು ಎಲ್ಲರಿಗೂ ಆರೋಗ್ಯಕರ ಭವಿಷ್ಯವನ್ನು ಖಚಿತಪಡಿಸಿಕೊಳ್ಳಲು ಸರ್ಕಾರಗಳು, ಅಂತರರಾಷ್ಟ್ರೀಯ ಸಂಸ್ಥೆಗಳು ಮತ್ತು ಸಮುದಾಯಗಳ ನಡುವೆ ಉತ್ತಮ ಮಾದರಿಯ ಸಹಯೋಗವು ಅತ್ಯವಶ್ಯಕವಾಗಿದೆ. ❖

ಬಹುಆಯ್ಕೆಯ ಪ್ರಶ್ನೆಗಳು

1.ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ
ಎ. ಭಾರತದ ಮೂರು ಪರ್ವತ ರೈಲುಮಾರ್ಗಗಳನ್ನು ಮೌಂಟೇನ್ ರೈಲ್ವೇಸ್ ಆಫ್ ಇಂಡಿಯಾ ಎಂಬ ಹೆಸರಿನಲ್ಲಿ UNESCO ವಿಶ್ವ ಪರಂಪರೆಯ ತಾಣವೆಂದು ಒಟ್ಟಾರೆಯಾಗಿ ಹೆಸರಿಸಲಾಗಿದೆ.
ಬಿ. ನಾಲ್ಕನೇ ರೈಲುಮಾರ್ಗ, ಮಾಥೆರಾನ್ ಹಿಲ್ ರೈಲ್ವೇ ಯುನೆಸ್ಕೋ ವಿಶ್ವ ಪರಂಪರೆಯ ತಾಣಗಳ ತಾತ್ಕಾಲಿಕ ಪಟ್ಟಿಯಲ್ಲಿದೆ.
ಮೇಲಿನ ಹೇಳಿಕೆಗಳಲ್ಲಿ ಸರಿಯಾದ/ವುಗಳನ್ನು ಗುರುತಿಸಿ
1.ಹೇಳಿಕೆ ಎ ಸರಿಯಾಗಿದೆ
2.ಹೇಳಿಕೆ ಬಿ ಸರಿಯಾಗಿದೆ
3. ಎರಡೂ ಹೇಳಿಕೆಗಳು ತಪ್ಪಾಗಿವೆ
4. ಎರಡೂ ಹೇಳಿಕೆಗಳು ಸರಿಯಾಗಿವೆ
ಉತ್ತರ: (4)

2. ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ
ಎ. ಡಾರ್ಜಿಲಿಂಗ್ ಹಿಮಾಲಯನ್ ರೈಲ್ವೇ ಪರ್ವತಪ್ರದೇಶದ ಮೊದಲ ಪ್ರಯಾಣಿಕ ರೈಲುಮಾರ್ಗವಾಗಿದೆ.
ಬಿ. ಇದನ್ನು ಡಾರ್ಜಿಲಿಂಗ್ ಸ್ಟೀಮ್ ಟ್ರಾಮ್‌ವೇ ಕಂಪನಿಯು 1881 ರಲ್ಲಿ ನಿರ್ಮಿಸಿತು.
ಮೇಲಿನ ಹೇಳಿಕೆಗಳಲ್ಲಿ ಸರಿಯಾದ/ವುಗಳನ್ನು ಗುರುತಿಸಿ
1. ಹೇಳಿಕೆ ಎ ಸರಿಯಾಗಿದೆ
2. ಹೇಳಿಕೆ ಬಿ ಸರಿಯಾಗಿದೆ
3. ಎರಡೂ ಹೇಳಿಕೆಗಳು ತಪ್ಪಾಗಿವೆ
4. ಎರಡೂ ಹೇಳಿಕೆಗಳು ಸರಿಯಾಗಿವೆ
ಉತ್ತರ: (4)

3.ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ
ಎ. ಡಾರ್ಜಿಲಿಂಗ್ ಹಿಮಾಲಯನ್ ರೈಲುಮಾರ್ಗವು ಟಾಯ್ ಟ್ರೈನ್ ಎಂದು ಜನಪ್ರಿಯವಾಗಿದೆ.
ಬಿ. ಈ ಮಾರ್ಗವನ್ನು ಭಾರತೀಯ ರೈಲ್ವೇ ನಿರ್ವಹಿಸುತ್ತದೆ.
ಮೇಲಿನ ಹೇಳಿಕೆಗಳಲ್ಲಿ ಸರಿಯಾದ/ವುಗಳನ್ನು ಗುರುತಿಸಿ
1.ಹೇಳಿಕೆ ಎ ಸರಿಯಾಗಿದೆ
2.ಹೇಳಿಕೆ ಬಿ ಸರಿಯಾಗಿದೆ
3. ಎರಡೂ ಹೇಳಿಕೆಗಳು ತಪ್ಪಾಗಿವೆ
4. ಎರಡೂ ಹೇಳಿಕೆಗಳು ಸರಿಯಾಗಿವೆ
ಉತ್ತರ: (4)

4.ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ
ಎ. ಮಾಥೆರಾನ್ ಹಿಲ್ ರೈಲ್ವೆಯು 2 ಅಡಿ (610 ಮಿಮೀ) ನ್ಯಾರೋ-ಗೇಜ್ ರೈಲುಮಾರ್ಗವಾಗಿದೆ ಮತ್ತು ಪಶ್ಚಿಮ ಘಟ್ಟಗಳಲ್ಲಿನ ನೆರಲ್ ಮತ್ತು ಮಾಥೆರಾನ್ ನಡುವೆ 21 ಕಿಮೀ (13 ಮೈಲಿ) ದೂರ ಸಾಗುತ್ತದೆ.

ಬಿ.ಇದರ ನಿರ್ಮಾಣದ ನೇತೃತ್ವ ವನ್ನು ಅಬ್ದುಲ್ ಪೀರ್‌ಭಾಯ್ ವಹಿಸಿದ್ದರು.
ಮೇಲಿನ ಹೇಳಿಕೆಗಳಲ್ಲಿ ಸರಿಯಾದ/ವುಗಳನ್ನು ಗುರುತಿಸಿ
1.ಹೇಳಿಕೆ ಎ ಸರಿಯಾಗಿದೆ
2.ಹೇಳಿಕೆ ಬಿ ಸರಿಯಾಗಿದೆ
3. ಎರಡೂ ಹೇಳಿಕೆಗಳು ತಪ್ಪಾಗಿವೆ
4. ಎರಡೂ ಹೇಳಿಕೆಗಳು ಸರಿಯಾಗಿವೆ
ಉತ್ತರ: (4)

4. ವಡ್ಡಾರಾಧನೆಯು ಕನ್ನಡದ ಪ್ರಥಮ ಕಥಾಗುಚ್ಛವಾಗಿದ್ದು ಶಿವಕೋಟ್ಯಾಚಾರ್ಯನು ಇದರ ಕರ್ತೃ.
ಎ. ಶಬ್ದಮಣಿದರ್ಪಣವು ವ್ಯಾಕರಣ ಸಂಬಂಧಿಕೃತಿಯಾಗಿದ್ದು ಕೇಶೀರಾಜನು ಇದನ್ನು ಬರೆದನು.
ಈ ಹೇಳಿಕೆಗಳಿಗೆ ಸಂಬಂಧಿಸಿದಂತೆ ಸರಿಯಾದ ಉತ್ತರ ಯಾವುದು.
1)ಹೇಳಿಕೆ a ಸರಿ ಮತ್ತು b ತಪ್ಪಾಗಿವೆ.
2) ಹೇಳಿಕೆ b ಸರಿ ಮತ್ತು a ತಪ್ಪಾಗಿವೆ.
3) ಎರಡೂ ಹೇಳಿಕೆಗಳು ಸರಿಯಾಗಿವೆ.
4) ಎರಡೂ ಹೇಳಿಕೆಗಳು ತಪ್ಪಾಗಿವೆ.
ಉತ್ತರ (3)

5.ಕನ್ನಡದಲ್ಲಿ ರತ್ನತ್ರಯರು ಎಂದು ಈ ಕೆಳಗಿನವರಲ್ಲಿ ಯಾರನ್ನು ಕರೆಯಲಾಗುತ್ತದೆ ?
a) ಪಂಪ,ಪೊನ್ನ,ರನ್ನ
b) ಪೊನ್ನ,ರನ್ನ,ಜನ್ನ
c) ಪಂಪ,ರನ್ನ,ಜನ್ನ
d) ಪಂಪ,ಪೊನ್ನ,ಜನ್ನ
ಉತ್ತರ : a

6.ಕನ್ನಡದ ಕವಿ ಚಕ್ರವರ್ತಿಗಳು ಎಂದು ಯಾರನ್ನು ಕರೆಯಲಾಗುತ್ತದೆ ?
a)ರನ್ನ ,ಪೊನ್ನ,ಪಂಪ
b) ಪೊನ್ನ,ರನ್ನ,ಜನ್ನ
c) ಪಂಪ,ರನ್ನ,ಜನ್ನ
d) ಪಂಪ,ಪೊನ್ನ,ಜನ್ನ
ಉತ್ತರ : b

7.ಗ್ರೀನಿಂಗ್ ಅಂಡ್ ರಿಸ್ಟೋರೇಶನ್ ಆಫ್ ವೇಸ್ಟ್ ಲ್ಯಾಂಡ್ ವಿತ್ ಆಗ್ರೋಫಾರೆಸ್ಟ್ರಿ (GROW) ವರದಿಯನ್ನು ಈ ಕೆಳಗಿನ ಯಾವ ಸಂಸ್ಥೆಯು ಬಿಡುಗಡೆ ಮಾಡಿತು ?
(1) ಭಾರತೀಯ ವನ್ಯಜೀವಿ ಸಂಸ್ಥೆ
(2) ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿ
(3) NITI ಆಯೋಗ
(4) ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ
ಉತ್ತರ: (3)

8. ಭಾರತದಲ್ಲಿ ರಾಷ್ಟ್ರೀಯ ಕೃಷಿ ಅರಣ್ಯ ನೀತಿಯನ್ನು ಯಾವಾಗ ಪರಿಚಯಿಸಲಾಯಿತು ?
(1) 2005 (2) 2010
(3) 2014 (4) 2018
ಉತ್ತರ: (3)

ನೀಟ್- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎನ್‌ಎಸ್‌ಎಲ್‌ಸಿ ಪರೀಕ್ಷೆ ದಿಕ್ಸೂಚಿ

NEETBIOLOGY

42) Assimilatory power is............
a) $NADPH_2$ b) ATP
c) ATP and $NADPH_2$ d) $FADH_2$
Ans:- c; {Expln- The products of the light reaction are ATP, $NADPH_2$, and O_2. The oxygen is liberated from the plants. ATP and $NADPH_2$ are used in the dark reaction for the reduction of carbon dioxide to form carbohydrates (carbon assimilation). Hence, these products of light reaction (ATP and $NADPH_2$) are called assimilatory power.}

43) Eco RI cleaves the DNA strands to produce
a) Blunt ends b) sticky ends
c) satellite ends d) ori replication end
Ans:- b;
Expln- Eco RI comes from Escherichia coli RY 13. It is a sticky end type cutting restriction enzyme. It recognises the base sequence of G ↓ AATTC on the DNA strand and cleave at the site to produce DNA fragments. These fragments have sticky ends which can be joined easily with other fragment carrying complementary sticky ends.

44) Statement I:- Women are at the peak of conception on the 14th day of ovulation.
Statement II:- Vasectomy is the method normally employed to avoid conception in females.
a) I is wrong, II is right
b) I is right, II is wrong
c) Both I and II are right
d) Both I and II wrong
Ans:- b;
Expln- Both LH and FSH hormones attain a peak level in the middle of menstrual cycle (about 14th day). The rapid secretion of LH leading to maximum level during the mid-cycle called LH surge induces rupture of Graafian follicle and thereby releasing the ovum (ovulation)
It the ovum meets sperm during this time, conception can occur. Vasectomy is the contraception method used in males.

45) Which taxonomic term may be suggested for any rank in the classification?
a) Class b) order
c) Species d) Taxon
Ans:- d;
Expln- Each category of classification is a part of overall taxonomic arrangement, it is called taxonomic category.
Each taxonomic category referred to as a unit of classification and represent a rank and commonly termed as taxon (pl).

46) Which of the following is *not* the function of insulin?
a) increase the oxidation of glucose in the cells
b) increases the permeability of cell membrane to glucose
c) initiates the formation of hepatic glycogen from excess of glucose
d) initiates the conversion of glycogen to glucose
Ans:- d;

47) The diagram given below represents the T S of dicot leaf. Identify the parts labelled as A, B, C, and D, which denote their functions and choose the correct one given below.



a) A-Motor action, B-Photosynthesis, C-Conduction, D-transpiration
b) A-Motor action, B-Conduction, C-Photosynthesis, D-transpiration
c) A-transpiration, B-Photosynthesis, C-Conduction, D-Transpiration
d) A-Tranpiration, B-Conduction, C-Photosynthesis, D-Motor action
Ans:- a;
Expln- In the diagram, between motor cells, gap has been shown. It looks like guard cell.

48)



In the diagram of the graafian follicle different parts are indicated by alphabets, choose the choice in which these alphabets are correctly matched with the parts –
a) A = Membrana granulosa; B = Theca interna; C = Ovum; D = Cumulus oophorus; E = Antrum; F = Theca externa
b) A = Theca externa; B = Theca interna; C = Ovum; D= Membrana granulosa; E=Antrum; F = Cumulus oophorus
c) A = membrana granulose, B = ovum, C = cumulus oophorus, D = Antrum, E = Theca interna, G = Theca externa.
d) A = Membrana granulosa; B = Theca externa; C = Ovum; D = Cumulus oophorus; E = Antrum; F = Theca interna
Ans:- c;

49) In the diagram of the portion of the TS of the helianthus leaf passing through the midrib given below, certain parts have been indicated by alphabets choose the answer in which these alphabets have been correctly matched *(Contd)*

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CHEMISTRY

Solutions

1. Write a brief note on solution.
Ans:- A solution may contain two or more substances also called components or constituents. A solution which has two components is known as binary solution (e.g a solution of NaCl in water) while a solution with three components is called ternary solution (e.g. a solution of NaCI and KCI in water). Similarly even more than three components may also be present.

2. Express the Concentration of Solutions
Ans:- Concentration of a solution implies the amount of the solute present in a given quantity of the solution or the solvent. Thus, while expressing the concentration of a solution, only the relative amounts of the components are considered. The concentration of a binary solution can be expressed in a number of ways.

(i) Mass percentage (w/w): The mass percentage of a component of a solution is defined as:
Mass % of a component =

$$= \frac{\text{Mass of the component in the solution}}{\text{Total mass of the solution}} \times 100$$

(ii) Volume percentage (V/V): The volume percentage is defined as:

$$\text{Volume \% of a component} = \frac{\text{Volume of the component}}{\text{Total volume of solution}} \times 100$$

(iii) Mass by volume percentage (w/V): It is commonly used in medicine and pharmacy. It is mass by volume percentage.
It is the mass of solute dissolved in 100 mL of the solution.

(iv) Parts per million: When a solute is present in trace quantities, it is convenient to express concentration in parts per million (ppm) and is defined as:

Parts per million =

$$\frac{\text{Number of parts of the component}}{\text{Total number of parts of all components of the solution}} \times 10^6$$

(v) Mole fraction: Commonly used symbol for mole fraction is x and subscript used on the right hand side of x denotes the component. It is defined as:

Mole fraction of a component =

$$\frac{\text{Number of moles of the component}}{\text{Total number of moles of all the components}}$$

Mole fraction unit is very useful in relating some physical properties of solutions, say vapour pressure with the concentration of the solution and quite useful in describing the calculations involving gas mixtures.

vi) Molarity: Molarity (M) is defined as number of moles of solute dissolved in one litre (or one cubic decimetre) of solution,

$$\text{Molarity} = \frac{\text{Moles of solute}}{\text{Volume of solution in litre}}$$

= Moles of solute Molarity Volume of solution in litre (2.8)

(vii) Molality: Molality (m) is defined as the number of moles of the solute per kilogram (kg) of the solvent and is expressed as:

$$\text{Molality (m)} = \frac{\text{Moles of solute}}{\text{Mass of solvent in kg}}$$

Fill in the Blanks
1) .... obeys Raoult's law in all stages of concentration.
Ans:- Ideal Solution
2)....................in nitrogen is an example for gaseous solution
Ans:- Camphor
3) Alloy of Copper and gold is an example for .... Solution
Ans:- Solid
4) Two solutions having same Osmotic pressure at a given tempreture are called............... Solutions
Ans:- isotonic
5) The heat of solution or mixing has a negative side. ....
Ans:- Dissolution's heat.
6) The Procecess used for desalination of water is..............
Ans:- reverse osmosis

Multiple Choice Questions:-

1. Which of the following units is useful in relating concentration of solution with its vapour pressure?
a) mole fraction b) parts per million
c) mass percentage d) molality
Ans:- a

2. The pressure that a single component in a gaseous mixture would exert if it existed alone in the same volume as the mixture and at the same temperature as the mixture is referred to as.
a) Absolute pressure b) Partial pressure
c) Total pressure of a gas mixture
d) None of the mentioned
Ans: b
Expln:- Partial pressure is the pressure exerted by a single component in a gaseous mixture if it exists alone in the same volume.

2. On dissolving sugar in water at room temperature, solution feels cool to touch. Under which of the following cases dissolution of sugar will be most rapid?
a) Sugar crystals in cold water.
b) Sugar crystals in hot water.
c) Powdered sugar in cold water.
d) Powdered sugar in hot water.
Ans:- d

3. At equilibrium the rate of dissolution of a solid solute in a volatile liquid solvent is...............
a) less than the rate of crystallization
b) greater than the rate of crystallization
c) equal to the rate of crystallization
d) Zero
Ans:- C

4. A breaker contains a solution of substance 'A'. Precipitation of substance 'A' takes place when small amount of 'A' is added to the solution. The solution is -
a) saturated b) supersaturated
c) unsaturated d) concentrated
Ans:- b

ನೇಹಾ ಹಿರೇಮಠ ಕೊಲೆ ಪ್ರಕರಣ: ತನಿಖಾ ತಂಡದಿಂದ ಸ್ಥಳ ಮಹಜರು, ಆರೋಪಿಯ ವಿಚಾರಣೆ

ಫಯಾಜ್ ಸಿಐಡಿ ವಶಕ್ಕೆ; ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ವಿದ್ಯಾರ್ಥಿನಿ ನೇಹಾ ಹಿರೇಮಠ ಕೊಲೆ ಪ್ರಕರಣದ ಆರೋಪಿ ಫಯಾಜ್‌ನನ್ನು ಬುಧವಾರ ಮಧ್ಯಾಹ್ನ ನಗರದ ಬಿವಿಬಿ ಕಾಲೇಜು ಆವರಣಕ್ಕೆ ಕರೆತಂದ ಸಿಐಡಿ ಎಸ್ಪಿ ವೆಂಕಟೇಶ್ ಅವರ ನೇತೃತ್ವದ ಅಧಿಕಾರಿಗಳ ತಂಡ, ಸ್ಥಳ ಮಹಜರು ಮಾಡಿತು. ಸುಮಾರು ಮೂರೂವರೆ ಗಂಟೆ ವಿಚಾರಣೆ ನಡೆಸಿತು.

ಧಾರವಾಡದ ಕೇಂದ್ರ ಕಾರಾಗೃಹದಲ್ಲಿ 14 ದಿನ ನ್ಯಾಯಾಂಗ ಬಂಧನದಲ್ಲಿದ್ದ ಫಯಾಜ್‌ನನ್ನು, ಹುಬ್ಬಳ್ಳಿಯ 1ನೇ ಸೆಷನ್ಸ್ ಕೋರ್ಟ್‌ನ ಅನುಮತಿ ಮೇರೆಗೆ ಹೆಚ್ಚಿನ ವಿಚಾರಣೆಗೆಂದು ಸಿಐಡಿ ಅಧಿಕಾರಿಗಳು 6 ದಿನ ತಮ್ಮ ವಶಕ್ಕೆ ಪಡೆದರು.

ಫಯಾಜ್‌ನನ್ನು ಕರೆತಂದ ಸಿಐಡಿ ಅಧಿಕಾರಿಗಳು ಆರಂಭದಲ್ಲಿ ಕಾಲೇಜಿನ ಎಂಸಿಎ ವಿಭಾಗದ ಮುಖ್ಯಸ್ಥ ಕಚೇರಿಯಲ್ಲಿ ಕೂರಿಸಿಕೊಂಡು ಕೊಲೆ ಕುರಿತು ಮಾಹಿತಿ ಸಂಗ್ರಹಿಸಿದರು. ನಂತರ, ಕೊಲೆ ನಡೆದ ದಿನ ಆತ ತಂದಿದ್ದ ದ್ವಿಚಕ್ರ ವಾಹನ ಹಾಗೂ ಆತನಿಂದಲೇ ಕೊಲೆಯಾದ ಸ್ಥಳ, ಭೇಟಿಯಾದ ಜನರ ಬಗ್ಗೆ ಮಾಹಿತಿ ಪಡೆದು, ಹೇಳಿಕೆಗಳನ್ನು ಚಿತ್ರೀಕರಿಸಿಕೊಂಡರು. ಕಾಲೇಜಿನಲ್ಲಿನ ಭದ್ರತಾ ವ್ಯವಸ್ಥೆ ಮತ್ತು ಇನ್ನಿತರ ವಿಷಯಗಳ ಬಗ್ಗೆಯೂ ಮಾಹಿತಿ ಪಡೆದರು.

'ಕೊಲೆ ಮಾಡಿದ ತಕ್ಷಣ ಕಾಲೇಜಿನ ಮುಖ್ಯದ್ವಾರದಿಂದ ಹೋಗದೆ, ಹಿಂಭಾಗದ ದ್ವಾರದಿಂದ ಯಾಕೆ ಪರಾರಿಯಾಗುತ್ತಿದ್ದೆ?' ಎಂದು ಸಿಐಡಿ ಅಧಿಕಾರಿಗಳು ಕೇಳಿದ ಪ್ರಶ್ನೆಗೆ, 'ಮುಂಭಾಗದ ದ್ವಾರದ ಬಳಿ ಭದ್ರತಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಇದ್ದ ಕಾರಣ ಹೆದರಿಕೊಂಡು ಹಿಂಭಾಗದ ದ್ವಾರದಿಂದ ಪರಾರಿಯಾಗಲು ಯತ್ನಿಸಿದೆ' ಎಂದು ಫಯಾಜ್ ತಿಳಿಸಿರುವುದಾಗಿ ಪೊಲೀಸ್ ಮೂಲಗಳು ಹೇಳಿವೆ.

ಎಬಿವಿಪಿ ಪ್ರತಿಭಟನೆ: ಫಯಾಜ್‌ನನ್ನು ಕಾಲೇಜು ಆವರಣಕ್ಕೆ ಕರೆತರುವಾಗ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಸಂಘಟನೆ (ಎಬಿವಿಪಿ) ಕಾರ್ಯಕರ್ತರು, ಅವನಿದ್ದ ವಾಹನಕ್ಕೆ ಮುತ್ತಿಗೆ ಹಾಕಲು ಯತ್ನಿಸಿದರು. ಪೊಲೀಸರು ಅವರನ್ನು ತಡೆದಾಗ, ಪರಸ್ಪರ ವಾಗ್ವಾದ ನಡೆಯಿತು.

'ನಮ್ಮ ಕಾಲೇಜಿನ ಆವರಣದಲ್ಲಿ ಕೊಲೆ ನಡೆದಿದೆ. ಆರೋಪಿಗೆ ಗಲ್ಲು-ಶಿಕ್ಷೆಯಾಗಬೇಕು. ಪ್ರಕರಣದ ತನಿಖೆ ಸಿಬಿಐಗೆ ಒಪ್ಪಿಸಬೇಕು. ಇಲ್ಲದಿದ್ದರೆ, ಅವನನ್ನು ನಮ್ಮ ಕೈಗೆ ಒಪ್ಪಿಸಿ' ಎಂದು ಕಾರ್ಯಕರ್ತರು ಆಗ್ರಹಿಸಿದರು.

ಹುಬ್ಬಳ್ಳಿ ಬಿವಿಬಿ ಕಾಲೇಜಿನ ಆವರಣಕ್ಕೆ ಸಿಐಡಿ ಅಧಿಕಾರಿಗಳು ಬುಧವಾರ ನೇಹಾ ಕೊಲೆ ಆರೋಪಿ ಫಯಾಜ್‌ನನ್ನು ಕರೆದೊಯ್ದು ಸ್ಥಳ ಮಹಜರು ಮಾಡಿದರು

'ರಾಜಕೀಯ ನಷ್ಟ ತುಂಬಿಸಿಕೊಳ್ಳಲು ಸಾಂತ್ವನದ ನಾಟಕ'

'ನೇಹಾ ಕೊಲೆ ಪ್ರಕರಣದಿಂದ ರಾಜಕೀಯವಾಗಿ ಕಾಂಗ್ರೆಸ್‌ಗೆ ಆಗುತ್ತಿರುವ ನಷ್ಟ ತುಂಬಿಸಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಂತ್ವನದ ನಾಟಕವಾಡಿದ್ದಾರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

'ನೇಹಾ ಕೊಲೆ ನಡೆದು ಐದು ದಿನಗಳ ನಂತರ ಕಾಂಗ್ರೆಸ್ ಅನುಕಂಪ ತೋರುತ್ತಿದೆ. ನೇಹಾ ಕುಟುಂಬದ ಮೇಲೆ ಕಾಳಜಿ ಇದ್ದಿದ್ದರೆ, ಕೃತ್ಯ ನಡೆದ ದಿನವೇ ನೇಹಾ ತಂದೆ ನಿರಂಜನ ಅವರಿಗೆ ಕರೆ ಮಾಡಬೇಕಿತ್ತು. ಕೊಲೆ ಖಂಡಿಸಿ ಎಲ್ಲೆಡೆ ಹೋರಾಟ ನಡೆದ ಕೂಡಲೇ ಮತದಾರರು ತಿರುಗಿ ಬೀಳುವರು ಎಂಬ ಭಯದಿಂದ ಸಾಂತ್ವನದ ನಾಟಕ ಆಡಿದ್ದಾರೆ' ಎಂದರು.

'ನೇಹಾ ಕೊಲೆ ಪ್ರಕರಣದಲ್ಲಿ ಬಿಜೆಪಿ ರಾಜಕೀಯ ಮಾಡುತ್ತಿಲ್ಲ. ಹಿಂದೂ- ಮುಸ್ಲಿಂ ಭೇದವಿಲ್ಲದೆ, ಯಾರಿಗೇ ಅನ್ಯಾಯವಾದರೂ ನಾವು ಧ್ವನಿ ಎತ್ತುತ್ತೇವೆ. ನನ್ನ ಕ್ಷೇತ್ರದಲ್ಲಿಯೇ ಯುವತಿಗೆ ಅನ್ಯಾಯವಾದಾಗ, ಹೀಗಿದ್ದಾಗಲೂ ನಾನು ಸುಮ್ಮನಿರಬೇಕಿತ್ತೆ? ಈ ಪ್ರಕರಣವನ್ನು ವೋಟ್ ಬ್ಯಾಂಕ್‌ಗೆ ಬಳಸಿಕೊಂಡಿದ್ದು ಕಾಂಗ್ರೆಸ್, ಆದರೆ ಬಿಜೆಪಿ ಮೇಲೆ ಗೂಬೆ ಕೂರಿಸುತ್ತಿದ್ದಾರೆ' ಎಂದು ಹರಿಹಾಯ್ದರು.

'4 ದಿನ ಮೊದಲೇ ಚಾಕು ಖರೀದಿಸಿದ್ದ'

'ನೇಹಾಳ ಕೊಲೆ ಮಾಡಲು ಆರೋಪಿ ಫಯಾಜ್, ಧಾರವಾಡದಲ್ಲಿ ಏಪ್ರಿಲ್ 14ರಂದೇ ಚಾಕು ಖರೀದಿಸಿದ್ದ. ನೇಹಾ ಜೊತೆ ಮಾತನಾಡದೇ ಸಂಪರ್ಕ ಕಡಿತಗೊಂಡಿದ್ದರಿಂದ ಆತ ಹತಾಶನಾಗಿದ್ದ. ಆಕೆಯ ವಿರುದ್ಧ ದ್ವೇಷ ಸಾಧಿಸುತ್ತಿದ್ದ. ಏಪ್ರಿಲ್ 18ರಂದು ದ್ವಿಚಕ್ರ ವಾಹನದಲ್ಲಿ ಕಾಲೇಜಿಗೆ ಬಂದು, ಕೃತ್ಯವೆಸಗಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಿಐಡಿ ತನಿಖೆಗೆ ಹಸ್ತಾಂತರವಾಗುವ ಮುನ್ನವೇ ಸ್ಥಳೀಯ ಪೊಲೀಸರು ಪ್ರಕರಣದ ತನಿಖೆ ಶೇ 60ರಷ್ಟು ಪೂರ್ಣಗೊಳಿಸಿದ್ದರು. ತನಿಖೆ ವೇಳೆ ಸಿಐಡಿ ಅಧಿಕಾರಿಗಳು ಇನ್ನಷ್ಟು ಮಾಹಿತಿ ಸಂಗ್ರಹಿಸಿದರು.

'ಸಿಐಡಿ ತನಿಖೆಯಿಂದ ನ್ಯಾಯ'

'ನೇಹಾ ಕೊಲೆ ವಿಚಾರದಲ್ಲಿ ಯಾರೂ ರಾಜಕೀಯ ಮಾಡಬಾರದು. ಸಿಐಡಿ ತನಿಖೆಯಿಂದ ಅವಳ ಸಾವಿಗೆ ನ್ಯಾಯ ಸಿಗಲಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೇವಾಲಾ ವಿಶ್ವಾಸ ವ್ಯಕ್ತಪಡಿಸಿದರು.

ನೇಹಾ ಮನೆಗೆ ಬುಧವಾರ ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ರಾಜಕಾರಣಕ್ಕಾಗಿ ಈ ಮನೆಯನ್ನು ದುರುಪಯೋಗ ಮಾಡಬೇಡಿ. ಸಾವಿನ ಮನೆಯಲ್ಲಿ ರಾಜಕೀಯ ಬೇಡ' ಎಂದರು. 'ನೇಹಾ, ನಿರಂಜನಯ್ಯ ಅವರ ಪುತ್ರಿಯಷ್ಟೇ ಅಲ್ಲ, ಅವಳು ಕನ್ನಡ ನಾಡಿನ ಮಗಳು. ನಮ್ಮ ಕುಟುಂಬದ ಸದಸ್ಯಳಿದ್ದಂತೆ. ನಾವೆಲ್ಲ ಅವರ ಜೊತೆಗೆ ಇದ್ದೇವೆ. ಆರೋಪಿಗೆ ಗಲ್ಲು ಶಿಕ್ಷೆ ಆಗಬೇಕು ಎಂಬುದು ನಮ್ಮ ಆಗ್ರಹ. ಈಗಾಗಲೇ ವಿಶೇಷ ನ್ಯಾಯಾಲಯ ಸ್ಥಾಪಿಸಲಾಗಿದೆ. 90 ದಿನಗಳಲ್ಲಿ ನ್ಯಾಯ ಸಿಗುವ ಭರವಸೆಯಿದೆ' ಎಂದರು.

'ತುಷ್ಟೀಕರಣದ ಕನ್ನಡಕ ಹಾಕಿದ ಸರ್ಕಾರ'

ಗದಗ: 'ವಿದ್ಯಾರ್ಥಿನಿ ನೇಹಾ ಹಿರೇಮಠ ಹತ್ಯೆ ಪ್ರಕರಣವನ್ನು ರಾಜ್ಯ ಸರ್ಕಾರ ತುಷ್ಟೀಕರಣ ರಾಜಕಾರಣದ ಕನ್ನಡಕ ಹಾಕಿ ನೋಡುತ್ತಿದೆ' ಎಂದು ಹಾವೇರಿ ಲೋಕಸಭಾ ಕ್ಷೇತ್ರ ಬಿಜೆಪಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಟೀಕಿಸಿದರು.

'ನೇಹಾ ಹತ್ಯೆ ಆಕಸ್ಮಿಕ' ಎಂದು ಹೇಳಿಕೆ ನೀಡಿದ್ದ ಸಚಿವ ಶಿವಾನಂದ ಪಾಟೀಲ ಹೇಳಿಕೆಗೆ ಬುಧವಾರ ಪ್ರತಿಕ್ರಿಯಿಸಿದ ಅವರು, 'ಶಿವಾನಂದ ಪಾಟೀಲ ಹೇಳಿಕೆ ಕಾಂಗ್ರೆಸ್‌ನ ಮನಸ್ಥಿತಿ ತೋರಿಸುತ್ತಿದೆ. ನೇಹಾ ಕೊಲೆ ಆರೋಪಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ್ದು, ಹತ್ಯೆ ಪ್ರಕರಣ ಗೌಣ ಮಾಡಲಾಗುತ್ತಿದೆ' ಎಂದರು.

30ರಂದು 'ಯಕ್ಷಹಂಸ' ಸಂಸ್ಮರಣ ಗ್ರಂಥ ಬಿಡುಗಡೆ

ಪ್ರಜಾವಾಣಿ ವಾರ್ತೆ

ಶಿರಸಿ: ಬದುಕನ್ನು ಯಕ್ಷಗಾನಕ್ಕೆ ಮೀಸಲಿಟ್ಟು ಕಲಾಕ್ಷೇತ್ರಕ್ಕೆ ಕೊಡುಗೆ ನೀಡಿದ ಹೊಸ್ತೋಟ ಮಂಜುನಾಥ ಭಾಗವತರ ಕುರಿತ 'ಯಕ್ಷಹಂಸ' ಸ್ಮರಣ ಗ್ರಂಥದ ಬಿಡುಗಡೆ ಸಮಾರಂಭ ಏಪ್ರಿಲ್ 30ರಂದು ಸಂಜೆ 4 ಗಂಟೆಗೆ ನಗರದ ಸುಪ್ರಿಯಾ ಸಭಾಂಗಣದಲ್ಲಿ ನಡೆಯಲಿದೆ.

'ಯಕ್ಷಹಂಸ' ಗ್ರಂಥ

ಗ್ರಂಥದ ಪ್ರಧಾನ ಸಂಪಾದಕ ವಿಜಯನಳಿನಿ ರಮೇಶ, ಮಾರ್ಗದರ್ಶಕ ಎಂ. ಪ್ರಭಾಕರ ಜೋಶಿ, ನಿಣಾಸಂ ಮುಖ್ಯಸ್ಥ ಕೆ.ವಿ.ಅಕ್ಷರ, ಹಿರಿಯ ಕಲಾವಿದ ಗೋಡೆ ನಾರಾಯಣ ಹೆಗಡೆ ಸಮಾರಂಭದಲ್ಲಿ ಭಾಗವಹಿಸುವರು.

ನಾಲ್ಕು ವಿಭಾಗ ಮತ್ತು 520 ಪುಟಗಳುಳ್ಳ ಕೃತಿಯಲ್ಲಿ ಒಟ್ಟು 76 ಲೇಖನಗಳಿವೆ. ಭಾಗವತರ ಸಂಶೋಧನಾತ್ಮಕ ಮತ್ತು ತಾತ್ವಿಕತೆಗೆ ಸಂಬಂಧಿಸಿದ ಕಾರ್ಯಗಳ ಕುರಿತು ವಿಶ್ಲೇಷಣೆ, ಹಳೆಯ ವಿಷಯಗಳನ್ನು ಹೊಸ ರೀತಿಯಲ್ಲಿ ವ್ಯಕ್ತಪಡಿಸಿದ ಪ್ರಸಂಗ ಗುಚ್ಛಗಳ ಪರಾಮರ್ಶೆ, ಯಕ್ಷಗಾನ ವಿಸ್ತರಣೆಯ ಚಿತ್ರಣವಿದೆ. ಭಾಗವತರ ಒಡನಾಡಿಗಳು, ಅಭಿಮಾನಿಗಳು, ಶಿಷ್ಯವೃಂದ, ಕಲಾಕ್ಷೇತ್ರದ ಸಹವರ್ತಿಗಳ ಬರಹಗಳಿವೆ.

ತೋಟದ ಕೆರೆಯಲ್ಲಿ ಸಿಲುಕಿದ್ದ ಕಾಡಾನೆಗಳ ರಕ್ಷಣೆ

ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕಿನ ಶ್ರೀಮಂಗಲದ ಕುಮಟೂರುವಿನ ತೋಟವೊಂದರ ಕೆರೆಯಲ್ಲಿ ಬುಧವಾರ ಸಿಲುಕಿದ್ದ ಕಾಡಾನೆಗಳು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕಿನ ಶ್ರೀಮಂಗಲದ ಕುಮಟೂರುವಿನ ತೋಟವೊಂದರ ಕೆರೆಯಲ್ಲಿ ಸಿಲುಕಿದ್ದ ಕಾಡಾನೆಗಳನ್ನು ಅರಣ್ಯ ಇಲಾಖೆ ಸಿಬ್ಬಂದಿ ಬುಧವಾರ ರಕ್ಷಿಸಿದರು.

ಮಂಗಳವಾರ ರಾತ್ರಿ ಕಾಡಾನೆಗಳ ಹಿಂಡು ಕೆರೆಗೆ ಇಳಿದಿತ್ತು. ನೀರು ಕುಡಿದ ನಂತರ ಕೆಲವು ಆನೆಗಳು ಹೊರ ಬಂದಿದ್ದವು. ಆದರೆ, 4 ಆನೆಗಳು ಹೊರ ಬರಲಾಗದೇ ಸಿಲುಕಿಕೊಂಡಿದ್ದವು. ಸ್ಥಳೀಯರಿಂದ ಮಾಹಿತಿ ದೊರೆತ ಬಳಿಕ ಬಂದ ಅರಣ್ಯ ಸಿಬ್ಬಂದಿ ಜೆಸಿಬಿ ಮೂಲಕ ಕೆರೆಯ ಒಂದು ಬದಿಯ ಮಣ್ಣನ್ನು ತೆಗೆದು ಆನೆಗಳು ಮೇಲೆ ಹತ್ತಲು ಸಾಧ್ಯವಾಗುವಂತೆ ದಾರಿ ಮಾಡಿಕೊಟ್ಟರು. ಬಳಿಕ ಎಲ್ಲ ಆನೆಗಳೂ ಹೊರ ಬಂದವು.

ಈ ಕುರಿತು 'ಪ್ರಜಾವಾಣಿ' ಪ್ರತಿಕ್ರಿಯಿಸಿದ ಡಿಸಿಎಫ್ ಜಗನ್ನಾಥ್, 'ಮಳೆ ಬಂದಿದ್ದರಿಂದ ಮಣ್ಣು ಜಾರುತ್ತಿತ್ತು. ಎಷ್ಟೇ ಪ್ರಯತ್ನಪಟ್ಟರೂ ಆನೆಗಳು ಹೊರಬರಲಾಗದೇ ಪರದಾಡುತ್ತಿದ್ದವು. ವಿಷಯ ತಿಳಿದ ತಕ್ಷಣ ಸಿಬ್ಬಂದಿ ಸ್ಥಳಕ್ಕೆ ತೆರಳಿ ಎಲ್ಲ ಕಾಡಾನೆಗಳನ್ನೂ ರಕ್ಷಿಸಿದರು' ಎಂದು ತಿಳಿಸಿದರು.

ಹೆದ್ದಾರಿಯಲ್ಲಿ ಸಂಚರಿಸಿದ ಕಾಡಾನೆ: ಸುಂಟಿಕೊಪ್ಪ ಸಮೀಪದ 7ನೇ ಹೊಸ ಕೋಟೆಯ ಮಂಗಳೂರು- ಮೈಸೂರು ಹೆದ್ದಾರಿಯಲ್ಲಿ ಕಾಡಾನೆಯೊಂದು ಬುಧವಾರ ಬೆಳಿಗ್ಗೆ ಸಂಚರಿಸಿ ವಾಹನ ಸವಾರರಲ್ಲಿ ಭೀತಿ ಸೃಷ್ಟಿಸಿತ್ತು. ಯಾರಿಗೂ ಅಪಾಯ ಮಾಡದ ತೋಟವೊಂದರ ಬಾಗಿಲು ತೆರೆದು ಪ್ರವೇಶಿಸಿತು.

ಗ್ರಾ.ಪಂ. ಕಾರ್ಯದರ್ಶಿ ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ನಿವೇಶನದ ಖಾತೆ ಮಾಡಿಕೊಡಲು ₹ 15,000 ಲಂಚ ಪಡೆಯುವ ವೇಳೆ ತಾಲ್ಲೂಕಿನ ಅಬ್ಬಲಗೆರೆ ಗ್ರಾಮ ಪಂಚಾಯಿತಿ ಗ್ರೇಡ್–2 ಕಾರ್ಯದರ್ಶಿ ಟಿ.ಯೋಗೇಶ್ ಬುಧವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಶಿವಮೊಗ್ಗದ ನವುಲೆಯ ನಿವಾಸಿ ಬಿ.ಯಶವಂತ ಅವರ ಹೆಸರಲ್ಲಿ ಚನ್ನ-ಮುಂಬಾಪುರದ ಅಕ್ಷರ ಕಾಲೇಜು ಎದುರು 10 ಗುಂಟೆ ಜಾಗ ಇತ್ತು. ಅದರ ಖಾತೆ ಮಾಡಿಸಿಕೊಳ್ಳಲು ಗ್ರಾಮ ಪಂಚಾಯಿತಿಗೆ 6 ತಿಂಗಳ ಹಿಂದೆ ಅರ್ಜಿ ಸಲ್ಲಿಸಿದ್ದರು. ಆದರೆ, ಕೆಲಸ ಆಗಿರಲಿಲ್ಲ. ಕೆಲಸ ಮಾಡಿಕೊಡಲು ಯೋಗೇಶ್ ₹ 15,000 ಲಂಚ ಕೇಳಿದ್ದರು. ಈ ಕುರಿತು ಯಶವಂತ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಯಶವಂತ ಅವರಿಂದ ಲಂಚದ ಹಣ ಪಡೆಯುವಾಗ ದಾಳಿಯ ವೇಳೆ ಯೋಗೇಶ್ ಸಿಕ್ಕಿಬಿದ್ದಿದ್ದು, ಬಂಧಿಸಿ ನ್ಯಾಯಾಂಗ ವಶಕ್ಕೆ ಸಲ್ಲಿಸಲಾಗಿದೆ.

'ಮುತ್ತುರಾಜ್ ಮುಖವಾಡ ತೆಗೆಯದ ರಾಜ್'

ರಾಜಕುಮಾರ್ ಜನ್ಮದಿನಾಚರಣೆ ಸಮಾರಂಭದಲ್ಲಿ ನಟ ರಾಘವೇಂದ್ರ ರಾಜಕುಮಾರ್ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಕುಮಾರ್ ಎಷ್ಟೇ ದೊಡ್ಡ ನಟರಾದರೂ ಮುತ್ತುರಾಜ್ ಮುಖವಾಡ ತೆಗೆಯಲಿಲ್ಲ. ಕೊನೆಯವರೆಗೂ ತಲೆ ಬಗ್ಗಿಸಿಯೇ ಸಾಗಿದರು' ಎಂದು ನಟ ರಾಘವೇಂದ್ರ ರಾಜಕುಮಾರ್ ತಿಳಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ರಾಜಕುಮಾರ್ ಅವರ 96ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ಭಾಗವಹಿಸಿ, ತಂದೆಯ ಜತೆಗಿನ ಒಡನಾಟವನ್ನು ಸ್ಮರಿಸಿಕೊಂಡರು.

'ನನಗೆ ಸರಳತೆಯ ಮುತ್ತುರಾಜ್ ಇಷ್ಟವಾಗುತ್ತಾರೆ. ನಾನು ಚಿತ್ರರಂಗಕ್ಕೆ ಪ್ರವೇಶಿಸಿದಾಗ ಸೋಲು– ಗೆಲುವನ್ನು ಯಾವ ರೀತಿ ಸ್ವೀಕರಿಸಬೇಕೆಂದು ಮಾರ್ಗದರ್ಶನ ಮಾಡಿದರು. ಬದುಕುವ ದಾರಿಯನ್ನು ತೋರಿಸಿಕೊಟ್ಟರು. ಅಪ್ಪಾಜಿ ಬಗ್ಗೆ ಪುಸ್ತಕ ಬರೆಯಲು ತಮ್ಮ ಓಡಾಡುತ್ತಿದ್ದಾಗ, ನನ್ನ ಬಗ್ಗೆ ಏಕೆ ಪುಸ್ತಕ ಬರೆಯುತ್ತಾನೆ ಎಂದು ಪ್ರಶ್ನಿಸಿದ್ದರು. ಹೊರಗಡೆ ಅಭಿಮಾನಿಗಳು ರಾಜಕುಮಾರ್ ಅವರನ್ನು ಬೆರಗು ಕಣ್ಣಿನಿಂದ ನೋಡಿದರೂ, ಅವರು ಮುತ್ತುರಾಜ್ ಆಗಿಯೇ ಸರಳ ಜೀವನ ನಡೆಸಿದರು' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ (ಎಡದಿಂದ) ಪಿ. ಶೇಷಾದ್ರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಸುರಳ್ಕ ವಿಕಾಸ್ ಕಿಶೋರ್, ರಾಘವೇಂದ್ರ ರಾಜಕುಮಾರ್, ಶ್ರೀನಿವಾಸಮೂರ್ತಿ ಮತ್ತು ಕೆ.ವಿ. ತ್ರಿಲೋಕ್ ಚಂದ್ರ ಅವರು ರಾಜಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಚಲನಚಿತ್ರ ನಿರ್ದೇಶಕ ಪಿ. ಶೇಷಾದ್ರಿ, 'ರಾಜಕುಮಾರ್ ಅವರು ಪೌರಾಣಿಕ ಹಾಗೂ ಐತಿಹಾಸಿಕ ಪಾತ್ರಗಳಿಗೆ ಜೀವತುಂಬಿದರು. 20ನೇ ಶತಮಾನವು ಕನ್ನಡ ನಾಡಿಗೆ ನೀಡಿದ ದೊಡ್ಡ ಕೊಡುಗೆ ರಾಜಕುಮಾರ್. ಕುವೆಂಪು ಅವರು ಈಗ ಇದ್ದಿದ್ದರೆ ನಾಡಗೀತೆಯಲ್ಲಿ ರಾಜಕುಮಾರ್ ಅವರ ಹೆಸರನ್ನು ಸೇರಿಸುತ್ತಿದ್ದರು. ರಾಜಕುಮಾರ್ ಅವರ ಶತಮಾನೋತ್ಸವಕ್ಕೆ ಅವರ ಬಗ್ಗೆ ಚಲನಚಿತ್ರವನ್ನು ಹೊರತರಬೇಕು. ಅದನ್ನು ರಾಜಕುಮಾರ್ ಅವರ ಕುಟುಂಬ ಅಥವಾ ಬೇರೆ ಯಾರಾದರೂ ಸಾಕಾರ ಮಾಡಲಿ' ಎಂದು ಆಶಯ ವ್ಯಕ್ತಪಡಿಸಿದರು.

ಕಲಾವಿದ ಶ್ರೀನಿವಾಸಮೂರ್ತಿ, 'ರಾಜಕುಮಾರ್ ಅವರು ಸಹ ಕಲಾವಿದರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಭಾರತೀಯ ಚಿತ್ರರಂಗದಲ್ಲಿ ಎಷ್ಟೋ ನಟರು ಬಂದು ಹೋಗಿದ್ದಾರೆ. ಆದರೆ, ರಾಜಕುಮಾರ್ ಅವರಿಗೆ ಸಿಕ್ಕಿರುವ ಪಾತ್ರಗಳು ಬೇರೆ ಯಾರಿಗೂ ಸಿಕ್ಕಿಲ್ಲ. ಅವರು ಎಲ್ಲ ಕನ್ನಡಿಗರ ಹೃದಯದಲ್ಲಿ ನೆಲೆಸಿದ್ದಾರೆ. ಅವರ ಬಾಯಲ್ಲಿ ಎಂದಿಗೂ ಅಪಶಬ್ದ, ಅಪನುಡಿ ಬಂದಿಲ್ಲ' ಎಂದು ಹೇಳಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾರ್ಯದರ್ಶಿ ಕೆ.ವಿ. ತ್ರಿಲೋಕ್ ಚಂದ್ರ, 'ರಾಜಕುಮಾರ್ ಅವರು 'ಅಭಿಮಾನಿ ದೇವರುಗಳು' ಎಂದು ಹೇಳುವ ಮೂಲಕ ಅಭಿಮಾನಿಗಳಿಂದ ಆರಾಧಿಸಲ್ಪಟ್ಟಿದ್ದರು. ತಮ್ಮ ಚಲನಚಿತ್ರಗಳ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಶ್ರಮಿಸಿದರು. ನೆಲ-ಜಲದ ಅಸ್ಮಿತೆಗೆ ಧಕ್ಕೆ ಬಂದಾಗ ಹೋರಾಟಕ್ಕೆ ಬೆಂಬಲ ಸೂಚಿಸಿದ್ದರು' ಎಂದರು.

ಇದಕ್ಕೂ ಮೊದಲು ರಾಜಕುಮಾರ್ ಅವರ ಚಲನಚಿತ್ರಗಳ ಜನಪ್ರಿಯ ಗೀತೆಗಳ ಗಾಯನ ನಡೆಯಿತು.

'ಮೈಸೂರು ಅನಂತಸ್ವಾಮಿ ಧಾಟಿ ನಾಡಗೀತೆಯೇ ಅಂತಿಮ'

ಒಂದನೇ ಪುಟದಿಂದ...

'ಸರ್ಕಾರದ ಆದೇಶ ಪ್ರಶ್ನಿಸುವ ಯಾವುದೇ ಅಧಿಕಾರವನ್ನು ಅರ್ಜಿದಾರರು ಹೊಂದಿಲ್ಲ. ಅವರೇನೂ ಸರ್ಕಾರಿ ನೌಕರರಲ್ಲ ಅಥವಾ ಅವರ ಮಕ್ಕಳು ಶಾಲೆಯಲ್ಲಿ ಕಲಿಯುತ್ತಿದ್ದಾರೆ ಎಂದಾಗಲೀ ಇಲ್ಲ. ಹೀಗಾಗಿ, ಅವರ ಮೂಲಭೂತ ಹಕ್ಕು ಉಲ್ಲಂಘನೆ ಆಗಿದೆ ಎಂಬ ಪ್ರಶ್ನೆಯೇ ಇಲ್ಲಿ ಉದ್ಭವಿಸುವುದಿಲ್ಲ. ನಿಮ್ಮ ಯಾವ ಹಕ್ಕೂ ಉಲ್ಲಂಘನೆಯಾಗಿಲ್ಲ ಎಂಬುದನ್ನು ನೆನಪಿಡಿ. ಹೀಗಾಗಿ, ನಿಮ್ಮ ಅರ್ಜಿ ವಜಾ ಮಾಡಲಾಗುತ್ತಿದೆ' ಎಂದು ನ್ಯಾಯಪೀಠ ತೀರ್ಪಿನಲ್ಲಿ ತಿಳಿಸಿದೆ.

'ಇಂತಹದೇ ಧಾಟಿಯಲ್ಲಿ ನಾಡಗೀತೆ ಹಾಡಬೇಕೆಂದು ಸರ್ಕಾರ ಸುಖಾಸುಮ್ಮನೆ ಆದೇಶ ಹೊರಡಿಸಿಲ್ಲ. ನಾಡಗೀತೆ ವಿಚಾರವಾಗಿ ಹಲವು ನಿಯೋಗಗಳೊಂದಿಗೆ ಚರ್ಚಿಸಿದೆ. ಧಾಟಿಯನ್ನು ಅಂತಿಮಗೊಳಿಸಲು ತಜ್ಞರ ಸಮಿತಿ ರಚನೆ ಮಾಡಿತ್ತು. ಆ ಸಮಿತಿ ನೀಡಿದ ವರದಿ ಆಧರಿಸಿ ಮೈಸೂರು ಅನಂತ ಸ್ವಾಮಿ ಅವರ ಧಾಟಿಯಲ್ಲಿ ನಾಡಗೀತೆ ಹಾಡುವುದನ್ನು ಕಡ್ಡಾಯಗೊಳಿಸಿದೆ' ಎಂದು ಹೇಳಿದೆ.

ಅರ್ಜಿದಾರರ ಪರ ಹಿರಿಯ ವಕೀಲ ಅಶೋಕ ಹಾರನಹಳ್ಳಿ, ಮಧ್ಯಂತರ ಅರ್ಜಿದಾರ ಮೃತ್ಯುಂಜಯ ದೊಡ್ಡವಾಡ ಪರ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ಹಾಗೂ ವಕಾಲತ್ತು ವಹಿಸಿದ್ದ ಎಚ್.ಸುನಿಲ್ ಕುಮಾರ್ ವಾದ ಮಂಡಿಸಿದ್ದರು.

'ಜೈ ಶ್ರೀರಾಮ್' ಎಂದಿದ್ದಕ್ಕೆ ಹಲ್ಲೆ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): 'ಜೈ ಶ್ರೀರಾಮ್' ಎಂದು ಘೋಷಣೆ ಕೂಗಿದ್ದಕ್ಕೆ ಮುಸ್ಲಿಮರ ಗುಂಪೊಂದು ಯುವಕನ ಮೇಲೆ ಹಲ್ಲೆ ನಡೆಸಿದ ಘಟನೆ ಹನುಮ ಜಯಂತಿ ದಿನವಾದ ಮಂಗಳವಾರ ತಡರಾತ್ರಿ ಗಂಗಾವತಿ ತಾಲ್ಲೂಕಿನ ಶ್ರೀರಾಮನಗರ ಗ್ರಾಮದಲ್ಲಿ ನಡೆದಿದೆ.

ಶ್ರೀರಾಮನಗರದ ಕುಮಾರ ರಾಮು ರಾಠೋಡ (25) ಹಲ್ಲೆಗೆ ಒಳಗಾದವರು.

ಶ್ರೀರಾಮನಗರದ ಬಾರ್‌ನಲ್ಲಿ ಕುಮಾರ ರಾಠೋಡ ಮದ್ಯ ಸೇವನೆ ಮಾಡುತ್ತಿದ್ದಾಗ ಫಿರೋಜ್ ಖಾನ್ ಎಂಬ ವ್ಯಕ್ತಿ ಮದ್ಯದ ಗ್ಲಾಸಿಗೆ ನೀರು ಹಾಕುವಂತೆ ಕೇಳಿದ್ದಾನೆ. ಆಗ ಕುಮಾರ 'ಜೈ ಶ್ರೀರಾಮ್' ಎಂದು ಘೋಷಣೆ ಕೂಗಿ ನೀರು ಹಾಕಿದ್ದ. 'ಜೈ ಶ್ರೀರಾಮ್' ಎಂದು ಏಕೆ ಘೋಷಣೆ ಕೂಗಿದೆ ಎಂದು ಫಿರೋಜ್ ಖಾನ್ ತಕರಾರು ತೆಗೆದಿದ್ದು, ಗಲಾಟೆ ತಾರಕಕ್ಕೇರಿದೆ.

ಫಿರೋಜ್ ಖಾನ್, ಸಹೋದರ ಸುಲ್ತಾನ್, ಶೇಕ್ಷಾವಲಿ, ನಬಿ, ಶರೀಫ್ ಸೇರಿ 20ಕ್ಕೂ ಹೆಚ್ಚು ಜನರು ಜಾತಿಯನ್ನು ನಿಂದಿಸಿ, ಹಲ್ಲೆ ನಡೆಸಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಸರ್ಕಾರಿ ಉಪವಿಭಾಗ ಆಸ್ಪತ್ರೆಯಲ್ಲಿ ಕುಮಾರ ಚಿಕಿತ್ಸೆ ಪಡೆಯುತ್ತಿದ್ದಾರೆ. ಗಂಗಾವತಿ ಗ್ರಾಮೀಣ ಠಾಣೆಯಲ್ಲಿ ಎಸ್ಸಿ, ಎಸ್ಟಿ ದೌರ್ಜನ್ಯ ತಡೆ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ.

14 'ಲೋಕ' ಕ್ಷೇತ್ರ: ಮತ ಸೆಳೆತಕ್ಕೆ 'ಒಳ'ತಂತ್ರ

ಒಂದನೇ ಪುಟದಿಂದ...

ಈ ಇಳಿವಯಸ್ಸಿನಲ್ಲೂ ಪುತ್ರನ ಜತೆಗೆ ಇತರೆ ಕ್ಷೇತ್ರಗಳಲ್ಲೂ ಚುರುಕಿನ ಚುನಾವಣಾ ಪ್ರಚಾರ ಕೈಗೊಂಡ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರು ವಿರೋಧ ಪಕ್ಷ ಕಾಂಗ್ರೆಸ್ ವಿರುದ್ಧ ಗುಡುಗಿದ್ದರು. ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹಾಗೂ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮೈತ್ರಿಕೂಟದ ಅಭ್ಯರ್ಥಿಗಳ ಪರ, ಜೆಡಿಎಸ್ ನಾಯಕರ ಜತೆಗೆ ಅನೇಕ ಕ್ಷೇತ್ರಗಳಲ್ಲಿ ಪ್ರಚಾರ ಕೈಗೊಂಡರು.

ಎರಡು ದಿನ ಯಾವ ನಾಯಕರು ಎಲ್ಲಿ?: ಏ. 25ರಂದು ಮನೆಮನೆ ಪ್ರಚಾರಕ್ಕೆ ಅವಕಾಶವಿದ್ದು, 26ರಂದು ಮತದಾನ ನಡೆಯಲಿದೆ. ಬಿಜೆಪಿಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ಗುರುವಾರ ಬೀದರ್‌ನಲ್ಲಿ ಚುನಾವಣಾ ಪ್ರಚಾರ ನಡೆಸಲಿದ್ದಾರೆ. ಶುಕ್ರವಾರವೂ ಚುನಾವಣಾ ಪ್ರಚಾರದಲ್ಲಿರುತ್ತಾರೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ದಾವಣಗೆರೆಯಲ್ಲಿ ಪ್ರಚಾರ ನಡೆಸಲಿದ್ದಾರೆ. ಇಬ್ಬರ ಮತವೂ ಶಿವಮೊಗ್ಗ ಜಿಲ್ಲೆ ಶಿಕಾರಿಪುರದಲ್ಲಿದ್ದು, ಇಲ್ಲಿ ಎರಡನೇ ಹಂತದಲ್ಲಿ ಮತದಾನ ನಡೆಯಲಿದೆ. ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ ಗುರುವಾರ ಮತ್ತು ಶುಕ್ರವಾರ ಬೆಂಗಳೂರಿನಲ್ಲೇ ಇರಲಿದ್ದಾರೆ.

ಎಚ್.ಡಿ. ದೇವೇಗೌಡ ಅವರು ಹಾಸನ, ಎಚ್.ಡಿ. ಕುಮಾರಸ್ವಾಮಿ ಮಂಡ್ಯದಲ್ಲಿ ಠಿಕಾಣಿ ಹೂಡುವರು. ಕೊನೆಯ ದಿನ ಉತ್ತರ ಕರ್ನಾಟಕದ ಕ್ಷೇತ್ರಗಳಲ್ಲಿ ಬಿರುಸಿನ ಪ್ರಚಾರ ಕೈಗೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಹುಬ್ಬಳ್ಳಿಗೆ ತೆರಳಿ, ಮತದಾನದ ದಿನ ಸ್ವಕ್ಷೇತ್ರ ಮೈಸೂರಿಗೆ ಮರಳುವರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬುಧವಾರ ಕನಕಪುರದಲ್ಲಿ ಬಿರುಸಿನ ಪ್ರಚಾರ ಕೈಗೊಂಡಿದ್ದು, ಗುರುವಾರ ಬೆಂಗಳೂರಿನಲ್ಲಿರುವರು.

ಬೆಂಗಳೂರು ಗ್ರಾಮಾಂತರದಲ್ಲಿ ನಿಗಾ

ಒಂದನೇ ಪುಟದಿಂದ...

'ಕ್ಷೇತ್ರದ ಚುನಾವಣಾಧಿಕಾರಿ, ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮತ್ತು ಕೇಂದ್ರ ಚುನಾವಣಾ ಆಯೋಗವು ವೆಬ್‌ಕಾಸ್ಟಿಂಗ್ ವೀಕ್ಷಿಸಲು ಅವಕಾಶ ಇದೆ' ಎಂದರು.

ಮೊದಲ ಹಂತದಲ್ಲಿ ಮತದಾನ ನಡೆಯುವ 14 ಕ್ಷೇತ್ರಗಳಲ್ಲಿ 19,701 ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್ ಮಾಡಲಾಗುವುದು. 1,317 ಮತಗಟ್ಟೆಗಳಲ್ಲಿ ಸಂಪೂರ್ಣ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗುವುದು ಎಂದರು.

ಕಾನ್ ಚಿತ್ರೋತ್ಸವಕ್ಕೆ 'ಸನ್‌ಫ್ಲವರ್ಸ್ ವರ್ ದ ಫಸ್ಟ್ ಒನ್ಸ್ ಟು ನೋ'

ಪ್ರಜಾವಾಣಿ ವಾರ್ತೆ

ಮೈಸೂರು: ನಗರದ ಚಿದಾನಂದ ಎಸ್.ನಾಯಕ್ ನಿರ್ದೇಶನದ ಕಿರುಚಿತ್ರ 'ಸನ್‌ಫ್ಲವರ್ಸ್ ವರ್ ದ ಫಸ್ಟ್ ಒನ್ಸ್ ಟು ನೋ' ಪ್ರತಿಷ್ಠಿತ ಕಾನ್ ಚಲನಚಿತ್ರೋತ್ಸವಕ್ಕೆ ಆಯ್ಕೆಯಾಗಿದೆ.

ಚಿದಾನಂದ ಎಸ್. ನಾಯಕ್

ಪುಣೆಯ ಫಿಲ್ಮ್ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ (ಎಫ್‌ಟಿಐಐ) ನಿರ್ಮಿಸಿರುವ ಈ ಕಿರುಚಿತ್ರದ ರಚನೆ ಹಾಗೂ ನಿರ್ದೇಶನ ಚಿದಾನಂದ್ ಅವರದ್ದು. ವಿ.ಮನೋಜ್– ಸಂಕಲನ, ಸೂರಜ್ ಠಾಕೂರ್– ಛಾಯಾಗ್ರಹಣ, ಅಭಿಷೇಕ್ ಕದಂ ಅವರ ಶಬ್ದವಿನ್ಯಾಸ ಚಿತ್ರಕ್ಕಿದೆ. ಜಹಾಂಗೀರ್ ಮತ್ತು ವಸುಧಾ ಭಾರಿಘಾಟ್ ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ.

'ನನ್ನ ಸಿನಿಮಾ ಅಂತರರಾಷ್ಟ್ರೀಯ ವೇದಿಕೆಯಲ್ಲಿ ಗುರುತಿಸಿಕೊಂಡಿರುವುದು, 77ನೇ ಕಾನ್ ಚಿತ್ರೋತ್ಸವಕ್ಕೆ ಆಯ್ಕೆಯಾಗಿರುವುದನ್ನು ನಂಬಲಾಗುತ್ತಿಲ್ಲ. ನನ್ನ ಕನಸು ನಿಜವಾಗಿದೆ. ನನ್ನಲ್ಲಿ ನಂಬಿಕೆಯಿಟ್ಟು ಪ್ರೋತ್ಸಾಹಿಸಿದ ಎಲ್ಲರಿಗೂ ಹೃದಯಾಂತರಾಳದಿಂದ ಧನ್ಯವಾದ' ಎಂದು ಚಿದಾನಂದ್ 'ಪ್ರಜಾವಾಣಿ' ಜೊತೆ ಬುಧವಾರ ಸಂತಸ ಹಂಚಿಕೊಂಡರು.

ನಿಧನ ವಾರ್ತೆ

ಪತ್ರಕರ್ತ ಎನ್. ಅರ್ಜುನ ದೇವ

ಬೆಂಗಳೂರು: ಪತ್ರಕರ್ತ ಎನ್. ಅರ್ಜುನ ದೇವ (92) ಅವರು ವಯೋಸಹಜ ಅನಾರೋಗ್ಯದಿಂದಾಗಿ ಬುಧವಾರ ನಿಧನರಾದರು.

ಮೃತರಿಗೆ ಇಬ್ಬರು ಪುತ್ರರಿದ್ದಾರೆ. ಅವರ ಹುಟ್ಟೂರಾದ ಕೋಲಾರ ಜಿಲ್ಲೆ ನರಸಾಪುರ ಹೋಬಳಿಯ ಚೌಡದೇವನಹಳ್ಳಿಯಲ್ಲಿ ಸಂಜೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎನ್. ಅರ್ಜುನ ದೇವ ಅವರು ಜನಿಸಿದ್ದು 1932ರಲ್ಲಿ. ಆರಂಭದ ದಿನಗಳಲ್ಲಿ 'ಪರಂಜ್ಯೋತಿ' ಎಂಬ ವಾರಪತ್ರಿಕೆ ಮತ್ತು 'ಜ್ಯೋತಿ' ಎಂಬ ದಿನಪತ್ರಿಕೆ ನಡೆಸಿದ್ದರು. 1957ರಲ್ಲಿ ತಾಯಿನಾಡು ಪತ್ರಿಕೆಯಲ್ಲಿ ವರದಿಗಾರರಾಗಿ ಕೆಲಸ ಮುಂದುವರಿಸಿದರು. ನಂತರ 'ಸಂಯುಕ್ತ ಕರ್ನಾಟಕ' ಮತ್ತು 'ಪ್ರಜಾವಾಣಿ' ಪತ್ರಿಕೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದರು. 'ಸೂರ್ಯೋದಯ' ಪತ್ರಿಕೆಯ ಸಂಪಾದಕರಾಗಿದ್ದರು. ನಿವೃತ್ತಿ ನಂತರ 'ಜಾಣ' ಎಂಬ ಪತ್ರಿಕೆಯನ್ನು ನಡೆಸಿದ್ದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿಯಾಗಿ, ಮಾಧ್ಯಮ ಅಕಾಡೆಮಿಯ ಅಧ್ಯಕ್ಷರಾಗಿ, ಕಾರ್ಯನಿರತ ಪತ್ರಕರ್ತರ ಸಂಘದ ಭಾರತೀಯ ಒಕ್ಕೂಟದ ಉಪಾಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದರು. ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿದ್ದರು. 'ಸ್ಕೂಪು ತೋಪಾಯ್ತು', 'ಜಾನವಾಣಿ' ಸೇರಿದಂತೆ ಕೆಲವು ಪುಸ್ತಕಗಳನ್ನು ಅರ್ಜುನ ದೇವ ಬರೆದಿದ್ದರು.

ಅರ್ಜುನ ದೇವ ಅವರು ಪತ್ರಿಕೋದ್ಯಮ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಾಗಿ ಹಲವು ಪುರಸ್ಕಾರಗಳು ಸಂದಿವೆ. 'ಟಿಎಸ್ಆರ್ ಪ್ರಶಸ್ತಿ', 'ಪಿ. ಆರ್.ರಾಮಯ್ಯ ಪ್ರಶಸ್ತಿ', 'ಸಂದೇಶ್ ಪ್ರಶಸ್ತಿ', ಮೈಸೂರು ಕುವೆಂಪು ಟ್ರಸ್ಟ್ ನೀಡುವ 'ಎಚ್.ಕೆ.ವೀರಣ್ಣಗೌಡ ಪ್ರಶಸ್ತಿ', ಬಿಬಿಎಂಪಿ ನೀಡುವ 'ನಾಡಪ್ರಭು ಕೆಂಪೇಗೌಡ ಪ್ರಶಸ್ತಿ'ಗಳು ಸಂದಿವೆ.

ಹವಾಮಾನ ಇಲಾಖೆ ಮುನ್ಸೂಚನೆ, ಗರಿಷ್ಠ ತಾಪಮಾನ ದಾಖಲು ಸಂಭವ

10 ಜಿಲ್ಲೆಗಳಲ್ಲಿ ಮಳೆ, 15ರಲ್ಲಿ ಬಿಸಿ ಗಾಳಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 10 ಜಿಲ್ಲೆಗಳಲ್ಲಿ ಗುರುವಾರ ಮಳೆಯಾಗುವ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, 15 ಜಿಲ್ಲೆಗಳಲ್ಲಿ ಬಿಸಿ ಗಾಳಿಯ ಎಚ್ಚರಿಕೆ ನೀಡಿದೆ.

ಬೆಳಗಾವಿ, ಕೊಪ್ಪಳ, ವಿಜಯಪುರ, ಶಿವಮೊಗ್ಗ, ಬಳ್ಳಾರಿ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಮೈಸೂರು ಜಿಲ್ಲೆಯ ಒಂದೆರಡು ಕಡೆ ಸಾಮಾನ್ಯ ಮಳೆಯಾಗುವ ಸಾಧ್ಯತೆಯಿದೆ. ಮುಂದಿನ 5 ದಿನಗಳು ರಾಜ್ಯದಲ್ಲಿ ಗರಿಷ್ಠ ತಾಪಮಾನ 2ರಿಂದ 3 ಡಿಗ್ರಿ ಸೆಲ್ಸಿಯಸ್ ಏರಿಕೆಯಾಗುವ ಸಂಭವವಿದೆ. ಇದರಿಂದ ಹಲವೆಡೆ ಬಿಸಿ ಗಾಳಿ ಕಾಣಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಕೆಲ ಜಿಲ್ಲೆಗಳಲ್ಲಿ ಮಳೆಯ ಜತೆಗೆ ಬಿಸಿಗಾಳಿಯೂ ಕಾಣಿಸಿಕೊಳ್ಳುವ ಸಂಭವವಿದೆ. ವಿಜಯಪುರ, ಯಾದಗಿರಿ, ಕೊಪ್ಪಳ, ರಾಯಚೂರು, ಬಾಗಲಕೋಟೆ, ಕಲಬುರಗಿ, ಬಳ್ಳಾರಿ, ಚಿತ್ರದುರ್ಗ, ಕೋಲಾರ, ಮೈಸೂರು, ಮಂಡ್ಯ, ತುಮಕೂರು, ಬೆಳಗಾವಿ, ಗದಗ ಹಾಗೂ ದಾವಣಗೆರೆಯಲ್ಲಿ ಮುಂದಿನ ನಾಲ್ಕು ದಿನಗಳು ಬಿಸಿ ಗಾಳಿ ಕಾಣಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಹೇಳಿದೆ.

ಇದೇ 28ರವರೆಗೆ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬಿಸಿ ವಾತಾವರಣ ಮೇಲುಗೈ ಸಾಧಿಸುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ. ಬುಧವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ರಾಜ್ಯದಲ್ಲಿ ರಾಯಚೂರಿನಲ್ಲಿ ಗರಿಷ್ಠ (44.5 ಡಿಗ್ರಿ ಸೆಲ್ಸಿಯಸ್) ಉಷ್ಣಾಂಶ ವರದಿಯಾಗಿದೆ. ಕಲಬುರಗಿ, ರಾಯಚೂರು, ಕೊಪ್ಪಳ ಸೇರಿ 14 ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ದಾಟಿದೆ.

ಮಳೆ– ಗಾಳಿ: ಮನೆ ಮೇಲೆ ಬಿದ್ದ ಮರ

ಬೆಳಗಾವಿ: ಬೈಲಹೊಂಗಲ ತಾಲ್ಲೂಕಿನ ಗರ್ಜೂರ ಗ್ರಾಮದಲ್ಲಿ ಬುಧವಾರ ಒಂದು ಗಂಟೆ ಧಾರಾಕಾರ ಮಳೆ ಸುರಿಯಿತು. ಜೋರಾದ ಮಳೆ–ಗಾಳಿಯಿಂದ ಬೃಹತ್ ನೀಲಗಿರಿ ಮರ ಮನೆ ಮೇಲೆ ಬಿದ್ದಿದೆ. ಯಾರಿಗೂ ಗಾಯ ಆಗಿಲ್ಲ.

ನಿಪ್ಪಾಣಿಯಲ್ಲಿಯೂ ಕೂಡ ಗುಡುಗು– ಮಿಂಚು ಸಹಿತವಾಗಿ ಮಳೆಯಾದರೆ, ಗೋಕಾಕ, ಹುಕ್ಕೇರಿ ತಾಲ್ಲೂಕುಗಳಲ್ಲಿ ತುಂತುರು ಮಳೆಯಾಯಿತು.

ದೇವರಹಿಪ್ಪರಗಿ (ವಿಜಯಪುರ ಜಿಲ್ಲೆ) ವರದಿ: ತಾಲ್ಲೂಕಿನ ಚಿಕ್ಕರೂಗಿ ಗ್ರಾಮದಲ್ಲಿ ಸಂಜೆ ಒಂದು ಗಂಟೆ ಮಳೆ ಸುರಿಯಿತು. ಸಿಡಿಲಿನ ಹೊಡೆತಕ್ಕೆ 10 ಕುರಿಗಳು ಮೃತಪಟ್ಟಿವೆ.

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು – 560 064 ವೆಬ್‌ಸೈಟ್: www.rwf.indianrailways.gov.in.

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಸ್/ಪಿ1/2024–25 ದಿನಾಂಕ: 22.04.24

ಭಾರತದ ರಾಷ್ಟ್ರಪತಿಯವರ ಪರವಾಗಿ ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು ಕೆಳಕಂಡ ಐಟಂಗಳನ್ನು ಸರಬರಾಜು ಮಾಡಲು ಭಾರತೀಯ ರೈಲ್ವೆ ಇ–ಪೋರ್ಟಲ್ www.ireps.gov.in ಮೂಲಕ ಆಸಕ್ತಿಯುಳ್ಳ ಸರಬರಾಜುದಾರರಿಂದ ಎಲೆಕ್ಟ್ರಾನಿಕ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್ ದಾಖಲಾತಿಗಳು ಮತ್ತು ಟೆಂಡರ್‌ನ ತಿದ್ದುಪಡಿ ಯಾವುದೇ ಇದ್ದಲ್ಲಿ ಪೋರ್ಟಲ್‌ನಲ್ಲಿ ಮಾತ್ರ ಲಭ್ಯವಿರುವುದು.

ಕ್ರ ಸಂ	ಟೆಂಡರ್ ಸಂಖ್ಯೆ	ಕೊನೆಯ ದಿನಾಂಕ	ಸಂಕ್ಷಿಪ್ತ ವಿವರ ಮತ್ತು ಪ್ರಮಾಣ
1	ಪಿ1232304ಸಿ	15–05–24	ಇನ್ಸರ್ಟ್ಸ್ ಲೆನೆಕ್ಸ್ 38 x 22 x 40 ಪಿ 30 ರಿಂದ ಪಿ–40 (ಅಭಿವೃದ್ಧಿ ಟೆಂಡರ್). ಪ್ರಮಾಣ: 1000 ಸಂಖ್ಯೆಗಳು
2	ಪಿ1241318	15–05–24	ಚಾಂಫೆರಿಂಗ್ ಟೂಲ್ ಹೋಲ್ಡರ್ 3.3712ಓಆರ್732 ಕ್ಕೆ ಸೂಕ್ತವಾದ ಎಸ್‌ಇಎಫ್‌ಎಎಸ್ 3.42807ಆರ್001 ರ ರೀ–ಸೆಂಟ್ರಿಂಗ್‌ಗಾಗಿ ಕೋಟೆಡ್ ಇನ್ಸರ್ಟ್ಸ್. ತಯಾರಿಕೆ: ಕೆನ್ನಾಮೆಟಲ್ ಅಥವಾ ಸ್ಯಾಂಡಿವಿಕ್ ಅಥವಾ ಸೆಕೋ. ಪ್ರಮಾಣ: 2970 ಸಂಖ್ಯೆಗಳು
ಗ್ಲೋಬಲ್ ಟೆಂಡರ್:			
1	ಪಿ1232300	10–06–24	ಆರ್‌ಡಬ್ಲ್ಯೂಎಫ್ ವೈಶಿಷ್ಟ್ಯತೆಯಂತೆ ಗ್ರಾಫೈಟ್ ಮೌಲ್ಡ್ ಬ್ಲಾಂಕ್ಸ್ 48.2" x 22.6" ಪ್ರಮಾಣ: 1170 ಸಂಖ್ಯೆಗಳು

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ಕಾವೇರಿ ಎಜುಕೇಷನ್ ಸೊಸೈಟಿ (ರಿ).

(ಶಾಂತಿನಗರ), ಎ.ಎಸ್.ಕೆ.ಪಾಳ್ಯ, ತುಮಕೂರು–2.

ಪ್ರಕಟಣೆ

ಕಾವೇರಿ ವಿದ್ಯಾಸಂಸ್ಥೆ (ರಿ.), ಎ.ಎಸ್.ಕೆ. ಪಾಳ್ಯ, ತುಮಕೂರು. ಈ ಸಂಸ್ಥೆಯ ಅಧೀನದಲ್ಲಿ ನಡೆಯುತ್ತಿರುವ ಅನುದಾನಿತ ಪ್ರಾಥಮಿಕ ಶಾಲೆಯಲ್ಲಿ ಈ ಕೆಳಕಂಡ ಹುದ್ದೆಗಳು ನಿವೃತ್ತಿಯಿಂದ ತೆರವಾಗಿದ್ದು, ಈ ಹುದ್ದೆಗಳಿಗೆ ನೇಮಕಾತಿ ಮಾಡಲು ಉದ್ದೇಶಿಸಿದ್ದು, ಆ ಪ್ರಕಾರ ಆರ್.ಟಿ.ಇ. ನಿಯಮದಡಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಉಚ್ಚ ನ್ಯಾಯಾಲಯದ ದಾವೆ ಸಂಖ್ಯೆ: W.P. 11667/22ರ ಆದೇಶದಂತೆ ನೇಮಕಾತಿ ಮಾಡಿಕೊಳ್ಳಲಾಗುವುದು. ಅರ್ಹ ಅಭ್ಯರ್ಥಿಗಳು ಈ ಜಾಹೀರಾತು ಪ್ರಕಟವಾದ 21 ದಿನಗಳೊಳಗಾಗಿ ಕಾರ್ಯದರ್ಶಿಗಳವರ ವಿಳಾಸಕ್ಕೆ ಅರ್ಹತಾ ಪತ್ರಗಳೊಂದಿಗೆ ಹಾಗೂ 500/–ರೂ.ಗಳ ಡಿ.ಡಿ. ಸಹಿತ ಅರ್ಜಿಗಳನ್ನು ಸಲ್ಲಿಸುವುದು.

ಕ್ರ.ಸಂ.	ಹುದ್ದೆಗಳ ಸಂಖ್ಯೆ	ಹುದ್ದೆಗಳ ವಿವರ	ವಿದ್ಯಾರ್ಹತೆ	ಬಿಂದು
1	01	1ನೇ ಹುದ್ದೆ ಪ್ರಾಥಮಿಕ ಶಾಲೆ 1 ರಿಂದ 5ನೇ ತರಗತಿಯವರೆಗೆ	S.S.L.C. 50%, D.Ed. 45%	1ನೇ ಬಿಂದು S.C.
2	01	2ನೇ ಹುದ್ದೆ ಪ್ರಾಥಮಿಕ ಶಾಲೆ 1 ರಿಂದ 5ನೇ ತರಗತಿಯವರೆಗೆ	S.S.L.C. 50%, D.Ed. 45%	2ನೇ ಬಿಂದು G.M

ಈ ಎರಡೂ ಹುದ್ದೆಗಳಿಗೆ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 1 ರಿಂದ 5ನೇ ತರಗತಿಗೆ ಸರ್ಕಾರವು ನಿಗದಿ ಪಡಿಸಿರುವ ವಯಸ್ಸು, ವೇತನ ಶ್ರೇಣಿ ಅನ್ವಯಿಸುತ್ತದೆ.

ಕ್ರ.ಸಂ.	ಹುದ್ದೆಗಳ ಸಂಖ್ಯೆ	ಹುದ್ದೆಗಳ ವಿವರ	ವಿದ್ಯಾರ್ಹತೆ	ಬಿಂದು
3	01	1ನೇ ಹುದ್ದೆ ಪ್ರಾಥಮಿಕ ಶಾಲೆ 6 ರಿಂದ 8ನೇ ತರಗತಿಯವರೆಗೆ	B.Sc. ಪದವಿ ಕನಿಷ್ಠ 50%, B.Ed. ಕನಿಷ್ಠ 45%	1ನೇ ಬಿಂದು S.C.
4	01	2ನೇ ಹುದ್ದೆ ಪ್ರಾಥಮಿಕ ಶಾಲೆ 6 ರಿಂದ 8ನೇ ತರಗತಿಯವರೆಗೆ	B.A. 50% B.Ed. 45%	2ನೇ ಬಿಂದು G.M
5	01	ಭಾಷಾ ಶಿಕ್ಷಕರು ಪ್ರಾಥಮಿಕ 6 ರಿಂದ 8ನೇ ತರಗತಿಯವರೆಗೆ	B.A. ಪದವಿಯಲ್ಲಿ ಕನ್ನಡ ಐಚ್ಛಿಕ ಭಾಷೆ ಕನಿಷ್ಠ 50%, B.Ed. 50%	3ನೇ ಬಿಂದು S.T.

ಈ ಪದವೀಧರ ತರಬೇತಿ ಶಿಕ್ಷಕರಿಗೆ ಸರ್ಕಾರವು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 6 ರಿಂದ 8ನೇ ತರಗತಿ ಮಕ್ಕಳಿಗೆ ಬೋಧಿಸುವ ಶಿಕ್ಷಕರಿಗೆ ನಿಗದಿಪಡಿಸಿರುವ ವಯಸ್ಸು, ವೇತನ ಶ್ರೇಣಿಯಂತೆ ಇವರಿಗೂ ಅನ್ವಯಿಸುತ್ತದೆ. ಮೇಲಿನ ಸಿಬ್ಬಂದಿ ರಚನೆಯು ಆರ್.ಟಿ.ಇ. ಆಕ್ಟ್ 2009ರ ಉಪನಿಯಮ 19ರಲ್ಲಿನ ಷರತ್ತಿನಂತೆ ಷೆಡ್ಯೂಲ್‌ನಲ್ಲಿ ದಾಖಲಿಸಿರುವಂತೆ ಸಿಬ್ಬಂದಿ ವಿವರದಂತೆ ಪ್ರಕಟಿಸಲಾಗಿದೆ. ಉಚ್ಚ ನ್ಯಾಯಾಲಯದ ಮಾರ್ಗಸೂಚಿಗಳಂತೆ ಅನ್ವಯವಾಗಿ ಈ ನೇಮಕಾತಿಗಳನ್ನು ಇಲಾಖೆ ಅನುಮೋದಿಸುವ ಸಂಬಂಧ ಸರ್ಕಾರ ವಿಧಿಸಲಾಗುವ ಷರತ್ತುಗಳಿಗೆ ಒಳಪಟ್ಟಿರುತ್ತದೆ. ಈ ನೇಮಕಾತಿ ವಿಚಾರದಲ್ಲಿ ಇಲಾಖೆ ಸ್ಪಷ್ಟ ನಿಲುವು ತೆಗೆದು ಕೊಂಡು ಅನುಮೋದನೆ ಆಗುವವರೆಗೆ ಆಯ್ಕೆಯಾದ ಅಭ್ಯರ್ಥಿಗಳು ತಾತ್ಕಾಲಿಕವಾಗಿ ಶಾಲೆಯಲ್ಲಿ ಕರ್ತವ್ಯದಲ್ಲಿ ಮುಂದುವರೆಯಲು ಅವಕಾಶ ಕಲ್ಪಿಸಲಾಗಿದೆ.

ಪ್ರೌಢಶಾಲಾ ವಿಭಾಗ

ಇದೇ ಆಡಳಿತ ಮಂಡಳಿಯು ಪ್ರೌಢಶಾಲಾ ವಿಭಾಗದಲ್ಲಿ C.B.Z. ಸಹ ಶಿಕ್ಷಕ ಹುದ್ದೆಯು 2016ರಿಂದ ನಿವೃತ್ತಿಯಿಂದ ತೆರವಾಗಿ ಖಾಲಿ ಇದ್ದು ಈ ಹುದ್ದೆಗೂ ಉಚ್ಚನ್ಯಾಯಾಲಯದ ರಿಟ್ ಸಂಖ್ಯೆ: W.P. 11667/22ರ ಷರತ್ತಿನಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕ್ರ.ಸಂ.	ಹುದ್ದೆಗಳ ಸಂಖ್ಯೆ	ಹುದ್ದೆಗಳ ವಿವರ	ವಿದ್ಯಾರ್ಹತೆ	ಬಿಂದು
1	01	C.B.Z. ಸಹ ಶಿಕ್ಷಕ ಹುದ್ದೆ	B.Sc., CBZ ಮತ್ತು B.Ed.	2ನೇ ಹುದ್ದೆ GM

ಪ್ರೌಢಶಾಲಾ ಶ್ರೇಣಿಯಂತೆ ಅರ್ಹ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಗಳ ದೃಢೀಕರಣಗಳೊಂದಿಗೆ ಕಾರ್ಯದರ್ಶಿಗಳ ಕಾರ್ಯಾಲಯಕ್ಕೆ ಹಾಗೂ ಉಪನಿರ್ದೇಶಕರ ಕಛೇರಿಗೆ ಅರ್ಜಿ ಸಲ್ಲಿಸಬಹುದೆಂದು ತಿಳಿಸಲಾಗಿದೆ.

ಮೊ: 9448647747, 9482117149

ಸಹಿ/– ಕಾರ್ಯದರ್ಶಿ, ಕಾವೇರಿ ವಿದ್ಯಾಸಂಸ್ಥೆ, ಎ.ಎಸ್.ಕೆ. ಪಾಳ್ಯ, ಶಾಂತಿನಗರ, ತುಮಕೂರು.



ಸುಭಾಷಿತ

ಒಬ್ಬನೇ ವ್ಯಕ್ತಿಯಲ್ಲಿ ಎಲ್ಲ ಗುಣಗಳನ್ನೂ ನಿರೀಕ್ಷಿಸಬೇಡಿ.
-ಕನ್‌ಫ್ಯೂಷಿಯಸ್

ಚೆಸ್ ಕ್ರೀಡೆಯಲ್ಲಿ ಸಂಚಲನ ಸೃಷ್ಟಿಸಿದ ಗುಕೇಶ್ ಸಾಧನೆ

ಒಂದು ದಶಕದ ಅವಧಿಯಲ್ಲಿ ಪ್ರವರ್ಧಮಾನಕ್ಕೆ ಬಂದ ಭಾರತದ ಯುವ ಪ್ರತಿಭಾನ್ವಿತ ಚೆಸ್ ಆಟಗಾರರಲ್ಲಿ ಒಬ್ಬರಾದ ದೊಮ್ಮರಾಜು ಗುಕೇಶ್ ಅವರು ಪ್ರತಿಷ್ಠಿತ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿದ್ದಾರೆ. ಟೊರಾಂಟೊದಲ್ಲಿ ನಡೆದ ಈ ಟೂರ್ನಿಯಲ್ಲಿ ಘಟಾನುಘಟಿ ಆಟಗಾರರ ನಡುವೆ ಅವರು ಎಲ್ಲರ ನಿರೀಕ್ಷೆ ಮೀರಿ ಅಗ್ರಸ್ಥಾನ ಪಡೆದಿರುವುದು ಮಹತ್ಸಾಧನೆ. ಇಲ್ಲಿ ಪ್ರಶಸ್ತಿ ಗೆದ್ದ ಅತಿ ಕಿರಿಯ ಆಟಗಾರ ಎಂಬ ಹಿರಿಮೆಗೂ ಅವರು ಭಾಜನರಾಗಿದ್ದಾರೆ. ರಷ್ಯಾದ ಚೆಸ್ ದಿಗ್ಗಜ ಗ್ಯಾರಿ ಕ್ಯಾಸ್ಪರೋವ್ ಅವರ ದಾಖಲೆಯನ್ನು ಮುರಿದಿದ್ದಾರೆ. ಭಾರತದಲ್ಲಿ ವಿಶ್ವನಾಥನ್ ಆನಂದ್ ಬಿಟ್ಟರೆ ಈ ಟೂರ್ನಿಯನ್ನು ಗೆದ್ದ ಎರಡನೇ ಆಟಗಾರ ಎನಿಸಿದರು. ವಿಶ್ವ ಚೆಸ್ ಸಾಮ್ರಾಟನಿಗೆ ಸವಾಲೊಡ್ಡುವ (ಚಾಲೆಂಜರ್) ಆಟಗಾರನನ್ನು ಆಯ್ಕೆ ಮಾಡಲು ಈ ಟೂರ್ನಿ ನಡೆಯುತ್ತದೆ. ಕ್ಯಾಂಡಿಡೇಟ್ಸ್ ಟೂರ್ನಿ ಗೆಲುವಿನ ಮೂಲಕ 17 ವರ್ಷ ವಯಸ್ಸಿನ ಗುಕೇಶ್, ವಿಶ್ವ ಚೆಸ್ ಚಾಂಪಿಯನ್, ಚೀನಾದ ಡಿಂಗ್ ಲಿರೆನ್ ಅವರಿಗೆ ಸವಾಲು ಹಾಕುವ ಅರ್ಹತೆ ಪಡೆದಿದ್ದಾರೆ. ಈ ವಿಶ್ವ ಚಾಂಪಿಯನ್‌ಷಿಪ್ ಫೈನಲ್ ಈ ವರ್ಷಾಂತ್ಯದಲ್ಲಿ ನಡೆಯಬೇಕಿದೆ. ಮೊದಲ ಪ್ರಯತ್ನದಲ್ಲೇ ಚಾಂಪಿಯನ್ ಆಗಿರುವುದು ಗುಕೇಶ್ ಅವರ ಹೆಗ್ಗಳಿಕೆ. ವಿಶ್ವದ ಎರಡನೇ ಮತ್ತು ಮೂರನೇ ಕ್ರಮಾಂಕದ ಆಟಗಾರರಾದ ಅಮೆರಿಕದ ಫ್ಯಾಬಿಯಾನೊ ಕರುವಾನಾ ಮತ್ತು ಹಿಕಾರು ನಕಾಮುರಾ, ಎರಡು ಸಲ ಚಾಂಪಿಯನ್ ಆದ ರಷ್ಯಾದ ಇಯಾನ್ ನೆಪೊಮ್‌ನಿಷಿ, ಫ್ರಾನ್ಸ್‌ನ ಅಲಿರೇಝಾ ಫಿರೋಜ್ ಅವರಂತಹ ಆಟಗಾರರ ನಡುವೆ ಗುಕೇಶ್ ಅವರ ಈ ಸಾಧನೆ ಶ್ಲಾಘನೀಯ. ಭಾರತದ ಚೆಸ್ ತವರು ಚೆನ್ನೈನ ಈ ಆಟಗಾರ ಟೂರ್ನಿಯಲ್ಲಿ ಐದು ಪಂದ್ಯಗಳನ್ನು ಗೆದ್ದು, ಎಂಟು ಡ್ರಾ ಮಾಡಿಕೊಂಡು, ಒಂದನ್ನು ಮಾತ್ರ ಸೋತಿದ್ದರು. ಅವರ ಗಟ್ಟಿ ಮನೋಬಲ ಹಾಗೂ ಸಮಯದ ಒತ್ತಡದಲ್ಲೂ ಚಕಚಕನೆ ನಡೆಗಳನ್ನು ಇರಿಸುವ ಜಾಣ್ಮೆ ಮೆಚ್ಚುಗೆಗೆ ಪಾತ್ರವಾಗಿದೆ.

ಗುಕೇಶ್ ಅವರ ಯಶಸ್ಸು ಭಾರತದಲ್ಲಿ ಚೆಸ್ ಆಟಕ್ಕೆ ಇನ್ನಷ್ಟು ಶಕ್ತಿ ತುಂಬುವುದರಲ್ಲಿ ಅನುಮಾನವಿಲ್ಲ

ವಿಶ್ವ ಚೆಸ್‌ನಲ್ಲಿ ಭಾರತ ಪ್ರಬಲ ಶಕ್ತಿ ಆಗುತ್ತಿದೆ. ಗುಕೇಶ್ ಅವರ ಸಾಧನೆ ಇದಕ್ಕೆ ಪೂರಕವಾಗಿದೆ. 2023ರಲ್ಲಿ ಚೆನ್ನೈನ ಪ್ರಜ್ಞಾನಂದ ವಿಶ್ವಕಪ್ ಫೈನಲ್ ತಲುಪಿ ಚೆಸ್ ಲೋಕದ ಗಮನ ಸೆಳೆದಿದ್ದರು. ಎರಡು ವರ್ಷ ಹಿಂದೆ ಚೆನ್ನೈನಲ್ಲಿ ನಡೆದ ಚೆಸ್ ಒಲಿಂಪಿಯಾಡ್‌ನಲ್ಲಿ ಭಾರತದ ಎರಡನೇ ತಂಡ ಕಂಚಿನ ಪದಕ ಗೆಲ್ಲಲು ಗುಕೇಶ್ ಅವರ ಕೊಡುಗೆ ಗಣನೀಯ. ಅವರು ಮೊದಲ ಬೋರ್ಡ್‌ನಲ್ಲಿ ಹನ್ನೊಂದು ಪಂದ್ಯಗಳ ಪೈಕಿ ಒಂಬತ್ತನ್ನು ಗೆದ್ದು ವೈಯಕ್ತಿಕ ಚಿನ್ನದ ಪದಕ ಗಳಿಸಿದ್ದರು. ನೆದರ್ಲೆಂಡ್ಸ್‌ನ ವೈಕ್‌ಆನ್ ಝೀಯಲ್ಲಿ ಈ ವರ್ಷದ ಆರಂಭದಲ್ಲಿ ನಡೆದ ಟಾಟಾ ಮಾಸ್ಟರ್ಸ್ ಟೂರ್ನಿಯಲ್ಲಿ ಗುಕೇಶ್ ಜಂಟಿ ಅಗ್ರಸ್ಥಾನ ಪಡೆದು, ಟೈಬ್ರೇಕರ್‌ನಲ್ಲಿ ರನ್ನರ್ ಅಪ್ ಆಗಿದ್ದರು. ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಪ್ರಜ್ಞಾನಂದ ಅವರು ಐದನೇ ಸ್ಥಾನ ಮತ್ತು ಮಹಾರಾಷ್ಟ್ರದ ವಿದಿತ್ ಗುಜರಾತಿ ಆರನೇ ಸ್ಥಾನ ಗಳಿಸಿದ್ದಾರೆ. ಮೊದಲ ಬಾರಿ ಮಹಿಳಾ ವಿಭಾಗದ ಟೂರ್ನಿಯೂ ಜೊತೆಗೇ ನಡೆದಿತ್ತು. ಇದರಲ್ಲಿ ಚೀನಾದ ಝೊಂಗ್‌ಯಿ ತಾನ್ ಆರಂಭದಿಂದಲೇ ಮುನ್ನಡೆ ಸಾಧಿಸಿ ಅರ್ಹರಾಗಿ ಚಾಂಪಿಯನ್ ಎನಿಸಿದರು. ಆದರೆ ಕೊನೆಗಳಿಗೆಯಲ್ಲಿ ಪುಟಿದೆದ್ದ ಭಾರತದ ಮೊದಲ ಮಹಿಳಾ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ಎರಡನೇ ಸ್ಥಾನ ಗಳಿಸಿದರು. ಪ್ರಜ್ಞಾನಂದ ಅವರ ಅಕ್ಕ ಹಾಗೂ ಇತ್ತೀಚೆಗಷ್ಟೇ ಗ್ರ್ಯಾಂಡ್‌ಮಾಸ್ಟರ್ ಆದ ಆರ್.ವೈಶಾಲಿ ನಾಲ್ಕನೇ ಸ್ಥಾನ ಗಳಿಸಿದ್ದು ಗಮನಾರ್ಹ. ಆರಂಭದಲ್ಲಿ ಹಿನ್ನಡೆ ಕಂಡ ಅವರು ಕೊನೆಯ ಐದು ಸುತ್ತುಗಳಲ್ಲಿ ಜಯ ಸಾಧಿಸಿದ್ದು ಮೆಚ್ಚುಗೆಗೆ ಪಾತ್ರವಾಯಿತು. ಗುಕೇಶ್ ಅವರ ಯಶಸ್ಸು ಭಾರತದಲ್ಲಿ ಚೆಸ್ ಆಟಕ್ಕೆ ಇನ್ನಷ್ಟು ಶಕ್ತಿ ತುಂಬುವುದರಲ್ಲಿ ಅನುಮಾನವಿಲ್ಲ. ವರ್ಷಾಂತ್ಯದಲ್ಲಿ ಅವರು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಆಡಲಿರುವುದು ಭಾರತಕ್ಕೆ ಹೆಮ್ಮೆಯ ವಿಷಯ. ಆನಂದ್ ನಂತರ ಭಾರತದ ಎರಡನೇ ವಿಶ್ವ ಚಾಂಪಿಯನ್ ಆಗುವ ಅವಕಾಶವನ್ನು ಈ ಯುವಕ ಪಡೆದಿದ್ದಾರೆ.

ದಿನದ ಟ್ವೀಟ್

ಮಾರುಕಟ್ಟೆ ವಿಸ್ತರಿಸಿ

ಮಾರುಕಟ್ಟೆ ವ್ಯವಸ್ಥೆ ದುರ್ಬಲವಾಗಿದೆ ಮತ್ತು ಅದು ಸರ್ಕಾರಿ ಸಂಸ್ಥೆ. 'ನಂದಿನಿ'ಯಂತೆ ಮೈಸೂರು ಸ್ಯಾಂಡಲ್ ಸೋಪ್‌ಗೂ ಉತ್ತಮ ಮಾರುಕಟ್ಟೆ ವ್ಯವಸ್ಥೆ ಹಾಗೂ ಬ್ರ್ಯಾಂಡ್ ಮೌಲ್ಯ ತಂದುಕೊಡಬೇಕಾದ ಅಗತ್ಯ ಇದೆ...

(ಭಾರತದ ಸೋಪು ಮಾರುಕಟ್ಟೆಯಲ್ಲಿ ಮೈಸೂರು ಸ್ಯಾಂಡಲ್ ಸೋಪ್‌ನ ಪಾಲು ಕಡಿಮೆ ಇದೆ ಎಂಬ ಕಳಕಳಿಗೆ ಪ್ರತಿಕ್ರಿಯೆ)

ರಾಘವೇಂದ್ರ ಉಪಾಧ್ಯ

ಕಿಡಿನುಡಿ

ಲಿಂಕ್ಡ್‌ಇನ್‌ನಲ್ಲಿ ಕಂಡಿದ್ದು: ಸಂಪತ್ತಿನ ಮರುಹಂಚಿಕೆ ಕುರಿತ ಮಾತು ಕೇಳಿಬರುತ್ತಿರುವುದು ನನ್ನನ್ನು ಅತೀವ ಚಿಂತೆಗೆ ಈಡುಮಾಡಿದೆ. ಈಗಾಗಲೇ ನಾವು ಅತ್ಯಂತ ಪರಿಪೂರ್ಣವಾದ ವ್ಯವಸ್ಥೆಯನ್ನು ಹೊಂದಿದ್ದೇವೆ. ಅದರಂತೆ, ಬಡವರು, ಮಧ್ಯಮವರ್ಗದವರು ಮತ್ತು ವೇತನದಾರರಿಂದ ತೆರಿಗೆ ಸಂಗ್ರಹಿಸಲಾಗುತ್ತಿದೆ ಹಾಗೂ ತೆರಿಗೆ ವಿನಾಯಿತಿ, ವಸೂಲಾಗದ ಸಾಲದ ರೈಟ್‌ಆಫ್ ಮೂಲಕ ಕಾರ್ಪೊರೇಟ್ ಕಂಪನಿಗಳಿಗೆ ಮೇಲ್ಮುಖವಾಗಿ ಮರುಹಂಚಿಕೆ ಮಾಡಲಾಗುತ್ತಿದೆ. ಇದನ್ನು ಗೋಜಲಾಗಿಸುವುದೇಕೆ?

ಸುನೀತ್ ಅರೋರ, ಪತ್ರಕರ್ತ

25 ವರ್ಷಗಳ ಹಿಂದೆ

ಭಾನುವಾರ, 25-4-1999

- **ಪ್ರತಿಪಕ್ಷಗಳಲ್ಲಿ ಮೂಡದ ಒಮ್ಮತ ಮುಂದುವರಿದ ಅನಿಶ್ಚಿತ ಸ್ಥಿತಿ**

ನವದೆಹಲಿ, ಏ. 24– ಬಿಜೆಪಿ ನೇತೃತ್ವದ ಸರ್ಕಾರ ವಿಶ್ವಾಸಮತ ಕಳೆದುಕೊಂಡು ಪತನವಾಗಿ ಒಂದು ವಾರವಾದರೂ ಕಾಂಗ್ರೆಸ್ ಮತ್ತು ಇತರ ಪಕ್ಷಗಳು ಪರ್ಯಾಯ ಸರ್ಕಾರ ರಚನೆ ಮಾಡುವಲ್ಲಿ ಇನ್ನೂ ಒಮ್ಮತಕ್ಕೆ ಬರಲಾಗದ ಕಾರಣ ಅನಿಶ್ಚಿತ ಸ್ಥಿತಿ ಮುಂದುವರಿದಿದೆ.

ಸೋನಿಯಾ ಇಲ್ಲವೇ ಜ್ಯೋತಿ ಬಸು ಅವರ ನೇತೃತ್ವದಲ್ಲಿ ಪರ್ಯಾಯ ಸರ್ಕಾರ. ಈ ಪ್ರಯತ್ನದಲ್ಲಿ ವಿರೋಧಿ ಬಣ ವಿಫಲವಾದರೆ, ಅಟಲ್ ಬಿಹಾರಿ ವಾಜಪೇಯಿ ಮತ್ತೆ ಅಧಿಕಾರಕ್ಕೆ. ಇಲ್ಲವಾದರೆ ಲೋಕಸಭೆಗೆ ಮಧ್ಯಂತರ ಚುನಾವಣೆ ಅನಿವಾರ್ಯ. ಇದಿಷ್ಟು ಮಾತ್ರ ಈಗ ತೆರೆದಿಟ್ಟ ಮಾರ್ಗಗಳು.

ಆದರೆ ಪ್ರತಿಪಕ್ಷಗಳ ಬೆಂಬಲ ಗಳಿಸಲು ಮತ್ತೆ ಅವಕಾಶ ಪಡೆದಿರುವ ಕಾಂಗ್ರೆಸ್‌ನ ನಿನ್ನೆಯ ಪರಿಸ್ಥಿತಿಯಲ್ಲಿ ಈ ಹೊತ್ತಿನವರೆಗೆ ಯಾವುದೇ ಪ್ರಗತಿ ಕಂಡುಬಂದಂತೆ ಇಲ್ಲ. ಹೆಚ್ಚು ಕಡಿಮೆ ಕಾಂಗ್ರೆಸ್ ಪಕ್ಷ ಅಲ್ಪ ಬಹುಮತದ ಸರ್ಕಾರ ರಚನೆಯ ತಂತ್ರಕ್ಕೆ ಜೋತುಬಿದ್ದಿದೆ.

- **ಸಮ್ಮಿಶ್ರ ಸರ್ಕಾರ ರಚನೆ ಕಾಂಗ್ರೆಸ್ ಪರಿಶೀಲನೆ**

ನವದೆಹಲಿ, ಏ. 24 (ಪಿಟಿಐ): ಕೇಂದ್ರದಲ್ಲಿ ಪರ್ಯಾಯ ಸರ್ಕಾರ ರಚನೆ ಕುರಿತಂತೆ ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ರಚಿಸುವ ಬಗ್ಗೆ ಸಹ ಪರಿಶೀಲನೆ ನಡೆಸಲಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಆಸ್ಕರ್ ಫರ್ನಾಂಡಿಸ್ ಅವರು ಇಂದು ಇಲ್ಲಿ ತಿಳಿಸಿದರು.

ಕಾಂಗ್ರೆಸ್ ನೇತೃತ್ವದಲ್ಲಿ ರಚನೆಗೊಳ್ಳುವ ಕೇಂದ್ರ ಸರ್ಕಾರಕ್ಕೆ ಬೆಂಬಲ ನೀಡುವುದಿಲ್ಲ ಎಂದು ಸಮಾಜವಾದಿ ಪಕ್ಷದ ನಾಯಕ ಮುಲಾಯಂ ಸಿಂಗ್ ಯಾದವ್ ಅವರು ಇಂದು ಮತ್ತೆ ಸ್ಪಷ್ಟಪಡಿಸಿದ ಹಿನ್ನೆಲೆಯಲ್ಲಿ ಅವರು ಈ ಪ್ರತಿಕ್ರಿಯೆ ವ್ಯಕ್ತಪಡಿಸಿದರು.

50 ವರ್ಷಗಳ ಹಿಂದೆ

ಗುರುವಾರ, 25-4-1974

- **ಮುಷ್ಕರ ಎದುರಿಸಲು ಸಿದ್ಧತೆ ಹಲವು ಪ್ರಯಾಣಿಕ ರೈಲುಗಳ ಸಂಚಾರ ವಾರಾಂತ್ಯದಿಂದ ರದ್ದು**

ನವದೆಹಲಿ, ಏ. 24– ಮೇ 8ರಿಂದ ರೈಲ್ವೆ ನೌಕರರ 'ಅನಿರ್ದಿಷ್ಟ' ಮುಷ್ಕರದ ಬೆದರಿಕೆಯನ್ನು ಎದುರಿಸುತ್ತಿರುವ ರೈಲ್ವೆ ಸಚಿವ ಶಾಖೆಯು ಕಲ್ಲಿದ್ದಲು ಉಳಿಸುವ ಕ್ರಮವಾಗಿ ಏಪ್ರಿಲ್ 27ರಿಂದ ಅನೇಕ ಪ್ರಯಾಣಿಕರ ರೈಲುಗಳ ಸಂಚಾರವನ್ನು ರದ್ದುಪಡಿಸಲು ಇಂದು ನಿರ್ಧರಿಸಿತು.

ಮುಷ್ಕರದ ಬಗೆಗೆ ಬಿಗಿ ನಿಲುವು ತಳೆದಿರುವ ರೈಲ್ವೆ ಸಚಿವ ಖಾತೆಯು ಮುಷ್ಕರ ಹೂಡುವವರಿಗೆ ಭಾರತ ಸಂರಕ್ಷಣಾ ವಿಧಿಯ ಅನ್ವಯ ಮೂರು ವರ್ಷಕ್ಕೂ ಹೆಚ್ಚು ಕಾಲ ಜೈಲುವಾಸದ ಶಿಕ್ಷೆ ವಿಧಿಸಲು ಅವಕಾಶವಿದೆಯೆಂದು ಎಚ್ಚರಿಕೆ ನೀಡಿತು.

ಆದರೆ ಎಷ್ಟು ಸಂಖ್ಯೆಯ ರೈಲುಗಳ ಸಂಚಾರವನ್ನು ರದ್ದುಪಡಿಸಲಾಗುವುದೆಂದು ಹೇಳಲು ಸಚಿವ ಖಾತೆಯ ವಕ್ತಾರರಿಗೆ ಸಾಧ್ಯವಾಗಲಿಲ್ಲ.

ರಾಷ್ಟ್ರದ ಮುಖ್ಯ ಆರ್ಥಿಕ ಚಟುವಟಿಕೆಗೆ ಧಕ್ಕೆ ಬರದಂತೆ ಎಚ್ಚರಿಕೆ ಕ್ರಮವಾಗಿ ಕಲ್ಲಿದ್ದಲು ಉಳಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದರು. ದೂರ ಪ್ರಯಾಣದ ಮೇಲ್ ಮತ್ತು ಎಕ್ಸ್‌ಪ್ರೆಸ್ ರೈಲುಗಳಲ್ಲದೆ ಪ್ಯಾಸೆಂಜರ್ ರೈಲುಗಳ ಸಂಚಾರವನ್ನೂ ರದ್ದುಪಡಿಸಲಾಗುವುದು. ಕನಿಷ್ಠ ಸಂಖ್ಯೆಯಲ್ಲಿ ಮಾತ್ರ ರೈಲುಗಳನ್ನು ಓಡಿಸಲಾಗುವುದು.

- **ಎಸ್‌ಎಸ್‌ಎಲ್‌ಸಿ ಮೌಲ್ಯಮಾಪಕರಿಗೆ 2 ರೂ. ವಿಶೇಷ ದಿನಭತ್ಯೆ**

ಬೆಂಗಳೂರು, ಏ. 24– ಎಸ್‌ಎಸ್‌ಎಲ್‌ಸಿ ಮೌಲ್ಯಮಾಪಕರಿಗೆಲ್ಲ ಎರಡು ರೂಪಾಯಿ ವಿಶೇಷ ದಿನಭತ್ಯೆ ನೀಡುವ ನಿರ್ಧಾರವನ್ನು ಶಿಕ್ಷಣ ಸಚಿವ ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ ಅವರು ಇಂದು ವಿಧಾನಸಭೆಯಲ್ಲಿ ಪ್ರಕಟಿಸಿ, ಅದರಿಂದ ಶಿಕ್ಷಕರು ಕೇಳಿದ್ದ ಮೊತ್ತವನ್ನು ಪೂರ್ಣವಾಗಿ ನೀಡಿದಂತಾಗಿದೆ ಎಂದು ಹೇಳಿದರು.

ಮುಖ್ಯಮಂತ್ರಿಯವರು ನಿನ್ನೆ ಸಭೆಗೆ ಭರವಸೆ ನೀಡಿದಂತೆ ಪರೀಕ್ಷಾ ಮಂಡಲಿಯ ಜೊತೆ ಮಾತುಕತೆ ನಡೆಸಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸಚಿವರು ತಿಳಿಸಿದರು.

ಮಕ್ಕಳ ಸ್ಕ್ರೀನ್ ಟೈಮ್‌ಗೂ ಆಹಾರ ಸೇವನೆಗೂ ಇರುವ ನಂಟಿನಲ್ಲಿದೆ ಅಪಾಯ

ಮೊಬೈಲ್, ಆಹಾರ ಮತ್ತು ಮಕ್ಕಳು

ವಿಶ್ಲೇಷಣೆ

ಡಾ. ಕೆ.ಎಸ್.ಪವಿತ್ರ

ಸಮಾರಂಭವೊಂದಕ್ಕೆ ಹೋಗಿದ್ದೆ. ಮೂರು ವರ್ಷದ ಪುಟ್ಟ ಮಗುವಿಗೆ ಆ ಮಗುವಿನ ತಾಯಿ ಊಟ ಮಾಡಿಸುವ ಯತ್ನದಲ್ಲಿದ್ದರು. ಮಗು ಊಟ ಮಾಡುವುದಕ್ಕೆ ಹಟ ಮಾಡಲು ಆರಂಭಿಸಿದ್ದೇ ತಡ ತಾಯಿ ಮೊರೆ ಹೋಗಿದ್ದು ಮ್ಯಾಜಿಕ್‌ಗೆ! ಆಕೆ ಲಗುಬಗೆಯಿಂದ ತಮ್ಮ ಮೊಬೈಲ್‌ನಲ್ಲಿ ವಿಡಿಯೊ ಒಂದನ್ನು ಹಾಕಿದರು. ಮಗು ಕಣ್ಣು, ಬಾಯಿ ತೆರೆದು, ಆಹಾರದ ಬಗ್ಗೆ, ಅದರ ರುಚಿ, ಬಿಸಿ ಯಾವುದರ ಬಗ್ಗೆಯೂ ತಲೆಕೆಡಿಸಿಕೊಳ್ಳದೆ 'ಕಬಳಿಸಲು' ಆರಂಭಿಸಿಯೇ ಬಿಟ್ಟಿತು!

ಕಾಗದದ ಜಾಗದಲ್ಲಿ ವಿವಿಧ ಗಾತ್ರದ 'ತೆರೆ'ಗಳು ಬಂದು ಕುಳಿತಾಗಿದೆ. ಬದಲಾವಣೆ ಅನಿವಾರ್ಯ ಎಂಬಂತೆ ಅದನ್ನು ನಾವು ಒಪ್ಪಿಕೊಂಡೂ ಆಗಿದೆ. ಹಿಂದೆ ಪುಸ್ತಕಗಳಲ್ಲಿ ಒಳ್ಳೆಯ ಅಥವಾ ಕೆಟ್ಟ ಎಂಬ ವರ್ಗೀಕರಣ ಇದ್ದಂತೆ ಡಿಜಿಟಲ್ ಸಾಧನಗಳಲ್ಲಿಯೂ ಅದು ಸಹಜ. ಯಾವುದೇ ವಸ್ತುವಿನ ಉಪಯುಕ್ತತೆ, ಅದರಿಂದ ಉಂಟಾಗುವ ಅಪಾಯಗಳು ನಾವು ಅದನ್ನು ಹೇಗೆ ಬಳಸುತ್ತೇವೆ ಎಂಬುದರ ಮೇಲೆಯೇ ನಿರ್ಧಾರವಾಗುತ್ತವೆ ಎಂಬುದನ್ನು ನಾವು ಅರಿತು ಒಪ್ಪಿಕೊಂಡಿದ್ದೇವೆ. ಆದರೆ ಮೊಬೈಲ್ ಮತ್ತು ಟ್ಯಾಬ್‌ಗಳಿಗೂ ಮಕ್ಕಳ ಆಹಾರ ಸೇವನೆಗೂ ಇರುವ ನಂಟಿನ ಹಲವು ಆಯಾಮಗಳನ್ನು ಗಮನಿಸಿದರೆ, ಅಪಾಯ ಮತ್ತು ಅನಾರೋಗ್ಯವೇ ಪ್ರಮುಖವಾಗಿ ತೋರುತ್ತವೆ.

ನಮ್ಮಲ್ಲಿ ಎಷ್ಟು ಜನ ಪ್ರತಿನಿತ್ಯ ಊಟ ಮಾಡುವಾಗ, ತಿಂಡಿ ತಿನ್ನುವಾಗ ಮೊಬೈಲ್ ಅನ್ನು ಬೇರೆ ಕಡೆ ಇಟ್ಟು, ಅದನ್ನು 'ಅಗಲಿ', ಊಟದ ಮೇಲೆ ಗಮನವನ್ನು ಕೇಂದ್ರೀಕರಿಸಿ ಆಹಾರ ಸೇವನೆ ಮಾಡುತ್ತೇವೆ? ಹಾಗೆ ಮಾಡದಿರಲು ನಮ್ಮದೇ ಆದ ಕಾರಣಗಳು ಅವೆಷ್ಟೋ! ಬೇರೆ ಸಮಯದಲ್ಲಿ ನೋಡಲಾಗಿಲ್ಲ, ವಾಟ್ಸ್‌ಆ್ಯಪ್ ಚೆಕ್ ಮಾಡಬೇಕು, ಬಹುಮುಖ್ಯವಾದ ಕೆಲಸಕ್ಕಾಗಿ ಮೆಸೇಜ್ ಮಾಡಲೇಬೇಕಾಗಿದೆ, ತುಂಬಾ ಚೆನ್ನಾಗಿರುವ 'ರೀಲ್ಸ್' ಎಂದೆಲ್ಲ ಕಾರಣಗಳನ್ನು ಕೊಟ್ಟುಕೊಳ್ಳುತ್ತೇವೆ.

'ತುರ್ತು ಪರಿಸ್ಥಿತಿ' ಎಂಬ ಕಾರಣಕ್ಕೆ ಮಾತ್ರ ಊಟದ ಮಧ್ಯೆ 'ಊಟಕ್ಕೆಂದು ಕುಳಿತಿದ್ದರು. ತುರ್ತು ಕರೆ ಬಂದಿತು, ಹಾಗಾಗಿ ಊಟ ಬಿಟ್ಟು ಮಧ್ಯೆ ಏಳಬೇಕಾಯಿತು' ಎಂಬ ಸನ್ನಿವೇಶ ಈಗ ತುರ್ತು ಕರೆ ಇಲ್ಲದೆಯೂ ಮತ್ತೊಬ್ಬರೊಂದಿಗೆ ಮಾತನಾಡುತ್ತಲೇ ಊಟ ಮಾಡುವ ಸಾಮಾನ್ಯ ದಿನಚರಿಯಾಗಿ ಬದಲಾಗಿಹೋಗಿದೆ. ಹಿರಿಯರೇ ತಮ್ಮ ಜೀವನಕ್ರಮವನ್ನು ಹೀಗೆ ಬದಲಾಯಿಸಿಕೊಂಡಿರುವಾಗ, ಮಕ್ಕಳು ತೆರೆಗಳ ಮೋಡಿಗೆ ಒಳಗಾಗುವುದು ಅಚ್ಚರಿಯ ಮಾತೇನಲ್ಲ.

ಹಿರಿಯರು ಆಹಾರ ತಿನ್ನುವ ರೀತಿ ಹಾಗೂ ವೈಪರೀತ್ಯಗಳು ಅವರ ಆರೋಗ್ಯದ ಮೇಲೆ ಪರಿಣಾಮ ಬೀರಿದರೂ, ಅವು ಬೆಳವಣಿಗೆಗೆ ಸಂಬಂಧಿಸಿದವಲ್ಲ. ಮಕ್ಕಳ ವಿಷಯದಲ್ಲಿ ಹಾಗಲ್ಲ. ಅವರದ್ದು ಇನ್ನೂ ಬೆಳೆಯುವ ದೇಹ, ಅರಳುವ ಮನಸ್ಸು. ಆಹಾರದಲ್ಲಿ ಯಾವ ಪೌಷ್ಟಿಕಾಂಶಗಳು ಅವರ ದೇಹ ಸೇರುತ್ತವೆ ಎನ್ನುವ ಅಂಶ ಅವರ ವರ್ತಮಾನದ ಜೊತೆಗೆ ಭವಿಷ್ಯದ ಆರೋಗ್ಯವನ್ನೂ ನಿರ್ಧರಿಸುತ್ತದೆ. ಹೊಸತೊಂದು ಅಧ್ಯಯನವು 5ರಿಂದ 6 ವರ್ಷ ವಯಸ್ಸಿನ ಮಕ್ಕಳು ಮೊಬೈಲ್, ಟ್ಯಾಬ್ ನೋಡುವ 'ಸ್ಕ್ರೀನ್ ಟೈಂ', ಅಂದರೆ ಅವರು ತೆರೆಯ ಮುಂದೆ ಕಳೆಯುವ ಸಮಯಕ್ಕೂ ಹಣ್ಣು, ತರಕಾರಿಗಳನ್ನು ಕಡಿಮೆ ತಿನ್ನುತ್ತಾ ಚಿಪ್ಸ್, ಚಾಕೊಲೇಟ್, ಬಿಸ್ಕೆಟ್‌ಗಳನ್ನು ಹೆಚ್ಚಾಗಿ ತಿನ್ನುವುದಕ್ಕೂ ಸಂಬಂಧವಿದೆ ಎನ್ನುತ್ತದೆ. ಬ್ರಿಟಿಷ್ ಹಾರ್ಟ್ ಫೌಂಡೇಷನ್ ಮಾಡಿರುವ ಈ ಅಧ್ಯಯನವು ಇಂದಿನ ಮಕ್ಕಳು ದೊಡ್ಡವರಾದಾಗ ಅವರ ಹೃದಯದ ಆರೋಗ್ಯದ ಸ್ಥಿತಿಗತಿಯನ್ನು ಅಂದಾಜು ಮಾಡುವ ದೃಷ್ಟಿಯಿಂದ ನಡೆದಿದೆ.

ಇದೇ ಅಧ್ಯಯನದಲ್ಲಿ ಮಕ್ಕಳ ತಂದೆ ತಾಯಿಗೂ ಅವರ ಸ್ಕ್ರೀನ್ ಟೈಂ ಮತ್ತು ಆಹಾರ ಸೇವನೆಯ ಕ್ರಮಗಳ ಕುರಿತು ಪ್ರಶ್ನಾವಳಿಗಳನ್ನು ನೀಡಲಾಗಿತ್ತು ಎನ್ನುವುದು ಗಮನಾರ್ಹ. ನಿರೀಕ್ಷೆಯಂತೆ ಅಪ್ಪ-ಅಮ್ಮಂದಿರು ತಮ್ಮ ಊಟದ ಸಮಯದಲ್ಲಿ ಡಿಜಿಟಲ್ ಸಾಧನಗಳನ್ನು ಬಳಸುವುದು ಹೆಚ್ಚಾದಷ್ಟೂ ಮಕ್ಕಳೂ ಅವುಗಳನ್ನು ಬಳಸುತ್ತಲೇ ಊಟ ಮಾಡುವುದು ಹೆಚ್ಚಾಗಿತ್ತು. 5ರಿಂದ 6 ವರ್ಷದ ಶೇಕಡ 79ರಷ್ಟು ಮಕ್ಕಳು ನಿಗದಿತ ಪ್ರಮಾಣಕ್ಕಿಂತ ಕಡಿಮೆ ಹಣ್ಣು, ತರಕಾರಿಗಳನ್ನೂ ಹೆಚ್ಚು ಚಿಪ್ಸ್‌ನಂತಹ ಆಹಾರವನ್ನೂ ಸೇವಿಸುತ್ತಿದ್ದುದು ಕಂಡುಬಂತು.

ಇದು ಆಹಾರದಲ್ಲಿ ಯಾವುದನ್ನು ಸೇವಿಸಬೇಕು ಎಂಬ ಬಗೆಗಾದರೆ, ಆಹಾರ ಸೇವನೆಯ ಕ್ರಮಗಳನ್ನೂ ಮನೋವೈಜ್ಞಾನಿಕ ಅಧ್ಯಯನಗಳು ಗಮನಿಸಿವೆ. ನಾವೆಲ್ಲರೂ ಬಹುವಾಗಿ ಚಿಂತಿಸುವ ತೂಕ ಏರುವಿಕೆ– ಬೊಜ್ಜಿನ ಸಮಸ್ಯೆಗೂ ಆಹಾರವನ್ನು ಸೇವಿಸುವಾಗಿನ ನಮ್ಮ ನಡವಳಿಕೆಗೂ ಸಂಬಂಧವಿದೆ. ತಮ್ಮ ಬಾಯೊಳಕ್ಕೆ ಏನು ಹೋಗುತ್ತಿದೆ ಎನ್ನುವುದನ್ನು ಗಮನಿಸದೆ ಪುಸ್ತಕವನ್ನು ಓದುತ್ತಾ, ಟಿ.ವಿ. ನೋಡುತ್ತಾ, ಆಟವಾಡುತ್ತಾ ಊಟ ಮಾಡುವುದು ಮಕ್ಕಳಲ್ಲಿ ಈ ಮೊದಲು ಇದ್ದ ರೂಢಿ. ಇದಕ್ಕೆ ಹೊಸ ಸೇರ್ಪಡೆ ಹಿಂದಿನ ಹತ್ತು ವರ್ಷಗಳಲ್ಲಿ ಬೆಳೆದಿರುವ, ಮೊಬೈಲ್, ಟ್ಯಾಬ್ ನೋಡುತ್ತ ಕುಳಿತು, ಮಲಗಿ ತಿನ್ನುವ ಅಭ್ಯಾಸ. ಈ ಹಿಂದೆ ರೂಢಿಯಾಗಿದ್ದ ಟಿ.ವಿ., ಪುಸ್ತಕ, ಆಟಗಳೇ ಪರವಾಗಿರಲಿಲ್ಲ ಅನ್ನುವಷ್ಟರ ಮಟ್ಟಿಗೆ ಮೊಬೈಲ್ ವ್ಯಸನ!

ನಾವು ಊಟ ಮಾಡುವ ಬಗೆಗೇ ನಮ್ಮ ಗಮನವನ್ನು ಕೇಂದ್ರೀಕರಿಸಿ ತಿನ್ನುವಾಗ, ಮೆದುಳು ತನ್ನ ಪ್ರಚೋದನಾ ಕೇಂದ್ರಗಳನ್ನು ತಿನ್ನುವುದರ ಕಡೆಗೇ ತಿರುಗಿಸುತ್ತದೆ. ತಿಂದ ತೃಪ್ತಿ, ಆಹಾರದ ರುಚಿ, 'ಇಷ್ಟು ಸಾಕು' ಎಂಬ ಭಾವ ಸುಲಭವಾಗಿ ನಮ್ಮ ಅರಿವಿಗೆ ಬರುತ್ತವೆ. ಅತಿ ತಿನ್ನುವಿಕೆಯನ್ನು ಇವು ತಡೆಯುತ್ತವೆ. ಆಹಾರವನ್ನು ಮಕ್ಕಳು ಚೆನ್ನಾಗಿ ಅಗಿಯುವುದರಿಂದ, ಜೀರ್ಣಕ್ರಿಯೆ ಸುಗಮವಾಗುತ್ತದೆ. ಮಕ್ಕಳಲ್ಲಿ ಇಂದು ಸಮಸ್ಯೆಯಾಗುತ್ತಿರುವ ಬೊಜ್ಜಿನ ಸಾಧ್ಯತೆ ಗಮನಾರ್ಹವಾಗಿ ಇಳಿಯುತ್ತದೆ. ಮಕ್ಕಳು ಅಡುಗೆ ಮನೆ, ಊಟದ ಕೋಣೆಗಳಲ್ಲಿ ಹಿರಿಯರೊಂದಿಗೆ ಕುಳಿತು ಊಟ ಮಾಡುವಾಗ ಸಹಜವಾಗಿ ಅಡುಗೆಗೆ ಸಂಬಂಧಿಸಿದ ಹಲವು ಸಂಗತಿಗಳನ್ನು ಗಮನಿಸುತ್ತಾರೆ. ಇದರಿಂದ ಅಡುಗೆ ಮಾಡುವ ಕ್ರಿಯೆಯ ಬಗ್ಗೆ ಗೌರವ, ತಾನೂ ಪ್ರಯೋಗ ಮಾಡಿ ನೋಡಬೇಕೆಂಬ ಹಂಬಲ ಕ್ರಮೇಣ ಸಾಧ್ಯವಾಗುತ್ತವೆ.

ಅಪ್ಪ ಅಮ್ಮ ಗಮನಿಸಲೇಬೇಕಾದ ಸಂಗತಿಯೆಂದರೆ, ಮಕ್ಕಳು ಊಟ ಮಾಡಲೆಂಬ ಸದುದ್ದೇಶದಿಂದ ಊಟದ ಜೊತೆಗೆ ಟ್ಯಾಬ್, ಮೊಬೈಲ್‌ಗಳನ್ನು ಅವರು ಮಕ್ಕಳ ಮುಂದೆ ಹಿಡಿಯಲಾರಂಭಿಸಿದರೂ, ಕ್ರಮೇಣ ಮಕ್ಕಳಿಗೆ ಅದು ಸ್ಕ್ರೀನ್ ಟೈಮ್‌ಗಾಗಿ ಊಟವೇ ವಿನಾ ಊಟಕ್ಕಾಗಿ ಸ್ಕ್ರೀನ್ ಟೈಮ್ ಅಲ್ಲ ಎಂಬಂತೆ ರೂಢಿಯಾಗಿಬಿಡುತ್ತದೆ. ಹಾಗಾಗಿ ಊಟ ಮಾಡುವ ಪ್ರಕ್ರಿಯೆಗೂ ಸ್ಕ್ರೀನ್ ಟೈಮ್‌ಗೂ ಇಂತಹ ಸಂಬಂಧ ಉಂಟಾಗುವುದನ್ನು ತಡೆಯುವುದು ಮಹತ್ವದ್ದು. ಒಂದೊಮ್ಮೆ ಕೆಲಸದ ಒತ್ತಡದಿಂದ ಹಾಗೆ ಮಾಡುತ್ತಿದ್ದರೂ, ಅದನ್ನು ಆದಷ್ಟು ಕಡಿಮೆ ಅಪಾಯಕಾರಿಯಾಗುವಂತೆ ಮಾಡಬಹುದು.

ರಾತ್ರಿಯ ಊಟವನ್ನು ಎಲ್ಲರೂ ಟಿ.ವಿ. ನೋಡುತ್ತಲೇ ಒಟ್ಟಿಗೆ ಕುಳಿತು ಮಾಡುವುದು, ಕಡ್ಡಾಯವಾಗಿ 20-25 ನಿಮಿಷಗಳ ಸಮಯದಲ್ಲಿ ಎಲ್ಲರೂ ಊಟ ಮುಗಿಸುವುದು, ಅದರೊಂದಿಗೆ ಟಿ.ವಿ. ನೋಡುವುದನ್ನೂ ಮುಗಿಸುವುದು, ಊಟದ ಜೊತೆಗೆ ಟಿ.ವಿ. ನೋಡಲೇಬೇಕೆಂದರೆ, ಹಣ್ಣು, ತರಕಾರಿಗಳನ್ನೂ ಕಡ್ಡಾಯವಾಗಿ ತಿನ್ನಬೇಕು, ಕುರುಕಲು ತಿನ್ನುವಂತಿಲ್ಲ ಎಂಬ ನಿಯಮ ರೂಢಿಸಿಕೊಳ್ಳುವುದು ಉಪಯುಕ್ತ.

ಆಹಾರ-ತೆರೆಗಳ ನಡುವೆ ಇರುವ ನಂಟಿನ ಮತ್ತೊಂದು ಆಯಾಮವೆಂದರೆ, ಅದು ದೈಹಿಕ ವ್ಯಾಯಾಮ, ಚಟುವಟಿಕೆಯಿಂದ ಓಡಾಡುವುದು, ಆಟವಾಡುವುದನ್ನು ಗಣನೀಯವಾಗಿ ಕಡಿಮೆ ಮಾಡುವ ಮೂಲಕ ಹಸಿವನ್ನು ಕೊಲ್ಲುವುದು. ಇದು, ರುಚಿಯಿಂದ, ಆಸಕ್ತಿಯಿಂದ ಆಹಾರವನ್ನು ಸವಿಯುವುದರ ಬದಲು, ಜಂಕ್ ಆಹಾರದ ವ್ಯಸನವನ್ನು ಮತ್ತಷ್ಟು ಪ್ರಚೋದಿಸುತ್ತದೆ. ಮಿದುಳಿನ ಕ್ರಿಯಾಶೀಲತೆಯನ್ನೂ ಇಳಿಸುತ್ತದೆ.

ಮಕ್ಕಳಿಗೆ ಏನನ್ನು ಹೇಗೆ ತಿನ್ನಿಸುತ್ತೇವೆ, ಅವರೇ ತಿನ್ನುವಂತೆ ಹೇಗೆ ಪ್ರಚೋದಿಸುತ್ತೇವೆ ಎನ್ನುವುದು ಹಿರಿಯರಾದ ನಮ್ಮದೇ ಗುರುತರ ಹೊಣೆ ಎಂಬುದನ್ನು ನಾವು ಅರಿಯಬೇಕಾಗಿದೆ. ಮೊದಲಿಗೆ ನಾವು ಪಾಲಿಸಿ, ಮಕ್ಕಳೂ ಅದನ್ನು ಅನುಸರಿಸುವಂತೆ ಮಾಡುವತ್ತ ಸಾಗಬೇಕಾಗಿದೆ.

ಲೇಖಕಿ: ಮನೋವೈದ್ಯೆ

ಚುರುಮುರಿ

ಚೊಂಬು- ಚಿಪ್ಪು!

• ಗುರು ಪಿ.ಎಸ್.

'ಏದ್ದೇಳ್ರೀ ಬೇಗ, ಇವತ್ತಿನಿಂದಾದರೂ ಎದ್ದು ಮೊದಲಿನ ಕೆಲಸಕ್ಕೇ ಹೊರಡಿ' ಹೆಂಡತಿ ಬೈಯುತ್ತಲೇ ಅವಸರಿಸತೊಡಗಿದಳು.

'ಪೊಲಿಟಿಷಿಯನ್‌ಗಳ ಪ್ರಚಾರ ಕಾರ್ಯ ಈಗಷ್ಟೇ ಮುಗಿದಿದೆ. ಮತ್ತೆ, ಎರಡನೇ ಹಂತದಲ್ಲಿ ಪ್ರಚಾರ ಕೆಲಸ ಜೋರಾಗುತ್ತೆ. ಎಲೆಕ್ಷನ್ ಮುಗಿಯೋವರೆಗೂ ನಾನು ಕೆಲಸಕ್ಕೆ ಹೋಗಲ್ಲ' ಹಾಸಿಗೆಯಲ್ಲಿ ಮಲಗಿಕೊಂಡೇ ಕೂಗಿ ಹೇಳಿದೆ.

'ಅಲ್ಲಿವರೆಗೂ ಜೀವನಕ್ಕೆ ಏನ್ರೀ ಮಾಡೋದು? ಜೈ ಜೈ ಜೈ ಅಂದುಬಿಟ್ರೆ ಮನೆಯಲ್ಲಿ ಒಲೆ ಉರಿಯುತ್ತಾ ಹೇಳಿ'.

'ಏನೇ ಹೀಗಂತೀಯ, ಪ್ರಚಾರ ಮಾಡಿದ್ದಕ್ಕೆ ಕೊಟ್ಟ ದುಡ್ಡೆಲ್ಲ ನಿನ್ನ ಕೈಗೇ ತಂದುಕೊಟ್ಟಿದ್ದೀನಲ್ಲ'.

'ಅಷ್ಟೇ ದುಡ್ಡಲ್ಲಿ ಜೀವನಪೂರ್ತಿ ಇರೋಕಾಗುತ್ತೇನ್ರೀ, ಹೊಟ್ಟೆಗೆ, ಬಟ್ಟೆಗೆ ಬೇಡ್ವಾ?'

'ಆ ಪಾರ್ಟಿಯವರು ಕೊಟ್ಟಿದ್ದ ಸೀರೆ ಏನ್ ಮಾಡಿದೆ?'

'ಅದಾಗಲೇ ಬಣ್ಣ ಹೋಗ್ತಿದೆ'.

'ಈ ಪಾರ್ಟಿಯವರು ಬೆಳ್ಳಿ ದೀಪದ ಕಂಬ ಕೊಟ್ಟಿದ್ರಲ್ಲ ಅದೇನ್ ಮಾಡಿದೆ?'

'ಅದೇನ್ ಬೆಳ್ಳೀದೋ ಪೇಪರ್‌ದೋ ರೀ... ಮಗಳು ಸ್ವಲ್ಪ ಜೋರಾಗಿ ಹಿಡಿದಿದ್ದಕ್ಕೇ ಡೊಂಕಾಗಿಬಿಡ್ತು'.

'ಪಾಪ ನಮ್ ರಾಜಕಾರಣಿಗಳು ಕೊಟ್ಟಿದ್ದನ್ನೆಲ್ಲ ಹೀಗೆ ನೀನು ಹಾಳು ಮಾಡಿದ್ರೆ ನಾವು ಉದ್ಧಾರ ಆಗೋಕೆ ಹೇಗೆ ಸಾಧ್ಯ?'

'ಗಿಫ್ಟ್ ಕೊಡೋರಿಂದ ನಾವು ಉದ್ಧಾರ ಆಗಲ್ರೀ, ಬದುಕು ಕಟ್ಟಿಕೊಡೋರು ಬೇಕು ನಮಗೆ. ಯಾರು ನಮಗೆಲ್ಲ ಒಂದೊಳ್ಳೆ ಕೆಲಸ ಕೊಡಿಸ್ತಾರೋ ನೆಮ್ಮದಿಯ ಪರಿಸರ ಕಲ್ಪಿಸ್ತಾರೋ ಅವರನ್ನ ಗೆಲ್ಲಿಸಬೇಕು' ಎಂದು ಉಪದೇಶ ಮಾಡಿದಳು ಹೆಂಡತಿ.

ಮತದಾನದ ದಿನ ಬಂತು. 'ಅಲ್ಲ ರೀ, ಯಾರು ಹೆಚ್ಚು ದುಡ್ಡು ಕೊಡುತ್ತಾರೋ ಅವರ ಪರ ಪ್ರಚಾರ ಮಾಡಿ ಬಂದಿದ್ರೀ, ವೋಟು ಯಾರಿಗೆ ಹಾಕ್ತೀರಿ?' ಕೇಳಿದಳು ಪತ್ನಿ.

'ಅದೇ ನನಗೂ ಗೊಂದಲ ಆಗ್ತಿದೆ. ಪಾರ್ಟಿ ಸಿಂಬಲ್‌ಗಳೇ ನೆನಪಾಗ್ತಿಲ್ಲ, ಕಣ್ಮುಂದೆ ಬರೀ ಚೊಂಬು, ಚಿಪ್ಪುಗಳೇ ಕಾಣಿಸ್ತಿವೆ' ಎಂದೆ. ಹೆಂಡತಿಯೂ ನಗತೊಡಗಿದಳು.

ಸಂಗತ

ಎಲ್ಲಿದೆ ಭ್ರಷ್ಟಾಚಾರ ನಿಗ್ರಹಾಸ್ತ್ರ?

ಚುನಾವಣಾ ವ್ಯವಸ್ಥೆಯ ಲೋಪಗಳ ನಿವಾರಣೆಗೆ ನಾಗರಿಕರು ಒತ್ತಡ ಹೇರಬೇಕಾಗಿದೆ

• ಸತೀಶ್ ಜಿ.ಕೆ. ತೀರ್ಥಹಳ್ಳಿ

ರಾಜ್ಯ ವಿಧಾನಸಭೆಗೆ ಮೊನ್ನೆ ಮೊನ್ನೆ ಚುನಾವಣೆ ನಡೆದಂತಿದೆ. ಅಷ್ಟರಲ್ಲೇ ಲೋಕಸಭಾ ಚುನಾವಣೆ ಎದುರಾಗಿದೆ. ಮತದಾನದ ಪ್ರಮಾಣವನ್ನು ಹೆಚ್ಚಿಸಲು ಚುನಾವಣಾ ಆಯೋಗವು ಎಲ್ಲ ಬಗೆಯ ಪ್ರಯತ್ನಗಳನ್ನೂ ಮಾಡುತ್ತಿದೆ. ಆದರೆ ಚಿಂತೆಯಿರುವುದು ಚುನಾವಣಾ ನೀತಿ ಸಂಹಿತೆಯೆಂಬ ರಂಗೋಲಿಯ ಕೆಳಗೆ ತೂರುತ್ತಾ ದಿನೇದಿನೇ ಬದಲಾಗುತ್ತಿರುವ ಚುನಾವಣೆಯ ಸ್ವರೂಪದ ಬಗ್ಗೆ ಮಾತ್ರ.

ದೇಶದ ಬಹುಮುಖ್ಯ ರೋಗವಾಗಿ ಹಬ್ಬಿರುವ ಭ್ರಷ್ಟಾಚಾರದ ತಾಯಿಬೇರು ಇರುವುದೇ ನಮ್ಮ ಈ ಚುನಾವಣಾ ಸ್ವರೂಪದಲ್ಲಿ. ಗ್ರಾಮ ಪಂಚಾಯಿತಿ ಚುನಾವಣೆಗೆ ಕೋಟಿ ಹಣ ವ್ಯಯಿಸಿದ ಉದಾಹರಣೆಗಳಿವೆ! ಶಾಸನಸಭಾ ಚುನಾವಣೆಗೆ ಹಲವು ಕೋಟಿಗಳಷ್ಟು ಹಣ ವಿನಿಯೋಗಿಸಬೇಕಾದ ಸಂದರ್ಭದಲ್ಲಿ, ಗೆದ್ದುಬಂದವರು ಚುನಾವಣೆಗಾಗಿ ತಾವು ಚೆಲ್ಲಾಡಿದ ಹಣವನ್ನು ಶಕ್ತಿಮೀರಿ ದೋಚಿಕೊಳ್ಳಲು ತಮ್ಮ ಕಾಲಾವಧಿಯನ್ನು ಮೀಸಲಿಡುತ್ತಾರೆ. ಅದಕ್ಕಾಗಿ ಅವರು ಯಾವ ಮಟ್ಟಕ್ಕೆ ಬೇಕಾದರೂ ಇಳಿಯಬಲ್ಲರು, ಎಂತಹ ದಂಧೆಕೋರರೊಂದಿಗೆ ಬೇಕಾದರೂ ಕೈಜೋಡಿಸಬಲ್ಲರು ಎಂಬುದಕ್ಕೆ ನಿದರ್ಶನಗಳು ಹೇರಳವಾಗಿ ಸಿಗುತ್ತವೆ.

ದುರಂತವೆಂದರೆ, ಮತದಾನವನ್ನು ಮೂರ್ಕಾಸು ಹಣ, ಮದ್ಯ, ಸೀರೆ, ಕುಕ್ಕರ್‌ನಂತಹ ವಸ್ತುಗಳನ್ನು ಗಿಟ್ಟಿಸಿಕೊಳ್ಳುವ ಸಾಧನವನ್ನಾಗಿ ಮಾಡಿಕೊಳ್ಳುತ್ತಿರುವ ಬೇಜವಾಬ್ದಾರಿಯ ಮತದಾರರು, ದೇಶದ ಸಂಪನ್ಮೂಲಗಳನ್ನು ದೋಚಲು ರಾಜಕಾರಣಿಗಳಿಗೆ 'ಪರವಾನಗಿ' ಕರುಣಿಸುತ್ತಾರೆ! ನೀತಿಗೆಟ್ಟ ರಾಜಕೀಯದಲ್ಲಿ ತೊಡಗಿಕೊಂಡ ವ್ಯವಸ್ಥೆಗಳು ರಾಜಕೀಯವನ್ನು ಉದ್ದಿಮೆ ಮಾಡಿಕೊಂಡು ಹಣ ಹೂಡುತ್ತಿವೆ. ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕಾಗಿಯೇ ರಾಶಿ ರಾಶಿ ಹಣ ಪೇರಿಸಿಡಬೇಕಾದ ಅನಿವಾರ್ಯ ರಾಜಕಾರಣಿಗಳದ್ದು. ಇದು, ಚುನಾವಣೆಯಿಂದ, ಚುನಾವಣೆಗೋಸ್ಕರ ಭ್ರಷ್ಟಾಚಾರ ಎಂಬಂತಿರುವ ವಿಪರ್ಯಾಸದ ಕಾಲಘಟ್ಟವೂ ಹೌದು.

ವಿಷಚಕ್ರದಂತೆ ಗೋಚರಿಸುತ್ತಿರುವ ಈ ಭ್ರಷ್ಟಾಚಾರದ ಸುಳಿಯಿಂದ ದೇಶವನ್ನು ಪಾರು ಮಾಡಬೇಕಾಗಿದೆ. ಚುನಾವಣಾ ವೆಚ್ಚವನ್ನು ಸರ್ಕಾರವೇ ಭರಿಸುವ ಪ್ರಸ್ತಾವವು ಬಹಳ ಹಿಂದಿನಿಂದಲೂ ಪ್ರಸ್ತಾಪ ಆಗುತ್ತಲೇ ಇದೆ. ಆದರೆ ಅದನ್ನು ಕ್ರಿಯೆಗೆ ಇಳಿಸುವ ಇಚ್ಛಾಶಕ್ತಿಯನ್ನು ಇದುವರೆಗೆ ದೇಶವನ್ನು ಮುನ್ನಡೆಸಿದ ಯಾವ ಪಕ್ಷವೂ ಪ್ರದರ್ಶಿಸಿಲ್ಲ. ಕೋಟಿಗಟ್ಟಲೆ ಹಣ ಚೆಲ್ಲಲು ಆಸ್ಪದವೇ ಇಲ್ಲದ ಚುನಾವಣಾ ವ್ಯವಸ್ಥೆಯನ್ನು ಅಳವಡಿಸಿಕೊಂಡಲ್ಲಿ, ಸಮಾಜವನ್ನು ಗ್ಯಾಂಗ್ರಿನ್‌ನಂತೆ ವ್ಯಾಪಿಸಿರುವ ಭ್ರಷ್ಟಾಚಾರದ ವ್ಯಾಧಿಗೆ ಅದು ಸೂಕ್ತ ಔಷಧ ಮತ್ತು ಸಮಯೋಚಿತ ಚಿಕಿತ್ಸೆ ಆಗಬಲ್ಲದು.

ಬೇರೆ ಬೇರೆ ರಾಜ್ಯಗಳಲ್ಲಿ ವಿಧಾನಸಭಾ ಸದಸ್ಯರಾಗಿರುವ ಹಲವರು ಹದಿನೆಂಟನೇ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದಾರೆ. ಈ ಚುನಾವಣೆಯಲ್ಲಿ ಗೆದ್ದವರು ತಮ್ಮ ಶಾಸಕತ್ವಕ್ಕೆ ರಾಜೀನಾಮೆ ನೀಡಿ ಅಲ್ಲಿ ಮತ್ತೊಂದು ಚುನಾವಣೆಗೆ ಕಾರಣರಾಗುತ್ತಾರೆ. ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿದವರು ಎರಡೂ ಕಡೆ ಗೆದ್ದರೆ ಫಲಿತಾಂಶ ಹೊರಬಿದ್ದ ಬಳಿಕ ಒಂದು ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗುತ್ತದೆ. ಅಲ್ಲೆಲ್ಲಾ ಆರು ತಿಂಗಳೊಳಗೆ ಮರುಚುನಾವಣೆ! ಅಂತಹ ಸಂದರ್ಭಗಳಲ್ಲಿ ಆ ನಿರ್ದಿಷ್ಟ ಕ್ಷೇತ್ರಗಳ ಮತದಾರರ ತೀರ್ಪನ್ನು ಅಣಕಿಸುವಂತಹ ಪರಿ ಇದು. ಇದರಿಂದಾಗಿ ಆಡಳಿತ ಯಂತ್ರದ ಅಮೂಲ್ಯ ಸಮಯ ಮತ್ತು ಶ್ರಮದ ದುರ್ವಿನಿಯೋಗ. ಆಡಳಿತಾತ್ಮಕವಾಗಿ ಅಥವಾ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ನಯಾಪೈಸೆ ಪ್ರಯೋಜನ ಇರುವುದಿಲ್ಲ. ನಾಗರಿಕರ ತೆರಿಗೆ ಹಣ ಪೋಲಾಗುತ್ತದೆ ಅಷ್ಟೆ.

ರಾಜಕೀಯ ಪಕ್ಷಗಳ ಈ ಬಗೆಯ ಮೇಲಾಟಗಳಿಂದ ಸರ್ಕಾರದ ಬೊಕ್ಕಸಕ್ಕೆ ಹೊರೆ ಆಗುತ್ತದೆ ಮಾತ್ರವಲ್ಲ ಒಂದು ಚುನಾವಣೆ ಎದುರಾಯಿತೆಂದರೆ, ಆರು ತಿಂಗಳಿಗೂ ಹೆಚ್ಚುಕಾಲ ಆಡಳಿತಯಂತ್ರ ಹಗಲಿರುಳು ಕಾರ್ಯ ನಿರ್ವಹಿಸಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಆದ್ಯತೆಯನ್ನು ಬೇಡುವ ಕೆಲಸಗಳೂ ಮೂಲೆಗುಂಪಾಗುತ್ತವೆ. ಜನರ ದೈನಂದಿನ ಕಾರ್ಯಗಳಿಗೂ

ಅಡಚಣೆ ಆಗುತ್ತದೆ.

ಈ ಚುನಾವಣಾ ವ್ಯವಸ್ಥೆಯಲ್ಲಿನ ಲೋಪಗಳ ಕುರಿತು ಪ್ರಜ್ಞಾವಂತ ನಾಗರಿಕರು ಮುಂದಿನ ದಿನಗಳಲ್ಲಾದರೂ ದನಿ ಎತ್ತಬೇಕು. ನಿವಾರಣೆಗೆ ಜನಪ್ರತಿನಿಧಿಗಳ ಮೇಲೆ ಒತ್ತಡ ಹೇರಬೇಕು. ಚುನಾವಣಾ ವ್ಯವಸ್ಥೆಯ ಸುಧಾರಣೆಗೆ ಜನಾಂದೋಲನ ರೂಪಿಸುವ ತುರ್ತು ಇದೆ. ಇದರ ಅಗತ್ಯವನ್ನು ಜನಸಾಮಾನ್ಯರಿಗೂ ಮನಗಾಣಿಸಬೇಕು. ಚುನಾವಣೆಯ ಪೂರ್ಣ ವೆಚ್ಚವನ್ನು ಆಯೋಗವೇ ನಿಭಾಯಿಸುವಂತಾಗಬೇಕು. ಒಮ್ಮೆ ಆಯ್ಕೆಯಾದ ನಂತರ ಸ್ವಾರ್ಥ ಸಾಧನೆಗಾಗಿ ಅವಧಿಗೆ ಮುನ್ನ ರಾಜೀನಾಮೆ ನೀಡಿದರೆ ಅಂಥವರಿಂದ ಚುನಾವಣಾ ವೆಚ್ಚವನ್ನು ವಸೂಲಿ ಮಾಡಲು ಕಾನೂನಿನಲ್ಲಿ ಅವಕಾಶ ಕಲ್ಪಿಸಬೇಕು. ವಿಧಾನಸಭಾ ಸದಸ್ಯರಾಗಿರುವವರು ಲೋಕಸಭಾ ಚುನಾವಣೆಗೆ ಸ್ಪರ್ಧಿಸ ಬಯಸಿದರೆ ಅಂಥವರು ನಾಮಪತ್ರ ಸಲ್ಲಿಸುವುದಕ್ಕೂ ಮೊದಲೇ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂಬ ನಿಯಮ ರೂಪಿಸುವುದು ಸೂಕ್ತವೆನಿಸುತ್ತದೆ. ಒಮ್ಮೆಗೆ ಒಂದೇ ಕ್ಷೇತ್ರದಲ್ಲಿ ಸ್ಪರ್ಧಿಸಲು ಅವಕಾಶ ಇರಬೇಕು.

ಚುನಾವಣಾ ಆಯೋಗವು ಸಂಪೂರ್ಣ ಸ್ವಾಯತ್ತ ನೆಲೆಯಲ್ಲಿ ಕೆಲಸ ನಿರ್ವಹಿಸುವಂತಹ ವಾತಾವರಣವನ್ನು ನಮ್ಮ ಆಡಳಿತಾರೂಢರು ಸೃಷ್ಟಿಸಬೇಕು. ಆಯೋಗದ ಕಾರ್ಯದಕ್ಷತೆಯ ಬಗ್ಗೆ ಹೆಚ್ಚು ನಿರೀಕ್ಷೆಗಳಿವೆ. ಬೇಕಾಬಿಟ್ಟಿ ನಾಲಿಗೆ ಹರಿಯಬಿಡುವ ಮುಖಂಡರ ವಿರುದ್ಧ ತ್ವರಿತವಾಗಿ ಮತ್ತು ಕಠಿಣ ರೀತಿಯಲ್ಲಿ ಕ್ರಮ ಜರುಗಿಸಬೇಕು. ಆಯೋಗ ಮತ್ತಷ್ಟು ಸುಧಾರಣೆಗಳಿಗೆ ತನ್ನನ್ನು ಒಡ್ಡಿಕೊಳ್ಳುತ್ತಾ ತನ್ನ ನಡೆಯನ್ನು ಹೆಚ್ಚೆಚ್ಚು ಪಾರದರ್ಶಕ ಮತ್ತು ವಿಶ್ವಾಸಾರ್ಹಗೊಳಿಸಿಕೊಳ್ಳುತ್ತಾ ಸಾಗಬೇಕಿದೆ. ಇವೆಲ್ಲಾ ಸಾರ್ವಜನಿಕ ಹಿತಾಸಕ್ತಿಯಿಂದ ಅತ್ಯಂತ ಜರೂರಾಗಿ ಆಗಬೇಕಾದ ಕ್ರಮಗಳು. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವದ ಉಳಿವು ಮುಕ್ತ, ನ್ಯಾಯಸಮ್ಮತ ಚುನಾವಣೆ-ಮತದಾನದ ಯಶಸ್ಸಿನ ಮೇಲೆಯೇ ನಿಂತಿದೆ.

ವಾಚಕರ ವಾಣಿ

ಹಣ, ಆಮಿಷಕ್ಕೆ ಬಲಿಯಾದರೆ...

ಒಂದು ರಾಜಕೀಯ ಪಕ್ಷವು ದೇಶ ಅಥವಾ ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿಯಲು ಚುನಾವಣೆಯಲ್ಲಿ ಸಂಸದರು ಹಾಗೂ ಶಾಸಕರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಬೇಕು. ಇವರೆಲ್ಲರೂ ಯೋಗ್ಯರಾಗಿದ್ದರೆ ಮಾತ್ರ ಸರ್ಕಾರ ಸಹ ಯೋಗ್ಯವಾಗಿರುತ್ತದೆ. ಆದರೆ ನಾವು ಜಾತಿ, ಧರ್ಮದ ಅಭಿಮಾನಕ್ಕೆ, ಹಣ, ಆಮಿಷಕ್ಕೆ ಮತವನ್ನು ಮಾರಿಕೊಂಡರೆ ಯೋಗ್ಯರ ಆಯ್ಕೆ ಹೇಗಾಗುತ್ತದೆ? ಅಂತಹ ಆಯ್ಕೆ ಆಗಿಲ್ಲವೆಂದರೆ ಯೋಗ್ಯ ಸರ್ಕಾರ ರಚನೆ ಹೇಗಾಗುತ್ತದೆ? ಇದನ್ನು ಅರಿತು ಯಾವುದೇ ಆಮಿಷಕ್ಕೆ ಬಲಿಯಾಗದೆ ಉತ್ತಮ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕಾಗಿದೆ.

ಸಣ್ಣಮಾರಪ್ಪ, ಚಂಗಾವರ, ಶಿರಾ

ಆರೋಪಿಗಳಿಗೆ ಜೈಕಾರ: ಗಂಭೀರವಾಗಿ ಪರಿಗಣಿಸಿ

ಬೆಳಗಾವಿ ಜಿಲ್ಲೆಯ ಹೊಸವಂಟಮೂರಿಯಲ್ಲಿ ಮಹಿಳೆಯೊಬ್ಬರನ್ನು ವಿವಸ್ತ್ರಗೊಳಿಸಿದ ಪ್ರಕರಣ ದೇಶದಾದ್ಯಂತ ಸುದ್ದಿ ಮಾಡಿತ್ತು. ಆರೋಪಿಗಳನ್ನು ಬಂಧಿಸಲಾಗಿತ್ತು. ನಾಲ್ಕು ತಿಂಗಳ ನಂತರ ಈಗ ಎಲ್ಲಾ ಆರೋಪಿಗಳಿಗೆ ನ್ಯಾಯಾಲಯದಿಂದ ಷರತ್ತುಬದ್ಧ ಜಾಮೀನು ದೊರಕಿದ್ದು, ಈ ಸಂದರ್ಭದಲ್ಲಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅವರಿಗೆ ಹಾರ-ತುರಾಯಿ ಹಾಕಿ, ಸಿಹಿ ತಿನ್ನಿಸಿ ಅದ್ದೂರಿಯಾಗಿ ಸ್ವಾಗತ ಕೋರಿರುವುದು ಸುದ್ದಿಯಾಗಿದೆ.

ಈ ಪ್ರಕರಣವನ್ನು ನ್ಯಾಯಾಲಯವು ಗಂಭೀರವಾಗಿ ಪರಿಗಣಿಸಬೇಕು. ಪ್ರಕರಣದ ಎಲ್ಲಾ ಆರೋಪಿಗಳ ಜಾಮೀನು ರದ್ದುಪಡಿಸಿ ಪುನಃ ಅವರನ್ನು ಜೈಲಿಗೆ ತಳ್ಳುವ ಕೆಲಸ ಆಗಬೇಕು. ಇಂತಹ ವಿಚಾರಗಳಲ್ಲಿ ಸಮಾಜ ಕೂಡ ಹೆಚ್ಚು ಸೂಕ್ಷ್ಮವಾಗಿ ವರ್ತಿಸಬೇಕು. ಮಹಿಳೆಯರನ್ನು ವಿವಸ್ತ್ರಗೊಳಿಸುವಂತಹ ಹೀನಕೃತ್ಯಗಳನ್ನು ಎಸಗಿದ ಆರೋಪ ಹೊತ್ತವರನ್ನು, ಮಹಾನ್ ಸಾಧಕರಂತೆ ಕಾಣುವ ಕೆಲಸಕ್ಕೆ ಇಳಿಯಬಾರದು.

ಪ್ರಕಾಶ್ ಮಲ್ಕಿಒಡೆಯರ್, ಹೂವಿನಹಡಗಲಿ

ಪೈಪೋಟಿಯ ಮ್ಯಾಚ್

ಈಗ ನಿತ್ಯವೂ ನಡೆಯುತ್ತಿದೆ
20-20 ಮ್ಯಾಚ್!
ಜೊತೆಗೆ ಶುರುವಾಗಿದೆ
50:50 ಮ್ಯಾಚ್!
ಪತ್ರಿಕೆಗಳಲ್ಲಿ ಚೊಂಬು
ಕರಟದ ಪೈಪೋಟಿ!
ಮುಖಪುಟದ ಜಾಹೀರಾತಿಗೆ
ನ್ಯಾಯ ದೊರಕಿಸಲು
ಪತ್ರಿಕೆಗಳೂ ಆಗಿವೆ ಇಬ್ಭಾಗ!

ಮುಳ್ಳೂರು ಪ್ರಕಾಶ್, ಮೈಸೂರು

ಅಪರಾಧಕ್ಕೆ ಕೋಮುಬಣ್ಣ ಸಲ್ಲ

'ಹುಡುಗಿಯರು ಬಲಿಯಾಗುತ್ತಲೇ ಇರಬೇಕೆ?' ಎಂಬ ಸಬಿತಾ ಬನ್ನಾಡಿ ಅವರ ಲೇಖನ (ಪ್ರ.ವಾ., ಏ. 24) ಈ ಸಮಾಜದಲ್ಲಿ ಹೆಣ್ಣಿಗೆ ಆಗುವ ಕಿರುಕುಳಗಳ ವಾಸ್ತವಾಂಶವನ್ನು ಬಿಚ್ಚಿಟ್ಟಿದೆ. ಒಂದು ಜೀವವನ್ನು ತೆಗೆದು ಸಾಧಿಸುವುದು ಏನೂ ಇಲ್ಲ. ಕೊಲೆಗೆ ಎಂತಹ ಕಾರಣಗಳಿದ್ದರೂ ಕೊಲೆ ಎನ್ನುವುದು ಘೋರ ಅಪರಾಧ. ಯುವತಿ ನೇಹಾ ಹಿರೇಮಠ ಅವರ ದಾರುಣ ಕೊಲೆ ಪ್ರಕರಣವು ಸಮಾಜವೇ ತಲೆತಗ್ಗಿಸುವಂತಹದ್ದು. ಒಂದು ಅಪರಾಧವನ್ನು ಅಪರಾಧವನ್ನಾಗಿಯೇ ನೋಡಬೇಕು. ಅದರಲ್ಲಿ ರಾಜಕೀಯ ಬೆರೆಸುವುದು ಸರಿಯಲ್ಲ. ಅಂತೆಯೇ ಜಾತಿ, ಧರ್ಮದ ಸೋಂಕು ತಾಕದಂತೆ ಎಚ್ಚರ ವಹಿಸಬೇಕಾದುದು ಭಾರತದಂತಹ ಬಹುತ್ವದ ರಾಷ್ಟ್ರದಲ್ಲಿ ಅಗತ್ಯ.

ಗೌತಮ್ ಗೌಡಪ್ಪಗೌಡ್ರು, ಮನ್ನಿಕಟ್ಟಿ, ಬಾಗಲಕೋಟೆ

ಬ್ಯಾಂಕ್ ಸೇವೆ ಗ್ರಾಹಕಸ್ನೇಹಿಯಾಗಲಿ

ಬೆಂಗಳೂರಿನ ವಿದ್ಯಾರಣ್ಯಪುರದಲ್ಲಿರುವ ರಾಷ್ಟ್ರೀಯ ಬ್ಯಾಂಕೊಂದರ ಶಾಖೆಗೆ ಇತ್ತೀಚೆಗೆ ಹೋಗಿದ್ದೆ. ನಿಗದಿತ ಸೇವೆ ಪಡೆಯಬೇಕಾದರೆ, ಅಲ್ಲಿದ್ದ ಯಂತ್ರವೊಂದರಿಂದ ಚೀಟಿ ಪಡೆದು ಆನಂತರ ಕೌಂಟರ್ ಬಳಿ ಬರುವಂತೆ ಹೇಳಿದರು. ಅದೇ ಬ್ಯಾಂಕಿನ ನಿವೃತ್ತ ಅಧಿಕಾರಿಯಾದ ನಾನೇನೋ ನನ್ನಷ್ಟಕ್ಕೆ ಚೀಟಿ ಪಡೆದೆನಾದರೂ ಹಲವು ಅನಕ್ಷರಸ್ಥ ಗ್ರಾಹಕರು ಮತ್ತು ವೃದ್ಧರು ಚೀಟಿಗಾಗಿ ಇತರರ ನೆರವು ಯಾಚಿಸುತ್ತಿದ್ದುದನ್ನು ಕಂಡು ಬೇಸರವೆನಿಸಿತು. 74 ವರ್ಷ ವಯಸ್ಸಿನ ನಾನು ಕೆಲ ದಿನಗಳ ಕೆಳಗಷ್ಟೇ ಕಣ್ಣಿನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದುದರಿಂದ ನನಗೂ ಕೊಂಚ ಕಷ್ಟವಾಯಿತೆಂಬುದು ಬೇರೆ ವಿಷಯ.

ಬ್ಯಾಂಕುಗಳು ಹೆಚ್ಚೆಚ್ಚು ಗ್ರಾಹಕಸ್ನೇಹಿಯಾಗುವ ಬದಲು ಗ್ರಾಹಕರಿಗೆ ಈ ರೀತಿ ಹೆಚ್ಚುವರಿ ಕೆಲಸ ನೀಡುವುದು ಸರಿಯೇ? ಇದರಿಂದಾಗಿ ಗ್ರಾಹಕರ ಮತ್ತಷ್ಟು ಸಮಯ ಹಾಳು ಮತ್ತು ಅನಕ್ಷರಸ್ಥರು, ವೃದ್ಧರಿಗೆ ವೃಥಾ ತೊಂದರೆಯಲ್ಲವೇ? ನನ್ನ ಎಂದಿನ ಕೆಲಸಕ್ಕಾಗಿ ನಾನು ಅಂದು ಅಲ್ಲಿ ನಾಲ್ಕು ಕಡೆ ಸರದಿಯಲ್ಲಿ ನಿಲ್ಲಬೇಕಾಯಿತು! ಈ ಬ್ಯಾಂಕಿನೊಡನೆ ಮತ್ತೊಂದು ಬ್ಯಾಂಕ್ ವಿಲೀನ ಆದನಂತರ ಈ ಶಾಖೆಯಲ್ಲಿ ಕೆಲಸದ ಹೊರೆ ದ್ವಿಗುಣಗೊಂಡಿದೆ. ಆದರೆ ಇದಕ್ಕೆ ಅನುಗುಣವಾಗಿ ಸಿಬ್ಬಂದಿಯ ಸಂಖ್ಯೆ ಏರಿಕೆ ಕಂಡಿಲ್ಲ. ಸ್ಥಳಾವಕಾಶದ ತೀವ್ರ ಕೊರತೆ ಇದೆ. ಈ ಕೊರತೆಗಳನ್ನು ನಿವಾರಿಸಿಕೊಂಡು ಬ್ಯಾಂಕು ಹೆಚ್ಚು ಗ್ರಾಹಕಸ್ನೇಹಿಯಾಗಬೇಕಾದ ಅವಶ್ಯಕತೆ ಇದೆ. ನಮ್ಮ 'ಸರ್ಕಾರಿ' ಬ್ಯಾಂಕುಗಳು ಖಾಸಗಿ ಬ್ಯಾಂಕುಗಳಿಂದ ಕಲಿಯಬೇಕಾದದ್ದು ಬಹಳಷ್ಟಿದೆ.

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಚೊಂಬಿನ ಮಹತ್ವ

ಬೆಳಗಾದರೆ ಶೌಚಕ್ಕೆ,
ಜಳಕಕ್ಕೆ, ದೇವರ ಪೂಜೆಗೆ,
ನೀರು ಕುಡಿಯುವುದಕ್ಕೆ,
ಬಂದ ಅತಿಥಿಗಳಿಗೆ
ಕೈ-ಕಾಲು
ತೊಳೆದುಕೊಳ್ಳುವುದಕ್ಕೆ
ರಾತ್ರಿ ಮಲಗುವಾಗ
ಬಾಯಾರಿಕೆಗೆಂದು
ನೀರು ತುಂಬಿಟ್ಟುಕೊಳ್ಳುವುದಕ್ಕೆ
ಎಂದೆಲ್ಲ ನಾನಾ ರೀತಿ ಬಳಸುವ
ಚೊಂಬನ್ನು ಹೀಗಳೆಯದಿರಿ.
ಲೋಹದ್ದೋ ಪ್ಲಾಸ್ಟಿಕ್ಕಿನದ್ದೋ
ಚೊಂಬಿಲ್ಲದ ಮನೆಯೇ ಇಲ್ಲ.

ಟಿ.ಆರ್.ರಘುನಾಥ್
ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಕೇರಳ: ತ್ರಿಕೋನ ಸ್ಪರ್ಧೆ ಬಹು ಆಯಾಮದ ಚುನಾವಣೆ

‘ಕೇರಳದಲ್ಲಿ ಈ ಬಾರಿ ಬಿಜೆಪಿಯ ಮತಪ್ರಮಾಣವು ಭಾರಿ ಏರಿಕೆಯಾಗಲಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದರು. ಹೊರಗಿನಿಂದ ನೋಡಿದಾಗ ಇದೊಂದು ಚುನಾವಣಾ ಪ್ರಚಾರದ ಮಾತು ಎಂದಷ್ಟೇ ಎನಿಸುತ್ತದೆ. ಆದರೆ ಕೇರಳ ರಾಜಕಾರಣದ ಆಗು–ಹೋಗುಗಳನ್ನು ಒಳಹೊಕ್ಕು ನೋಡಿದಾಗ, ಚುನಾವಣೆಯಿಂದ ಚುನಾವಣೆಗೆ ಬಿಜೆಪಿಯ ನೆಲೆ ಗಟ್ಟಿಯಾಗುತ್ತಲೇ ಇರುವುದು ಕಾಣುತ್ತದೆ. ಆದರೆ ಬಿಜೆಪಿ ಗಟ್ಟಿಯಾಗುತ್ತಿರುವಲ್ಲಿ ನಷ್ಟವಾಗುತ್ತಿರುವುದು ಕಾಂಗ್ರೆಸ್‌ಗಲ್ಲ, ಬದಲಿಗೆ ಎಡಪಕ್ಷಗಳಿಗೆ. ಹಿಂದಿನ ಮೂರೂ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ಮತ ಪ್ರಮಾಣ ಏರಿಕೆಯಾಗಿದ್ದರೆ, ಎಡಪಕ್ಷಗಳ ಮತ ಪ್ರಮಾಣ ಇಳಿಕೆಯಾಗುತ್ತಲೇ ಇದೆ. ಈ ಚುನಾವಣೆಯಲ್ಲೂ ಈ ಪ್ರವೃತ್ತಿ ಮುಂದುವರಿಯಬಹುದೇ?

ಪ್ರಜಾವಾಣಿ ವಾರ್ತೆ

ಯುಡಿಎಫ್ ಪ್ರಬಲ



ಪ್ರಜಾ ಮತ ಜನತಂತ್ರದ ಹಬ್ಬ

ಲೋಕಸಭಾ ಚುನಾವಣೆ - 2024

ಕೇರಳದ 20 ಲೋಕಸಭಾ ಕ್ಷೇತ್ರಗಳಿಗೆ ಇದೇ 26ರಂದು ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. ವಾರದ ಹಿಂದಷ್ಟೇ ಕೆಲವು ಸುದ್ದಿ ಮಾಧ್ಯಮಗಳು ಸಮೀಕ್ಷೆಯ ಫಲಿತಾಂಶವನ್ನು ಪ್ರಕಟಿಸಿದ್ದವು. ಅವುಗಳಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗೆ 10 ಸ್ಥಾನಗಳು, ಸಿಪಿಎಂ ನೇತೃತ್ವದ ಎಲ್‌ಡಿಎಫ್‌ಗೆ 7 ಸ್ಥಾನಗಳು ಮತ್ತು ಬಿಜೆಪಿಗೆ 3 ಸ್ಥಾನಗಳು ಬರುತ್ತವೆ ಎಂದು ಅಂದಾಜಿಸಿದ್ದವು. ಬಿಜೆಪಿ ಮತ ಪ್ರಮಾಣವು ಶೇ 20ರವರೆಗೂ ಹೋಗಬಹುದು ಎಂದು ಆ ಚುನಾವಣಾ ಸಮೀಕ್ಷೆಗಳು ಹೇಳಿದ್ದವು.

ಆದರೆ ಕೇರಳದ ಚುನಾವಣಾ ಕಣವು ಮೇಲೆ ಹೇಳಿದಷ್ಟು ಸರಳವಾಗಿಲ್ಲ. ಸಿಪಿಎಂ ಮತ್ತು ಸಿಪಿಐ ದೇಶದ ಎಲ್ಲೆಡೆ ಕಾಂಗ್ರೆಸ್‌ನೊಟ್ಟಿಗೆ ‘ಇಂಡಿಯಾ’ ಮೈತ್ರಿಕೂಟದಲ್ಲಿ ಇವೆ. ಆದರೆ ಕೇರಳದಲ್ಲಿ ಮಾತ್ರ ಕಾಂಗ್ರೆಸ್ ವಿರುದ್ಧ ಸೆಣೆಸುತ್ತಿದೆ. ಏಕೆಂದರೆ ಕೇರಳದಲ್ಲಿ ಕಾಂಗ್ರೆಸ್‌ನ ಯುಡಿಎಫ್ ಮತ್ತು ಎಡಪಕ್ಷಗಳ ಎಲ್‌ಡಿಎಫ್‌ಗೆ ಪ್ರತ್ಯೇಕ ನೆಲೆ ಇವೆ ಮತ್ತು ಅವು ಪ್ರಬಲವಾಗಿವೆ. ಹೀಗಾಗಿಯೇ ಈ ಪಕ್ಷಗಳು ಕೇರಳದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಎಲ್ಲಾ ಕ್ಷೇತ್ರಗಳಲ್ಲೂ ಪರಸ್ಪರ ಸ್ಪರ್ಧೆಗೆ ಇಳಿದಿವೆ. ಈ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸಹ ಕೆಲವು ಕ್ಷೇತ್ರಗಳಲ್ಲಿ ಪ್ರಬಲ ಪೈಪೋಟಿ ನೀಡುವ ಮತ್ತು ಗೆಲ್ಲುವ ಸಣ್ಣ ಸಾಧ್ಯತೆ ಇರುವ ಪಕ್ಷವಾಗಿಯೂ ರೂಪುಗೊಂಡಿದೆ. ಹೀಗಾಗಿ ಕೇರಳದ ಕೆಲವು ಕ್ಷೇತ್ರಗಳಲ್ಲಿ ಈ ಬಾರಿಯದ್ದು ತ್ರಿಕೋನ ಸ್ಪರ್ಧೆ.

ಕೇರಳದ ಒಟ್ಟು ಜನಸಂಖ್ಯೆಯಲ್ಲಿ ಧಾರ್ಮಿಕ ಅಲ್ಪಸಂಖ್ಯಾತರದ್ದು ಅಂದರೆ, ಮುಸ್ಲಿಮರು ಮತ್ತು ಕ್ರೈಸ್ತ ಧರ್ಮೀಯರ ಪ್ರಮಾಣ ಶೇ 45ಕ್ಕೂ ಹೆಚ್ಚು. 15ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಈ ಸಮುದಾಯಗಳ ಮತಗಳೇ ನಿರ್ಣಾಯಕ. ಈ ಸಮುದಾಯಗಳು ಕಾಂಗ್ರೆಸ್, ಆರ್‌ಎಸ್‌ಪಿಯನ್ನು ಒಳಗೊಂಡ ಯುಡಿಎಫ್ ಅನ್ನೇ ಬೆಂಬಲಿಸುತ್ತಾ ಬಂದಿವೆ. ಹೀಗಾಗಿ ಯುಡಿಎಫ್ ಹೆಚ್ಚು ಸ್ಥಾನಗಳನ್ನು ಗೆದ್ದರೂ ಅಥವಾ ಗೆಲ್ಲದೇ ಇದ್ದರೂ ಅದರ ಮತಪ್ರಮಾಣದಲ್ಲಿ ಗಣನೀಯ ಬದಲಾವಣೆ ಆಗುವುದಿಲ್ಲ. ಎಲ್‌ಡಿಎಫ್‌ನ ಮತಗಳು ಅತ್ತಿತ್ತ ಆದಾಗಲಷ್ಟೇ ಕಾಂಗ್ರೆಸ್‌ನ ಗೆಲುವಿನ ಗ್ರಾಫ್ ಬದಲಾಗುತ್ತಿರುತ್ತದೆ.



ದೇಶದ ಬೇರೆಡೆ ನೆಲೆ ಕಳೆದುಕೊಂಡಿದ್ದರೂ ಕೇರಳದಲ್ಲಿ ಎಡಪಕ್ಷಗಳ ನೆಲೆ ಇನ್ನೂ ಗಟ್ಟಿಯಾಗಿಯೇ ಇದೆ. ಕೇರಳದಲ್ಲಿ ಎಲ್‌ಡಿಎಫ್ ನೆಚ್ಚಿಕೊಂಡಿರುವುದು ಹಿಂದೂಗಳ ಮತಗಳನ್ನು. ನಾಯರ್ ಮತ್ತು ಈಳವ (ಈಡಿಗರು) ಸಮುದಾಯದ ಮತದಾರರು ಎಡಪಕ್ಷಗಳನ್ನೇ ಬೆಂಬಲಿಸುತ್ತಾ ಬಂದಿದ್ದಾರೆ. ಈಗಲೂ ಈ ಸಮುದಾಯಗಳ ಮತಗಳ ಹೆಚ್ಚಿನ ಪಾಲು ಎಲ್‌ಡಿಎಫ್‌ಗೇ ಬೀಳುತ್ತದೆ. ಆದರೆ, ಹಿಂದಿನ ಮೂರು ಚುನಾವಣೆಗಳಲ್ಲಿ ಎಲ್‌ಡಿಎಫ್‌ನ ಮತಪ್ರಮಾಣ ಕಡಿಮೆಯಾಗುತ್ತಲೇ ಬಂದಿದೆ. 2009ರಲ್ಲಿ ಎಲ್‌ಡಿಎಫ್‌ನ ಮತ ಪ್ರಮಾಣ ಸುಮಾರು ಶೇ 40ರಷ್ಟು ಇತ್ತು. 2019ರ ವೇಳೆಗೆ ಅದು ಶೇ 36ರಷ್ಟಕ್ಕೆ ಕುಸಿದಿದೆ. ಆದರೆ ಇದೇ ಅವಧಿಯಲ್ಲಿ ಬಿಜೆಪಿಯ ಮತಪ್ರಮಾಣವು ಶೇ 6.3ರಷ್ಟರಿಂದ ಶೇ 12.99ಕ್ಕೆ ಏರಿಕೆಯಾಗಿತ್ತು. ಅಂದರೆ ಕೇರಳದಲ್ಲಿ ಬಿಜೆಪಿಯು ಎಲ್‌ಡಿಎಫ್‌ನ ಮತಗಳನ್ನು ಕಸಿಯುತ್ತಿದೆ ಎಂಬುದನ್ನೇ ಈ ಲೆಕ್ಕಾಚಾರಗಳು ಹೇಳುತ್ತವೆ.

ಎಲ್‌ಡಿಎಫ್ ನೆಚ್ಚಿಕೊಂಡಿರುವ ಹಿಂದೂ ಮತದಾರರನ್ನೇ ತನ್ನೆಡೆಗೆ ಸೆಳೆಯಲು ಬಿಜೆಪಿ ಯತ್ನಿಸುತ್ತಿದೆ. ಕ್ರೈಸ್ತ ಧರ್ಮೀಯರನ್ನು ಸೆಳೆಯುವ ಕಾರ್ಯಕ್ರಮಗಳನ್ನು ಕೇರಳ ಬಿಜೆಪಿ ಘಟಕ ಮಾಡಿತ್ತು. ಆದರೆ ಅದು ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ವಿಯಾಗಲಿಲ್ಲ. ಹೀಗಾಗಿ ಬಿಜೆಪಿ ಈಗ ಹಿಂದುತ್ವದ ಮಂತ್ರವನ್ನೇ ಜಪಿಸುತ್ತಿದೆ. ಹೀಗಾಗಿ ಬಿಜೆಪಿಗೆ ಬೀಳುವ ಪ್ರತಿ ಹೆಚ್ಚುವರಿ ಮತವೂ ಎಲ್‌ಡಿಎಫ್‌ನ ಮತಬುಟ್ಟಿಯಿಂದ ಖೋತಾ ಆಗುತ್ತಿದೆ ಎಂಬುದನ್ನೇ ಈ ದತ್ತಾಂಶಗಳು ಹೇಳುತ್ತವೆ. ಕೇರಳದಲ್ಲಿ ಎಡಪಕ್ಷಗಳು ಕಾಂಗ್ರೆಸ್‌ನೊಟ್ಟಿಗೆ ‘ಇಂಡಿಯಾ’ ಮೈತ್ರಿಕೂಟದ ಒಟ್ಟಿಗೆ ಇವೆ ಎಂದೇ ಬಿಜೆಪಿ ಪ್ರಚಾರ ಮಾಡುತ್ತಿದೆ. ಇದು ಎಲ್‌ಡಿಎಫ್‌ನ ಮತಗಳನ್ನು ಮತ್ತಷ್ಟು ಛಿದ್ರ ಮಾಡುತ್ತದೆ. ಬಿಜೆಪಿಯ ಈ ತಂತ್ರದಿಂದ ಸಂದಿಗ್ಧ ಸ್ಥಿತಿಗೆ ಸಿಲುಕಿರುವ ಎಲ್‌ಡಿಎಫ್, ಕೇರಳದಲ್ಲಿ ತಾನು ಕಾಂಗ್ರೆಸ್‌ನೊಟ್ಟಿಗೆ ಇಲ್ಲ ಎಂಬುದನ್ನು ಜನಕ್ಕೆ ಮನವರಿಕೆ ಮಾಡಿಕೊಡಬೇಕಾದ ಅನಿವಾರ್ಯಕ್ಕೆ ಸಿಲುಕಿದೆ. ಈ ಕಾರಣದಿಂದಲೇ ವಯನಾಡ್ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ರಾಹುಲ್ ಗಾಂಧಿ ವಿರುದ್ಧ ಎಲ್‌ಡಿಎಫ್ ನಾಯಕರು ಮತ್ತು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪದೇ–ಪದೇ ವಾಗ್ದಾಳಿ ನಡೆಸುತ್ತಿದ್ದಾರೆ.

ಕ್ರೈಸ್ತ ಧರ್ಮೀಯರನ್ನು ಸೆಳೆಯುವ ಬಿಜೆಪಿಯ ತಂತ್ರ ಸ್ವಲ್ಪ ಮಟ್ಟಿಗೆ ಫಲ ನೀಡಿದರೂ, ಅದು ಕಾಂಗ್ರೆಸ್ ನೇತೃತ್ವದ ಯುಡಿಎಫ್‌ನ ಮತಗಳನ್ನು ನಷ್ಟ ಮಾಡುತ್ತದೆ. ಈ ಚುನಾವಣೆಯಲ್ಲಿ ಬಿಜೆಪಿ ಮತಪ್ರಮಾಣ ಹೆಚ್ಚಾಗುತ್ತದೆ ಎಂದು ಹೇಳುವಲ್ಲಿ, ಈ ಎಲ್ಲಾ ಅಂಶಗಳೂ ಕೆಲಸ ಮಾಡುತ್ತಿವೆ. 2019ರ ಲೋಕಸಭಾ ಚುನಾವಣೆಯಲ್ಲಿ ಯುಡಿಎಫ್ 19 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಆದರೆ ಬದಲಾದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಕೆಲವು ಸ್ಥಾನಗಳನ್ನು ಕಳೆದುಕೊಳ್ಳಬಹುದು, ಆ ಕ್ಷೇತ್ರಗಳು ಬಿಜೆಪಿಗೆ ಹೋಗಬಹುದು ಎಂದು ಹೇಳಲಾಗುತ್ತಿದೆ. ಆದರೆ ಹಾಗಾಗುವ ಸಾಧ್ಯತೆ ತೀರಾ ಕಡಿಮೆ ಎಂದೂ ಹೇಳಲಾಗುತ್ತಿದೆ. ಆದರೆ ಯುಡಿಎಫ್‌ನ ಸ್ಥಾನಗಳು ಕಡಿಮೆಯಾದರೆ, ಎಲ್‌ಡಿಎಫ್ ಮತ್ತು ಬಿಜೆಪಿಗಳ ತಮ್ಮ ಸ್ಥಾನಗಳನ್ನು ಉತ್ತಮಪಡಿಸಿಕೊಳ್ಳಲಿವೆ ಎಂದು ವಿಶ್ಲೇಷಿಸಲಾಗಿದೆ.

‘ಬಿಜೆಪಿಗೆ ಪ್ರತಿಕೂಲ ಪರಿಸ್ಥಿತಿ’: ಕೇರಳದಲ್ಲಿ ಬಿಜೆಪಿ ತನ್ನ ಮತ ಪ್ರಮಾಣವನ್ನು ಉತ್ತಮಪಡಿಸಿಕೊಳ್ಳುತ್ತಿದೆ ಎಂದು ಒಂದು ವರ್ಗದ ರಾಜಕೀಯ ಪಂಡಿತರು ಹೇಳುತ್ತಿದ್ದರೂ, ಕೇಂದ್ರ ಸರ್ಕಾರದ ನೀತಿಗಳ ಕಾರಣದಿಂದ ಬಿಜೆಪಿಯ ನೆಲೆ ಈ ಹಿಂದಿಗಿಂತ ಸಡಿಲವಾಗಲಿದೆ ಎಂದು ಇನ್ನೊಂದು ವರ್ಗದ ರಾಜಕೀಯ ತಜ್ಞರು ಹೇಳುತ್ತಿದ್ದಾರೆ.

ಕೇಂದ್ರ ಸರ್ಕಾರದ ಒಟ್ಟು ತೆರಿಗೆ ಆದಾಯದಲ್ಲಿ ಕೇರಳ ಸರ್ಕಾರದ ಪಾಲನ್ನು ತೀರಾ ಕಡಿತ ಮಾಡಲಾಗಿದೆ. ಅತಿಹೆಚ್ಚು ತೆರಿಗೆ ಪಾಲು ಕಡಿತ ಆಗಿದ್ದು ಕರ್ನಾಟಕ ಮತ್ತು ಕೇರಳಕ್ಕೆ ಮಾತ್ರ. ಕೇಂದ್ರ ಸರ್ಕಾರದ ಈ ತೆರಿಗೆ ಅನ್ಯಾಯದ ವಿರುದ್ಧ ಕರ್ನಾಟಕವು ದನಿ ಎತ್ತಿದಾಗ, ಅಷ್ಟೇ ಗಟ್ಟಿಯಾಗಿ ಮಾತನಾಡಿದ್ದು ಕೇರಳ ಸರ್ಕಾರ. 2018ರ ಪ್ರವಾಹದ ಸಂದರ್ಭದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಪರಿಹಾರ ನೀಡದೇ ಇದ್ದದ್ದು, ವಿದೇಶಿ ನೆರವನ್ನು ತಡೆಹಿಡಿದಿದ್ದದನ್ನು ಬಿಜೆಪಿ ವಿರುದ್ಧ ಪ್ರಚಾರಕ್ಕೆ ಎಲ್‌ಡಿಎಫ್ ಬಳಸಿಕೊಳ್ಳುತ್ತಿದೆ. ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸಹ ಹೀಗೆಯೇ ಪ್ರಚಾರ ಮಾಡುತ್ತಿದೆ. ಇವೆಲ್ಲವೂ ಬಿಜೆಪಿಗೆ ಪ್ರತಿಕೂಲವಾಗಲಿದೆ ಎಂದು ಅಂದಾಜಿಸಲಾಗುತ್ತಿದೆ.

ಬಿಜೆಪಿ ಹಿಂದುತ್ವ ಕಾರ್ಯಸೂಚಿಯೊಂದಿಗೆ ರಾಜ್ಯ ಸರ್ಕಾರ ಭ್ರಷ್ಟಾಚಾರ ನಡೆಸುತ್ತಿದೆ ಎಂದು ಪ್ರಚಾರ ನಡೆಸುತ್ತಿದೆ. ಇದು ಬಿಜೆಪಿಗೆ ಎಷ್ಟರಮಟ್ಟಿಗೆ ನೆರವಾಗಲಿದೆ ಎಂಬುದನ್ನು ಕಾದುನೋಡಬೇಕಿದೆ.



ತರೂರ್–ಚಂದ್ರಶೇಖರ್



ರಾಹುಲ್ ಗಾಂಧಿ ಸ್ಪರ್ಧೆಯ ಕಾರಣಕ್ಕೆ ವಯನಾಡ್ ಕ್ಷೇತ್ರವು ರಾಷ್ಟ್ರ ಮಟ್ಟದಲ್ಲಿ ಹೆಚ್ಚು ಗಮನ ಸೆಳೆದಿದ್ದರೆ, ತಾರಾ ವರ್ಚಸ್ಸಿನ ನಾಯಕರ ಪೈಪೋಟಿಯ ಕಾರಣಕ್ಕೆ ತಿರುವನಂತಪುರ ಕ್ಷೇತ್ರವೂ ರಾಷ್ಟ್ರ ಮಟ್ಟದಲ್ಲಿ ಸುದ್ದಿಯಲ್ಲಿದೆ.

ತಿರುವನಂತಪುರದಲ್ಲಿ ಕಾಂಗ್ರೆಸ್‌ನ ಹಾಲಿ ಸಂಸದ ಶಶಿ ತರೂರ್ ಮರು ಆಯ್ಕೆ ಬಯಸಿದ್ದಾರೆ. ಬಿಜೆಪಿಯು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರನ್ನು ಕಣಕ್ಕೆ ಇಳಿಸಿದೆ. ಶಶಿ ತರೂರ್ ಗೆಲ್ಲುವ ನೆಚ್ಚಿನ ಅಭ್ಯರ್ಥಿ ಎಂದೇ ಹೇಳುತ್ತಿದ್ದರೂ, ರಾಜೀವ್ ಅವರು ಪ್ರಬಲ ಪೈಪೋಟಿ ನೀಡುತ್ತಾರೆ ಎಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಇಬ್ಬರು ನಾಯಕರೂ ದೊಡ್ಡಮಟ್ಟದ ಪ್ರಚಾರದಲ್ಲಿ ತೊಡಗಿದ್ದಾರೆ.



ಅಪ್ಪ–ಮಗನ ಭಾವನಾತ್ಮಕ ಸಮರ

ಪತ್ತನಂತಿಟ್ಟ ಲೋಕಸಭಾ ಕ್ಷೇತ್ರದಲ್ಲಿ ರಾಜಕಾರಣ ಒಂದೆಡೆಯಾದರೆ, ಭಾವನಾತ್ಮಕ ಸಂಗತಿಗಳೇ ಚರ್ಚಾ ವಿಷಯವಾಗಿದೆ. ಕೇರಳ ಕಾಂಗ್ರೆಸ್‌ನ ಪ್ರಮುಖ ನಾಯಕ ಎ.ಕೆ. ಆ್ಯಂಟನಿ ಅವರ ಮಗ ಅನಿಲ್ ಆ್ಯಂಟನಿ ಬಿಜೆಪಿ ಸೇರಿದ್ದಾರೆ ಮತ್ತು ಇದೇ ಕ್ಷೇತ್ರದಿಂದ ಎನ್‌ಡಿಎ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ.

‘ನಾನು ಎಷ್ಟು ದಿನ ಬದುಕುತ್ತೇನೊ ಗೊತ್ತಿಲ್ಲ. ಆದರೆ, ಹೆಚ್ಚು ದಿನ ಬದುಕುವ ಆಸೆಯೇನೂ ನನಗಿಲ್ಲ. ಬದುಕಿರುವವರೆಗೂ ನಾನು ನೆಹರೂ ಕುಟುಂಬಕ್ಕೆ ಹಾಗೂ ಕಾಂಗ್ರೆಸ್‌ಗೆ ನಿಷ್ಠ’ ಎಂದು ಎ.ಕೆ. ಆ್ಯಂಟನಿ ಅವರು, ಮಗ ಅನಿಲ್ ಬಿಜೆಪಿ ಸೇರಿದ ಸಂದರ್ಭದಲ್ಲಿ ಭಾವನಾತ್ಮಕವಾಗಿಯೇ ಹೇಳಿದ್ದರು. ‘ಅಪ್ಪನಿಗೆ ದ್ರೋಹ ಬಗೆದ ಮಗ’ ಎನ್ನುವುದು ಸ್ವತಃ ಬಿಜೆಪಿ ಬೆಂಬಲಿಗರ ಅಭಿಪ್ರಾಯ. ಆ್ಯಂಟನಿ ಅವರು ಕಾಂಗ್ರೆಸ್ ಪರವೇ ಪ್ರಚಾರ ನಡೆಸುವುದಾಗಿಯೂ ಹೇಳಿದ್ದರು.

ಇದು ಕಾಂಗ್ರೆಸ್‌ನ ಭದ್ರಕೋಟೆ ಮತ್ತು ದಶಕಕ್ಕೂ ಹೆಚ್ಚಿನ ಅವಧಿಯಿಂದ ಇಲ್ಲಿ ಕಾಂಗ್ರೆಸ್ ಪಕ್ಷವೇ ಜಯಗಳಿಸಿದೆ. ಇಲ್ಲಿ ಈ ಬಾರಿ ಯುಡಿಎಫ್, ಎಲ್‌ಡಿಎಫ್ ಹಾಗೂ ಎನ್‌ಡಿಎ ಮೂರು ಮೈತ್ರಿಕೂಟಗಳು ಕ್ರೈಸ್ತ ಸಮುದಾಯದ ಅಭ್ಯರ್ಥಿಗಳನ್ನೇ ಕಣಕ್ಕಿಳಿಸಿವೆ.

ಇವಿಎಂ ಅಪನಂಬಿಕೆ

ಕೇರಳದ ಕಾಸರಗೋಡಿನಲ್ಲಿ ಈಚೆಗೆ ಅಣಕು ಮತದಾನ ನಡೆಸಿದಾಗ, ಬೇರೆ ಪಕ್ಷಗಳಿಗೆ ಹಾಕಿದ ಮತಗಳೂ ಬಿಜೆಪಿಗೇ ಹೋಗಿವೆ. ಜತೆಗೆ ಯಾರಿಗೂ ಮತಹಾಕದೇ ಇದ್ದಾಗಲೂ ಬಿಜೆಪಿಗೆ ಮತಬಿದ್ದಿದೆ. ಈ ಬಗ್ಗೆ ಚುನಾವಣಾ ಅಧಿಕಾರಿಗಳು ಜಿಲ್ಲಾಧಿಕಾರಿಗೆ ದೂರನ್ನೂ ನೀಡಿದ್ದಾರೆ. ಸುಪ್ರೀಂ ಕೋರ್ಟ್‌ನಲ್ಲೂ ಈ ವಿಷಯ ಪ್ರಸ್ತಾಪವಾಗಿದೆ. ಇದು ತಾಂತ್ರಿಕ ದೋಷಗಳಿಂದ ಆದ ಸಮಸ್ಯೆ ಎಂದು ಚುನಾವಣಾ ಆಯೋಗ ಹೇಳಿದೆ. ಆದರೆ, ಈ ಪ್ರಸಂಗವು ಇವಿಎಂ ಮೇಲೆ ಒಂದು ಮಟ್ಟದ ಅಪನಂಬಿಕೆ ಸೃಷ್ಟಿಸಿದೆ.

ಕೇರಳದ ಮಾಧ್ಯಮಗಳೂ ಈ ಬಗ್ಗೆ ಸರಣಿ ವರದಿಗಳನ್ನು ಪ್ರಕಟಿಸಿವೆ. ಈ ಮೂಲಕ ಜನರು ಈ ಬಗ್ಗೆ ಪ್ರಶ್ನೆ ಮಾಡುತ್ತಲೇ ಇದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಂತೂ, ‘ಇವಿಎಂಗಳಲ್ಲಿ ತಾಂತ್ರಿಕ ದೋಷ ತಲೆದೋರಿದಾಗಲೆಲ್ಲಾ ಬಿಜೆಪಿಗೇ ಏಕೆ ಹೆಚ್ಚುವರಿ ಮತಗಳು ಹೋಗುತ್ತವೆ’ ಎಂದು ಪ್ರಶ್ನಿಸುತ್ತಿದ್ದಾರೆ.

ಸಿನಿ ಬಿಟ್ಸ್

ಬೆಂಗಳೂರಿನ ಕಂಠೀರವ ಸ್ಟುಡಿಯೊದಲ್ಲಿರುವ ರಾಜ್‌ಕುಮಾರ್ ಸಮಾಧಿಗೆ ಅಭಿಮಾನಿಗಳು ಭೇಟಿ ನೀಡಿ ನಮನ ಸಲ್ಲಿಸಿದರು. –ಪ್ರಜಾವಾಣಿ ಚಿತ್ರ

ರಾಜ್‌ಕುಮಾರ್ ಜನ್ಮದಿನ ಅಭಿಮಾನಿಗಳ ಸಂಭ್ರಮ

ಬೆಂಗಳೂರು: ವರನಟ ಡಾ. ರಾಜ್‌ಕುಮಾರ್ ಅವರ ಜನ್ಮದಿನದ ಹಿನ್ನೆಲೆಯಲ್ಲಿ ಬುಧವಾರ(ಏ.24) ದೊಡ್ಮನೆ ಕುಟುಂಬದ ಸದಸ್ಯರು ಕಂಠೀರವ ಸ್ಟುಡಿಯೊದಲ್ಲಿರುವ ರಾಜ್‌ಕುಮಾರ್ ಸಮಾಧಿಗೆ ಪೂಜೆ ಸಲ್ಲಿಸಿದರು.

ಚಂದನವನದ ನಟಸಾರ್ವಭೌಮ ನಮ್ಮನ್ನು ಅಗಲಿ 18 ವರ್ಷ ಉರುಳಿದ್ದರೂ, ಅವರ ನೆನಪು ಇನ್ನೂ ಹಸಿರಾಗಿದೆ. ಹೀಗಾಗಿ ‘ಬಂಗಾರದ ಮನುಷ್ಯ’ನನ್ನು ಜನ್ಮದಿನದ ನೆಪದಲ್ಲಿ ಮತ್ತೆ ಮತ್ತೆ ನೆನಪು ಮಾಡಿಕೊಂಡರು ಅಭಿಮಾನಿಗಳು. ಬುಧವಾರ ಬೆಳಗ್ಗೆ ರಾಘವೇಂದ್ರ ರಾಜ್‌ಕುಮಾರ್ ದಂಪತಿ, ಅಶ್ವಿನಿ ಪುನೀತ್‌ರಾಜ್‌ಕುಮಾರ್, ಪುತ್ರಿ ವಂದಿತಾ ಸೇರಿದಂತೆ ಕುಟುಂಬದ ಸದಸ್ಯರು ರಾಜ್‌ಕುಮಾರ್ ಸಮಾಧಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಸಾಹಿತಿ ಬರಗೂರು ರಾಮಚಂದ್ರಪ್ಪ, ನಟ ಜಗ್ಗೇಶ್ ಸಮಾಧಿಗೆ ಭೇಟಿ ನೀಡಿ ನಮನ ಸಲ್ಲಿಸಿದರು. ಸಮಾಧಿಗೆ ಹೂವಿನ ಅಲಂಕಾರ ಮಾಡಿ, ಅದರ ಮುಂದೆ ಬೃಹತ್ ಕೇಕ್‌ಗಳನ್ನು ಇಟ್ಟು ತಮ್ಮ ಪ್ರೀತಿಯನ್ನು ಕೆಲ ಅಭಿಮಾನಿಗಳು ತೋರಿದರು. ಹಲವರು ಪುಷ್ಪನಮನ ಸಲ್ಲಿಸಿ ಭಾವುಕರಾದರು.

ಪುಣ್ಯಭೂಮಿಯ ಆವರಣದಲ್ಲೇ ಅಭಿಮಾನಿಗಳು ನೇತ್ರದಾನದ ಪ್ರತಿಜ್ಞೆ ಮಾಡಿದರು. ಅನ್ನದಾನ ಮತ್ತು ರಕ್ತದಾನದ ಕಾರ್ಯಗಳೂ ನಡೆದವು. ರಾಜ್ಯದ ಹಲವೆಡೆ ರಾಜ್‌ಕುಮಾರ್ ಅಭಿಮಾನಿಗಳು ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ‘ಎಕ್ಸ್’ನಲ್ಲಿ ಚಿತ್ರರಂಗದ ಕಲಾವಿದರು ಮತ್ತು ರಾಜಕಾರಣಿಗಳು ವರನಟನನ್ನು ನೆನಪಿಸಿಕೊಂಡರು. ❖

ಬ್ಯಾಡ್ ಬಾಯ್ಸ್ ಹಾಡಿಗೆ ಎಐ ಸ್ಪರ್ಶ

ಅರುಣ್ ಅಮುಕ್ತ ನಿರ್ದೇಶನದ ‘ವಿದ್ಯಾರ್ಥಿ ವಿದ್ಯಾರ್ಥಿನಿಯರೇ’ ಚಿತ್ರ ಬಿಡುಗಡೆಗೆ ಸಜ್ಜಾಗುತ್ತಿದ್ದು, ಚಿತ್ರದ ಮೊದಲ ಹಾಡು ‘ಬ್ಯಾಡ್ ಬಾಯ್ಸ್’ ರಿಲೀಸ್ ಆಗಿದೆ. ವಿಶೇಷ ಏನೆಂದರೆ ಹಾಡಿಗೆ ‘ಎಐ’ ಸ್ಪರ್ಶ ನೀಡಿದೆ ಚಿತ್ರತಂಡ.

ಬ್ಯಾಡ್ ಬಾಯ್ಸ್ ಹಾಡಿನ ದೃಶ್ಯ

ಈ ಹಾಡಿಗೆ ವಿಜೇತ್ ಕೃಷ್ಣ ಸಂಗೀತ ಸಂಯೋಜನೆ ಮಾಡಿದ್ದು, ‘ಭರ್ಜರಿ’ ಚೇತನ್ ಕುಮಾರ್ ಸಾಹಿತ್ಯವಿದೆ. ವಿಜೇತ್ ಕೃಷ್ಣ, ಕೀರ್ತನಾ ಚಂದ್ರು ಮತ್ತು ಸುನೈನಾ ಹಾಡಿಗೆ ಧ್ವನಿಯಾಗಿದ್ದು, ಎಐ ತಂತ್ರಜ್ಞಾನ ಬಳಸಿ ಪಾತ್ರಗಳ ಆ್ಯನಿಮೇಷನ್ ಮಾಡಲಾಗಿದೆ. ‘ಬ್ಯಾಡ್ ಬಾಯ್ಸ್’ ಹಾಡನ್ನು ಅರುಣ್ ಸುರೇಶ್ ಸೆರೆಹಿಡಿದಿದ್ದಾರೆ. ಹಾಡಿನಲ್ಲಿ ಮನೋಜ್ ವಿವಾನ್, ಮನಸ್ವಿ, ಭಾವನಾ ಅಪ್ಪು, ಅಮರ್ ಮುಂತಾದವರು ಕಾಣಿಸಿಕೊಂಡಿದ್ದಾರೆ.

ಸುಬ್ರಹ್ಮಣ್ಯ ಕುಕ್ಕೆ ಮತ್ತು ಎ.ಸಿ ಶಿವಲಿಂಗೇಗೌಡ ಈ ಚಿತ್ರವನ್ನು ನಿರ್ಮಾಣ ಮಾಡಿದ್ದು, ಕುಮಾರ್ ಗೌಡ ಛಾಯಾಚಿತ್ರಗ್ರಹಣ, ಚೇತನ್ ಮತ್ತು ವಾಸುಕಿ ವೈಭವ್ ಸಾಹಿತ್ಯ, ಪವನ್ ಗೌಡ ಸಂಕಲನ, ಟೈಗರ್ ಶಿವು, ನರಸಿಂಹ ಸಾಹಸ ನಿರ್ದೇಶನ ಚಿತ್ರಕ್ಕಿದೆ. ಚಂದನ್ ಶೆಟ್ಟಿ, ಮಾನಸಿ, ಭವ್ಯ, ಸುನೀಲ್ ಪುರಾಣಿಕ್, ಅರವಿಂದ ರಾವ್, ಸಿಂಚನಾ, ರಘು ರಾಮನಕೊಪ್ಪ, ಪ್ರಶಾಂತ್ ಸಂಬರ್ಗಿ, ಕಾಕ್ರೋಚ್ ಸುಧಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಚಿತ್ರ ಜೂನ್‌ಗೆ ತೆರೆಕಾಣಲಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಮಾನವೀಯತೆಯ ಗೆಲುವು

ದಕ್ಷಿಣ ಆಫ್ರಿಕಾದ ಹೆಕ್ಟರ್ ಮೆಕಾನ್ಸಿ ಎನ್ನುವ ಯುವಕ ತನ್ನ ಗೆಳತಿಗೆ ಪ್ರಪೋಸ್ ಮಾಡಬೇಕೆಂದಿದ್ದ. ಚಲನಚಿತ್ರಗಳಲ್ಲಿ ತೋರಿಸುವ ಅದ್ದೂರಿ ಮದುವೆಯ ಪ್ರಸ್ತಾಪ ಮಾಡಲು ಆತನ ಬಳಿ ಹಣವಿರಲಿಲ್ಲ. ಹಾಗಾಗಿ ಆತ ಕೆಎಫ್‌ಸಿಯಲ್ಲಿ ಊಟದ ನಡುವೆಯೇ ತನ್ನನ್ನು ಮದುವೆಯಾಗುವಂತೆ ಕೋರಿದ, ಅವಳೂ ಒಪ್ಪಿದಳು. ಸುತ್ತಮುತ್ತಲಿನವರೆಲ್ಲ ಚಪ್ಪಾಳೆ ತಟ್ಟಿ ಅವರ ಖುಷಿಯಲ್ಲಿ ಭಾಗಿಯಾದರು. ಆತ ಆಕೆಗೆ ಉಂಗುರವನ್ನೂ ತೊಡಿಸಿದ. ಆದರೆ ಅಲ್ಲೇ ಇದ್ದ ಒಬ್ಬಾಕೆ ಈ ಘಟನೆಯನ್ನು ವಿಡಿಯೊ ಮಾಡಿ ‘ಎಂಥ ಗತಿಗೆಟ್ಟವರು ಇವರು, ಕೆಎಫ್‌ಸಿಯಲ್ಲಿ ಪ್ರಪೋಸ್ ಮಾಡುತ್ತಾರೆ’ ಎಂದೆಲ್ಲ ಕೆಟ್ಟದಾಗಿ ಟ್ವಿಟರ್‌ನಲ್ಲಿ ಬರೆದುಕೊಂಡಳು.

ಈ ಪೋಸ್ಟ್ ಓದಿದ ಕೆಎಫ್‌ಸಿ ಅದಕ್ಕೆ ಉತ್ತರ ನೀಡಿ ಆ ಜೋಡಿಗೆ ತಾನು ಬಹುಮಾನ ಕೊಡಬೇಕೆಂದಿದ್ದೇನೆಂದೂ ಅವರನ್ನು ಹುಡುಕಲು ಸಹಾಯ ಮಾಡುವಂತೆಯೂ ಜನರಲ್ಲಿ ಮನವಿ ಮಾಡಿ ಮರು ಟ್ವೀಟ್ ಮಾಡಿತು. ಬಡತನವನ್ನು ಹಂಗಿಸಿದ ಆ

ನುಡಿ ಬೆಳಗು

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಮಹಿಳೆಯ ಉದ್ಧಟತನ ಜನರ ಸಿಟ್ಟಿಗೆ ಕಾರಣವಾಗಿ ಈ ಟ್ವೀಟ್ ಸುಮಾರು ಮೂವತ್ತು ಸಾವಿರ ಸಲ ಹಂಚಲ್ಪಟ್ಟಿತು. ಎಲ್ಲೆಡೆ ಈ ಜೋಡಿಯದ್ದೇ ಚರ್ಚೆ.

ಮುಂದೆ ನಡೆದಿದ್ದು ಅಚ್ಚರಿ... ಬ್ಯಾಂಕೊಂದು ಈ ಜೋಡಿಯ ಎಲ್ಲ ವೈಯಕ್ತಿಕ ಸಾಲ ತೀರಿಸುವುದಾಗಿ ಘೋಷಿಸಿತು. ಆಭರಣದ ಕಂಪನಿಯೊಂದು ಎರಡು ಉಂಗುರಗಳನ್ನು ಉಡುಗೊರೆ ಕೊಡುತ್ತೇನೆಂದು ಹೇಳಿತು. ಅದರಲ್ಲಿ ಹುಡುಗಿಯದ್ದು ದುಬಾರಿಯಾದ ವಜ್ರದುಂಗುರ. ಶೆಫ್ ಒಬ್ಬ ತಾನು ಮದುವೆಯ ಊಟ ತಯಾರು ಮಾಡುವ ಜವಾಬ್ದಾರಿ ವಹಿಸಿಕೊಂಡ. ಔಡಿ ಕಂಪನಿ ಹೊಚ್ಚಹೊಸ ಕಾರನ್ನು ಉಡುಗೊರೆಯಾಗಿ ನೀಡಿತು. ಮೊಬೈಲ್ ಕಂಪನಿಯೊಂದು ಹೊಸ ಮೊಬೈಲ್‌ಗಳನ್ನು ಇಬ್ಬರಿಗೂ ನೀಡಿತು. ಫರ್ನಿಚರ್ ಕಂಪನಿ ಹೊಸ ಜೋಡಿಯ ಮನೆಗೆ ಹೊಚ್ಚಹೊಸ ಅಡುಗೆ ಮನೆ ನಿರ್ಮಿಸಿತು. ಉಬರ್ ಉಚಿತ ಸವಾರಿ ಒದಗಿಸಿತು. ಮೆಕ್‌ಡೊನಾಲ್ಡ್ ಕಂಪನಿ ವಿಐಪಿ ವಸತಿ ವ್ಯವಸ್ಥೆಯ ಜತೆಗೆ ಉಚಿತ ಕೇಪ್‌ಟೌನ್ ಪ್ರವಾಸವನ್ನೂ ಏರ್ಪಡಿಸಿತು. ಇವಲ್ಲದೇ ಹಲವಾರು ಜನ ಇತರ ಸಣ್ಣ ಪುಟ್ಟ ಸಹಾಯ ಮಾಡಲು ಮುಗಿಬಿದ್ದರು.

ಜಗತ್ತಿನಲ್ಲಿ ದ್ವೇಷಕ್ಕಿಂತ ಪ್ರೇಮದ ಪ್ರಮಾಣವೇ ಹೆಚ್ಚಿದೆ. ಜನರು ಮನಸ್ಸು ಮಾಡಿದರೆ ದ್ವೇಷ ಹರಡಬಯಸುವ ನೀಚರಿಗೆ ಪ್ರೀತಿ ಮಾನವೀಯತೆಯಿಂದಲೇ ಪಾಠ ಕಲಿಸಬಲ್ಲರು. ಬೇರೆಯವರ ಸಂತೋಷವನ್ನು ಸಹಿಸಲಾರದ ಕ್ಷುದ್ರ ವ್ಯಕ್ತಿಗಳು ಅಹಂಕಾರದಿಂದ ತಮ್ಮೊಳಗಿನ ಅಸಹನೆಯನ್ನು ಕಾರಿಕೊಂಡಾಗ ತಕ್ಕ ಉತ್ತರ ಕೊಟ್ಟ ದಕ್ಷಿಣ ಆಫ್ರಿಕಾದ ಈ ಕಂಪನಿಗಳು ಮತ್ತು ಜನರು ಪ್ರಶಂಸೆಗೆ ಅರ್ಹರು. ದ್ವೇಷದ ಆಯಸ್ಸು ಕ್ಷಣಿಕ, ಕೊನೆಗೂ ಮುಖ್ಯವಾಗುವುದು ಮನುಷ್ಯತ್ವ ಮಾತ್ರ. ಇದು ಎಲ್ಲ ದೇಶಕಾಲಗಳಲ್ಲಿಯೂ ಸಾಬೀತಾಗುತ್ತಲೇ ಬಂದಿರುವ ಸತ್ಯ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಏಪ್ರಿಲ್ 25, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಪ್ರತಿಪದ ಗಂ. 06-46 ನಕ್ಷತ್ರ ವಿಶಾಖ ಗಂ. 26-24 **ಯೋಗ:** ವ್ಯತೀಪಾತ ಗಂ. 28-53 ಕರಣ : ಕೌಲವ ಗಂ. 06-46, ಮೇಷ ಮಾಸದ 13 ನೇ ದಿನ, **ಮಳೆನಕ್ಷತ್ರ:** ಅಶ್ವಿನಿ 4.

ರಾಹುಕಾಲ : ಮಧ್ಯಾಹ್ನ 01-30 - 03-00

ಸೂರ್ಯೋದಯ : 06-15 **ಸೂರ್ಯಾಸ್ತ :** 06-41

ಮುಸ್ಲಿಂ ದಿನಾಂಕ : 15 ಶವ್ವಾಲ್

ಅದೃಷ್ಟ ಸಂಖ್ಯೆ : 1, 10

ಮೇಷ: ಎಷ್ಟು ಜಾಗರೂಕತೆಯಿಂದ ಕೆಲಸ ಮಾಡಿದರೂ ಮೇಲಿನ ಅಧಿಕಾರಿಗಳ ಹದ್ದಿನ ಕಣ್ಣಿಗೆ ನಿಮ್ಮ ಕೆಲವು ದೋಷಗಳು ಕಾಣುತ್ತವೆ. ನಿಮ್ಮ ಸ್ನೇಹಿತನಿಗಾದ ವಾಹನ ಅಪಘಾತವು ನಿಮ್ಮನ್ನು ಖೇದವಾಗಿಸುವುದು.

ವೃಷಭ: ಯಾವುದೋ ಕಾರಣದಿಂದ ದೂರವಾದ ಸ್ನೇಹಿತ ಮತ್ತೆ ನಿಮ್ಮ ಪ್ರಾಣ ಸ್ನೇಹಿತನಾಗಿ ಮರಳಲಿದ್ದಾನೆ. ಉನ್ನತ ವಾಣಿಜ್ಯ ಶಿಕ್ಷಣ ವಿದ್ಯಾರ್ಥಿಗಳಿಗೆ ಯಶಸ್ಸಿನ ಸಾಧ್ಯತೆ ಇದೆ. ವೈಯಕ್ತಿಕ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ.

ಮಿಥುನ: ನಿಮ್ಮ ತಪ್ಪುಗಳಿಗೆ ಕಾರಣವನ್ನು ಹುಡುಕುವುದು ಹಾಗೂ ಇತರರಿಗೆ ಕಾರಣವನ್ನು ಕೊಡುವುದರಲ್ಲಿ ಹುರುಳಿಲ್ಲ. ಅಧಿಕಾರಿಗಳ ಮುಖಸ್ತುತಿಯಿಂದ ನಿಮ್ಮ ಕೆಲಸ ಆಗುತ್ತದೆ ಎಂದು ಭಾವಿಸಿದ್ದರೆ ಆ ಯೋಚನೆಯನ್ನು ಕೈಬಿಡಿ.

ಕರ್ಕಾಟಕ: ಪ್ರತಿದಿನವೂ ಭಕ್ತಿಯಿಂದ ದೇವರನ್ನು ನೀವು ಸ್ತುತಿಸುವುದರಿಂದ ಇಂದು ನಿಮಗೆ ಎದುರಾಗಲಿರುವ ಸಣ್ಣಪುಟ್ಟ ಸಮಸ್ಯೆಗಳು ಸರಾಗವಾಗಿ ನಿವಾರಣೆಯಾಗಲಿದೆ. ನಿಮಗೆ ಸಂತಸ ತರುವ ಸಂಗತಿಗಳಿಗೆ ಇಂದು ಕೊರತೆ ಇಲ್ಲ.

ಸಿಂಹ: ನಿರ್ಧಾರ ತೆಗೆದುಕೊಳ್ಳುವ ಸಮಯದಲ್ಲಿ ಸಹವರ್ತಿಗಳ ಅಭಿಪ್ರಾಯಗಳನ್ನು ಪಡೆದುಕೊಳ್ಳಿ. ಎಲ್ಲದರಿಂದಲೂ ಧನಲಾಭವನ್ನು ಮಾತ್ರ ಯೋಚಿಸಬೇಡಿ. ಸಹಾಯ ಮಾಡುವ ಮನಸ್ಥಿತಿಯನ್ನೂ ಬೆಳೆಸಿಕೊಳ್ಳಿ.

ಕನ್ಯಾ: ಪದವಿ ಹಂತದಲ್ಲಿರುವ ವಿದ್ಯಾರ್ಥಿಗಳಿಗೆ ದೀರ್ಘವಾದ ಶ್ವಾಸವನ್ನು ಬಿಡುವಂತಹ ಸಂದರ್ಭ ಎದುರಾಗಲಿದೆ. ಇಂದು ನೀವು ಭೇಟಿ ಮಾಡುವಂಥ ವ್ಯಕ್ತಿಯ ಸಾಂಗತ್ಯವು ಸಾರ್ಥಕವೆಂದು ಎನಿಸುವುದು.

ತುಲಾ: ಮನಃಶಾಸ್ತ್ರಜ್ಞರು ರೋಗಿಗಳೊಂದಿಗೆ ವ್ಯವಹರಿಸುವುದು ಕಷ್ಟಕರವಾಗಿರುತ್ತದೆ. ತಿಳಿದವರ ಮಾರ್ಗದರ್ಶನದಿಂದ ಮುನ್ನಡೆದರೆ ಎಲ್ಲವೂ ಪರಿಹಾರವಾಗುವುದು. ಅನಿರೀಕ್ಷಿತ ಪ್ರಯಾಣ ಬೆಳಸಬೇಕಾಗುವುದು.

ವೃಶ್ಚಿಕ: ಉನ್ನತ ವ್ಯಾಸಂಗಕ್ಕಾಗಿ ಶ್ರಮಿಸುತ್ತಿರುವ ವೈದ್ಯಕೀಯ ವಿದ್ಯಾರ್ಥಿಗಳಿಗೆ ಶುಭವಾಗಲಿದೆ. ಮಂದಗತಿ ನಡೆ ಇದ್ದರೂ ಅಭಿವೃದ್ಧಿಯಂತೂ ಖಚಿತವಾಗಿ ಅನುಭವಕ್ಕೆ ಬರುವುದು. ಸಾಂಸಾರಿಕ ಸ್ಥಿತಿಗತಿ ಉತ್ತಮವಾಗಿರುತ್ತದೆ.

ಧನು: ನಿಮ್ಮ ಉಡುಗೆ ತೊಡುಗೆ ಮೇಲೆ ಅತಿಯಾದ ಗಮನ ಕೊಡುವುದರಿಂದ ಸಮಯದ ಅಭಾವ ಉಂಟಾಗಬಹುದು. ನಿಮ್ಮ ದೇಹದಲ್ಲಾಗುವ ಅನಿರೀಕ್ಷಿತ ಬದಲಾವಣೆಗಳು ನಿಮ್ಮ ಆತಂಕಗಳಿಗೆ ಕಾರಣವಾಗುವಂತಹ ಸಾಧ್ಯತೆ ಇದೆ.

ಮಕರ: ಹಣ್ಣಿನ ತೋಪನ್ನು ಮಾಡಲು ಇಚ್ಛಿಸುತ್ತಿರುವ ಕೃಷಿಕರಿಗೆ ನಿಮ್ಮ ಹಣದ ಜೊತೆಗೆ ದಾನಿಗಳ ಹಣವೂ ಕೈಸೇರುವ ಸಾಧ್ಯತೆ ಇದೆ. ದೇವತಾ ಅನುಗ್ರಹ ಉತ್ತಮವಿದ್ದು ಬಂದ ಕಷ್ಟ-ನಷ್ಟಗಳು ಉಪಶಮನಗೊಳ್ಳುತ್ತವೆ.

ಕುಂಭ: ನಿಮ್ಮ ಸಂಭಾಷಣೆಯಲ್ಲಿನ ಉತ್ತಮ ಪದಗಳ ಬಳಕೆಯು ನಿಮ್ಮ ಮುಂದಿರುವವರನ್ನು ಆಕರ್ಷಿಸಿ ಲಾಭವನ್ನುಂಟುಮಾಡುತ್ತದೆ. ಅಪರಿಚಿತ ವ್ಯಕ್ತಿಯ ಕರೆಯೊಂದು ಇಂದು ನಿಮ್ಮ ಮನಸ್ಸನ್ನು ತಳಮಳಗೊಳಿಸುತ್ತದೆ.

ಮೀನ: ನಿಮ್ಮ ಜೀವನ ಸಂಪೂರ್ಣವಾಗಿ ಪೋಷಕರ ಮೇಲೆ ಅವಲಂಬಿತವಾಗಿರುವುದರಿಂದ ಯಾವುದೇ ಸಸಾರದ ಮಾತುಗಳಿಗೂ ಆಸ್ಪದ ಬೇಡ. ಬೆನ್ನು ನೋವು ಹೋಗಲಾಡಿಸಿಕೊಳ್ಳುವ ಸಲುವಾಗಿ ಯೋಗಾಭ್ಯಾಸ ಮಾಡಿರಿ.

ಪದಬಂಧ 5661

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಶ್ರುತಿಗೆ ಹೊಂದದ ಸ್ವರ (4)
3.ಅರವತ್ತು ವರ್ಷದ ಹುಟ್ಟುಹಬ್ಬ (4)
5.ವನದಲ್ಲಿ ಆಡಿದ ಮಾತು (3)
6.ಜಗಳಕ್ಕೊಂದು ಪರ್ಯಾಯ ಪದ (3)
8.ಲಾಂಗೂಲ ಹಿಡಿದಿರುವ ಹುಡುಗ (3)
9.ಮೊಳಕೆ ಇಲ್ಲಿ ಕಾಣುತ್ತಿದೆ (3)
10.ಕೈ ಅಥವಾ ಕಾಲಿಗೆ ಧರಿಸುವ ಆಭರಣ (3)
12.ಗೆಳೆಯ ನೊಡನಿರುವ ಸ್ನೇಹಿತೆ ತಿರುಗಿದ್ದಾಳೆ (3)
14.ನೀರು ಧುಮ್ಮಿಕ್ಕುವ ಸ್ಥಳ (4)
15.ಸುಮಾರು ಮೂರು ಮೈಲುಗಳ ಅಳತೆ (4)

ಮೇಲಿಂದ ಕೆಳಕ್ಕೆ

1.ಕಾಗೆ ಬಂಗಾರವಿದು (3)
2.ವರ ತಿರುಗಿದಾಗ ಕೇಳಿದ ಧ್ವನಿ (2)
3.ವರಮಾನವಿರುವ ಅರಣ್ಯ (2)
4.ತರ್ಕ ಮಾಡುತ್ತಿರುವ ವ್ಯಾಪಾರಿ (3)
7.ಅತಿಯಾಗಿ ಮಾತಾಡುವವನು (5)
8.ಈತ ಅನುಯಾಯಿ (5)
9.ಮೊಟ್ಟೆಯೊಡೆದು ಹುಟ್ಟುವ ಪ್ರಾಣಿ (3)
11.ದೊಡ್ಡ ಹಾರೆಯಿದು (3)
12.ತರಗತಿಯಲ್ಲಿರುವ ಗುಂಪು ಉಲ್ಟಾ ಕಾಣಿಸುತ್ತಿದೆ (2)
13.ತಿರುಗಿದಾಗ ದ್ವೇಷ ಕಾಣಿಸುತ್ತಿದೆಯಲ್ಲಾ! (2)



5660ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. ಅವಯವ 3. ಕಷಾಯ 5. ಗದ್ಗದ 7. ಒಸಡು 8. ಸಮೂಹಗಾನ 11. ಗಲಾಟೆ 12. ನಸರಿ 15. ಪರೋಕ್ಷ 16. ಹಲ್ಲುಗಿಂಜು

ಮೇಲಿಂದ ಕೆಳಕ್ಕೆ:
1. ಅಭ್ಯಂಗ 2. ವರ್ಜ್ಯ 3. ಕರಡು 4. ಯವನಿಕೆ 6. ದವಸ 7. ಒಣಹರಟೆ 9. ನಯನ 10. ಪರಿತಾಪ 11. ಗವಾಕ್ಷ 13. ರಿವಾಜು 14. ದಾಹ

ಸುಡೊಕು 6046

6		4				7		8
	9	5		7	1			
1				4	8			6
		1				9		
			3	9	7		5	4
7		9				8		
5				6		4		
4					3		2	
	6				4		7	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6045 ಸುಡೊಕು

9	3	7	6	1	8	2	5	4
2	6	1	4	5	9	8	3	7
5	4	8	7	2	3	9	6	1
4	8	6	5	3	2	7	1	9
7	2	3	9	6	1	5	4	8
1	5	9	8	4	7	3	2	6
8	1	5	3	7	6	4	9	2
3	9	2	1	8	4	6	7	5
6	7	4	2	9	5	1	8	3

2019ರ ಲೋಕಸಭಾ ಚುನಾವಣೆ ಸೋಲು ನೆನೆದು ಭಾವುಕರಾದ ಮಲ್ಲಿಕಾರ್ಜುನ ಖರ್ಗೆ

ವೋಟು ಹಾಕದಿದ್ದರೆ ಮಣ್ಣಿಗೆ ಬನ್ನಿ

ಪ್ರಜಾವಾಣಿ ವಾರ್ತೆ

ಅಫಜಲಪುರ (ಕಲಬುರಗಿ ಜಿಲ್ಲೆ): ಕಳೆದ ಲೋಕಸಭಾ ಚುನಾವಣೆಯ ಸೋಲು ಸ್ಮರಿಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ಕರ್ನಾಟಕ ಮತ್ತು ಕಲಬುರಗಿಗೆ ನಾನು ಏನಾದರೂ ಒಳ್ಳೆಯ ಕೆಲಸ ಮಾಡಿದ್ದು ನಿಮ್ಮ ನೆನಪಿನಲ್ಲಿದ್ದರೆ, ವೋಟು ಹಾಕಲು ಬನ್ನಿ; ಇಲ್ಲವೇ ಸತ್ತ ಮೇಲೆ ನನ್ನ ಮಣ್ಣಿಗಾದರೂ ಬನ್ನಿ' ಎಂದು ಭಾವುಕರಾಗಿ ನುಡಿದರು.

ಅಫಜಲಪುರದಲ್ಲಿ ಬುಧವಾರ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ತಮ್ಮ ಅಳಿಯ, ಕಾಂಗ್ರೆಸ್ ಅಭ್ಯರ್ಥಿ ರಾಧಾಕೃಷ್ಣ ದೊಡ್ಡಮನಿ ಅವರ ಪರ ಮತಯಾಚಿಸಿ ಅವರು ಮಾತನಾಡಿದರು. 'ನಾನು ಅಫಜಲಪುರದಿಂದ (2019ರಲ್ಲಿ ಬಿಜೆಪಿಗೆ 35,675 ಮತಗಳ ಲೀಡ್) ಸೋತಿದ್ದೇನೆ ಎನ್ನುವುದಿಲ್ಲ. ಆದರೆ, ಬಿಜೆಪಿಯವರು ಒಟ್ಟಾಗಿ ಕಲಬುರಗಿಯಲ್ಲಿ ಕ್ಯಾಂಪ್ ಹಾಕಿ ಸೋಲಿಸಿದರು. ಈ ಬಾರಿಯಾದರೂ ರಾಧಾಕೃಷ್ಣಗೆ ಆಶೀರ್ವಾದ ಮಾಡಿ' ಎಂದು ಕೋರಿದರು.

'ಒಂದು ವೇಳೆ ವೋಟ್ ನಮಗೆ ಬಾರದಿದ್ದರೆ ನನಗೆ ಇಲ್ಲಿ ಸ್ಥಾನವಿಲ್ಲ ಅಥವಾ ನಿಮ್ಮ ಹೃದಯ ಗೆಲ್ಲುವುದಕ್ಕೆ ನನ್ನಿಂದ ಸಾಧ್ಯವಾಗಲಿಲ್ಲ ಎಂದು ತಿಳಿದುಕೊಳ್ಳುತ್ತೇನೆ. ಗೆಲುವು ಸಿಗಲಿ, ಸಿಗದೇ ಇರಲಿ. ಇದಂತು ಮುಗಿದು ಹೋಗಲಿದೆ. ಕನಿಷ್ಠ ಪಕ್ಷ ರಾಜ್ಯಕ್ಕೆ ನಾನು ಮಾಡಿದ ಒಳ್ಳೆಯ ಕೆಲಸವನ್ನು ನೆನಪಿನಲ್ಲಿ ಇಟ್ಟುಕೊಂಡು ನಾನು ಸತ್ತ ಮೇಲೆ ಮಣ್ಣು ಹಾಕಲು ಬಂದು ಉಪಕಾರ ಮಾಡಿ' ಎಂದು ವಿನಂತಿಸಿದರು.

'ನನ್ನನ್ನು ಸುಟ್ಟರೆ ಮೇಣದ ಬತ್ತಿ ಹಚ್ಚಿ, ಮಣ್ಣಿನಲ್ಲಿ ಹೂತರೆ ಹಿಡಿ ಮಣ್ಣು ಹಾಕಿ. ವೋಟಿಗೆ ಬಾರದೆ ಇದ್ದರೂ ನನ್ನ ಮಣ್ಣಿಗಾದರೂ ಬಂದರೆ ಎಷ್ಟೊಂದು ಜನರು ಸೇರಿದ್ದಾರೆ, ಎಂತಹ ಒಳ್ಳೆಯ ಕೆಲಸ ಮಾಡಿರಬಹುದೆಂದು ಬೇರೆ ಜನ ನನ್ನ ಬಗ್ಗೆ ಒಳ್ಳೆಯ ಮಾತು ಆಡುತ್ತಾರೆ.' 'ಸಂವಿಧಾನ ಮತ್ತು ಪ್ರಜಾಪ್ರಭುತ್ವ ಉಳಿಸಲು ನಾನು ಕೊನೆ ಉಸಿರಿನ ತನಕ ರಾಜಕೀಯ ಮಾಡುತ್ತೇನೆ' ಎಂದರು.

ಕಲಬುರಗಿಯ ಅಫಜಲಪುರದಲ್ಲಿ ಬುಧವಾರ ನಡೆದ ಪ್ರಚಾರ ಸಭೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಹಾಗೂ ಸಿದ್ದರಾಮಯ್ಯ ಅವರ ಮಾತುಕತೆ

'ಮೋದಿಗೆ ನಾಚಿಕೆಯಾಗಬೇಕು'

'ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಮಾಂಗಲ್ಯ ಕಿತ್ತುಕೊಳ್ಳುತ್ತದೆ ಎಂದು ಸುಳ್ಳು ಹೇಳಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಾಚಿಕೆಯಾಗಬೇಕು' ಎಂದು ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ ನಡೆಸಿದರು.

'50 ವರ್ಷ ಆಡಳಿತ ನಡೆಸಿದ ಕಾಂಗ್ರೆಸ್ ಯಾರಿಂದ ಕಿತ್ತುಕೊಂಡು ಯಾರಿಗೆ ಕೊಟ್ಟಿದೆ? ಯಾವ ಮಹಿಳೆಯ ಮಾಂಗಲ್ಯ ಕಿತ್ತುಕೊಂಡಿದೆ? ಮಹಿಳೆಯರಿಗಾಗಿ ಹಲವು ಯೋಜನೆಗಳು ತಂದಿದೆಯೇ ಹೊರತು ಮಾಂಗಲ್ಯ ಕಿತ್ತುಕೊಳ್ಳುವ ಕೆಲಸ ಮಾಡಿಲ್ಲ' ಎಂದರು.

'ತಿಳಿವಳಿಕೆ ಕೊರತೆಯಿಂದಾಗಿ ಮೋದಿ ಅವರು ಕಾಂಗ್ರೆಸ್ ಪ್ರಣಾಳಿಕೆಯನ್ನು ಮುಸ್ಲಿಂ ಲೀಗ್ ಜೊತೆಗೆ ಹೋಲಿಸುತ್ತಿದ್ದಾರೆ. ಎಲ್ಲಿಗೇ ಕರೆದರೂ ಪ್ರಣಾಳಿಕೆ ತೆಗೆದುಕೊಂಡು ಹೋಗಿ ಅವರಿಗೆ ಮನವರಿಕೆ ಮಾಡಿಕೊಡಲು ಸಿದ್ಧ' ಎಂದು ಖರ್ಗೆ ಹೇಳಿದರು.

'ಮೋದಿ ಕನಸಲ್ಲಿ ರಾಹುಲ್ ಗಾಂಧಿ'

ಬೀದರ್: 'ಪ್ರಧಾನಿ ನರೇಂದ್ರ ಮೋದಿಯವರಿಗೆ ಕನಸಿನಲ್ಲೂ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಬರುತ್ತಿದ್ದಾರೆ. ಅವರಿಗೆ ಮೋದಿ ಬಹಳ ಹೆದರುತ್ತಿದ್ದಾರೆ' ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ನಗರದಲ್ಲಿ ನಡೆದ ಕಾಂಗ್ರೆಸ್ ಬಹಿರಂಗ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ಮೋದಿಯವರು ಸುಳ್ಳಿನ ಸರದಾರರು. ಸುಳ್ಳು ಹೇಳುವುದರಲ್ಲಿ ಸತ್ಯ ಹರಿಶ್ಚಂದ್ರನ ಅಪ್ಪ' ಎಂದು ಟೀಕಿಸಿದರು. 'ರಾಜ್ಯದಲ್ಲಿ ಡಬಲ್ ಎಂಜಿನ್ ಸರ್ಕಾರ ಹೋಗಿದೆ. ಲೋಕಸಭೆ ಚುನಾವಣೆಯಲ್ಲಿ ಜೀರೊ ಎಂಜಿನ್ ಆಗಲಿದೆ. ಅವರು ಬಸ್ಸಿನಲ್ಲಿ ಹೋಗುತ್ತಾರೆ' ಎಂದು ಕುಟುಕಿದರು.

ಮಂಡ್ಯದ ಜೆ.ಸಿ ವೃತ್ತದಲ್ಲಿ ಬುಧವಾರ ಜೆಡಿಎಸ್– ಬಿಜೆಪಿ ಮೈತ್ರಿ ಅಭ್ಯರ್ಥಿ ಎಚ್‌.ಡಿ.ಕುಮಾರಸ್ವಾಮಿ ರ್‍ಯಾಲಿಯಲ್ಲಿ ಕಂಡು ಬಂದ ಜನಸ್ತೋಮ

ನ್ಯಾಯ ಕೊಡಿಸದಿದ್ದರೆ ಮತ್ತೆ ಮತ ಕೇಳಲ್ಲ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಮುಂದಿನ ಐದು ವರ್ಷಗಳಲ್ಲಿ ಕಾವೇರಿ, ಮೇಕೆದಾಟು, ಕೃಷ್ಣಾ, ಭದ್ರಾ ಮೇಲ್ದಂಡೆ ಯೋಜನೆಗಳಿಗೆ ಸಂಬಂಧಿಸಿ ರಾಜ್ಯದ ಜನರಿಗೆ ನ್ಯಾಯ ನೀಡಲು ನನ್ನಿಂದ ಸಾಧ್ಯವಾಗದಿದ್ದರೆ ಮತ್ತೆಂದೂ ಮತ ಕೇಳಲು ಬರುವುದಿಲ್ಲ' ಎಂದು ಜೆಡಿಎಸ್– ಬಿಜೆಪಿ ಮೈತ್ರಿ ಅಭ್ಯರ್ಥಿ ಎಚ್‌.ಡಿ.ಕುಮಾರಸ್ವಾಮಿ ಬುಧವಾರ ಪ್ರತಿಪಾದಿಸಿದರು.

ಚುನಾವಣಾ ರ್‍ಯಾಲಿ ವೇಳೆ ಮಾತನಾಡಿ, 'ನಾನು ಲೋಕಸಭಾ ಅಭ್ಯರ್ಥಿಯಾಗಿ ಸ್ಪರ್ಧಿಸಿಲ್ಲ, ಮಂಡ್ಯ ಕ್ಷೇತ್ರದ ಪ್ರತಿ ಮನೆಯ ಮಗನಾಗಿ ಕಣಕ್ಕೆ ಬಂದಿದ್ದೇನೆ. ಕಾಂಗ್ರೆಸ್ ದುರಾಡಳಿತದಲ್ಲಿ ರಾಜ್ಯದ ಜನರ ಬದುಕು ಸರಿಪಡಿಸುವ, ಕಣ್ಣೀರು ಒರೆಸುವ ಕೆಲಸ ಮಾಡುತ್ತೇನೆ' ಎಂದರು.

'2018ರ ಚುನಾವಣೆ ವೇಳೆ ನಮ್ಮನ್ನು ಬಿಜೆಪಿ ಬಿ ಟೀಂ ಎಂದಿದ್ದಿರಿ, ಆದರೂ ನಮ್ಮ ಮನೆ ಬಾಗಿಲಿಗೆ ಬಂದಿರಿ. ಮಲ್ಲಿಕಾರ್ಜುನ ಖರ್ಗೆ ಅವರನ್ನು ಮುಖ್ಯಮಂತ್ರಿ ಮಾಡಿ ಎಂದು ಎಚ್‌.ಡಿ.ದೇವೇಗೌಡರು ಹೇಳಿದ್ದರು. ಆದರೆ ಕಾಂಗ್ರೆಸ್ ನಾಯಕರು ಬಲವಂತವಾಗಿ ನನಗೆ ಮುಖ್ಯಮಂತ್ರಿ ಪಟ್ಟ ಕಟ್ಟಿದರು, ನಂತರ ಕಿರುಕುಳ ಕೊಟ್ಟು ಕೆಳಗಿಳಿಸಿದರು' ಎಂದರು.

'ಮೇಕೆದಾಟು ಯೋಜನೆ ಮಾಡಲು ಬಿಡುವುದಿಲ್ಲ ಎಂದು ತಮಿಳುನಾಡಿನ ಡಿಎಂಕೆ ಪಕ್ಷ ಪ್ರಣಾಳಿಕೆಯಲ್ಲಿ ಘೋಷಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮಿಳುನಾಡಿಗೆ ಹೋಗಿ ಆ ಘೋಷಣೆಯನ್ನು ತೆಗೆಸಿದರೆ ಪ್ರಧಾನಿ ಮೋದಿ ಅವರ ಮನವೊಲಿಸಿ ಕೇವಲ 5 ನಿಮಿಷದಲ್ಲಿ ಮೇಕೆದಾಟು ಯೋಜನೆಗೆ ಶಂಕುಸ್ಥಾಪನೆ ನೆರವೇರಿಸುತ್ತೇವೆ' ಎಂದರು.

ಮೊದಲ ಮತದ ಸಂಭ್ರಮ

ಬಸವರಾಜ ಬೇವನೂರ, ಜಮಖಂಡಿ, ಬಾಗಲಕೋಟೆ ಜಿಲ್ಲೆ

ಮತದಾರರ ಪಟ್ಟಿಯಲ್ಲಿ ನನ್ನ ಹೆಸರು ದಾಖಲಾಗಿದ್ದು ತುಂಬಾ ಖುಷಿ ತಂದಿದೆ. ಯುವಜನರು ಎಲ್ಲಿಯೇ ಇದ್ದರೂ ಮತಗಟ್ಟೆಗೆ ತೆರಳಿ ಮತ ಚಲಾಯಿಸಬೇಕು. ನಾನೂ ತಪ್ಪದೇ ಮತ ಚಲಾಯಿಸುವೆ. ನನಗೆ ಸಂವಿಧಾನ ಕೊಟ್ಟ ಹಕ್ಕನ್ನು ವ್ಯರ್ಥವಾಗಲು ಬಿಡುವುದಿಲ್ಲ. ಮತಗಟ್ಟೆ ಕೇಂದ್ರದಲ್ಲಿ ಸರದಿ ನಿಲ್ಲಲು ಬೇಜಾರುಪಡಲ್ಲ. ಬಿಸಿಲು ಇದೆ ಎಂದು ಮನೆಯಲ್ಲಿ ಕೂರಲ್ಲ. ಬೆಳಿಗ್ಗೆಯೇ ಕುಟುಂಬದ ಸದಸ್ಯರೊಂದಿಗೆ ಮತಗಟ್ಟೆಗೆ ತೆರಳಿ, ಮತದಾನ ಮಾಡುವೆ

ಶ್ರಾವ್ಯಾ ಭಟ್ಟ, ಕುಮಟಾ, ಉತ್ತರ ಕನ್ನಡ ಜಿಲ್ಲೆ

ಮೊದಲ ಸಲ ಮತದಾನ ಮಾಡಲು ಅವಕಾಶ ಸಿಗುತ್ತಿರುವುದಕ್ಕೆ ಸಂತೋಷವಾಗಿದೆ. ಈ ದೇಶದ ಪ್ರಜೆಯಾಗಿ ಸೂಕ್ತ ಜನಪ್ರತಿನಿಧಿಯನ್ನು ಆಯ್ಕೆ ಮಾಡುವ ಜವಾಬ್ದಾರಿ ಇದೆ. ಯಾರು ಏನೇ ಹೇಳಲಿ, ಮತಗಟ್ಟೆಗೆ ಹೋದಾಗ ಯಾರಿಗೆ ಮತದಾನ ಮಾಡಬೇಕು ಎಂಬುದನ್ನು ನಾನೇ ನಿರ್ಧರಿಸುವೆ. ಸ್ವತಂತ್ರ ನಿರ್ಧಾರ ತೆಗೆದುಕೊಂಡ ಹೆಮ್ಮೆ ಇರುತ್ತದೆ. ಮತದಾನ ಮಾಡಿ ಬೆರಳಿಗೆ ಶಾಯಿ ಗುರುತು ಹಾಕಿಸಿಕೊಂಡಿದ್ದನ್ನು ಎಲ್ಲರಿಗೂ ತೋರಿಸುವೆ

ಮತ ಆಮಿಷ: ಆಯೋಗದ ವಶ

₹85.21 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹ 80.50 ಕೋಟಿ
ಮದ್ಯ	₹ 177.84 ಕೋಟಿ (1.47 ಕೋಟಿ ಲೀ)
ಮಾದಕವಸ್ತು	₹ 11.32 ಕೋಟಿ (543.55 ಕೆ.ಜಿ.)
ಚಿನ್ನ	₹ 73.80 ಕೋಟಿ (131.43 ಕೆ.ಜಿ.)
ಬೆಳ್ಳಿ	₹ 1.18 ಕೋಟಿ (301.89 ಕೆ.ಜಿ.)

ಎಂಥಾ ಮಾತು!

ರಾಜ್ಯದಲ್ಲಿ ಎರಡು ಅಂಗಡಿಗಳಿವೆ. ಒಂದು ಅಂಗಡಿ ಯಡಿಯೂರಪ್ಪ ಮತ್ತು ಮಕ್ಕಳದ್ದು, ಮತ್ತೊಂದು ಕುಮಾರಸ್ವಾಮಿ, ಸಹೋದರರು ಮತ್ತು ಮಕ್ಕಳ ಅಂಗಡಿ. ಅವರು ರಾಜಕಾರಣದ ಹೆಸರಿನಲ್ಲಿ ವ್ಯಾಪಾರ ನಡೆಸಿದ್ದಾರೆ. ಕರ್ನಾಟಕಕ್ಕೆ ಅನ್ಯಾಯ ಮಾಡಿದ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರಿಗೆ ಪವಿತ್ರ ಭೂಮಿ ಕರುನಾಡಿಗೆ ಬರಲು ಅರ್ಹತೆ ಇಲ್ಲ. ಮತ ಕೇಳುವ ನೈತಿಕತೆ ಇಲ್ಲ. ಬರ ಪರಿಹಾರ ನೀಡಿಲ್ಲ, ಕಳಸಾ– ಬಂಡೂರಿ ಯೋಜನೆಗೆ ಪರಿಸರ ಇಲಾಖೆಯಿಂದ ಅನುಮತಿ ಕೊಡಿಸಿಲ್ಲ. ಕರ್ನಾಟಕದ ಜನರು ಬಿಜೆಪಿಗೆ ಏಕೆ ಮತ ಹಾಕಬೇಕು?

ರಣದೀಪ್‌ಸಿಂಗ್ ಸುರ್ಜೇವಾಲಾ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

ಪ್ರತಿ ಚುನಾವಣೆಯಲ್ಲೂ ಮತದಾನದ ಹಕ್ಕಿನಿಂದ ವಂಚಿತ ಹೊರಗುತ್ತಿಗೆ ನೌಕರರ ಅಸಹಾಯಕತೆ

ವಾಹನ ಚಾಲಕರಿಗೆ ಸಿಗದ ಅಂಚೆ ಮತ ಸೌಲಭ್ಯ

• ಚಂದ್ರಹಾಸ ಹಿರೇಮಳಲಿ

14 ಮೊದಲ ಹಂತದಲ್ಲಿ ಮತದಾನ ನಡೆಯುವ ಕ್ಷೇತ್ರಗಳು	46,625 ನೋಂದಣಿ ಮಾಡಿಕೊಂಡ ರಾಜ್ಯದ ಸೇವಾ ಮತದಾರರು	1.90 ಲಕ್ಷ ಮೊದಲ ಹಂತದಲ್ಲಿ ಅಂಚೆ ಮತದಾನ ಮಾಡಿದ ಚುನಾವಣಾ ಕರ್ತವ್ಯದ ಸಿಬ್ಬಂದಿ

ಬೆಂಗಳೂರು: ಲೋಕಸಭಾ ಚುನಾವಣೆಯ ಕರ್ತವ್ಯಕ್ಕೆ ತೆರಳುವ ಹೊರಗುತ್ತಿಗೆ ವಾಹನಗಳ ಚಾಲಕರು ಹಾಗೂ ಸಿಬ್ಬಂದಿ ಈ ಬಾರಿಯೂ ಮತದಾನದ ಅವಕಾಶದಿಂದ ವಂಚಿತರಾಗಲಿದ್ದಾರೆ.

ಸಶಸ್ತ್ರ ಮೀಸಲು ಪಡೆ, ಹೊರ ರಾಜ್ಯ, ದೇಶಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರು, ಪೊಲೀಸ್ ಸಿಬ್ಬಂದಿ ಮೊದಲಾದ ಸೇವಾ ಮತದಾರರಿಗೆ ಮತದಾನಕ್ಕೆ ಅವಕಾಶ ಇದೆ. ಅದರ ಜತೆಗೆ, ಚುನಾವಣೆಯ ಕರ್ತವ್ಯಕ್ಕೆ ನಿಯೋಜನೆಗೊಳ್ಳುವ ಮತಗಟ್ಟೆ ಅಧಿಕಾರಿಗಳು, ಸಿಬ್ಬಂದಿ, ಸೂಕ್ಷ್ಮ ವೀಕ್ಷಕರು, ವಿಚಕ್ಷಣ ದಳ, ಕಣ್ಗಾವಲು ಸಿಬ್ಬಂದಿ ಮತದಾನ ಸೌಲಭ್ಯ ಕೇಂದ್ರಗಳಿಗೆ ತೆರಳಿ ಅಂಚೆ ಮತ ಪತ್ರಗಳ ಮೂಲಕ ಮತ ಚಲಾಯಿಸಬಹುದು.

ಚುನಾವಣಾ ಕರ್ತವ್ಯಕ್ಕೆ ನಿಯೋಜಿತವಾದ ಅಧಿಕಾರಿಗಳು ಮತ್ತು ಸಿಬ್ಬಂದಿಯ ಜತೆಗೆ, 12 ವಿವಿಧ ಇಲಾಖೆಗಳ ಅಗತ್ಯ ಸೇವೆಗಳ ಮತದಾರರಿಗೆ (ಎವಿಇಎಸ್) ಅಂಚೆ ಮತದಾನದ ವ್ಯವಸ್ಥೆ ಕಲ್ಪಿಸಲಾಗಿದೆ. ಚುನಾವಣಾ ಆಯೋಗವು ಇಂತಹ ಇಲಾಖೆಗಳನ್ನು ಅಗತ್ಯ ಸೇವೆಗಳೆಂದು ಪರಿಗಣಿಸಿದ್ದು, ಆಯಾ ಇಲಾಖಾವಾರು ನೀಡುವ ಪಟ್ಟಿಯ ಅನುಸಾರ ಅಂಚೆ ಮತದಾನದ ಮೂಲಕ ಮತ ಚಲಾಯಿಸಲು ಅವಕಾಶ ಕಲ್ಪಿಸಿದೆ. ಪಟ್ಟಿ ನೀಡಿದ ನಂತರ 12ಡಿ ನಮೂನೆಗಳಲ್ಲಿ ಭರ್ತಿ ಮಾಡಿ, ಕಳೆದ ಮಾರ್ಚ್ 22ರೊಳಗೆ ಸಲ್ಲಿಸಿದ್ದ ಅರ್ಹ ಮತದಾರರು ತಾವು ನೋಂದಣಿ ಮಾಡಿಕೊಂಡ ಲೋಕಸಭಾ ಕ್ಷೇತ್ರದಲ್ಲಿ ಸ್ಥಾಪಿಸಲಾದ ಪೋಸ್ಟಲ್ ವೋಟಿಂಗ್ ಸೆಂಟರ್‌ನಲ್ಲಿ (ಪಿವಿಸಿ) ಅಂಚೆ ಮತದಾನ ಮಾಡಿದ್ದಾರೆ. ರಾಜ್ಯದಲ್ಲಿ ಮೊದಲ ಹಂತದಲ್ಲಿ ನಡೆಯುತ್ತಿರುವ 14 ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ತೆರೆದಿರುವ ಅಂಚೆ ಮತದಾನ ಕೇಂದ್ರಗಳ ವ್ಯಾಪ್ತಿಯಲ್ಲಿ ಏ.19ರಿಂದಲೇ ಮತದಾನ ಆರಂಭವಾಗಿದೆ. ಈ ಅವಕಾಶವನ್ನು ಏ.25ರವರೆಗೂ ಚುನಾವಣಾ ಆಯೋಗ ವಿಸ್ತರಿಸಿದೆ. ಬೆಳಿಗ್ಗೆ 9ರಿಂದ ಸಂಜೆ 5ರ ವರೆಗೆ ಮತ ಚಲಾಯಿಸಲು ಅವಕಾಶವಿದೆ.

ರಾಜ್ಯದ ಬಹುತೇಕ ಸರ್ಕಾರಿ ಕಚೇರಿಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ವಾಹನಗಳನ್ನು ಪಡೆಯಲಾಗುತ್ತಿದೆ. ಚುನಾವಣಾ ಕೆಲಸಕ್ಕೆ ನಿಯೋಜನೆಯಾಗುವ ಅಧಿಕಾರಿಗಳು, ವೀಕ್ಷಕರು, ಕಣ್ಗಾವಲು ತಂಡಗಳು ಹೆಚ್ಚಿನ ಸಂಖ್ಯೆಯಲ್ಲಿ ಹೊರ ಗುತ್ತಿಗೆ ಆಧಾರಿತ ವಾಹನಗಳನ್ನೇ ಬಳಕೆ ಮಾಡುತ್ತಿದ್ದಾರೆ. ಇಂತಹ ವಾಹನಗಳ ಚಾಲಕರು, ಸಹಾಯಕರಿಗೆ ಯಾವ ಕ್ಷೇತ್ರಗಳಿಗೆ ತೆರಳಬೇಕು. ಎಲ್ಲಿ ಕೆಲಸ ಎನ್ನುವ ಯಾವುದೇ ಪೂರ್ವಮಾಹಿತಿ ಇರುವುದಿಲ್ಲ. ಹಾಗಾಗಿ, ಅವರೆಲ್ಲ ಚುನಾವಣೆಯ ದಿನ ಮತದಾನ ಮಾಡಲು ಸಾಧ್ಯವಾಗುತ್ತಿಲ್ಲ. ಇಂಥವರ ಸಂಖ್ಯೆ 10 ಸಾವಿರಕ್ಕೂ ಹೆಚ್ಚಿದೆ.

'ಚುನಾವಣಾ ಕೆಲಸಕ್ಕೆ ನಿಯೋಜನೆಯಾಗುವ ಸರ್ಕಾರಿ ಅಧಿಕಾರಿಗಳು, ನೌಕರರು, ಸರ್ಕಾರಿ ಕಾರು, ಜೀಪುಗಳ ಚಾಲಕರು, ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸಿಬ್ಬಂದಿಗೆ ಅಂಚೆ ಮತದಾನದ ಸೌಲಭ್ಯವಿದೆ. ಆದರೆ, ನಾನು 2008ರಿಂದ ಕಾರು ಚಾಲಕನಾಗಿ ಚುನಾವಣಾ ಕರ್ತವ್ಯಕ್ಕೆ ನಿಯೋಜನೆಯಾಗುವ ಜಿಲ್ಲಾಧಿಕಾರಿ ಕಚೇರಿಯ ಅಧಿಕಾರಿಯೊಬ್ಬರ (ಅಧಿಕಾರಿ ಬದಲಾಗುತ್ತಿರುತ್ತಾರೆ) ಜತೆ ಕೆಲಸ ಮಾಡುತ್ತಿದ್ದೇನೆ. ಅವರು ಸೂಚಿಸಿದಲ್ಲಿಗೆ ಕಾರು ಚಲಾಯಿಸುವುದಷ್ಟೇ ನನ್ನ ಕೆಲಸ. ಹಾಗಾಗಿ, ಚುನಾವಣೆಗಳಲ್ಲಿ ಒಮ್ಮೆಯೂ ಮತದಾನ ಮಾಡಲು ಸಾಧ್ಯವಾಗಿಲ್ಲ. ಚುನಾವಣಾ ಆಯೋಗ ನಮ್ಮಂಥವರಿಗೂ ಅಂಚೆ ಮತದಾನದ ಅವಕಾಶ ಕೊಡಬೇಕು' ಎನ್ನುತ್ತಾರೆ ಹಾಸನದ ಕಾರು ಚಾಲಕ ರವಿ ನಾಯಕ್.

ಕರಾವಳಿ ಸೇರಿದಂತೆ ಕೆಎಸ್‌ಆರ್‌ಟಿಸಿ ಮತ್ತಿತರ ನಿಗಮಗಳ ಬಸ್‌ಗಳ ಕೊರತೆ ಇರುವ ಕಡೆ ಖಾಸಗಿ ಹಾಗೂ ಶಾಲಾ ಬಸ್‌ಗಳನ್ನು ಚುನಾವಣೆ ಕರ್ತವ್ಯಕ್ಕೆ ಬಳಸಿಕೊಳ್ಳಲಾಗುತ್ತದೆ. ಅಂತಹ ವಾಹನಗಳ 5 ಸಾವಿರಕ್ಕೂ ಹೆಚ್ಚು ಚಾಲಕರು ಮತ್ತು ಸಹಾಯಕರೂ ಮತದಾನದಿಂದ ವಂಚಿತರಾಗಿದ್ದಾರೆ.

'ಪೆನ್‌ಡ್ರೈವ್: ತನಿಖೆಗೆ ಆಗ್ರಹ'

ಪ್ರಜಾವಾಣಿ ವಾರ್ತೆ

ಹಾಸನ: 'ಜಿಲ್ಲೆಯಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿರುವ ಪೆನ್ ಡ್ರೈವ್ ಹಂಚಿಕೆ ಪ್ರಕರಣದ ಸಮಗ್ರ ತನಿಖೆ ನಡೆಯಬೇಕು' ಎಂದು ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಅವರ ತಾಯಿ ಅನುಪಮಾ ಮಹೇಶ್ ಒತ್ತಾಯಿಸಿದರು.

ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಪೆನ್ ಡ್ರೈವ್ ಹಂಚಿಕೆಯಲ್ಲಿ ಕಾಂಗ್ರೆಸ್ ಕೈವಾಡವಿದೆ ಎಂದು ವಕೀಲ ಜಿ. ದೇವರಾಜೇಗೌಡ ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿದೆ. ಈ ಹಿಂದೆ ಪೆನ್ ಡ್ರೈವ್ ತಮ್ಮ ಬಳಿ ಇದೆ. ಅದನ್ನು ಬಿಡುಗಡೆ ಮಾಡುವುದಾಗಿಯೂ ದೇವರಾಜೇಗೌಡ ಅವರು ಪತ್ರಿಕಾಗೋಷ್ಠಿ ನಡೆಸಿ ಹೇಳಿದ್ದರು. ಅವರೇ ಏಕೆ ಈ ಕೆಲಸ ಮಾಡಿಸಿರಬಾರದು' ಎಂದು ಅನುಮಾನ ವ್ಯಕ್ತಪಡಿಸಿದರು.

'ಈ ಬಾರಿ ಲೋಕಸಭೆ ಚುನಾವಣೆಯಲ್ಲಿ ಬದಲಾವಣೆ ಗಾಳಿ ಬೀಸುತ್ತಿದ್ದು, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಹಾಗೂ ನಮ್ಮ ಕುಟುಂಬದ ಮೇಲಿನ ಅನುಕಂಪದ ಆಧಾರದ ಮೇಲೆ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಅವರಿಗೆ ಹೆಚ್ಚಿನ ಮತಗಳು ಬರಲಿವೆ. ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿಯೇ 20 ಸಾವಿರ ಲೀಡ್ ಬರಲಿದ್ದು, ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾನೂನಿನಂತೆ ತನಿಖೆ: ಮೀನಾ

'ಹಾಸನದಲ್ಲಿ ಹಂಚಿಕೆಯಾಗುತ್ತಿದೆ ಎನ್ನಲಾದ ಪೆನ್‌ಡ್ರೈವ್ ಬಗ್ಗೆ ಕಾನೂನಿನ ಪ್ರಕಾರ ಪೊಲೀಸರು ತನಿಖೆ ನಡೆಸಲಿದ್ದಾರೆ' ಎಂದು ಮುಖ್ಯಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಹೇಳಿದರು.

ತಮ್ಮ ವಿರುದ್ಧ ಪೆನ್‌ಡ್ರೈವ್ ಹಂಚಿ, ತೇಜೋವಧೆ ಮಾಡಲಾಗುತ್ತಿದೆ ಎಂದು ಹಾಸನ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯೊಬ್ಬರು ದೂರು ನೀಡಿರುವ ಕುರಿತು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಮೀನಾ, 'ಅಭ್ಯರ್ಥಿಯೊಬ್ಬರು ಚುನಾವಣಾಧಿಕಾರಿಗೆ ದೂರು ನೀಡಿದ್ದಾರೆ. ಪೆನ್ ಡ್ರೈವ್‌ನಲ್ಲಿರುವ ದೃಶ್ಯಗಳನ್ನು ರೆಕಾರ್ಡ್ ಮಾಡಿದವರು ಯಾರು? ಹಂಚುತ್ತಿರುವವರು ಯಾರು ಎಂಬುದು ಗೊತ್ತಿಲ್ಲ. ಪೊಲೀಸರು ಕಾನೂನು ಪ್ರಕಾರ ತನಿಖೆ ನಡೆಸುತ್ತಾರೆ' ಎಂದು ಹೇಳಿದರು.

28ಕ್ಕೆ ದಾವಣಗೆರೆ, ಬಾಗಲಕೋಟೆಗೆ ಮೋದಿ

ಪ್ರಜಾವಾಣಿ ವಾರ್ತೆ

ದಾವಣಗೆರೆ/ಬೆಳಗಾವಿ: ದಾವಣಗೆರೆ ಮತ್ತು ಹಾವೇರಿ ಲೋಕಸಭೆ ಕ್ಷೇತ್ರಗಳ ಅಭ್ಯರ್ಥಿಗಳ ಪರ ಪ್ರಚಾರ ನಡೆಸಲು ಪ್ರಧಾನಿ ನರೇಂದ್ರ ಮೋದಿ ಅವರು ಇದೇ 28ರಂದು ದಾವಣಗೆರೆಗೆ ಆಗಮಿಸಲಿದ್ದಾರೆ. ಅದೇ ದಿನ ಬಾಗಲಕೋಟೆಗೂ ಭೇಟಿ ನೀಡಿ ತೋಟಗಾರಿಕೆ ವಿಶ್ವವಿದ್ಯಾಲಯ ಬಳಿ ಇರುವ ಸೆಕ್ಟರ್ ಸಂಖ್ಯೆ 110ರಲ್ಲಿ ನಡೆಯುವ ಬಿಜೆಪಿ ಪ್ರಚಾರ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

ಅಂದು ಮಧ್ಯಾಹ್ನ 1ಕ್ಕೆ ದಾವಣಗೆರೆಯ ಹೈಸ್ಕೂಲ್ ಮೈದಾನದಲ್ಲಿ ನಡೆಯುವ ಸಮಾವೇಶದಲ್ಲಿ ಅವರು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಮಾಹಿತಿ ನೀಡಿದರು.

ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ ಬಳಿ ಇರುವ ಸೆಕ್ಟರ್ ಸಂಖ್ಯೆ 110ರಲ್ಲಿ ಮಧ್ಯಾಹ್ನ 3 ಗಂಟೆಗೆ ನಡೆಯುವ ಬಿಜೆಪಿ ಪ್ರಚಾರ ಸಮಾವೇಶದಲ್ಲಿ ಮೋದಿ ಅವರು ಪಾಲ್ಗೊಂಡು ಬಾಗಲಕೋಟೆ ಹಾಗೂ ವಿಜಯಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಗಳ ಪರ ಮತಯಾಚಿಸುವರು. ಎರಡು ಲಕ್ಷಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆ ಇದೆ ಎಂದು ಬಿಜೆಪಿ ಬಾಗಲಕೋಟೆ ಜಿಲ್ಲಾ ಘಟಕದ ಅಧ್ಯಕ್ಷ ಶಾಂತಗೌಡ ಪಾಟೀಲ ಸುದ್ದಿಗಾರರಿಗೆ ತಿಳಿಸಿದರು.

ಹೊಸಪೇಟೆ (ವಿಜಯನಗರ) ವರದಿ: ಮೋದಿ ಅವರು ಏ.29ರಂದು ಹೊಸಪೇಟೆಯ ಪುನೀತ್ ರಾಜ್‌ಕುಮಾರ್ ಜಿಲ್ಲಾ ಕ್ರೀಡಾಂಗಣದಲ್ಲಿ ಬಳ್ಳಾರಿ ಕ್ಷೇತ್ರದ ಅಭ್ಯರ್ಥಿ ಬಿ.ಶ್ರೀರಾಮುಲು ಮತ್ತು ಕೊಪ್ಪಳ ಕ್ಷೇತ್ರದ ಅಭ್ಯರ್ಥಿ ಡಾ.ಬಸವರಾಜ ಕ್ಯಾವಟರ್ ಪರ ಪ್ರಚಾರ ಭಾಷಣ ಮಾಡುವರು.

27ರಂದು ಬೆಳಗಾವಿಯಲ್ಲಿ ಮೋದಿ ವಾಸ್ತವ್ಯ

'ಚುನಾವಣೆ ಪ್ರಚಾರಕ್ಕೆ ಬೆಳಗಾವಿಗೆ ಏಪ್ರಿಲ್ 27ರಂದು ಬರಲಿರುವ ಪ್ರಧಾನಿ, ತಾಲ್ಲೂಕಿನ ಕಾಕತಿ ಗ್ರಾಮದ ಐಟಿಸಿ ವೆಲ್‌ಕಮ್ ಹೋಟೆಲ್‌ನಲ್ಲಿ ತಂಗುವರು. ಅವರ ವಾಸ್ತವ್ಯಕ್ಕೆ ಭರ್ಜರಿ ತಯಾರಿ ನಡೆದಿದೆ' ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಚಿಕ್ಕೋಡಿ ಲೋಕಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಹಾಲಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಅವರ ಪುತ್ರ ಬಸವಪ್ರಸಾದ ಮಾಲೀಕತ್ವದ ಹೋಟೆಲ್ ಇದಾಗಿದೆ. ವಿಶೇಷ ರಕ್ಷಣಾ ದಳ (ಎಸ್‌ಪಿಜಿ) ಸದಸ್ಯರು ಬುಧವಾರ ಇಲ್ಲಿ ಸಭೆ ನಡೆಸಿ, ಭದ್ರತೆ ಮತ್ತು ಹೋಟೆಲ್‌ನಲ್ಲಿ ಇರುವ ಸೌಲಭ್ಯಗಳ ಕುರಿತು ಪರಿಶೀಲನೆ ನಡೆಸಿದರು.



'ರಾಜಕೀಯಕ್ಕೆ ಹೊಸಬ, ಜನಸೇವೆ ಹೊಸತಲ್ಲ'

ಪ್ರಜಾವಾಣಿ ಸಂದರ್ಶನ

ಸಾಗರ್ ಖಂಡ್ರೆ, ಕಾಂಗ್ರೆಸ್ ಅಭ್ಯರ್ಥಿ

ಮೊದಲಿನಿಂದಲೂ ಜನರ ಸೇವೆ ಮಾಡುತ್ತ ಬಂದಿದ್ದೇನೆ. ರಾಜಕೀಯ ಹಾಗೂ ಜನಸೇವೆ ಎರಡೂ ಒಂದೇ. ಹೊಸ ಅನುಭವ ಬೇಕಿಲ್ಲ' – ಇದು ಬೀದರ್ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಾಗರ್ ಖಂಡ್ರೆಯವರ ಮಾತುಗಳು. 26 ವರ್ಷ ವಯಸ್ಸಿನ ಸಾಗರ್ ಖಂಡ್ರೆ ಅವರು ಈ ಸಲದ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಪೈಕಿ ಅತಿ ಕಿರಿಯ ವಯಸ್ಸಿನವರು. ಅವರು 'ಪ್ರಜಾವಾಣಿ'ಗೆ ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ:

• ಶಶಿಕಾಂತ ಎಸ್. ಶೆಂಬೆಳ್ಳಿ

• **ಚುನಾವಣೆ ಪ್ರಚಾರ ಹೇಗೆ ನಡೆಯುತ್ತಿದೆ? ಮತದಾರರ ಪ್ರತಿಕ್ರಿಯೆ ಹೇಗಿದೆ?**

ಎಲ್ಲ ಕಡೆ ಮತದಾರರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಎಲ್ಲರೂ ಬದಲಾವಣೆ ಬಯಸುತ್ತಿದ್ದಾರೆ. ಯುವಕರಿದ್ದೀರಿ ನಿಮ್ಮನ್ನೇ ಬೆಂಬಲಿಸುತ್ತೇವೆ ಎಂದು ಹೇಳುತ್ತಿದ್ದಾರೆ. ಜನರನ್ನು ಭೇಟಿಯಾದಾಗ, ಸಂಸದರನ್ನು ನೋಡಿದ್ದೀರಾ ಎಂದು ಪ್ರಶ್ನಿಸುತ್ತೇನೆ. ಶೇ 90ರಷ್ಟು ಜನ ಅವರ ಮುಖವನ್ನೇ ನೋಡಿಲ್ಲ ಎಂದು ಹೇಳಿದ್ದಾರೆ. ಒಂದು ಸಲವೂ ನಮ್ಮೂರಿಗೆ ಸಂಸದರೇ ಬಂದಿಲ್ಲ ಎಂದು ಗೋಳು ತೋಡಿಕೊಂಡಿದ್ದಾರೆ.

• **ಸಾಗರ್ ಖಂಡ್ರೆ ಹೊಸಬರು. ಇನ್ನೂ ಚಿಗುರು ಮೀಸೆ ಬಂದಿಲ್ಲ. ರಾಜಕಾರಣದ ಆಳ-ಅಗಲ ಗೊತ್ತಿಲ್ಲ. ಅವರಿಗೆ ಅನುಭವ ಇಲ್ಲ ಎಂದು ನಿಮ್ಮ ವಿರೋಧಿಗಳು ಹೇಳುತ್ತಿದ್ದಾರೆ. ಅದರ ಬಗ್ಗೆ ಏನು ಹೇಳುವಿರಿ?**

ರಾಜಕೀಯಕ್ಕೆ ನಾನು ಹೊಸಬ ಇರಬಹುದು. ಆದರೆ, ಜನಸೇವೆ ಹೊಸತಲ್ಲ. ಮೊದಲಿನಿಂದಲೂ ಜನರ ಸೇವೆ ಮಾಡುತ್ತ ಬಂದಿದ್ದೇನೆ. ರಾಜಕೀಯ ಹಾಗೂ ಜನಸೇವೆ ಎರಡೂ ಒಂದೇ. ಹೀಗಾಗಿ ಹೊಸ ಅನುಭವ ಬೇಕಿಲ್ಲ. ಜನಸೇವೆಯಿಂದ ಅನುಭವ ಸಿಕ್ಕಿದೆ. ಜನರ ಸಮಸ್ಯೆಗೆ ಯಾವ ರೀತಿ ಸ್ಪಂದಿಸಬೇಕು ಎನ್ನುವುದು ಗೊತ್ತಿದೆ. ಮನಸ್ಸು, ಇಚ್ಛಾಶಕ್ತಿಯಿದ್ದರೆ ಏನು ಬೇಕಾದರೂ ಕಲಿಯಬಹುದು.

• **ರಾಜಕೀಯ ಪ್ರವೇಶಕ್ಕೆ ಏನಾದರೂ ಒತ್ತಡ ಇತ್ತಾ?**

ನನ್ನ ಮೇಲೆ ಯಾವುದೇ ರೀತಿಯ ಒತ್ತಡ ಇರಲಿಲ್ಲ. ನಾನು ಸ್ವಯಂಪ್ರೇರಣೆಯಿಂದ ರಾಜಕೀಯ ಕ್ಷೇತ್ರಕ್ಕೆ ಬಂದಿದ್ದೇನೆ. ನಾನು ಬೆಂಗಳೂರಿನ ಕ್ರೈಸ್ಟ್ ಯೂನಿವರ್ಸಿಟಿಯಲ್ಲಿ ಐದು ವರ್ಷಗಳ ಬಿಬಿಎ, ಎಲ್‌ಎಲ್‌ಬಿ ಇಂಟಿಗ್ರೇಟೆಡ್ ಕೋರ್ಸ್ ಮುಗಿಸಿದ್ದೇನೆ. ಸುಪ್ರೀಂ ಕೋರ್ಟ್‌ನಲ್ಲಿ ನಾನು ಇಂಟರ್ನ್‌ಶಿಪ್ ಮಾಡಿದ್ದೇನೆ. ಕೋವಿಡ್ ಸಂದರ್ಭದಲ್ಲಿ ನಾನು ಭಾಲ್ಕಿಗೆ ಬಂದೆ. ಆಗ ನಮ್ಮ ತಂದೆ ಈಶ್ವರ ಖಂಡ್ರೆಯವರಿಗೆ ಕೊರೊನಾ ಬಂದಿತ್ತು. ಅವರ ಪರ ನಾನೇ ಕಿಟ್ ಕೊಡುವುದು, ಆಮ್ಲಜನಕ ಪೂರೈಸುವ ಕೆಲಸ ಮಾಡಿದ್ದೆ. ಆನಂತರ ನನಗೆ ಗೊತ್ತಿಲ್ಲದೆ ರಾಜಕೀಯ ಕ್ಷೇತ್ರಕ್ಕೂ ಬಂದೆ.

• **ಮತದಾರರು ನಿಮಗೇಕೆ ಮತ ಹಾಕಬೇಕು?**

ಕಳೆದ ಹತ್ತು ವರ್ಷಗಳಲ್ಲಿ ಬೀದರ್ ಲೋಕಸಭಾ ಕ್ಷೇತ್ರದಲ್ಲಿ ಯಾವ ರೀತಿ ಅಭಿವೃದ್ಧಿ ಆಗಬೇಕಿತ್ತೋ ಆಗಿಲ್ಲ. ಯಾವುದೇ ಬದಲಾವಣೆ ಆಗಿಲ್ಲ. ಭಗವಂತ ಖೂಬಾ ಅವರು ಕೇಂದ್ರ ಸಚಿವರಾಗಿ ಐದು ವರ್ಷಗಳಲ್ಲಿ ಬಹಳ ಕೆಲಸ ಮಾಡಬೇಕಿತ್ತು. ಆದರೆ, ಅವರಿಂದ ಆಗಲಿಲ್ಲ. ಜನರ ಬೇಡಿಕೆಗಳನ್ನು ಈಡೇರಿಸಿಲ್ಲ. ರೈತರು ಬೆಳೆ ವಿಮೆ ಕಟ್ಟಿದರೂ ಅವರಿಗೆ ಅದರ ಪ್ರಯೋಜನ ಸಿಗುತ್ತಿಲ್ಲ. ಯುವಕರಿಗೆ ಉದ್ಯೋಗ ಕೊಡಿಸಿಲ್ಲ. ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಜನರು ಬದಲಾವಣೆ ಬಯಸಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಜನಪ್ರತಿನಿಧಿಯಾದವರು ಜನರ ಕೈಗೆ ಸಿಗಬೇಕು. ಆದರೆ, ಖೂಬಾ ಅವರು ಜನರ ಕೈಗೆ ಸಿಗಲ್ಲ. ಜನರೊಂದಿಗೆ ಅವರ ಸಂಪರ್ಕ ಕಡಿದು ಹೋಗಿದೆ. ಆ ಗ್ಯಾಪ್ ತುಂಬುವ ಕೆಲಸ ಮಾಡುತ್ತೇನೆ. ಅದಕ್ಕಾಗಿ ಜನ ಮತ ಕೊಡುತ್ತಾರೆ ಎಂಬ ಭರವಸೆ ಇದೆ.

• **ಯಾವ ವಿಷಯಗಳು ಚುನಾವಣೆಯಲ್ಲಿ ನಿಮಗೆ ಅನುಕೂಲಕರವಾಗಿವೆ?**

ಕಾಂಗ್ರೆಸ್ ಪಕ್ಷ ಕೊಟ್ಟಿರುವ ಗ್ಯಾರಂಟಿಗಳು. ಅದರಿಂದ ಎಲ್ಲರಿಗೂ ಅನುಕೂಲವಾಗುತ್ತಿದೆ. ಪ್ರತಿ ಕುಟುಂಬಕ್ಕೂ ಸಹಾಯವಾಗುತ್ತಿದೆ. ನನ್ನ ಅಜ್ಜ, ದೊಡ್ಡಪ್ಪ, ತಂದೆಯವರು ಐದು ದಶಕಗಳಿಂದ ಜನಸೇವೆ ಮಾಡುತ್ತ ಬಂದಿದ್ದಾರೆ. ಅದು ಕೂಡ ನನಗೆ ಸಹಾಯವಾಗಲಿದೆ. ಚುನಾವಣೆಯಲ್ಲಿ ಗೆದ್ದ ನಂತರ ಇವರು ಎಲ್ಲಿಯೂ ಹೋಗಿ, ಕೂರಲ್ಲ ಎಂಬುದು ಜನರಿಗೆ ಗೊತ್ತಿದೆ. ಭಾಲ್ಕಿ ಕ್ಷೇತ್ರದ ಜನ ನಮ್ಮ ಕುಟುಂಬಕ್ಕೆ ಹತ್ತು ಸಲ ಆಶೀರ್ವಾದ ಮಾಡಿದ್ದಾರೆ. ಜನರ ಪ್ರೀತಿ ಎಷ್ಟೆಂಬುದು ಇದರಿಂದ ಗೊತ್ತಾಗುತ್ತದೆ. ನಾವು ಸಮಾಜಕ್ಕೆ ಏನಾದರೂ ಮಾಡಿದಾಗಲೇ ಇದು ಸಾಧ್ಯವಲ್ಲವೇ?

• **ಕಾಂಗ್ರೆಸ್ ಐದು ಗ್ಯಾರಂಟಿಗಳ ಬಗ್ಗೆ ಹೇಳುತ್ತಿದೆ. ಆದರೆ, ಬಿಜೆಪಿಯವರು ಪ್ರಧಾನಿ ನರೇಂದ್ರ ಮೋದಿಯವರೇ ಗ್ಯಾರಂಟಿ ಎನ್ನುತ್ತಿದ್ದಾರೆ. ಇದರ ಬಗ್ಗೆ ಏನು ಹೇಳುವಿರಿ?**

ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳು ಪ್ರತಿಯೊಂದು ಮನೆಗೂ ತಲುಪುತ್ತಿವೆ. ಜನ ನಮ್ಮನ್ನು ಸ್ವೀಕರಿಸಿದ್ದಾರೆ. ಎಲ್ಲರೂ ಸಂತೋಷವಾಗಿದ್ದಾರೆ. ಎಲ್ಲರೂ ಬೆಂಬಲಿಸುತ್ತಿದ್ದಾರೆ.



• **ನಿಮ್ಮ ಪ್ರಮುಖ ಪ್ರತಿಸ್ಪರ್ಧಿ ಬಿಜೆಪಿಯ ಭಗವಂತ ಖೂಬಾ ಅವರು ಒಂದು ಸಲ ಮಾಜಿ ಮುಖ್ಯಮಂತ್ರಿ ಎನ್.ಧರ್ಮಸಿಂಗ್, ನಿಮ್ಮ ತಂದೆ (ಈಶ್ವರ ಬಿ. ಖಂಡ್ರೆ) ಅವರನ್ನು ಚುನಾವಣೆಯಲ್ಲಿ ಸೋಲಿಸಿ ಕೇಂದ್ರದಲ್ಲಿ ಮಂತ್ರಿಯಾಗಿದ್ದಾರೆ. ಅವರ ವಿರುದ್ಧ ಸ್ಪರ್ಧಿಸಬೇಕೆಂದಾಗ ಒತ್ತಡ ಅನಿಸಿತೆ?**

ನನ್ನ ಮೇಲೆ ಆ ತರಹದ ಯಾವುದೇ ಒತ್ತಡ ಇಲ್ಲ. 2014ರಲ್ಲಿ ಮೊದಲ ಸಲ ಭಗವಂತ ಖೂಬಾ ಅವರು ಗೆದ್ದಾಗ ಅವರು ಕೂಡ ಈ ಕ್ಷೇತ್ರಕ್ಕೆ ಹೊಸಬರಾಗಿದ್ದರು. ಅವರದು ಹೊಸ ಮುಖ ಆಗಿತ್ತು. ಎರಡನೇ ಸಲ ಅವರು ಮೋದಿ ಅಲೆಯಲ್ಲಿ ಗೆದ್ದರು. ನಮಗೆ ಸಿದ್ಧತೆಗೆ ಸಮಯಾವಕಾಶ ಇದ್ದಿರಲಿಲ್ಲ. ಆದಕಾರಣ ಅವರು ಗೆದ್ದಿದ್ದರು. ಈ ಸಲ ನಾವು ಸಿದ್ಧರಿದ್ದೇವೆ. ಎಲ್ಲರೂ ಒಗ್ಗಟ್ಟಾಗಿದ್ದೇವೆ. ಜನ ಹೊಸ ಮುಖ ಬಯಸುತ್ತಿದ್ದಾರೆ.

• **ಗೆದ್ದರೆ ಬೀದರ್ ಲೋಕಸಭಾ ಕ್ಷೇತ್ರದಲ್ಲಿ ಏನು ಮಾಡುವ ಕನಸಿದೆ?**

ಜಿಲ್ಲೆಯಲ್ಲಿ ಒಂದು ಸೋಲಾರ್ ಪಾರ್ಕ್ ಮಾಡುವ ಮಹದಾಸೆ ಇದೆ. ಇದರಿಂದ ರೈತರಿಗೆ ನಿರಂತರವಾಗಿ ವಿದ್ಯುತ್ ಸಿಗುತ್ತದೆ. ರೈತರಿಗೆ ಸಮರ್ಪಕವಾಗಿ ಬೆಳೆ ವಿಮೆ ಪ್ರಯೋಜನ ತಲುಪಿಸುವೆ. ಯುವಕರಿಗೆ ಉದ್ಯೋಗ ಕೊಡಬೇಕು. ಶುದ್ಧ ಕುಡಿಯುವ ನೀರು ಪೂರೈಸಬೇಕಿದೆ. ಬೀದರ್ ಜಿಲ್ಲೆಯನ್ನು ಪ್ರವಾಸೋದ್ಯಮದ ಹಬ್ ಮಾಡಬೇಕು. ಇವೆಲ್ಲ ನನ್ನ ಕನಸಿನ ಯೋಜನೆಗಳು. ಪ್ರವಾಸೋದ್ಯಮ ಬೆಳೆದರೆ ಜಿಲ್ಲೆಯ ಆರ್ಥಿಕತೆ ಕೂಡ ಬೆಳೆಯುತ್ತದೆ.

• **ಖಂಡ್ರೆ ಪರಿವಾರದವರು ಕುಟುಂಬ ರಾಜಕಾರಣ ಮಾಡುತ್ತಿದ್ದಾರೆ ಎಂದು ವಿರೋಧಿಗಳು ಆರೋಪಿಸುತ್ತಿದ್ದಾರೆ. ಅದಕ್ಕೇನು ಹೇಳುವಿರಿ?**

ಯಾರು ನಮ್ಮನ್ನು ನಾಮನಿರ್ದೇಶನ ಮಾಡಿ ಕುರ್ಚಿ ಮೇಲೆ ಕೂರಿಸುತ್ತಿಲ್ಲ. ಜನ ನಮ್ಮನ್ನು ಆಶೀರ್ವದಿಸಿ ಕಳಿಸುತ್ತಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ಭಾಲ್ಕಿಯಲ್ಲಿ ಒಂದು ಲಕ್ಷ ಜನ ಬೆಂಬಲಿಸಿದ್ದಾರೆ. ಈಗಲೂ ಜನ ತೀರ್ಮಾನಿಸುತ್ತಾರೆ. ಜನರ ಸೇವೆ ಮಾಡುತ್ತಾರೆ ಎಂಬ ಭರವಸೆಯಿಂದ ನಮ್ಮನ್ನು ಬೆಂಬಲಿಸುತ್ತಿದ್ದಾರೆ. ಜನರ ಆಶೀರ್ವಾದದಿಂದಲೇ ಗೆದ್ದು ಬರುತ್ತಿದ್ದೇವೆ. ಜನಸೇವೆಯೇ ಮುಖ್ಯ ಉದ್ದೇಶ.

2ನೇ ಹಂತ: 2.59 ಕೋಟಿ ಮತದಾರರು

ಬೆಂಗಳೂರು: ರಾಜ್ಯದಲ್ಲಿ ಎರಡನೇ ಹಂತದಲ್ಲಿ ಮತದಾನ ನಡೆಯುವ 14 ಕ್ಷೇತ್ರಗಳಲ್ಲಿ 2.59 ಕೋಟಿ ಅರ್ಹ ಮತದಾರರು ಇದ್ದಾರೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎರಡನೇ ಹಂತದಲ್ಲಿ ಮತದಾನ ನಡೆಯುವ ಲೋಕಸಭಾ ಕ್ಷೇತ್ರಗಳ ಮತದಾರರ ಪಟ್ಟಿ ಅಂತಿಮಗೊಂಡಿದೆ. ತಲಾ 1.29 ಕೋಟಿ ಪುರುಷ ಮತ್ತು ಮಹಿಳಾ ಮತದಾರರಿದ್ದಾರೆ. 1,945 ಲಿಂಗತ್ವ ಅಲ್ಪಸಂಖ್ಯಾತರು ಮತದಾರರ ಪಟ್ಟಿಯಲ್ಲಿದ್ದಾರೆ' ಎಂದರು.

ಈ ಕ್ಷೇತ್ರಗಳಲ್ಲಿ 1.90 ಲಕ್ಷ ಯುವ (18ರಿಂದ 19 ವರ್ಷ) ಮತದಾರರಿದ್ದಾರೆ. 85 ವರ್ಷಕ್ಕಿಂತ ಹೆಚ್ಚು ವಯಸ್ಸಾದ 2.29 ಲಕ್ಷ ಹಾಗೂ 3.43 ಲಕ್ಷ ಅಂಗವಿಕಲ ಮತದಾರರಿದ್ದಾರೆ. ಕಲಬುರಗಿ ಲೋಕಸಭಾ ಕ್ಷೇತ್ರದಲ್ಲಿ ಅತ್ಯಧಿಕ (20.98 ಲಕ್ಷ) ಮತದಾರರಿದ್ದಾರೆ. ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಅತಿ ಕಡಿಮೆ (16.41 ಲಕ್ಷ) ಮತದಾರರಿದ್ದಾರೆ ಎಂದರು.

28,269 ಮತಗಟ್ಟೆ: ಈ 14 ಕ್ಷೇತ್ರಗಳಲ್ಲಿ 28,257 ಮುಖ್ಯ ಮತಗಟ್ಟೆಗಳು ಮತ್ತು 12 ಉಪ ಮತಗಟ್ಟೆಗಳು ಸೇರಿದಂತೆ 28,269 ಮತಗಟ್ಟೆಗಳಿವೆ ಎಂದು ತಿಳಿಸಿದರು.

8,621 ಮುಖ್ಯ ಮತಗಟ್ಟೆಗಳು ನಗರ ಪ್ರದೇಶಗಳಲ್ಲಿದ್ದರೆ, 19,636 ಮುಖ್ಯ ಮತಗಟ್ಟೆಗಳು ಗ್ರಾಮೀಣ ಪ್ರದೇಶಗಳಲ್ಲಿವೆ. ರಾಯಚೂರು ಲೋಕಸಭಾ ಕ್ಷೇತ್ರದಲ್ಲಿ ಅತ್ಯಧಿಕ (2,203) ಮತಗಟ್ಟೆಗಳಿವೆ. ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ ಅತಿ ಕಡಿಮೆ (1,893) ಮತಗಟ್ಟೆಗಳಿವೆ ಎಂದು ಹೇಳಿದರು.

ಕರ್ನಾಟಕದ ವಿಷಯ ಪ್ರಸ್ತಾಪಿಸಿ ವಾಗ್ದಾಳಿ ಮುಂದುವರಿಸಿದ ಪ್ರಧಾನಿ ನರೇಂದ್ರ ಮೋದಿ

‘ಒಬಿಸಿ ಮೀಸಲಾತಿ ಕಡಿತಗೊಳಿಸಿದ್ದ ಕಾಂಗ್ರೆಸ್’

ಸಾಗರ್/ಸರ್ಗುಜಾ (ಪಿಟಿಐ): ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವು ಒಬಿಸಿಗಳ ಪಟ್ಟಿಯಲ್ಲೇ ಮುಸ್ಲಿಮರ ಜಾತಿಗಳಿಗೂ ಮೀಸಲಾತಿಯನ್ನು ಕಲ್ಪಿಸುವ ಮೂಲಕ ಹಿಂದುಳಿದವರ ಮೀಸಲಾತಿಯನ್ನು ಕಡಿತಗೊಳಿಸಿತ್ತು. ಅದನ್ನು ದೇಶದಾದ್ಯಂತ ವಿಸ್ತರಿಸಲೂ ಯೋಜಿಸಿತ್ತು ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಆರೋಪಿಸಿದರು.

ಮಧ್ಯಪ್ರದೇಶದ ಸಾಗರ್ ಜಿಲ್ಲೆಯ ಚುನಾವಣಾ ರ‍್ಯಾಲಿಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಹೀಗೆ ಮಾಡುವ ಮೂಲಕ ಕಾಂಗ್ರೆಸ್ ಒಬಿಸಿ ಸಮುದಾಯದ ದೊಡ್ಡ ಪಾಲನ್ನು ಕಸಿದುಕೊಂಡಿತ್ತು. ನಿಮ್ಮ ಮುಂದಿನ ತಲೆಮಾರುಗಳನ್ನು ನಾಶ ಮಾಡುವ ಅಪಾಯಕಾರಿ ಆಟದಲ್ಲಿ ಕಾಂಗ್ರೆಸ್ ನಿರತವಾಗಿದೆ. ಅದು ಒಬಿಸಿಗಳ ದೊಡ್ಡ ಶತ್ರು’ ಎಂದು ದೂರಿದರು.

ಅದಕ್ಕೂ ಮುಂದೆ ಛತ್ತೀಸಗಢದ ಸರ್ಗುಜಾದಲ್ಲಿಯೂ ಪ್ರಧಾನಿ ಅವರು, ಕರ್ನಾಟಕದ ನಿದರ್ಶನವನ್ನು ಉಲ್ಲೇಖಿಸಿ ವಾಗ್ದಾಳಿ ನಡೆಸಿದ್ದರು.

‘ಸರ್ಗುಜಾದಲ್ಲಿ ನಾನು ನಿಮ್ಮ ಮುಂದೆ ಕಾಂಗ್ರೆಸ್‌ನ ಮುಸ್ಲಿಂ ಲೀಗ್ ಚಿಂತನೆಯನ್ನು ಪ್ರಸ್ತುತಪಡಿಸಲು ಬಯಸುತ್ತೇನೆ’ ಎಂದು ತಮ್ಮ ಹಿಂದಿನ ಆರೋಪವನ್ನು ಪುನರುಚ್ಚರಿಸಿದರು.

‘ಭಾರತದಲ್ಲಿ ಧರ್ಮದ ಆಧಾರದ ಮೇಲೆ ಮೀಸಲಾತಿ ನೀಡಬಾರದು ಎಂದು ಸಂವಿಧಾನದ ಕರಡನ್ನು ಸಿದ್ಧಪಡಿಸುವಾಗ ಬಾಬಾಸಾಹೇಬರ ನೇತೃತ್ವದಲ್ಲಿ ಬುದ್ಧಿಜೀವಿಗಳು ಮತ್ತು ದೇಶದ ಅತ್ಯುನ್ನತ ವ್ಯಕ್ತಿಗಳು ತೀರ್ಮಾನಿಸಿದ್ದರು’ ಎಂದ ಮೋದಿ, ‘ಮೀಸಲಾತಿ ಇರುವುದೇ ಆದರೆ, ಅದು ನನ್ನ ದಲಿತ ಸೋದರರು ಮತ್ತು ಸೋದರಿಯರಿಗೆ ಹಾಗೂ ಆದಿವಾಸಿ ಸೋದರ ಮತ್ತು ಸೋದರಿಯರಿಗೆ’ ಎಂದು ಹೇಳಿದರು.

ಮಧ್ಯಪ್ರದೇಶದ ಸಾಗರ್ ಜಿಲ್ಲೆಯಲ್ಲಿ ನಡೆದ ಲೋಕಸಭಾ ಚುನಾವಣೆಯ ಪ್ರಚಾರ ಸಭೆಯಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ಹೂಗುಚ್ಛ ನೀಡಿದರು – ಪಿಟಿಐ ಚಿತ್ರ

‘ಮತಬ್ಯಾಂಕ್‌ಗಾಗಿ ಹಸಿದಿರುವ ಕಾಂಗ್ರೆಸ್ ಶ್ರೇಷ್ಠ ವ್ಯಕ್ತಿಗಳ ಮಾತುಗಳಿಗೆ, ಸಂವಿಧಾನದ ಪಾವಿತ್ರ್ಯತೆ ಮತ್ತು ಬಾಬಾಸಾಹೇಬರ ಮಾತುಗಳಿಗೆ ಎಂದೂ ಗಮನ ಕೊಡಲಿಲ್ಲ. ವರ್ಷಗಳ ಹಿಂದೆ ಕಾಂಗ್ರೆಸ್ ಪಕ್ಷವು ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಲು ಪ್ರಯತ್ನಿಸಿತ್ತು. ಅದನ್ನು ದೇಶದಾದ್ಯಂತ ಜಾರಿಗೆ ತರಲು ಯೋಜಿಸಿತ್ತು. ಧರ್ಮದ ಆಧಾರದಲ್ಲಿ ಶೇ 15ರಷ್ಟು ಮೀಸಲಾತಿ ನೀಡುವ ಬಗ್ಗೆ ಮಾತನಾಡಿದ್ದ ಅವರು, ಅದಕ್ಕಾಗಿ ಎಸ್‌ಸಿ, ಎಸ್‌ಟಿ, ಆದಿವಾಸಿ ಮತ್ತು ಹಿಂದುಳಿದ ಜಾತಿಗಳ ಕೋಟಾವನ್ನು ಮೊಟಕುಗೊಳಿಸುವುದಾಗಿ ಹೇಳಿದ್ದರು’ ಎಂದು ಆರೋಪಿಸಿದರು.

‘ಕಾಂಗ್ರೆಸ್ ಹಿಂದೆ ಕರ್ನಾಟಕದಲ್ಲಿ ಧರ್ಮದ ಆಧಾರದ ಮೇಲೆ ಮೀಸಲಾತಿ ಕಲ್ಪಿಸಿತ್ತು. ಬಿಜೆಪಿ ಅಧಿಕಾರಕ್ಕೆ ಬಂದಾಗ ನಾವು ಸಂವಿಧಾನಕ್ಕೆ ಮತ್ತು ಬಾಬಾಸಾಹೇಬರ ಆಶಯಗಳಿಗೆ ವಿರುದ್ಧವಾಗಿದ್ದ ಅದನ್ನು ರದ್ದುಪಡಿಸಿದೆವು’ ಎಂದು ಪ್ರಧಾನಿ ತಿಳಿಸಿದರು.

‘ಸಾಮಾಜಿಕ ನ್ಯಾಯವನ್ನು ಅವಹೇಳನ ಮಾಡಿದ ಕಾಂಗ್ರೆಸ್, ಅದನ್ನು ಸಾಯಿಸಿತು. ಕರ್ನಾಟಕದಲ್ಲಿ ಜಾತ್ಯತೀತತೆಯನ್ನು ಕೊಂದು ಹಾಕಿತು. ಕರ್ನಾಟಕದ ಈ ಮಾದರಿಯನ್ನು ಕಾಂಗ್ರೆಸ್ ದೇಶದಾದ್ಯಂತ ಜಾರಿ ಮಾಡಲು ಹೊರಟಿದೆ. ಸಂವಿಧಾನವನ್ನು ಬದಲಾಯಿಸುವ ಮೂಲಕ ಎಸ್‌ಸಿ, ಎಸ್‌ಟಿ, ಒಬಿಸಿ ಹಕ್ಕುಗಳನ್ನು ತನ್ನ ಮತಬ್ಯಾಂಕ್‌ಗೆ ನೀಡಲು ಹೊರಟಿದೆ. ನಿಮ್ಮ ಮೀಸಲಾತಿಯನ್ನು ರಕ್ಷಿಸುವ ಯಾರಾದರೂ ಇದ್ದರೆ, ಅದು ಬಿಜೆಪಿ’ ಎಂದು ಪ್ರತಿಪಾದಿಸಿದರು.

‘ಮೀಸಲಾತಿ ಕಸಿಯುವ ಯತ್ನ’



ಲಖನೌ (ಪಿಟಿಐ): ಕಾಂಗ್ರೆಸ್ ಪಕ್ಷವು ಜಾತಿ ಸಮೀಕ್ಷೆಯ ಮೂಲಕ ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ಜಾತಿಗಳ ಹಕ್ಕುಗಳನ್ನು ಕಸಿಯಲು ಹೊರಟಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಬುಧವಾರ ಆರೋಪಿಸಿದರು. ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಕಾಂಗ್ರೆಸ್ ಮತ್ತು ‘ಇಂಡಿಯಾ’ ಕೂಟ ಜಾತಿ ಸಮೀಕ್ಷೆಯ ಮೂಲಕ ದೇಶದ ಸಾಮಾಜಿಕ ರಚನೆಯನ್ನು ಹಾಳು ಮಾಡಲಿವೆ ಎಂದು ವಾಗ್ದಾಳಿ ನಡೆಸಿದರು.

‘ತಾನು ಅಧಿಕಾರಕ್ಕೆ ಬಂದರೆ ಮುಸ್ಲಿಂ ವೈಯಕ್ತಿಕ ಕಾನೂನು ಮತ್ತು ಷರಿಯಾ ಕಾನೂನನ್ನು ಜಾರಿಗೆ ತರುವ ಬಗ್ಗೆ ಕಾಂಗ್ರೆಸ್ ಮಾತನಾಡುತ್ತಿದೆ’ ಎಂದು ಹೇಳಿದರು.

‘ನ್ಯಾಯಮೂರ್ತಿ ರಂಗನಾಥ ಮಿಶ್ರಾ ಅವರ ಸಮಿತಿಯ ಶಿಫಾರಸುಗಳನ್ನು ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿದ್ದರಿಂದ ವ್ಯತಿರಿಕ್ತ ಪರಿಣಾಮಗಳು ಕಾಣಿಸಿಕೊಂಡವು. ಅದರ ಅಡಿಯಲ್ಲಿ ಎಸ್‌ಸಿ, ಎಸ್‌ಟಿ, ಹಿಂದುಳಿದ ಜಾತಿಗಳಿಗೆ ನೀಡಲಾಗಿದ್ದ ಹಕ್ಕುಗಳನ್ನು ಕಸಿದುಕೊಳ್ಳುವ ಯತ್ನಗಳು ಆರಂಭವಾದವು’ ಎಂದು ಆರೋಪಿಸಿದರು. ‘ಸಾಚಾರ್ ಸಮಿತಿಯ ವರದಿಯಲ್ಲೂ ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗಗಳ ಮೀಸಲಾತಿಯೊಳಗೆ ನುಸುಳಿ ಅದರ ಒಂದು ಭಾಗವನ್ನು ಮುಸ್ಲಿಮರಿಗೆ ನೀಡುವ ದುರುದ್ದೇಶಪೂರಿತ ಪ್ರಯತ್ನ ನಡೆದಿತ್ತು. ಆಗ ಅದಕ್ಕೆ ಭಾರಿ ವಿರೋಧ ವ್ಯಕ್ತವಾಗಿತ್ತು’ ಎಂದು ಪ್ರತಿಪಾದಿಸಿದರು.

‘ಒಂದು ವರ್ಷಕ್ಕೆ ಒಬ್ಬ ಪ್ರಧಾನಿ ವ್ಯವಸ್ಥೆ’

ಹರ್ದಾ (ಪಿಟಿಐ): ‘ಇಂಡಿಯಾ’ ಕೂಟವು ತನ್ನ ನಾಯಕತ್ವದ ವಿಚಾರ ಇತ್ಯರ್ಥಪಡಿಸಿಕೊಳ್ಳಲು ‘ಒಂದು ವರ್ಷಕ್ಕೆ ಒಬ್ಬ ಪ್ರಧಾನಿ’ ಎನ್ನುವ ಸೂತ್ರದ ಬಗ್ಗೆ ಚಿಂತನೆ ನಡೆಸಿದ್ದು, ಅತಿ ದೊಡ್ಡ ಪ್ರಜಾಪ್ರಭುತ್ವದ ಈ ವ್ಯವಸ್ಥೆಯ ಬಗ್ಗೆ ಜಗತ್ತು ಅಪಹಾಸ್ಯ ಮಾಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದರು.

ಬೇತುಲ್ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹರ್ದಾದಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ‘ಐದು ವರ್ಷದಲ್ಲಿ ಐವರು ಪ್ರಧಾನಿ ಸೂತ್ರಕ್ಕೆ ಮತದಾರರು ಸಿದ್ಧರಿರುವರೇ ಎಂದು ಪ್ರಶ್ನಿಸಿದರು. ‘ಇದು ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷಗಳ ‘ಇಂಡಿಯಾ’ ಕೂಟದ ಅಪಾಯಕಾರಿ ಆಟವಾಗಿದೆ’ ಎಂದು ಹೇಳಿದರು.

‘ಕಾಂಗ್ರೆಸ್ ಸರ್ಕಾರದಿಂದ ಯಾವ ನ್ಯಾಯ ಸಿಗಲಿದೆ?’

ಹೈದರಾಬಾದ್ (ಪಿಟಿಐ): ಕರ್ನಾಟಕದಲ್ಲಿ ಕಾಂಗ್ರೆಸ್ ಕೌನ್ಸಿಲರ್‌ನ ಮಗಳೇ ಕೊಲೆಯಾಗಿದ್ದು, ಆ ಪಕ್ಷವು ಯಾವ ನ್ಯಾಯದ ಖಾತರಿ ನೀಡಬಹುದು ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಬುಧವಾರ ಪ್ರಶ್ನಿಸಿದರು.

ಮೃತ ವಿದ್ಯಾರ್ಥಿನಿ ನೇಹಾ ಹಿರೇಮಠ ಅವರ ಕುಟುಂಬದವರು ಪ್ರಕರಣದ ಕುರಿತು ಸಿಬಿಐ ತನಿಖೆಗೆ ಒತ್ತಾಯಿಸಬೇಕಾಯಿತು ಎಂದೂ ಸಚಿವರು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರವು ‘ಎಲ್ಲರ ಜತೆ, ಎಲ್ಲರ ಅಭಿವೃದ್ಧಿ’ ಎಂಬ ಭರವಸೆಯನ್ನು ನೀಡಿದೆ ಎಂದರು.

‘ರಾಹುಲ್ ಗಾಂಧಿ ಅವರ ‘ದ್ವೇಷದ ಅಂಗಡಿ’, ಬಜಾರ್ ಆರಂಭಗೊಂಡಿದೆ. ಕಾಂಗ್ರೆಸ್ ಸರ್ಕಾರವಿರುವ ಕರ್ನಾಟಕದಲ್ಲಿ ನೇಹಾ ಅವರ ಕುಟುಂಬಕ್ಕೆ ನ್ಯಾಯ ಸಿಗದು. ಅದಕ್ಕಾಗಿಯೇ ಅವರು ಸಿಬಿಐ ತನಿಖೆಗೆ ಒತ್ತಾಯಿಸಿದ್ದು’ ಎಂದು ಹೇಳಿದರು.

ದೇಶದ ಶೇ 90ರಷ್ಟು ಮಂದಿಗೆ ನ್ಯಾಯ ಒದಗಿಸುವುದು ಜೀವನದ ಗುರಿ: ರಾಹುಲ್

‘ಜಾತಿಗಣತಿ ತಡೆಯಲು ಸಾಧ್ಯವಿಲ್ಲ’

ನವದೆಹಲಿ (ಪಿಟಿಐ): ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದರೆ ದೇಶದಾದ್ಯಂತ ಜಾತಿಗಣತಿ ನಡೆಸಲಾಗುವುದು’ ಎಂಬ ಮಾತನ್ನು ಪುನರುಚ್ಚರಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ‘ಯಾವುದೇ ಶಕ್ತಿಯಿಂದ ಅದನ್ನು ತಡೆಯಲು ಸಾಧ್ಯವಿಲ್ಲ’ ಎಂದು ಪ್ರತಿಪಾದಿಸಿದರು.

ಬುಧವಾರ ಇಲ್ಲಿ ನಡೆದ ಸಾಮಾಜಿಕ ನ್ಯಾಯ ಸಮ್ಮೇಳನದಲ್ಲಿ ಪಾಲ್ಗೊಂಡ ಅವರು, ‘ತಮ್ಮನ್ನು ದೇಶಭಕ್ತರು ಎಂದು ಕರೆಸಿಕೊಳ್ಳುವವರು ಜಾತಿಗಣತಿಯ ‘ಎಕ್ಸ್–ರೇ’ಗೆ ಹೆದರುತ್ತಾರೆ’ ಎಂದು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದರು. ‘ದೇಶದ ಜನಸಂಖ್ಯೆಯಲ್ಲಿ ಶೇ 90 ರಷ್ಟು ಮಂದಿ ಅನ್ಯಾಯಕ್ಕೆ ಒಳಗಾಗಿದ್ದು, ಅವರಿಗೆ ನ್ಯಾಯ ಒದಗಿಸುವುದೇ ನನ್ನ ಜೀವನದ ಗುರಿ’ ಎಂದು ಘೋಷಿಸಿದರು.

‘ಪ್ರಧಾನಿ ಮೋದಿ ಅವರು ₹ 16 ಲಕ್ಷ ಕೋಟಿಯನ್ನು ಆಯ್ದ ಕೆಲವು ಉದ್ಯಮಿಗಳಿಗೆ ವರ್ಗಾಯಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೇರಿದರೆ ಅದರಲ್ಲಿ ಸಣ್ಣ ಮೊತ್ತವನ್ನು ಶೇ 90 ರಷ್ಟು ಜನರಿಗೆ ವಾಪಸ್ ಮಾಡಲಿದೆ. ಎಲ್ಲವನ್ನೂ ನಾವು ಲೆಕ್ಕ ಹಾಕಿದ್ದೇವೆ. ನಮಗೆ ಏನು ನ್ಯಾಯ ಎನಿಸಿದೆಯೋ ಅದನ್ನು ಪ್ರಣಾಳಿಕೆಯಲ್ಲಿ ಜನರ ಮುಂದೆ ಇಟ್ಟಿದ್ದೇವೆ’ ಎಂದರು.

‘ನನಗೆ ಜಾತಿಯಲ್ಲಿ ಆಸಕ್ತಿ ಇಲ್ಲ, ನ್ಯಾಯದಲ್ಲಿ ಆಸಕ್ತಿ ಇದೆ. ದೇಶದ ಶೇ 90ರಷ್ಟು ಜನರಿಗೆ ಘೋರ ಅನ್ಯಾಯವಾಗುತ್ತಿದೆ ಎಂದು ನಾನು ಹೇಳುತ್ತಿದ್ದೇನೆ. ಅದರ ಬಗ್ಗೆ ನಾವು ಯಾವುದೇ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿಲ್ಲ. ಎಷ್ಟು ಅನ್ಯಾಯವಾಗಿದೆ ಎಂಬುದನ್ನು ಪರೀಕ್ಷಿಸೋಣ ಎಂದಿದ್ದೆ. ಉದಾಹರಣೆಗೆ, ನೀವು ಗಾಯಗೊಂಡಾಗ ಎಕ್ಸ್–ರೇ ತೆಗೆಯಬೇಕು ಎಂದು ನಾನು ಹೇಳಿದರೆ ಅದಕ್ಕೆ ಯಾರೂ ಆಕ್ಷೇಪ ವ್ಯಕ್ತಪಡಿಸಲು ಸಾಧ್ಯವಿಲ್ಲ’ ಎಂದರು.

‘ಆದರೆ ಎಕ್ಸ್–ರೇ (ಜಾತಿಗಣತಿ, ಸಂಪತ್ತಿನ ಸಮೀಕ್ಷೆ) ಮೂಲಕ ಎಷ್ಟು ಅನ್ಯಾಯವಾಗಿದೆ ಎಂಬುದನ್ನು ಪರೀಕ್ಷಿಸೋಣ ಎಂದಿದ್ದಕ್ಕೆ ನರೇಂದ್ರ ಮೋದಿ ಅವರು ಯಾವ ರೀತಿ ಪ್ರತಿಕ್ರಿಯಿಸಿದ್ದಾರೆ ಎಂಬುದನ್ನು ನೋಡಿ. ದೇಶವನ್ನು ಒಡೆಯುವ ಯತ್ನ ನಡೆಯುತ್ತಿದೆ ಎಂದು ಹೇಳಲು ಶುರುಮಾಡಿದರು’ ಎಂದು ಕಿಡಿಕಾರಿದರು.

‘ಒಬ್ಬ ದೇಶಭಕ್ತ ಏನನ್ನು ಬಯಸುವನು? ಒಬ್ಬ ದೇಶಭಕ್ತ ದೇಶದಲ್ಲಿ ನ್ಯಾಯವನ್ನು ಬಯಸುವನು. ಭಾರತವು ಅಭಿವೃದ್ಧಿ ಸಾಧಿಸಿ ಸೂಪರ್ ಪವರ್ ಆಗಬೇಕೆಂದು ಬಯಸುತ್ತಾನೆ. ಆದ್ದರಿಂದ ನೀವು ಸೂಪರ್ ಪವರ್ ಆಗಲು ಮತ್ತು ಚೀನಾಕ್ಕಿಂತ ಮುಂದೆ ಹೋಗಬೇಕಾದರೆ, ಒಟ್ಟು ಜನಸಂಖ್ಯೆಯ ಶೇ 90ರಷ್ಟು ಬಲವನ್ನು ಬಳಸಿಕೊಳ್ಳಬೇಕು’ ಎಂದು ತಿಳಿಸಿದರು.

ರಾಹುಲ್ ಹೇಳಿದ್ದು...

- ಹೈಕೋರ್ಟ್‌ಗಳಲ್ಲಿರುವ 650 ನ್ಯಾಯಮೂರ್ತಿಗಳಲ್ಲಿ ಒಬಿಸಿ, ದಲಿತ ಮತ್ತು ಬುಡಕಟ್ಟು ಸಮುದಾಯಕ್ಕೆ ಸೇರಿದವರು ಕೇವಲ 100 ಮಂದಿ ಇದ್ದಾರೆ
- ದೇಶದ ಪ್ರಮುಖ 200 ಕಂಪನಿಗಳಲ್ಲಿ ಒಬಿಸಿ, ದಲಿತರು ಅಥವಾ ಬುಡಕಟ್ಟು ಸಮುದಾಯದ ಜನರು ಇಲ್ಲ
- ಮಾಧ್ಯಮ ಕ್ಷೇತ್ರಗಳಲ್ಲೂ ದಲಿತರಿಗೆ, ಹಿಂದುಳಿದವರಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಕ್ಕಿಲ್ಲ

‘ಕೋಟ್ಯಂತರ ಜನರು ಲಕ್ಷಾಧಿಪತಿ ಆಗುವರು’

ಅಮರಾವತಿ (ಮಹಾರಾಷ್ಟ್ರ): ನರೇಂದ್ರ ಮೋದಿ ಸರ್ಕಾರದ 10 ವರ್ಷಗಳ ಅವಧಿಯಲ್ಲಿ 22–25 ಮಂದಿ ಮಾತ್ರ ಶತಕೋಟ್ಯಧಿಪತಿಗಳಾಗಿದ್ದಾರೆ, ಆದರೆ ‘ಇಂಡಿಯಾ’ ಮೈತ್ರಿಕೂಟ ಅಧಿಕಾರಕ್ಕೇರಿದರೆ ಅದು ಕೋಟ್ಯಂತರ ಜನರನ್ನು ‘ಲಖ್‌ಪತಿ’ಗಳನ್ನಾಗಿ ಮಾಡಲಿದೆ ಎಂದು ರಾಹುಲ್ ಗಾಂಧಿ ಹೇಳಿದರು.

ಮಹಾರಾಷ್ಟ್ರದ ಅಮರಾವತಿಯಲ್ಲಿ ಬುಧವಾರ ಚುನಾವಣಾ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಅವರು, ‘ಭಾರತದ ಸಂವಿಧಾನವನ್ನು ಜಗತ್ತಿನ ಯಾವುದೇ ಶಕ್ತಿಗೂ ಬದಲಿಸಲು ಸಾಧ್ಯವಿಲ್ಲ’ ಎಂದರು.



ಪ್ರಚಾರ

ಪಶ್ಚಿಮ ಬಂಗಾಳದ ಕೃಷ್ಣಾನಗರದಲ್ಲಿ ಬುಧವಾರ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದ ಟಿಎಂಸಿ ಅಭ್ಯರ್ಥಿ ಮಹುವಾ ಮೊಯಿತ್ರಾ ಅವರು ಮಗುವೊಂದನ್ನು ಎತ್ತಿಕೊಂಡರು –ಪಿಟಿಐ ಚಿತ್ರ

ಚುನಾವಣಾ ಕಣದಲ್ಲಿ...

ಕನೌಜ್‌ನಿಂದ ಅಖಿಲೇಶ್ ಸ್ಪರ್ಧೆ

ಲಖನೌ (ಪಿಟಿಐ): ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದ ಕನೌಜ್ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ.

ಸಮಾಜವಾದಿ ಪಕ್ಷವು ಈ ಕ್ಷೇತ್ರಕ್ಕೆ ಸೋಮವಾರ ತೇಜ್ ಪ್ರತಾಪ್ ಯಾದವ್ ಅವರ ಹೆಸರನ್ನು ಘೋಷಿಸಿತ್ತು. ಆದರೆ ಬುಧವಾರ ತನ್ನ ನಿರ್ಧಾರ ಬದಲಿಸಿದೆ.

‘ರಾಷ್ಟ್ರೀಯ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಕನೌಜ್ ಕ್ಷೇತ್ರದ ಅಭ್ಯರ್ಥಿಯಾಗಿ ಗುರುವಾರ ಮಧ್ಯಾಹ್ನ 12 ಗಂಟೆಗೆ ನಾಮಪತ್ರ ಸಲ್ಲಿಸಲಿದ್ದಾರೆ’ ಎಂದು ಪಕ್ಷವು ‘ಎಕ್ಸ್’ ಖಾತೆಯಲ್ಲಿ ಪ್ರಕಟಿಸಿದೆ.

ಅಖಿಲೇಶ್ ಅವರು 2000ದಲ್ಲಿ ಕನೌಜ್ ಲೋಕಸಭಾ ಕ್ಷೇತ್ರದಿಂದ ಮೊದಲ ಬಾರಿ ಆಯ್ಕೆಯಾಗಿದ್ದರು. ಆ ಬಳಿಕ 2004 ಮತ್ತು 2009ರಲ್ಲೂ ಗೆದ್ದಿದ್ದರು. 2012ರಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿಯಾದ ಬಳಿಕ ಈ ಕ್ಷೇತ್ರವನ್ನು ತ್ಯಜಿಸಿದ್ದರು. ಆ ವೇಳೆ ನಡೆದ ಉಪಚುನಾವಣೆಯಲ್ಲಿ ಅಖಿಲೇಶ್ ಪತ್ನಿ, ಡಿಂಪಲ್ ಯಾದವ್ ಅವಿರೋಧವಾಗಿ ಆಯ್ಕೆಯಾಗಿದ್ದರು. 2014ರಲ್ಲಿ ಗೆದ್ದಿದ್ದ ಡಿಂಪಲ್, 2019ರ ಚುನಾವಣೆಯಲ್ಲಿ ಸೋತಿದ್ದರು.

ಅರುಣಾಚಲ: ಶೇ 74ರಷ್ಟು ಮರು ಮತದಾನ

ಇಟಾನಗರ (ಪಿಟಿಐ): ಅರುಣಾಚಲ ಪ್ರದೇಶದ ಎಂಟು ಮತಗಟ್ಟೆಗಳಲ್ಲಿ ಬುಧವಾರ ನಡೆದ ಲೋಕಸಭಾ ಚುನಾವಣೆಯ ಮರು ಮತದಾನದಲ್ಲಿ ಶೇ 74ರಷ್ಟು ಮತಗಳು ಚಲಾವಣೆಯಾಗಿವೆ ಎಂದು ಚುನಾವಣಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮತ ಚಲಾಯಿಸಿದವರ ಪ್ರಮಾಣವು ಇನ್ನಷ್ಟು ಏರಿಕೆಯಾಗುವ ಸಾಧ್ಯತೆ ಇದೆ ಎಂದು ಅವರು ಹೇಳಿದ್ದಾರೆ. ಬಾಮೆಂಗ್ ಲೋಕಸಭಾ ಕ್ಷೇತ್ರದ ಎಂಟು ಮತಗಟ್ಟೆಗಳಲ್ಲಿ ಮರು ಮತದಾನ ನಡೆಯಿತು.

ಮಾಧವಿ ಲತಾ ನಾಮಪತ್ರ ಸಲ್ಲಿಕೆ

ಹೈದರಾಬಾದ್ (ಪಿಟಿಐ): ಹೈದರಾಬಾದ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಾಧವಿ ಲತಾ ಅವರು ಬುಧವಾರ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಕೆಗೂ ಮುನ್ನ ನಡೆದ ರೋಡ್ ಶೋನಲ್ಲಿ ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರು ಪಾಲ್ಗೊಂಡರು.

ಬುಧವಾರ ಬೆಳಿಗ್ಗೆ ಲತಾ, ಠಾಕೂರ್ ಮತ್ತು ಬಿಜೆಪಿಯ ಇತರ ಮುಖಂಡರು ಐತಿಹಾಸಿಕ ಚಾರ್‌ಮಿನಾರ್ ಬಳಿಯ ಭಾಗ್ಯಲಕ್ಷ್ಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು. ಹೈದರಾಬಾದ್ ಕ್ಷೇತ್ರದಲ್ಲಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದ್ದು ಲತಾ ಅಲ್ಲದೆ, ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಒವೈಸಿ ಮತ್ತು ಬಿಆರ್‌ಎಸ್ ಪಕ್ಷದ ಜಿ.ಶ್ರೀನಿವಾಸ ಯಾದವ್ ಅವರು ಕಣದಲ್ಲಿದ್ದಾರೆ.

ರಾಮನವಮಿ ಮೆರವಣಿಗೆ ವೇಳೆ ಮಸೀದಿಯತ್ತ ಬಾಣ ಬಿಡುವಂತೆ ಸನ್ನೆ ಮಾಡಿದ್ದ ಮಾಧವಿ ಅವರು ವಿವಾದಕ್ಕೆ ಕಾರಣರಾಗಿದ್ದರು.

ಎಐಸಿಸಿ ಸದಸ್ಯ ರಾಜೀನಾಮೆ

ನವದೆಹಲಿ (ಪಿಟಿಐ): ದೆಹಲಿಯ ಮಾಜಿ ಸಚಿವ ಮತ್ತು ಎಐಸಿಸಿ ಸದಸ್ಯ ರಾಜ್‌ಕುಮಾರ್ ಚೌಹಾಣ್ ಅವರು ಬುಧವಾರ ಪಕ್ಷಕ್ಕೆ ರಾಜೀನಾಮೆ ನೀಡಿದರು. ಮಂಗಳವಾರ ನಡೆದಿದ್ದ ಸಭೆಯೊಂದರಲ್ಲಿ ರಾಜ್‌ಕುಮಾರ್ ಅವರು ಕಾಂಗ್ರೆಸ್‌ನ ದೆಹಲಿ ಉಸ್ತುವಾರಿ ದೀಪಕ್ ಬಬ್ರಿಯಾ ಜತೆ ವಾಗ್ವಾದ ನಡೆಸಿದ್ದರು. ಅದರ ಮರುದಿನ ರಾಜೀನಾಮೆ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

ಪಕ್ಷದ ಅಭ್ಯರ್ಥಿ ವಿರುದ್ಧವೇ ಕಾಂಗ್ರೆಸ್ ಪ್ರಚಾರ!

ಬನ್ಸ್ವಾರ (ಪಿಟಿಐ): ರಾಜಸ್ಥಾನದ ಆದಿವಾಸಿಗಳ ಪ್ರಾಬಲ್ಯದ ಬನ್ಸ್ವಾರ–ದುಂಗರ್‌ಪುರ್ ಲೋಕಸಭಾ ಕ್ಷೇತ್ರದಲ್ಲಿ ವಿಚಿತ್ರ ಪೈಪೋಟಿ ನಡೆಯುತ್ತಿದ್ದು, ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡದಂತೆ ಆ ಪಕ್ಷವೇ ಪ್ರಚಾರ ಮಾಡುತ್ತಿದೆ.

ಅದರ ಹಿನ್ನೆಲೆ ಕುತೂಹಲಕರವಾಗಿದೆ. ಕಾಂಗ್ರೆಸ್ ಪಕ್ಷವು ಅರವಿಂದ್ ದಾಮೋರ್ ಅವರನ್ನು ಕಣಕ್ಕಿಳಿಸಿತ್ತು. ಆದಾಗ್ಯೂ ಕೊನೆಯ ಗಳಿಗೆಯಲ್ಲಿ, ಸಾಕಷ್ಟು ಸಮಾಲೋಚನೆಯ ನಂತರ, ನಾಮಪತ್ರ ಹಿಂತೆಗೆದುಕೊಳ್ಳಲು ಇನ್ನು ಒಂದು ದಿನ ಬಾಕಿ ಇದೆ ಎನ್ನುವಾಗ ಕಾಂಗ್ರೆಸ್ ಪಕ್ಷವು, ಭಾರತ್ ಆದಿವಾಸಿ ಪಕ್ಷದ (ಬಿಎಪಿ) ಅಭ್ಯರ್ಥಿಯನ್ನು ಬೆಂಬಲಿಸಲು ತೀರ್ಮಾನಿಸಿತು.

ನಾಮಪತ್ರ ಹಿಂಪಡೆಯುವಂತೆ ಕಾಂಗ್ರೆಸ್ ತನ್ನ ಅಭ್ಯರ್ಥಿಗೆ ಸೂಚಿಸಿತು. ಆದರೆ, ಪಕ್ಷದ ನಿರ್ದೇಶನದ ಹೊರತಾಗಿಯೂ ದಾಮೋರ್ ಅವರು ನಾಮಪತ್ರ ಹಿಂಪಡೆಯುವ ಗಳಿಗೆ ಅಂತ್ಯವಾಗುವವರೆಗೆ ಎಲ್ಲೂ ಕಾಣಿಸಿಕೊಳ್ಳಲಿಲ್ಲ. ನಂತರ ಮಾಧ್ಯಮಗಳ ಮುಂದೆ ಪ್ರತ್ಯಕ್ಷವಾದ ದಾಮೋರ್ ನಡೆದ ಘಟನಾವಳಿಗಳ ಬಗ್ಗೆ ತನಗೇನೂ ಗೊತ್ತಿಲ್ಲ ಎಂದಿದ್ದಲ್ಲದೇ, ತಾನು ಚುನಾವಣಾ ಕಣದಲ್ಲಿ ಉಳಿಯುವುದಾಗಿ ಘೋಷಿಸಿದರು.

ಇದರಿಂದಾಗಿ ಬಿಜೆಪಿ ಮತ್ತು ಕಾಂಗ್ರೆಸ್–ಬಿಎಪಿ ನಡುವಣ ನೇರ ಹಣಾಹಣಿಯಾಗಬೇಕಿದ್ದ ಚುನಾವಣೆಯಲ್ಲಿ ಈಗ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ.

‘ಕಾಂಗ್ರೆಸ್ ಅಭ್ಯರ್ಥಿಗೆ (ದಾಮೋರ್) ಮತ ಹಾಕದಂತೆ ನಾವು ಜನರಿಗೆ ಮನವಿ ಮಾಡುತ್ತಿದ್ದೇವೆ’ ಎಂದು ಪಕ್ಷದ ಸ್ಥಳೀಯ ಮುಖಂಡರೊಬ್ಬರು ಹೇಳಿದರು.

‘1962ರ ಯುದ್ಧದ ವೇಳೆ ಆಭರಣ ದಾನ ಮಾಡಿದ್ದ ಇಂದಿರಾ ಗಾಂಧಿ’

ಪ್ರಧಾನಿ ಹತಾಶೆಗೊಂಡಿದ್ದಾರೆ: ಖರ್ಗೆ

ತಿರುವನಂತಪುರ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ಸೋಲು ಎದುರಾಗುವ ಆತಂಕದಿಂದ ಪ್ರಧಾನಿ ಅವರು ಹತಾಶೆಗೊಂಡಿದ್ದಾರೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.



ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಮೋದಿ ಅವರು ಚುನಾವಣೆಗಾಗಿ ‘ಮಂಗಳಸೂತ್ರ’ ವಿಷಯ ಪ್ರಸ್ತಾಪಿಸಿದ್ದಾರೆ. ಕಾಂಗ್ರೆಸ್ ಪಕ್ಷವು 55 ವರ್ಷಗಳ ಆಡಳಿತ ನಡೆಸಿದ್ದು, ಮಂಗಳಸೂತ್ರ ಕಸಿದುಕೊಳ್ಳುವ ಕೆಲಸ ಮಾಡಿದೆಯೇ?’ ಎಂದು ತಿರುಗೇಟು ನೀಡಿದರು.

‘ಕಾಂಗ್ರೆಸ್ ಪಕ್ಷದ ನಾಯಕರು ದೇಶಕ್ಕಾಗಿ ಸಾಕಷ್ಟು ತ್ಯಾಗಗಳನ್ನು ಮಾಡಿದ್ದಾರೆ. ಇಂದಿರಾ ಗಾಂಧಿ ಅವರು 1962ರ ಯುದ್ಧದ ಸಮಯದಲ್ಲಿ ತಮ್ಮ ಆಭರಣಗಳನ್ನು ದಾನ ಮಾಡಿದ್ದರು. ಮೋತಿಲಾಲ್ ನೆಹರೂ ಮತ್ತು ಜವಾಹರಲಾಲ್ ನೆಹರೂ ಅವರು ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿ ತಮ್ಮ ಮನೆಗಳನ್ನು ದಾನ ಮಾಡಿದ್ದರು’ ಎಂದು ಹೇಳಿದರು.

‘ದೇಶದಲ್ಲಿ ಕಾಂಗ್ರೆಸ್ ಪರ ಅಲೆಯಿದೆ. ಆದರೆ ಆ ಅಲೆಯು ಗುಪ್ತಗಾಮಿನಿಯಂತೆ ಇದ್ದು ಹೊರಕ್ಕೆ ಗೋಚರಿಸುತ್ತಿಲ್ಲ. ಅಂತಹ ಮತದಾರರ ಬಗ್ಗೆ ಮೋದಿ ಅವರಿಗೆ ಭಯವಿದೆ. ಇದೇ ಕಾರಣದಿಂದ ಕಾಂಗ್ರೆಸ್ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ’ ಎಂದು ಟೀಕಿಸಿದರು.

‘ನಿಮಗೆ 400 ಸ್ಥಾನಗಳನ್ನು ಗೆಲ್ಲುವ ವಿಶ್ವಾಸವಿದ್ದರೆ, ಭ್ರಷ್ಟರನ್ನು ಏಕೆ ಪಕ್ಷಕ್ಕೆ ಸೇರಿಸಿಕೊಳ್ಳುತ್ತಿದ್ದೀರಿ’ ಎಂದು ಖರ್ಗೆ ಪ್ರಶ್ನಿಸಿದರು.

‘ಯೋಧರ ಪತ್ನಿಯರ ಮಂಗಳಸೂತ್ರ ಕಸಿದದ್ದು ಯಾರು?’

ಉನ್ನಾವ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ‘ಮಂಗಳಸೂತ್ರ’ ಹೇಳಿಕೆ ಕುರಿತು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿರುವ ಸಮಾಜವಾದಿ ಪಕ್ಷದ ನಾಯಕಿ ಡಿಂಪಲ್ ಯಾದವ್, ‘ಪುಲ್ವಾಮಾದಲ್ಲಿ ಹತರಾದ ಸೈನಿಕರ ಪತ್ನಿಯರ ಮಂಗಳಸೂತ್ರವನ್ನು ಯಾರು ಕಿತ್ತುಕೊಂಡರು ಎಂಬುದಕ್ಕೆ ಬಿಜೆಪಿ ಉತ್ತರಿಸಬೇಕು’ ಎಂದು ಆಗ್ರಹಿಸಿದರು.

‘ಮಂಗಳಸೂತ್ರ ಬಗ್ಗೆ ಮಾತನಾಡುವವರು ಪುಲ್ವಾಮಾ ಘಟನೆ ಬಗ್ಗೆಯೂ ಮಾತನಾಡಬೇಕು. ಆ ಘಟನೆಯ ಹಿಂದೆ ಯಾವ ಕೈವಾಡವಿದೆ, ಘಟನೆಗೆ ಸಂಬಂಧಿಸಿದಂತೆ ಸರ್ಕಾರವು ಏನು ಕ್ರಮ ಕೈಗೊಂಡಿದೆ’ ಎಂಬ ಬಗ್ಗೆ ಉತ್ತರಿಸಬೇಕು ಎಂದು ಒತ್ತಾಯಿಸಿದರು.

2019ರ ಫೆಬ್ರುವರಿಯಲ್ಲಿ ಪುಲ್ವಾಮಾದಲ್ಲಿ ಸೈನಿಕರ ವಾಹನದ ಮೇಲೆ ನಡೆದಿದ್ದ ದಾಳಿಯಲ್ಲಿ ಸಿಆರ್‌ಪಿಎಫ್‌ನ 40ಕ್ಕೂ ಅಧಿಕ ಯೋಧರು ಮೃತಪಟ್ಟಿದ್ದರು.

ಚುಟುಕು

ಪ್ರಚಾರದ ವೇಳೆ ಮೂರ್ಛೆ ಹೋದ ಗಡ್ಕರಿ

ಯವತ್ಮಾಲ್ (ಮಹಾರಾಷ್ಟ್ರ) (ಪಿಟಿಐ) : ಮಹಾರಾಷ್ಟ್ರದ ಯವತ್ಮಾಲ್ ಜಿಲ್ಲೆಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡುತ್ತಿದ್ದಾಗ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಮೂರ್ಛೆ ಹೋದರು.

ಯವತ್ಮಾಲ್ –ವಾಶಿಂ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಪುಸಾದ್‌ನಲ್ಲಿ ವೇದಿಕೆ ಮೇಲೆ ಭಾಷಣ ಮಾಡುತ್ತಿದ್ದಾಗ ಸಚಿವರು ಮೂರ್ಛೆ ಹೋಗಿದ್ದು, ಕೂಡಲೇ ಭದ್ರತಾ ಸಿಬ್ಬಂದಿ ಅವರನ್ನು ಹಿಡಿದುಕೊಂಡಿದ್ದಾರೆ. ಕೆಲ ನಿಮಿಷಗಳ ನಂತರ ಚೇತರಿಸಿಕೊಂಡ ಅವರು ಭಾಷಣ ಮುಂದುವರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರ‍್ಯಾಲಿಯಲ್ಲಿ ಮಾತನಾಡುತ್ತಿದ್ದಾಗ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಮೂರ್ಛೆ ಹೋದರು –ಪಿಟಿಐ ಚಿತ್ರ

‘ಬಿಸಿಲ ಧಗೆಗೆ ಅಸ್ವಸ್ಥಗೊಂಡಿದ್ದೆ. ಈಗ ನಾನು ಸಂಪೂರ್ಣವಾಗಿ ಚೇತರಿಸಿಕೊಂಡಿದ್ದೇನೆ. ಚುನಾವಣಾ ರ‍್ಯಾಲಿಗಳಲ್ಲಿ ಪಾಲ್ಗೊಳ್ಳುತ್ತೇನೆ’ ಎಂದು ಗಡ್ಕರಿ ಅವರು ‘ಎಕ್ಸ್’ ಮಾಧ್ಯಮದಲ್ಲಿ ಹೇಳಿದ್ದಾರೆ.

ಅಮೇಠಿ: ವಾದ್ರಾ ಪರ ಪೋಸ್ಟರ್

ಅಮೇಠಿ (ಪಿಟಿಐ): ಉತ್ತರ ಪ್ರದೇಶದ ಅಮೇಠಿ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸ್ಪರ್ಧಿಸುವ ಬಗ್ಗೆ ಇನ್ನೂ ಅನಿಶ್ಚಿತತೆ ಮುಂದುವರಿದಿದ್ದು, ಈ ನಡುವೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಪತಿ ರಾಬರ್ಟ್ ವಾದ್ರಾ ಅವರಿಗೆ ಬೆಂಬಲ ಸೂಚಿಸಿ ಕ್ಷೇತ್ರದ ವಿವಿಧೆಡೆ ಪೋಸ್ಟರ್‌ಗಳನ್ನು ಹಚ್ಚಲಾಗಿದೆ.

‘ಈ ಬಾರಿ ರಾಬರ್ಟ್ ವಾದ್ರಾ ಅವರು ಅಭ್ಯರ್ಥಿಯಾಗಬೇಕೆಂದು ಅಮೇಠಿಯ ಜನರು ಬಯಸಿದ್ದಾರೆ’ ಎಂಬ ಬರಹವಿರುವ ಪೋಸ್ಟರ್‌ಗಳನ್ನು ಕಾಂಗ್ರೆಸ್ ಕಚೇರಿ ಸೇರಿದಂತೆ ವಿವಿಧೆಡೆ ಹಚ್ಚಲಾಗಿದೆ. ಜಿಲ್ಲಾಡಳಿತ ಸಿಬ್ಬಂದಿ ಈ ಪೋಸ್ಟರ್‌ಗಳನ್ನು ತೆರವುಗೊಳಿಸಿದ್ದಾರೆ.

ಜನರಲ್ಲಿ ಗೊಂದಲ ಮೂಡಿಸುವ ಸಲುವಾಗಿ ವಿರೋಧಿಗಳು ಪೋಸ್ಟರ್‌ಗಳನ್ನು ಹಚ್ಚಿದ್ದಾರೆ ಎಂದು ಸ್ಥಳೀಯ ಕಾಂಗ್ರೆಸ್ ಮುಖಂಡರು ಆರೋಪಿಸಿದ್ದಾರೆ. ಈ ಕ್ಷೇತ್ರದಲ್ಲಿ ಸ್ಪರ್ಧಿಸುವ ಇಚ್ಛೆಯನ್ನು ವಾದ್ರಾ ಅವರು ಈಚೆಗೆ ವ್ಯಕ್ತಪಡಿಸಿದ್ದರು.

ಎಂಥಾ ಮಾತು!

ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಗೆ ಕೇರಳದಲ್ಲಿ ಆಡಳಿತಾರೂಢ ಸಿಪಿಎಂ ಮತ್ತು ಕಾಂಗ್ರೆಸ್ ಬೆಂಬಲ ನೀಡುತ್ತಿವೆ. ಪಿಎಫ್‌ಐನ ರಾಜಕೀಯ ಸಂಘಟನೆಯಾದ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾವು (ಎಸ್‌ಡಿಪಿಐ) ಕಾಂಗ್ರೆಸ್‌ಗೆ ಬಹಿರಂಗವಾಗಿಯೇ ಬೆಂಬಲ ಸೂಚಿಸಿದೆ. ಪಿಎಫ್‌ಐನಂತಹ ಸಂಘಟನೆಗಳಿಂದ ದೇಶವನ್ನು ರಕ್ಷಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಕಾರ್ಯಪ್ರವೃತ್ತರಾಗಿದ್ದಾರೆ. ಕಮ್ಯುನಿಸ್ಟ್ ಮತ್ತು ಕಾಂಗ್ರೆಸ್ ಆಡಳಿತದಲ್ಲಿ ಕೇರಳದಲ್ಲಿ ಭಯೋತ್ಪಾದಕರಿಗೆ ರಕ್ಷಣೆ ಸಿಗಲಿದೆ

ಅಮಿತ್ ಶಾ, ಕೇಂದ್ರ ಗೃಹಸಚಿವ

ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯು ಜನಪರವಾಗಿದ್ದು, ಹತಾಶೆಯಿಂದ ಕೋಮು ಉದ್ವಿಗ್ನತೆಯನ್ನು ಸೃಷ್ಟಿಸುತ್ತಿರುವ ಬಿಜೆಪಿಗೆ ಆತಂಕವನ್ನು ಉಂಟು ಮಾಡಿದೆ. ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ, ಎಂಎಸ್‌ಪಿಗೆ ಕಾನೂನಿನ ಖಾತರಿ ಸೇರಿದಂತೆ ವಿವಿಧ ಭರವಸೆಗಳನ್ನು ನೀಡುವ ಮೂಲಕ ಕಾಂಗ್ರೆಸ್ ಒಳ್ಳೆಯ ಕೆಲಸ ಮಾಡಿದೆ

ಮೆಹಬೂಬಾ ಮುಫ್ತಿ, ಪಿಡಿಪಿ ಅಧ್ಯಕ್ಷೆ

ಕ್ಷೇತ್ರ ಮಹಾತ್ಮೆ

ಪಶ್ಚಿಮ ಬಂಗಾಳದ ಪ್ರತಿಷ್ಠಿತ ಕ್ಷೇತ್ರಗಳಲ್ಲೊಂದಾದ ದಾರ್ಜಿಲಿಂಗ್ ಲೋಕಸಭಾ ಕ್ಷೇತ್ರವು ಈ ಬಾರಿ ತ್ರಿಕೋನ ಸ್ಪರ್ಧೆಗೆ ಅಣಿಯಾಗಿದೆ.

ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಪಕ್ಷವು ಗೋಪಾಲ್ ಲಾಮಾ ಅವರನ್ನು ಕಣಕ್ಕಿಳಿಸಿದರೆ, ಬಿಜೆಪಿಯು ಕಳೆದ ಬಾರಿ ಇಲ್ಲಿಂದ ಗೆದ್ದಿದ್ದ ರಾಜು ಬಿಸ್ತಾ ಅವರನ್ನು ಪ್ರತಿಸ್ಪರ್ಧಿಯಾಗಿಸಿದೆ. ಕಾಂಗ್ರೆಸ್, ಮುನೀಷ್ ತಮಾಂಗ್ ಅವರನ್ನು ಅಖಾಡಕ್ಕಿಳಿಸಿದೆ. ಮುನೀಷ್ ಅವರಿಗೆ ಟಿಕೆಟ್ ನೀಡಿದ್ದಕ್ಕೆ ಅಸಮಾಧಾನಗೊಂಡಿದ್ದ ಕಾಂಗ್ರೆಸ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಹಾಗೂ ಗೋರ್ಖಾ ಮುಖಂಡ ಬಿನೋಯ್ ತಮಾಂಗ್ ಅವರು ಬಿಜೆಪಿ ಅಭ್ಯರ್ಥಿಗೆ ಬೆಂಬಲ ಘೋಷಿಸಿದ್ದರು. ಬಳಿಕ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿತ್ತು. ರಾಜು ಬಿಸ್ತಾ ಅವರು ಬಿಜೆಪಿ ರಾಷ್ಟ್ರೀಯ ವಕ್ತಾರರಾಗಿಯೂ ಕಾರ್ಯನಿರ್ವಹಿಸಿದವರು. 2019ರ ಚುನಾವಣೆಯಲ್ಲಿ ಇವರು 4,13,443 ಮತಗಳ ಅಂತರದಿಂದ ತೃಣಮೂಲ ಕಾಂಗ್ರೆಸ್‌ನ ಅಮರ್ ಸಿಂಗ್ ರಾಯ್ ಅವರನ್ನು ಪರಾಭವಗೊಳಿಸಿದ್ದರು. 2009 ರಿಂದಲೂ ಈ ಕ್ಷೇತ್ರ ಬಿಜೆಪಿಯ ಹಿಡಿತದಲ್ಲಿದೆ. ಭಾರತೀಯ ಗೋರ್ಖಾ ಪರಿಸಂಘ್‌ನ ಮಾಜಿ ರಾಷ್ಟ್ರೀಯ ಅಧ್ಯಕ್ಷ ಮುನೀಷ್ ಅವರು, ಸ್ಥಳೀಯವಾಗಿಯೂ ಪ್ರಭಾವಿ ಮುಖಂಡರಾಗಿದ್ದಾರೆ. ಇವರು ಈಚೆಗೆ ಕಾಂಗ್ರೆಸ್ ಸೇರಿದ್ದರು. ಗೋಪಾಲ್ ಲಾಮಾ ಅವರು, ದಾರ್ಜಿಲಿಂಗ್‌ನ ಹೆಚ್ಚುವರಿ ಜಿಲ್ಲಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. ನಿವೃತ್ತಿ ಬಳಿಕ ರಾಜಕೀಯ ಕ್ಷೇತ್ರಕ್ಕೆ ಕಾಲಿರಿಸಿದ್ದರು.

ಮುಖಾಮುಖಿ

ಅಮರಾವತಿ

ನವನೀತ್ ಕೌರ್ ರಾಣಾ
(ಬಿಜೆಪಿ)

ಮಹಾರಾಷ್ಟ್ರದ ಅಮರಾವತಿ ಲೋಕಸಭಾ ಕ್ಷೇತ್ರದಿಂದ 2019ರಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ ಗೆದ್ದಿದ್ದ ನವನೀತ್ ಕೌರ್ ರಾಣಾ ಅವರು, ಈ ಬಾರಿ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಕಳೆದ ಚುನಾವಣೆಯಲ್ಲಿ ನವನೀತ್ ಅವರು 36,951 ಮತಗಳ ಅಂತರದಿಂದ ಶಿವಸೇನಾದ ಆನಂದ ರಾವ್ ಅಡ್ಸುಲ್ ಅವರನ್ನು ಸೋಲಿಸಿದ್ದರು. ರಾಜಕೀಯ ಪ್ರವೇಶಿಸುವುದಕ್ಕೂ ಮೊದಲು ನವನೀತ್ ಅವರು ತೆಲುಗು ಸಿನಿಮಾ ರಂಗದಲ್ಲಿ ನಟಿಯಾಗಿದ್ದರು. 2014ರಲ್ಲಿ ಇದೇ ಕ್ಷೇತ್ರದಿಂದ ಎನ್‌ಸಿಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದರು. ಇವರ ಪತಿ ರವಿ ರಾಣಾ ಅವರು ಶಾಸಕರಾಗಿದ್ದಾರೆ. 2022ರಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಉದ್ಧವ್ ಠಾಕ್ರೆ ಅವರ ಮನೆಯ ಮುಂದೆ ಹನುಮಾನ್ ಚಾಲೀಸಾ ಪಠಿಸಿ ಪ್ರತಿಭಟಿಸಿದ್ದಕ್ಕೆ, ನವನೀತ್ ಮತ್ತು ರವಿ ರಾಣಾ ಅವರನ್ನು ಪೊಲೀಸರು ಬಂಧಿಸಿದ್ದರು. ನವನೀತ್ ಅವರು ಈಚೆಗೆ ಬಿಜೆಪಿಗೆ ಸೇರಿದ್ದರು.

v/s

ಬಲವಂತ್ ಬಸವಂತ್ ವಾಂಖಡೆ
(ಕಾಂಗ್ರೆಸ್)

ಅಮರಾವತಿಯಲ್ಲಿ ನವನೀತ್ ಕೌರ್ ರಾಣಾ ವಿರುದ್ಧ ಕಾಂಗ್ರೆಸ್ ಪಕ್ಷವು ಶಾಸಕ ಬಲವಂತ್ ಬಸವಂತ್ ವಾಂಖಡೆ ಅವರನ್ನು ಕಣಕ್ಕಿಳಿಸಿದೆ. ಬಲವಂತ್, 2019ರಲ್ಲಿ ದರ್ಯಾಪುರ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಒಂದು ಕಾಲದಲ್ಲಿ ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದ ಈ ಕ್ಷೇತ್ರವನ್ನು ಮಾಜಿ ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಅವರು ಪ್ರತಿನಿಧಿಸಿದ್ದರು. ಶಿವಸೇನಾ ಉದ್ಧವ್ ಠಾಕ್ರೆ ಬಣ ಮತ್ತು ಎನ್‌ಸಿಪಿ ಶರದ್ ಪವಾರ್ ಬಣದ ಬೆಂಬಲವಿರುವುದು ಬಲವಂತ್ ಅವರ ಗೆಲ್ಲುವ ವಿಶ್ವಾಸವನ್ನು ಹೆಚ್ಚಿಸಿದೆ. ನಿರುದ್ಯೋಗ, ಬೆಲೆ ಏರಿಕೆ ವಿಚಾರಗಳನ್ನೇ ಪ್ರಮುಖ ಚುನಾವಣಾ ವಿಷಯವಾಗಿಸಿ ಬಲವಂತ್ ಅವರು ಮತಯಾಚಿಸುತ್ತಿದ್ದಾರೆ. ಸ್ಥಳೀಯವಾಗಿ ಪ್ರಭಾವಿಯಾಗಿರುವ ಅವರು, ಕ್ಷೇತ್ರದಲ್ಲಿ ಚಿರಪರಿಚಿತರಾಗಿದ್ದಾರೆ.

ಮುಂಬೈ ಧಾರಣೆ

ಶೇಂಗಾ

24-4-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1520 (1520)
ಒಂದು ವಾರದ ಡೆಲಿವರಿ	1515 (1515)
ಸೋಯಾ ಕಚ್ಚಾ	890 (890)
ಪಾಮ್ ವಾರದ ಡೆಲಿವರಿ	923 (933)
ಸೂರ್ಯಕಾಂತಿ ಎಣ್ಣೆ ಕಚ್ಚಾ	870 (870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹71,650 (71,500)
ಬೆಳ್ಳಿ ಕೆ.ಜಿ **₹80,800** (80,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8000-9300
ತಿಪಟೂರು	₹8050-9800



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,368
ಇಂದಿನ ಅಂತ್ಯ	22,402
▲	34
ದಿನದ ಗರಿಷ್ಠ	22,476

ವಿನಿಮಯ ದರ

$ ಡಾಲರ್	83.30
£ ಪೌಂಡ್	103.57
€ ಯೂರೊ	89.05
¥ ಯೆನ್ (100ಕ್ಕೆ)	54

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹438

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1510 (1510)
ಸೋಯಾ (ರಿಫೈನ್ಡ್)	₹930 (935)
ಸೂರ್ಯಕಾಂತಿ (ರಿಫೈನ್ಡ್)	₹930 (935)
ಪಾಮೊಲಿನ್	₹925 (935)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹272-463
ದ್ವಿತಳಿ (ಬಿ.ವಿ)	₹335-578

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹177
ಆರ್‌ಎಸ್‌ಎಸ್-5	₹171
ಗುಡ್ ಲಾಟ್	₹161

(ಪ್ರತಿ ಕೆ.ಜಿಗೆ)

ಔಷಧ ಉತ್ಪನ್ನ ರಫ್ತು ಹೆಚ್ಚಳ

₹2.32 ಲಕ್ಷ ಕೋಟಿ ಮೌಲ್ಯದ ಉತ್ಪನ್ನ ರವಾನೆ

ನವದೆಹಲಿ (ಪಿಟಿಐ): 2023–24ನೇ ಆರ್ಥಿಕ ವರ್ಷದಲ್ಲಿ ಭಾರತದಿಂದ ಒಟ್ಟು ₹2.32 ಲಕ್ಷ ಕೋಟಿ ಮೌಲ್ಯದ ಔಷಧ ಉತ್ಪನ್ನಗಳನ್ನು ರಫ್ತು ಮಾಡಲಾಗಿದೆ.

2022–23ರಲ್ಲಿ ₹2.11 ಲಕ್ಷ ಕೋಟಿ ಮೌಲ್ಯದ ಉತ್ಪನ್ನಗಳನ್ನು ರಫ್ತು ಮಾಡಲಾಗಿತ್ತು. ಇದಕ್ಕೆ ಹೋಲಿಸಿದರೆ ಶೇ9.67ರಷ್ಟು ಹೆಚ್ಚಳವಾಗಿದೆ. ಮಾರ್ಚ್‌ನಲ್ಲಿ ರಫ್ತು ಪ್ರಮಾಣವು ಶೇ12ರಷ್ಟು ಏರಿಕೆಯಾಗಿದ್ದು, ₹23,324 ಕೋಟಿ ಆಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಅಂಕಿ–ಅಂಶಗಳು ತಿಳಿಸಿವೆ.

ಭಾರತದಿಂದ ಪ್ರಮುಖವಾಗಿ ಅಮೆರಿಕ, ಬ್ರಿಟನ್, ನೆದರ್ಲೆಂಡ್, ದಕ್ಷಿಣ ಆಫ್ರಿಕಾ ಮತ್ತು ಬ್ರೆಜಿಲ್‌ಗೆ ಹೆಚ್ಚಿನ ಪ್ರಮಾಣದಲ್ಲಿ ಔಷಧ ಉತ್ಪನ್ನಗಳ ರಫ್ತಾಗುತ್ತದೆ. ಈ ಪೈಕಿ ಅಮೆರಿಕಕ್ಕೆ ಶೇ 31ರಷ್ಟು ಉತ್ಪನ್ನಗಳನ್ನು ರಫ್ತು ಮಾಡಲಾಗುತ್ತದೆ. ನಂತರದ ಸ್ಥಾನದಲ್ಲಿ ಬ್ರಿಟನ್ ಮತ್ತು ನೆದರ್ಲೆಂಡ್ ಇವೆ ಎಂದು ವಿವರಿಸಿದೆ.

ಹಿಂದಿನ ಆರ್ಥಿಕ ವರ್ಷದಲ್ಲಿ ಮಾಂಟೆನೆಗ್ರೊ, ದಕ್ಷಿಣ ಸುಡಾನ್, ಚಾಡ್, ಕಮರೂನ್, ಲಾಟ್ವಿಯಾ, ಐರ್ಲೆಂಡ್, ಸ್ವೀಡನ್, ಪೆರು ಮತ್ತು ಇಥಿಯೋಪಿಯಾ ಈ ರಫ್ತು ಪಟ್ಟಿಗೆ ಹೊಸದಾಗಿ ಸೇರ್ಪಡೆಯಾಗಿವೆ.

ದೇಶದಲ್ಲಿ 2022–23ರಲ್ಲಿ ಔಷಧ ಉತ್ಪನ್ನಗಳ ವ್ಯಾಪಾರವು ₹4.16 ಲಕ್ಷ ಕೋಟಿ ಆಗಿದೆ. ಮಾರುಕಟ್ಟೆ ವಿಸ್ತರಣೆ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆಯಿಂದಾಗಿ 2030ರ ವೇಳೆಗೆ ಈ ವ್ಯಾಪಾರವು ₹10 ಲಕ್ಷ ಕೋಟಿ ದಾಟಲಿದೆ ಎಂದು ಮಾರುಕಟ್ಟೆ ತಜ್ಞರು ಅಂದಾಜಿಸಿದ್ದಾರೆ.

ದೇಶದ ಔಷಧ ಉತ್ಪನ್ನಗಳ ರಫ್ತು ಮೌಲ್ಯವು ಮಾಸಿಕ ಸರಾಸರಿ ₹25 ಸಾವಿರ ಕೋಟಿ ಇದೆ. ಜಗತ್ತಿನಲ್ಲಿ ಭಾರತವು ರಫ್ತಿನಲ್ಲಿ ಮುಂಚೂಣಿಯಲ್ಲಿದ್ದು, 60 ಸಾವಿರಕ್ಕೂ ಹೆಚ್ಚು ಜೆನರಿಕ್ ಔಷಧಗಳನ್ನು ಉತ್ಪಾದನೆ ಮಾಡಲಾಗುತ್ತಿದೆ ಎಂದು ತಿಳಿಸಿದೆ.

ದೇಶದಲ್ಲಿ ಔಷಧ ಉತ್ಪನ್ನಗಳ ಕೈಗಾರಿಕೆಯು ಮೂರನೇ ಅತಿದೊಡ್ಡ ವಲಯವಾಗಿದೆ. ಜಾಗತಿಕ ಮಟ್ಟದಲ್ಲಿ ಹದಿಮೂರನೇ ಸ್ಥಾನ ಪಡೆದಿದೆ. ದೇಶೀಯವಾಗಿ ಔಷಧ ತಯಾರಿಕೆ ವಲಯಕ್ಕೆ ಉತ್ತೇಜನ ನೀಡಲು ಕೇಂದ್ರ ಸರ್ಕಾರ ಮುಂದಾಗಿದೆ. ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯ ಮೂಲಕ ಅಗತ್ಯ ಔಷಧಗಳ ಮತ್ತು ಜೆನರಿಕ್ ಔಷಧಗಳ ತಯಾರಿಕೆಗೆ ಪ್ರೋತ್ಸಾಹ ನೀಡುತ್ತಿದೆ.

ಸತತ ನಾಲ್ಕನೇ ದಿನವೂ ಸೆನ್ಸೆಕ್ಸ್, ನಿಫ್ಟಿ ಏರಿಕೆ

₹8 ಲಕ್ಷ ಕೋಟಿ ಸಂಪತ್ತು ವೃದ್ಧಿ

ನವದೆಹಲಿ (ಪಿಟಿಐ): ಮಧ್ಯಪ್ರಾಚ್ಯದಲ್ಲಿ ತಲೆದೋರಿದ್ದ ಉದ್ವಿಗ್ನತೆಯು ತುಸು ತಗ್ಗಿರುವುದರಿಂದ ದೇಶದ ಷೇರುಪೇಟೆಗಳಲ್ಲಿ ಬುಧವಾರವೂ ಸಕಾರಾತ್ಮಕ ವಹಿವಾಟು ನಡೆಯಿತು.

ಸತತ ನಾಲ್ಕು ದಿನಗಳ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,363 ಅಂಶ (ಶೇ 1.88) ಹೆಚ್ಚಳವಾಗಿದೆ. ಇದರಿಂದ ಹೂಡಿಕೆದಾರರ ಸಂಪತ್ತು ₹8.48 ಲಕ್ಷ ಕೋಟಿಗೆ ಏರಿಕೆಯಾಗಿದೆ. ಬಿಎಸ್‌ಇ ಕಂಪನಿಗಳ ಒಟ್ಟು ಮೌಲ್ಯವು ₹401 ಲಕ್ಷ ಕೋಟಿ ದಾಟಿದೆ.

ಸೆನ್ಸೆಕ್ಸ್ 114 ಅಂಶ ಏರಿಕೆ ಕಂಡು 73,852ಕ್ಕೆ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 34 ಅಂಶ ಏರಿಕೆಯಾಗಿ 22,402ಕ್ಕೆ ಕೊನೆಗೊಂಡಿತು.

ಜೆಎಸ್‌ಡಬ್ಲ್ಯು ಸ್ಟೀಲ್, ಟಾಟಾ ಸ್ಟೀಲ್, ಪವರ್ ಗ್ರಿಡ್, ಕೋಟಕ್ ಮಹೀಂದ್ರ ಬ್ಯಾಂಕ್, ಅಲ್ಟ್ರಾಟೆಕ್ ಸಿಮೆಂಟ್, ಎನ್‌ಟಿಪಿಸಿ, ಬಜಾಜ್ ಫೈನಾನ್ಸ್ ಮತ್ತು ಏಷ್ಯನ್ ಪೇಂಟ್ಸ್ ಷೇರಿನ ಮೌಲ್ಯ ಏರಿಕೆಯಾಗಿದೆ.

ಟೆಕ್ ಮಹೀಂದ್ರ, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್), ಮಾರುತಿ, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಟೈಟನ್ ಷೇರಿನ ಮೌಲ್ಯ ಇಳಿಕೆ ಕಂಡಿದೆ. ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆದಿದೆ.

ಗಳಿಕೆ ಕಂಡ ಕಂಪನಿಗಳು

3.72%	ಜೆಎಸ್‌ಡಬ್ಲ್ಯು ಸ್ಟೀಲ್
2.73%	ಟಾಟಾ ಸ್ಟೀಲ್
1.75%	ಪವರ್‌ಗ್ರಿಡ್
1.64%	ಕೋಟಕ್ ಬ್ಯಾಂಕ್
1.48%	ಅಲ್ಟ್ರಾಟೆಕ್ ಸಿಮೆಂಟ್

ಇಳಿಕೆ ಕಂಡ ಕಂಪನಿಗಳು

1.17%	ಟೆಕ್ ಮಹೀಂದ್ರ
1.11%	ಟಿಸಿಎಸ್
0.72%	ಮಾರುತಿ ಸುಜುಕಿ
0.68%	ಇನ್ಫೊಸಿಸ್
0.61%	ರಿಲಯನ್ಸ್

ಕಚ್ಚಾ ತೈಲದ ಬೆಲೆ ಏರಿಕೆ



ಲಂಡನ್ (ರಾಯಿಟರ್ಸ್): ಕಳೆದ ವಾರ ಅಮೆರಿಕದ ಕಚ್ಚಾ ತೈಲದ ದಾಸ್ತಾನಿನಲ್ಲಿ ಕುಸಿತ ಕಂಡಿದ್ದರಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬುಧವಾರ ಕಚ್ಚಾ ತೈಲದ ಬೆಲೆಯು ಏರುಗತಿ ಕಂಡಿದೆ.

ಬ್ರೆಂಟ್ ಕಚ್ಚಾ ತೈಲ ಶೇ 0.29ರಷ್ಟು ಏರಿಕೆಯಾಗಿ ಪ್ರತಿ ಬ್ಯಾರೆಲ್‌ಗೆ 88.68 (₹7,389) ಡಾಲರ್ ತಲುಪಿದೆ. ಅಮೆರಿಕದ ವೆಸ್ಟ್ ಟೆಕ್ಸಾಸ್ ಇಂಟರ್‌ಮೀಡಿಯೆಟ್ ಕಚ್ಚಾ ತೈಲ ದರವು ಶೇ 0.31 ಹೆಚ್ಚಳವಾಗಿ ಪ್ರತಿ ಬ್ಯಾರೆಲ್ 83.62 ಡಾಲರ್‌ಗೆ (₹6,968) ಮುಟ್ಟಿದೆ.

ಏಪ್ರಿಲ್ 19ಕ್ಕೆ ಕೊನೆಗೊಂಡ ವಾರದಲ್ಲಿ ಅಮೆರಿಕದ ಕಚ್ಚಾ ದಾಸ್ತಾನು ಅಂದಾಜು 30 ಲಕ್ಷ ಬ್ಯಾರೆಲ್‌ಗೆ ಕುಸಿದಿತ್ತು. ಮಧ್ಯಪ್ರಾಚ್ಯ ಬಿಕ್ಕಟ್ಟು ಕೂಡ ಬೆಲೆ ಏರಿಕೆಗೆ ಕಾರಣವಾಗಲಿದೆ ಎಂದು ಮಾರುಕಟ್ಟೆ ಮೂಲಗಳು ತಿಳಿಸಿವೆ.

'ಈ ವರ್ಷದ ಅಂತ್ಯದ ವೇಳೆಗೆ ಕಚ್ಚಾ ತೈಲ ದರವು ಪ್ರತಿ ಬ್ಯಾರೆಲ್‌ಗೆ ₹7,449 ಮುಟ್ಟುವ ಸಾಧ್ಯತೆಯಿದೆ' ಎಂದು ಸಿಂಗಪುರದ ಯುನೈಟೆಡ್ ಓವರ್‌ಸೀಸ್ ಬ್ಯಾಂಕ್‌ನ ಮಾರುಕಟ್ಟೆಗಳ ಮುಖ್ಯಸ್ಥ ಹೆಂಗ್ ಕೂನ್ ಹೌ ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

20ನೇ ವಾರ್ಷಿಕ ಪುಣ್ಯಸ್ಮರಣೆ

ಕೆ. ಗುರುಮೂರ್ತಿ
03.06.1930-25.04.2004
ನೀವು ನಮ್ಮನ್ನಗಲಿದರೂ ನಿಮ್ಮ ನೆನಪು ನಮ್ಮಲ್ಲಿ ಎಂದೆಂದಿಗೂ ಚಿರಸ್ಥಾಯಿ.
ಸದಾ ನಿಮ್ಮ ಸ್ಮರಣೆಯಲ್ಲಿರುವ
ಡಾ. ಜಿ.ವನಜಾಕ್ಷಿ ಮತ್ತು ಕುಟುಂಬ,
ಶ್ರೀಮತಿ ಜಿ.ಶೀಲಾ ಮತ್ತು ಕುಟುಂಬ

ಎಕ್ಸಿಸ್ ಬ್ಯಾಂಕ್‌ಗೆ ₹7,129 ಕೋಟಿ ಲಾಭ

ಮುಂಬೈ (ಪಿಟಿಐ): ಖಾಸಗಿ ವಲಯದ ಎಕ್ಸಿಸ್ ಬ್ಯಾಂಕ್ 2023–24ನೇ ಹಣಕಾಸು ವರ್ಷದ ಕೊನೆಯ ತ್ರೈಮಾಸಿಕದಲ್ಲಿ ಒಟ್ಟು ₹7,129 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ₹5,728 ಕೋಟಿ ಲಾಭ ಗಳಿಸಿತ್ತು ಎಂದು ಬ್ಯಾಂಕ್ ಷೇರುಪೇಟೆಗೆ ತಿಳಿಸಿದೆ.

ವರಮಾನವು ₹28,758 ಕೋಟಿಯಿಂದ ₹35,990 ಕೋಟಿಗೆ ಏರಿಕೆಯಾಗಿದೆ. ಬ್ಯಾಂಕ್‌ನ ಬಡ್ಡಿ ವರಮಾನವು ಶೇ 11ರಷ್ಟು ಹೆಚ್ಚಳವಾಗಿ, ₹13,089 ಕೋಟಿಗೆ ಮುಟ್ಟಿದೆ. 2023–24ನೇ ಪೂರ್ಣ ಆರ್ಥಿಕ ವರ್ಷದಲ್ಲಿ ₹24,861 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಅವಧಿಗೆ ಹೋಲಿಸಿದರೆ ಲಾಭದಲ್ಲಿ ಶೇ160ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಬ್ಯಾಂಕ್‌ನ ವಸೂಲಾಗದ ಸಾಲದ ಪ್ರಮಾಣವು (ಎನ್‌ಪಿಎ) ಶೇ2.02ರಿಂದ ಶೇ1.43ಕ್ಕೆ ಇಳಿಕೆಯಾಗಿದೆ. ಮಾರ್ಚ್ ತ್ರೈಮಾಸಿಕದಲ್ಲಿ ಹೊಸದಾಗಿ 12.40 ಲಕ್ಷ ಕ್ರೆಡಿಟ್ ಕಾರ್ಡ್‌ಗಳನ್ನು ವಿತರಿಸಿದೆ.

ಕೋಟಕ್ ಬ್ಯಾಂಕ್‌ಗೆ ನಿರ್ಬಂಧ

ಒಂದನೇ ಪುಟದಿಂದ...

'ಮುಂದಿನ ದಿನಗಳಲ್ಲಿ ಬ್ಯಾಂಕ್‌ನ ಡಿಜಿಟಲ್ ಬ್ಯಾಂಕಿಂಗ್ ಮತ್ತು ಪೇಮೆಂಟ್ ವ್ಯವಸ್ಥೆಯಲ್ಲಿ ತಾಂತ್ರಿಕ ಸಮಸ್ಯೆ ತಲೆದೋರದಂತೆ ಮುಂಜಾಗ್ರತೆ ವಹಿಸಬೇಕಿದೆ. ಹಾಗಾಗಿ, ಗ್ರಾಹಕರ ಹಿತದೃಷ್ಟಿಯಿಂದ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949ರ ಸೆಕ್ಷನ್ 35ಎ ಅನ್ವಯ ಈ ಕ್ರಮಕೈಗೊಳ್ಳಲಾಗಿದೆ' ಎಂದು ತಿಳಿಸಿದೆ.

ಸ್ಥಗಿತಗೊಂಡಿದ್ದ ಡಿಜಿಟಲ್ ಸೇವೆ: ಕೋಟಕ್ ಬ್ಯಾಂಕ್‌ನ ಮಾಹಿತಿ ತಂತ್ರಜ್ಞಾನ ಮೂಲ ಸೌಕರ್ಯ ಮತ್ತು ಅಪಾಯ ನಿರ್ವಹಣಾ ಚೌಕಟ್ಟು ಸದೃಢವಾಗಿಲ್ಲ ಎಂದು ಆರ್‌ಬಿಐ ಹೇಳಿದೆ.

ಹಾಗಾಗಿ, ಕೋರ್ ಬ್ಯಾಂಕಿಂಗ್ ಸಲ್ಯೂಷನ್ಸ್ (ಸಿಬಿಎಸ್), ಆನ್‌ಲೈನ್ ಮತ್ತು ಡಿಜಿಟಲ್ ಬ್ಯಾಂಕಿಂಗ್ ಸೇವೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಹಲವು ಬಾರಿ ವ್ಯತ್ಯಯವಾಗಿದೆ. ಏಪ್ರಿಲ್ 15ರಂದು ಈ ಸೇವೆಯು ಸ್ಥಗಿತಗೊಂಡಿತ್ತು. ಇದರಿಂದ ಗ್ರಾಹಕರು ತೀವ್ರ ತೊಂದರೆಗೆ ಸಿಲುಕಿದ್ದರು ಎಂದು ಹೇಳಿದೆ. ಬ್ಯಾಂಕ್ ತನ್ನ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಕಾರ್ಯಾಚರಣೆಯ ಚೇತರಿಕೆಗೆ ಒತ್ತು ನೀಡುವಲ್ಲಿ ವಿಫಲವಾಗಿದೆ ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಎಚ್‌ಯುಎಲ್ ಲಾಭ ಇಳಿಕೆ

ನವದೆಹಲಿ (ಪಿಟಿಐ): ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ವಸ್ತು ತಯಾರಿಸುವ (ಎಫ್‌ಎಂಸಿಜಿ) ಕಂಪನಿಯಾದ ಹಿಂದುಸ್ತಾನ್ ಯೂನಿಲಿವರ್ ಲಿಮಿಟೆಡ್ (ಎಚ್‌ಯುಎಲ್) 2023–24ನೇ ಹಣಕಾಸು ವರ್ಷದ ಕೊನೆಯ ತ್ರೈಮಾಸಿಕದಲ್ಲಿ ₹2,561 ಕೋಟಿ ಲಾಭ ಗಳಿಸಿದೆ.

2022–23ರಲ್ಲಿ ಇದೇ ತ್ರೈಮಾಸಿಕ-ದಲ್ಲಿ ₹2,601 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 1.53ರಷ್ಟು ಇಳಿಕೆಯಾಗಿದೆ. ವರಮಾನವು ₹15,375 ಕೋಟಿಯಿಂದ ₹15,441 ಕೋಟಿಗೆ ಹೆಚ್ಚಳವಾಗಿದೆ ಎಂದು ಕಂಪನಿಯು ಷೇರುಪೇಟೆಗೆ ಬುಧವಾರ ತಿಳಿಸಿದೆ.

2023–24ರ ಪೂರ್ಣ ಆರ್ಥಿಕ ವರ್ಷದಲ್ಲಿ ನಿವ್ವಳ ಲಾಭವು ₹10,143 ಕೋಟಿಯಿಂದ ₹10,282 ಕೋಟಿಗೆ ಏರಿಕೆಯಾಗಿದೆ. ಒಟ್ಟು ವರಮಾನವು ₹62,707 ಕೋಟಿ ಸಂಗ್ರಹವಾಗಿದ್ದು, ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹61,092 ಕೋಟಿ ಆಗಿತ್ತು ಎಂದು ತಿಳಿಸಿದೆ.

ಐಸಿಐಸಿಐ ಪ್ರುಡೆನ್ಶಿಯಲ್ ಲೈಫ್ ಲಾಭ ಕುಸಿತ

ನವದೆಹಲಿ (ಪಿಟಿಐ): 2023–24ನೇ ಆರ್ಥಿಕ ವರ್ಷದ ಕೊನೆಯ ತ್ರೈಮಾಸಿಕದಲ್ಲಿ ಐಸಿಐಸಿಐ ಪ್ರುಡೆನ್ಶಿಯಲ್ ಲೈಫ್ ಇನ್ಶುರೆನ್ಸ್ ಕಂಪನಿಯ ನಿವ್ವಳ ಲಾಭದಲ್ಲಿ ಶೇ 26ರಷ್ಟು ಇಳಿಕೆಯಾಗಿದೆ.

ಕಂಪನಿಯು ಒಟ್ಟು ₹174 ಕೋಟಿ ಲಾಭ ಗಳಿಸಿದೆ. 2022–23ನೇ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹235 ಕೋಟಿ ಲಾಭ ಗಳಿಸಿತ್ತು. ವೆಚ್ಚದ ಪ್ರಮಾಣ ಹೆಚ್ಚಳವೇ ಲಾಭ ಕುಸಿತಕ್ಕೆ ಕಾರಣವಾಗಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

₹2,311 ಕೋಟಿ ಎಂ-ಕ್ಯಾಪ್ ಇಳಿಕೆ: ನಿವ್ವಳ ಲಾಭದಲ್ಲಿ ಇಳಿಕೆ ಕಂಡಿರುವುದರಿಂದ ಕಂಪನಿಯ ಷೇರಿನ ಮೌಲ್ಯವು ಶೇ 3ರಷ್ಟು ಇಳಿದಿದೆ. ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಪ್ರತಿ ಷೇರಿನ ಬೆಲೆಯು ಕ್ರಮವಾಗಿ ₹577 ಮತ್ತು ₹578 ಆಗಿದೆ. ಕಂಪನಿಯ ಮಾರುಕಟ್ಟೆ ಮೌಲ್ಯವು (ಎಂ-ಕ್ಯಾಪ್) ಒಂದೇ ದಿನ ₹2,311 ಕೋಟಿ ಕರಗಿದೆ.

ಡೆಪ್ಯುಟಿ ಗವರ್ನರ್ ರಬಿ ಶಂಕರ್ ಸೇವಾವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಡೆಪ್ಯುಟಿ ಗವರ್ನರ್ ಟಿ. ರಬಿ ಶಂಕರ್ ಅವರ ಸೇವಾವಧಿಯನ್ನು ಕೇಂದ್ರ ಸರ್ಕಾರವು ಒಂದು ವರ್ಷ ವಿಸ್ತರಿಸಿದೆ.

2021ರ ಮೇ ತಿಂಗಳಿನಲ್ಲಿ ಮೂರು ವರ್ಷದ ಅವಧಿಗೆ ಶಂಕರ್ ಅವರು ಡೆಪ್ಯುಟಿ ಗವರ್ನರ್ ಆಗಿ ನೇಮಕ-ವಾಗಿದ್ದರು. ಅವರ ಸೇವಾವಧಿಯು ಶೀಘ್ರವೇ ಅಂತ್ಯಗೊಳ್ಳಲಿದೆ. ಹಾಗಾಗಿ, ಮುಂಬರುವ ಮೇ ತಿಂಗಳಿನಿಂದ ಅನ್ವಯವಾಗುವಂತೆ ವಿಸ್ತರಿಸಿದೆ ಎಂದು ಆರ್‌ಬಿಐ ತಿಳಿಸಿದೆ. 1990ರಲ್ಲಿ ಆರ್‌ಬಿಐಗೆ ಸೇರ್ಪಡೆಯಾದ ಶಂಕರ್ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ-ದ್ದಾರೆ. ಆರ್‌ಬಿಐನ ಕಾರ್ಯನಿರ್ವಾಹಕ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದರು.

ವಿಟೊ ಅಧಿಕಾರ ದುರ್ಬಳಕೆ: ಭಾರತ ಅಸಮಾಧಾನ

ವಿಶ್ವಸಂಸ್ಥೆ (ಪಿಟಿಐ): ಪಾಕಿಸ್ತಾನ ಮೂಲದ ಜಾಗತಿಕ ಭಯೋತ್ಪಾದಕರ ಪಟ್ಟಿ ಘೋಷಿಸುವಂತಹ ವಿಷಯಗಳ ಬಗ್ಗೆ ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಕೆಲವು ಸದಸ್ಯರು ಜವಾಬ್ದಾರಿ ವಹಿಸಿಕೊ-ಳ್ಳುತ್ತಿಲ್ಲ ಎಂದು ಭಾರತ ಕಿಡಿಕಾರಿದೆ.

ಪರೋಕ್ಷವಾಗಿ ಚೀನಾ ಧೋರಣೆ ಟೀಕಿಸಿರುವ ಭಾರತ, 'ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಕೆಲವು ಸದಸ್ಯ ರಾಷ್ಟ್ರಗಳು ತಮ್ಮ ವಿಟೊ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುತ್ತಿವೆ. ಭಯೋತ್ಪಾದನೆ ಚಟುವಟಿಕೆಗಳಿಗೆ ನಿರ್ಬಂಧ ವಿಧಿಸುವ ಮಹತ್ವದ ಪ್ರಸ್ತಾವನೆಗಳಿಗೂ ತಡೆವೊಡ್ಡುವುದು, ನಿರ್ಬಂಧಿಸುವು-ದಕ್ಕೆ ವಿಟೊ ಅಧಿಕಾರ ಸೀಮಿತವಾಗಿವೆ' ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ (ಯುಎನ್‌ಜಿಎ) ಮಾತನಾಡಿದ ಭಾರತದ ಕಾಯಂ ಪ್ರತಿನಿಧಿ ರುಚಿರಾ ಕಾಂಬೋಜ್ ಅವರು, 'ಹೆಚ್ಚುತ್ತಿರುವ ಸವಾಲುಗಳನ್ನು ನಿಭಾಯಿಸುವಲ್ಲಿ ಭದ್ರತಾ ಮಂಡಳಿ ನಿರ್ವಹಿಸುತ್ತಿರುವ ಪಾತ್ರ ಕನಿಷ್ಠ ಮಟ್ಟದಲ್ಲಿದೆ' ಎಂದಿದ್ದಾರೆ.

ಮತದಾನ ದಿನ: ಹಿರಿಯ ನಾಗರಿಕರು ಅಂಗವಿಕಲರಿಗೆ ರ‍್ಯಾಪಿಡೊ ಉಚಿತ ಸೇವೆ

ನವದೆಹಲಿ (ಪಿಟಿಐ): ಕರ್ನಾಟಕದ 14 ಲೋಕಸಭಾ ಕ್ಷೇತ್ರಗಳಿಗೆ ಇದೇ 26ರಂದು ಮತದಾನ ನಡೆಯಲಿದ್ದು, ಅಂದು ಹಿರಿಯ ನಾಗರಿಕರು ಮತ್ತು ಅಂಗವಿಕಲರಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ಉಚಿತವಾಗಿ ಬೈಕ್ ಟ್ಯಾಕ್ಸಿ, ಆಟೊ ಮತ್ತು ಕ್ಯಾಬ್ ಸೇವೆ ಒದಗಿಸಲು ರ‍್ಯಾಪಿಡೊ ಕಂಪನಿ ಮುಂದಾಗಿದೆ.

ಬೆಂಗಳೂರು, ಮೈಸೂರು ಮತ್ತು ಮಂಗಳೂರು ನಗರಗಳಲ್ಲಿ ಮತದಾನ ಮಾಡುವವರಿಗೆ ಈ ಸೌಲಭ್ಯ ದೊರೆಯಲಿದೆ. 'ವೋಟ್‌ನೌ' ಕೋಡ್ ಬಳಸಿಕೊಂಡು ಕಂಪನಿಯ ಸಾರಿಗೆ ಸೇವೆ ಮೂಲಕ ಮತಗಟ್ಟೆಗಳಿಗೆ ತೆರಳಬಹುದಾಗಿದೆ ಎಂದು ತಿಳಿಸಿದೆ.

ಭಾರತೀಯ ಚುನಾವಣಾ ಆಯೋಗ (ಇಸಿಐ) ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಭಾಗಿತ್ವದಡಿ ಈ ಕಾರ್ಯಕ್ರಮ ರೂಪಿಸಲಾಗಿದೆ. ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು ಎಂಬುದೇ ಇದರ ಹಿಂದಿರುವ ಉದ್ದೇಶವಾಗಿದೆ. ಹಾಗಾಗಿ, ಈ ಸೇವೆಯನ್ನು ಒದಗಿಸಲಾಗಿದೆ ಎಂದು ಕಂಪನಿ ತಿಳಿಸಿದೆ.

'ಜನತಂತ್ರ ವ್ಯವಸ್ಥೆಯಲ್ಲಿ ಹಿರಿಯ ನಾಗರಿಕರು ಮತ್ತು ಅಂಗವಿಕಲರು ತಮ್ಮ ಹಕ್ಕುಗಳನ್ನು ಚಲಾಯಿಸಲು ಅನುವಾಗುವಂತೆ ಈ ತೀರ್ಮಾನ ಕೈಗೊಳ್ಳಲಾಗಿದೆ' ಎಂದು ಕಂಪನಿಯ ಸಹ ಸಂಸ್ಥಾಪಕ ಪವನ್ ಗುಂಟುಪಲ್ಲಿ ತಿಳಿಸಿದ್ದಾರೆ.

ಉಕ್ರೇನ್, ಇಸ್ರೇಲ್‌ಗೆ ಅಮೆರಿಕ ನೆರವು

ವಾಷಿಂಗ್ಟನ್ (ಪಿಟಿಐ): ಯುದ್ಧಪೀಡಿತ ಉಕ್ರೇನ್ ಮತ್ತು ಇಸ್ರೇಲ್‌ಗಳಿಗೆ 95.3 ಶತಕೋಟಿ ಡಾಲರ್ (₹7.9 ಲಕ್ಷ ಕೋಟಿ) ನೆರವು ಒದಗಿಸುವ ಮತ್ತು ತೈವಾನ್ ಸೇರಿದಂತೆ ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶದಲ್ಲಿ ಅಮೆರಿಕ ಮತ್ತು ಅದರ ಮಿತ್ರರಾಷ್ಟ್ರಗಳ ಭದ್ರತೆಯನ್ನು ಬಲಪಡಿಸುವ ಮಸೂದೆಗೆ ಅಮೆರಿಕ ಸಂಸತ್ತು ಹೆಚ್ಚಿನ ಮತಗಳೊಂದಿಗೆ ಬೆಂಬಲ ನೀಡಿದೆ.

ಹೌಸ್ ಆಫ್ ರಿಪ್ರೆಸೆಂಟೆಟಿವ್ಸ್ ಈ ಮಸೂದೆಯನ್ನು 79– 18 ಮತಗಳಿಂದ ಅಂಗೀಕರಿಸಿದೆ. ಮಸೂದೆಗೆ ಅಧ್ಯಕ್ಷ ಜೋ ಬೈಡನ್ ಸಹಿ ಗಾಗಿ ಶ್ವೇತಭವನಕ್ಕೆ ಕಳುಹಿಸಲಾಗುತ್ತದೆ.

ಎಲ್‌ಐಸಿ ವಿರುದ್ಧ ಅಪಪ್ರಚಾರ ಕಾನೂನು ಕ್ರಮದ ಎಚ್ಚರಿಕೆ

ನವದೆಹಲಿ (ಪಿಟಿಐ): ಕೆಲವು ವ್ಯಕ್ತಿಗಳು ಹಾಗೂ ಸಂಸ್ಥೆಗಳು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಜಾಹೀರಾತಿನ ಮೂಲಕ ನಿಗಮದ ಬಗ್ಗೆ ಅಪಪ್ರಚಾರದಲ್ಲಿ ತೊಡಗಿದ್ದಾರೆ. ಈ ಕುರಿತು ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮಕೈಗೊಳ್ಳ ಲಾಗುವುದು ಎಂದು ಭಾರತೀಯ ಜೀವ ವಿಮಾ ನಿಗಮವು ಎಚ್ಚರಿಕೆ ನೀಡಿದೆ.

ಪಾಲಿಸಿದಾರರು ಹಾಗೂ ಸಾರ್ವಜನಿಕರು ಇಂತಹ ಜಾಹೀರಾತುಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಜೊತೆಗೆ, ಅವುಗಳ ಸತ್ಯಾಸತ್ಯತೆ ಬಗ್ಗೆ ಪರೀಕ್ಷಿಸಬೇಕು ಎಂದು 'ಎಕ್ಸ್'ನಲ್ಲಿ ಮನವಿ ಮಾಡಿದೆ.

ಕೆಲವರು ನಿಗಮದ ವಿರುದ್ಧ ಅಪಪ್ರಚಾರ ಮಾಡುವುದರಲ್ಲಿ ಕಾರ್ಯ ನಿರತರಾಗಿದ್ದಾರೆ. ಈ ಕೃತ್ಯಕ್ಕಾಗಿ ನಿಗಮದ ಹಿರಿಯ ಅಧಿಕಾರಿಗಳು, ನಿವೃತ್ತ ಅಧಿಕಾರಿಗಳ ಫೋಟೊಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಅಲ್ಲದೆ, ನಿಗಮದ ಹೆಸರು ಮತ್ತು ಲೊಗೊವನ್ನೂ ಬಳಸಿಕೊಳ್ಳು ತ್ತಿದ್ದಾರೆ. ಸುಲಭವಾಗಿ ಮೋಸಗೊಳಿಸುವಂತಹ ಇಂತಹ ಜಾಹೀರಾತುಗಳಿಗೆ ಪಾಲಿಸಿದಾರರು ಮರುಳಾಗಬಾರದು ಎಂದು ಕೋರಿದೆ.

ಇಂತಹ ಜಾಹೀರಾತುಗಳ ಬಗ್ಗೆ ಗಮನಕ್ಕೆ ಬಂದರೆ ಆ ಪುಟದ ಯುಆರ್‌ಎಲ್ (ಯೂನಿಫಾರ್ಮ್ ರಿಸೋರ್ಸ್ ಲೊಕೇಟರ್) ಕಾಪಿ ಮಾಡಿ, ಎಲ್‌ಐಸಿಯ ಅಧಿಕೃತ ಸಾಮಾಜಿಕ ಜಾಲತಾಣಗಳಿಗೆ ಪೇಸ್ಟ್ ಮಾಡಬೇಕು ಎಂದು ಮನವಿ ಮಾಡಿದೆ. ನಿಗಮದ ಬ್ರ್ಯಾಂಡ್ ಮೌಲ್ಯಕ್ಕೆ ಧಕ್ಕೆ ತರುತ್ತಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸುವ ಪ್ರಕ್ರಿಯೆ ನಡೆದಿದೆ ಎಂದು ತಿಳಿಸಿದೆ.

'ಇರಾನ್ ಜತೆ ವ್ಯವಹರಿಸಿದರೆ ನಿರ್ಬಂಧ ಎದುರಿಸಿ'

ವಾಷಿಂಗ್ಟನ್ (ಪಿಟಿಐ): ಇರಾನ್ ಜತೆಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ಯಾವುದೇ ರಾಷ್ಟ್ರ ಸಂಭವನೀಯ ನಿರ್ಬಂಧಗಳನ್ನು ಎದುರಿಸಬೇಕಾಗುತ್ತದೆ ಎಂದು ಅಮೆರಿಕ ಎಚ್ಚರಿಕೆ ನೀಡಿದೆ.

ಇರಾನ್ ಅಧ್ಯಕ್ಷ ಸಯ್ಯದ್ ಇಬ್ರಾಹಿಂ ರೈಸಿ ಅವರ ಚೊಚ್ಚಲ ಇಸ್ಲಾಮಾಬಾದ್ ಭೇಟಿಯ ಸಂದರ್ಭ ದ್ವಿಪಕ್ಷೀಯ ಸಂಬಂಧ ವೃದ್ಧಿಸಲು ಪಾಕಿಸ್ತಾನ ಮತ್ತು ಇರಾನ್ ಹಲವು ಒಪ್ಪಂದಗಳಿಗೆ ಸಹಿ ಹಾಕಿದ ಬೆನ್ನಲ್ಲೇ ಅಮೆರಿಕ ಈ ಸಂದೇಶ ನೀಡಿದೆ.

ಚೀನಾದ ಮೂರು ಕಂಪನಿಗಳು ಸೇರಿದಂತೆ ಪಾಕಿಸ್ತಾನದ 'ಗುರಿ ನಿರ್ದೇಶಿತ ಕ್ಷಿಪಣಿ' ಯೋಜನೆಗೆ ನೆರವಾಗುತ್ತಿರುವವರ ಮೇಲೆ ನಿರ್ಬಂಧಗಳನ್ನು ವಿಧಿಸಿದ ಕೆಲವು ದಿನಗಳ ನಂತರ ಈ ಹೊಸ ಎಚ್ಚರಿಕೆಯನ್ನು ಅಮೆರಿಕ ನೀಡಿದೆ. ಆದಾಗ್ಯೂ ಅಮೆರಿಕ ಪಾಕಿಸ್ತಾನ-ದೊಂದಿಗೆ ಉತ್ತಮ ಸಂಬಂಧ ಹೊಂದಿದ್ದು, ಪಾಕಿಸ್ತಾನವನ್ನು ಈ ಪ್ರದೇಶದಲ್ಲಿ ಪ್ರಮುಖ ಭದ್ರತಾ ಪಾಲುದಾರ ಎಂದೇ ಪರಿಗಣಿಸಿದೆ.

ಬುಧವಾರ ಮುಕ್ತಾಯಗೊಂಡ ರೈಸಿಯವರ ಮೂರು ದಿನಗಳ ಭೇಟಿಯ ಸಮಯದಲ್ಲಿ, ಇರಾನ್ ಮತ್ತು ಪಾಕಿಸ್ತಾನ ಎಂಟು ಒಪ್ಪಂದಗಳಿಗೆ ಸಹಿ ಹಾಕಿದ್ದು, ಮುಂಬರುವ ವರ್ಷಗಳಲ್ಲಿ ವ್ಯಾಪಾರವನ್ನು 10 ಶತಕೋಟಿ ಡಾಲರ್‌ಗೆ (₹84 ಸಾವಿರ ಕೋಟಿ) ಹೆಚ್ಚಿಸುವ ಪ್ರತಿಜ್ಞೆ ಮಾಡಿವೆ.

ರೈಸಿಯವರ ಭೇಟಿ ವೇಳೆ ಆಗಿರುವ ಒಪ್ಪಂದಗಳ ಬಗ್ಗೆ ಪ್ರಶ್ನಿಸಿದಾಗ, ಅಮೆರಿಕದ ವಿದೇಶಾಂಗ ಇಲಾಖೆಯ ಉಪ ವಕ್ತಾರ ವೇದಾಂತ ಪಟೇಲ್, ಪಾಕಿಸ್ತಾನ- ಇರಾನ್ ನಡುವೆ ಅನಿಲ ಕೊಳವೆ ಮಾರ್ಗ ನಿರ್ಮಾಣದ ಮೇಲೆ ನಿರ್ಬಂಧದ ಹೇರುವುದರಿಂದ ವಿನಾಯಿತಿ ಇರಲಿದೆ ಎನ್ನಲಾಗದು ಎಂದು ಪ್ರತಿಕ್ರಿಯಿಸಿದ್ದಾರೆ.

'ನಾನು ವಿಸ್ತೃತವಾಗಿ ಹೇಳುತ್ತಿರುವೆ, ಇರಾನ್‌ನೊಂದಿಗೆ ವ್ಯಾಪಾರ ವ್ಯವಹಾರಗಳನ್ನು ನಡೆಸುವ ಯಾರೇ ಆಗಲಿ ನಿರ್ಬಂಧಗಳಿಗೆ ಗುರಿಯಾಗಬೇಕಾದ ಸಂಭವನೀಯ ಅಪಾಯದ ಬಗ್ಗೆ ಅರಿತುಕೊಳ್ಳಲು ನಾವು ಸಲಹೆ ನೀಡುತ್ತೇವೆ' ಎಂದು ಪಟೇಲ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಇದು ಪಾಕಿಸ್ತಾನದೊಳಗೆ ನಿರ್ಮಿಸಲಾಗುತ್ತಿ-ರುವ ಪೈಪ್‌ಲೈನ್‌ನ ಒಂದು ಭಾಗ. ಈ ಹಂತದಲ್ಲಿ ಮೂರನೆಯವರ ಜತೆ ಚರ್ಚಿಸಬೇಕಾದ ಅಥವಾ ಇದಕ್ಕೆ ಯಾವುದೇ ನಿರ್ಬಂಧದ ವಿನಾಯಿತಿಯ ಅವಶ್ಯಕತೆ ಬೇಕಿದೆ ಎಂದು ನಮಗೆ ಅನಿಸಿಲ್ಲ' ಎಂದು ಪಾಕಿಸ್ತಾನದ ವಿದೇಶಾಂಗ ಸಚಿವಾಲಯದ ವಕ್ತಾರರಾದ ಮುಮ್ತಾಜ್ ಜಹ್ರಾ ಬಲೋಚ್ ಸುದ್ದಿಗೋಷ್ಠಿಯಲ್ಲಿ ಹೇಳಿರುವುದಾಗಿ 'ಇರಾನ್‌ವೈರ್ ಡಾಟ್ ಕಾಮ್' ವರದಿ ಮಾಡಿದೆ.

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)		ಹೊಸಚಾಲಿ	31369-34699	ಹಳೆಚಾಲಿ	33009-35499
ಕೋಕ	18000-28500	**ಶಿವಮೊಗ್ಗ**		ಕೆಂಪುಗೋಟು	28689-31399
ಹೊಸತು	28500-36500	ಬೆಟ್ಟೆ	41599-56410	ರಾಶಿ	45509-49239
ಹಳತು	36500-44500	ಗೊರಬಲು	24989-37211	ತಟ್ಟಿಬೆಟ್ಟೆ	36400-49009
ಕುಮಟ		ರಾಶಿ	33292-53099	**ಶಿರಸಿ**	
ಬೆಟ್ಟೆ	31599-38509	ಸರಕು	54009-79069	ಬೆಟ್ಟೆ	33699-47669
ಚಿಪ್ಪು	26809-27899	**ಸಿದ್ದಾಪುರ**		ಬಿಳಿಗೋಟು	22009-31800
ಕೋಕ	13569-35099	ಬಿಳಿಗೋಟು	26019-29869	ಚಾಲಿ	32199-36298
ಫ್ಯಾಕ್ಟರಿ	12019-21700	ಚಾಲಿ	33719-36599	ಕೆಂಪುಗೋಟು	26899-31899
ಹಳೆಚಾಲಿ	36899-39339	ಕೋಕ	25699-29300	ರಾಶಿ	43608-49809

ಇಸ್ರೇಲ್ ಜತೆ ಒಪ್ಪಂದ ಖಂಡಿಸಿ ಪ್ರತಿಭಟನೆ

ವಾಷಿಂಗ್ಟನ್ (ಪಿಟಿಐ): 'ಇಸ್ರೇಲ್ ಅಥವಾ ಗಾಜಾ ಯುದ್ಧಕ್ಕೆ ಬೆಂಬಲ ನೀಡುವ ಯಾವುದೇ ಕಂಪನಿಗಳ ಜತೆ ವಿಶ್ವವಿದ್ಯಾಲಯಗಳು ಹಣಕಾಸು ಒಪ್ಪಂದಗಳನ್ನು ಮಾಡಿಕೊಳ್ಳಬಾರದು' ಎಂದು ಆಗ್ರಹಿಸಿ ಪ್ಯಾಲೆಸ್ಟೀನ್ ಪರ ಒಲವು ಹೊಂದಿರುವ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಕ್ಯಾಲಿಫೋರ್ನಿಯಾದ ಮೆಸಾಚ್ಯುಸೆಟ್ಸ್ ವಿಶ್ವವಿದ್ಯಾಲಯದ ಆವರಣದಲ್ಲಿ ಸೇರಿದ ನೂರಾರು ವಿದ್ಯಾರ್ಥಿಗಳು, ತಮ್ಮ ಬೇಡಿಕೆಗಳನ್ನು ಈಡೇರಿಸುವವರೆಗೂ ಪ್ರತಿಭಟನೆಯನ್ನು ಸ್ಥಗಿತಗೊಳಿಸುವುದಿಲ್ಲ ಎಂದಿದ್ದಾರೆ.

ಇಸ್ರೇಲ್‌ಗೆ ನೀಡುತ್ತಿರುವ ಬೆಂಬಲವನ್ನು ಸ್ಥಗಿತಗೊಳಿಸಬೇಕು ಎಂದು ಆಗ್ರಹಿಸಿ ಕೊಲಂಬಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು –ಎಎಫ್‌ಪಿ ಚಿತ್ರ

ಇಸ್ರೇಲ್ ಮಿಲಿಟರಿ ಬಲಪಡಿಸಲು ನೆರವಾಗುವ ಕಂಪನಿಗಳು ಮತ್ತು ಶಸ್ತ್ರಾಸ್ತ್ರಗಳನ್ನು ಪೂರೈಸುವ ಕಂಪನಿಗಳ ಜತೆ ವಿಶ್ವವಿದ್ಯಾಲಯಗಳು ಯಾವುದೇ ವ್ಯವಹಾರ ಮಾಡಬಾರದು. ಜತೆಗೆ ಇಸ್ರೇಲ್‌ನಿಂದ ಸ್ವೀಕರಿಸುವ ಹಣ ಮತ್ತು ಬಳಕೆಯ ಬಗ್ಗೆ ಪಾರದರ್ಶಕತೆ ಕಾಪಾಡಬೇಕು ಎಂದು ವಿದ್ಯಾರ್ಥಿಗಳು ಒತ್ತಾಯಿಸಿದ್ದಾರೆ.

ಇಸ್ರೇಲ್ ಜತೆಗಿನ ಶೈಕ್ಷಣಿಕ ಒಪ್ಪಂದಗಳನ್ನು ಸಹ ಸ್ಥಗಿತಗೊಳಿಬೇಕು ಎಂದು ಕೆಲವು ಕಾಲೇಜುಗಳ ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಹಲವು ಕಾಲೇಜು ಮತ್ತು ವಿಶ್ವ-ವಿದ್ಯಾಲಯಗಳ ಅಧಿಕಾರಿಗಳು, 'ವಿದ್ಯಾರ್ಥಿಗಳ ಪ್ರತಿಭಟಿಸುವ ಹಕ್ಕು ಗೌರವಿಸುತ್ತೇವೆ. ಆದರೆ, ವಿದ್ಯಾರ್ಥಿಗಳು ಕೈಗೊಂಡಿರುವ ನಿರ್ಣಯ-ಗಳನ್ನು ತಿರಸ್ಕರಿಸುತ್ತೇವೆ' ಎಂದು ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516, ಶಿಮ್ಮೊಗ 8095555517

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ,ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 7899235388, 9606385001

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾವಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ
ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸು (DCTTC)
Nursery Teachers Training Course
Qual : PUC. ಈ ಕೋರ್ಸುಗಳಲ್ಲದೆ
Post Graduation Diploma in Information Technology
DIPLOMA IN COMPUTER DATA ENTRY OPERATOR
6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು
ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ.
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
The RCSS
Sharing Computer Literacy with Govt. of India
Recognized by Govt. of Karnataka
Mob. 9008419955, 9901520055, 9449198555
www.thercss.com Email : info@thercss.com

PUBLIC NOTICE

ಸಾರ್ವಜನಿಕ ಸೂಚನೆ ವಂಚನೆಯ ಎಚ್ಚರಿಕೆ

ಕೆಲವು ಅನುಮಾನಾಸ್ಪದ ವ್ಯಕ್ತಿಗಳು ತಮ್ಮನ್ನು ತಾವು M2P ಸಲ್ಯೂಶನ್ಸ್ ಪ್ರೈವೆಟ ಲಿಮಿಟೆಡ್ M2P ಫಿನ್‌ಟೆಕ್ ಎಂದು ಕರೆಯಲಾಗುತ್ತದೆ)ನ ಪ್ರತಿನಿಧಿ ಅಥವಾ ಸಹಯೋಗಿ ಎಂದು ಹೇಳಿಕೊಂಡು ನಮ್ಮ ಹೆಸರಿನಲ್ಲಿ ಸಾಲಗಳನ್ನು ನೀಡುತ್ತೇವೆಂದು ತಿಳಿಸುತ್ತಾ ವಂಚಿಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಮುಗ್ಧ ಸಾರ್ವಜನಿಕರನ್ನು ವಂಚಿಸುವ ಉದ್ದೇಶದಿಂದ ಅವರು ನಮ್ಮ ಬ್ರ್ಯಾಂಡ್ ಗುರುತ, ಲೋಗೋ ಹಾಗೂ ಇತರ ವಿವರಗಳನ್ನು ಉಪಯೋಗಿಸುತ್ತಿದ್ದಾರೆ. ತಮ್ಮ ವಂಚನೆಯ ಚಟುವಟಿಕೆಗಳಿಗೆ ಈ ವ್ಯಕ್ತಿಗಳು ಬಳಸಿಕೊಳ್ಳುತ್ತಿರುವ ಒಂದು ಮೋಸದ ವೈಬ್ ಸೈಟ್ https://www.m2p-capital.com/, ಆಗಿದ್ದು, ಇದಕ್ಕೆ ನಾವು ಅಧಿಕಾರ ನೀಡಿಲ್ಲ ಅಥವಾ ಇದು ನಮಗೆ ಸಂಬಂಧಪಟ್ಟಿರುವುದೂ ಅಲ್ಲ. ಅನುಮಾನವನ್ನು ನೀಗಿಸುವ ಸಲುವಾಗಿ M2P ಸಲ್ಯೂಶನ್ಸ್ ಪ್ರೈವೇಟ್ ಲಿಮಿಟೆಡ್ ಮೇಲೆ ತಿಳಿಸಿರುವ ವೈಬ್‌ಸೈಟ್‌ನಲ್ಲಿ ಸಾಲಗಳನ್ನು ನೀಡುವ ವ್ಯಾಪಾರದಲ್ಲಿ ತೊಡಗಿಲ್ಲ ಮತ್ತು ಇದಕ್ಕೆ ಸಂಬಂಧಪಟ್ಟಿರುವುದಿಲ್ಲ. ನಮ್ಮ ಹೆಸರಿನಲ್ಲಿ ಸಾಲ ನೀಡುತ್ತೇವೆಂದು ಹೇಳಿಕೊಳ್ಳುವ ಯಾರೂ ನಮ್ಮಿಂದ ಅಧಿಕೃತಗೊಂಡಿರುವವರಲ್ಲ. ಮೇಲೆ ತಿಳಿಸಿರುವ ವೆಬ್‌ಸೈಟ್‌ನಲ್ಲಿ ಇರುವ ಯಾವುದೇ ಮಾಹಿತಿ ಅಥವಾ ಇಂತಹ ವ್ಯಕ್ತಿಗಳು ಉತ್ಪತ್ತಿ ಮಾಡಬಹುದಾದ ಯಾವುದೇ ಇತರ ವಸ್ತುಗಳು ಅಥವಾ ಸಂವಹನದ ಬಗ್ಗೆ M2P ಸಲ್ಯೂಶನ್ಸ್ ಪ್ರೈವೆಟ್ ಲಿಮಿಟೆಡ್ ಮತ್ತು ಅದರ ಸಹಯೋಗಿ ಸಂಸ್ಥೆಗಳು, ಯಾವುದೇ ಜವಾಬ್ದಾರಿ ವಹಿಸಿಕೊಳ್ಳುವುದಿಲ್ಲ, ಮತ್ತು ಈ ವೆಬ್‌ಸೈಟ್‌ನಲ್ಲಿರುವ ಯಾವುದೇ ಮಾಹಿತಿಯಿಂದ ಏರ್ಪಡುವ ಹಾನಿಗಳು, ಬಳಕೆ, ಅಥವಾ ವಿಶ್ವಸನೀಯತೆಯನ್ನು ಅದು ಸಾರಾಸಗಟಾಗಿ ನಿರಾಕರಿಸುತ್ತದೆ. ಮೇಲೆ ತಿಳಿಸಿರುವ ವೆಬ್‌ಸೈಟ್ ಅಥವಾ ಇತರ ವೇದಿಕೆ ಮತ್ತು ಇಂತಹ ವ್ಯಕ್ತಿಗಳು ಪ್ರೋತ್ಸಾಹಿಸುವ ಉತ್ಪನ್ನದಲ್ಲಿ ತೊಡಗಿಕೊಳ್ಳುವ ಯಾವುದೇ ವ್ಯಕ್ತಿ ತನ್ನ ಸ್ವಂತ ಅಪಾಯದಲ್ಲಿ ಮಾಡುತ್ತಿದ್ದಾರೆ ಎಂಬುದನ್ನು ಸಾಮಾನ್ಯ ಜನತೆ ಗಮನಿಸಬೇಕು. ಇಂತಹ ವಂಚನೆಯ ವ್ಯವಹಾರಗಳ ಬಲಿಪಶುಗಳಾಗದಿರಲು ಮತ್ತು ಎಚ್ಚರಿಕೆ ವಹಿಸಲು ನಾವು ಸಾರ್ವಜನಿಕರನ್ನು ಆಗ್ರಹಿಸುತ್ತಿದ್ದೇವೆ. ಅಗತ್ಯವಾದ ಕ್ರಮಗಳಿಗಾಗಿ ನಾವು ಈ ವಂಚನೆಯನ್ನು ಅಧಿಕಾರಿಗಳ ಗಮನಕ್ಕೆ ತಂದಿದ್ದೇವೆ.

ಪ್ರವಾಸ

Travel

ದೆಹಲಿ ಯುಮುನೋತ್ರಿ, ಗಂಗೋತ್ರಿ ಕೇದಾರನಾಥ್ ಬದರಿನಾಥ್ 13.05.2024 08.06.2024 ರಿಂದ 14 ದಿನಗಳು. ಸ್ವಯಂಭೂ ಅಮರನಾಥ್ ವೈಷ್ಣೋದೇವಿ ದೆಹಲಿ ಅಮೃತಸರ್ 28.06.2024 03.07.2024 ರಿಂದ 14,7 ದಿನಗಳು. ಅಯೋಧ್ಯ. ಪ್ರಯಾಗ್ ಕಾಶಿ,ಗಯಾ,ಬೈಧ್ಯನಾಥ. 03.05.2024 06.05.2024 ರಿಂದ 8 ದಿನಗಳು. ಕಾಶ್ಮೀರ್ ಗುಲ್ಮಾರ್ಗ್ ಪಹಲ್‌ಗಾಂ ಸೋನಾಮಾರ್ಗ್ 12.05.2024 18.05.2024 ರಿಂದ 8 ದಿನಗಳು. ಸಂಪರ್ಕಿಸಿ. 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು.18

05.05.2024ರಿಂದ 25ದಿನಗಳ ಚಾರಧಾಮ್`ಸಮೇತ, ವೈಷ್ಣೋ ದೇವಿ,ಅಮೃತಸರ್`, ಕಾಶಿ, ಅಯೋಧ್ಯ, ಹರಿದ್ವಾರ್, ಆಗ್ರಾ ಇತ್ಯಾದಿ. 01.07.2024 ಮತ್ತು 12.07.2024ರಿಂದ 12ದಿನಗಳು ಅಮರನಾಥ್`ಸಮೇತ ಕಾಶ್ಮೀರ್, ಶ್ರೀನಗರ,ಗುಲ್ಮಾರ್ಗ್, ಅವಂತಿ ಪುರ,ವಾಘಬಾರ್ಡರ್`,ಇತ್ಯಾದಿ. ಏಷ್ಯನ್`ಟ್ರಾವಲ್`ಲೈನ್ಸ್, ನಂ.20,`ಆರ್.ವಿ.ರಸ್ತೆ, ಬೆಂಗಳೂರು-04. 8105657052, 9480182865.

DH Classifieds More value, more impact
ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
9731810277
9886213331
9845114560

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಥ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಚುನಾವಣಾ ಬಾಂಡ್: 'ಶೆಲ್ ಕಂಪನಿಗಳು– ರಾಜಕಾರಣಿಗಳ ಕೊಡು ಕೊಳುವಿಕೆ ಪತ್ತೆಯಾಗಲಿ'

ಎಸ್ಐಟಿ ತನಿಖೆಗೆ 'ಸುಪ್ರೀಂ' ಮೊರೆ

ನವದೆಹಲಿ (ಪಿಟಿಐ): ರಾಜಕಾರಣಿಗಳು, ಕಾರ್ಪೊರೇಟ್ ಕಂಪನಿಗಳು ಹಾಗೂ ತನಿಖಾ ಸಂಸ್ಥೆಗಳ ನಡುವೆ ಚುನಾವಣಾ ಬಾಂಡ್‌ಗಳ ವಿಷಯದಲ್ಲಿ ಇರುವ ಅನೈತಿಕ 'ಕೊಡು–ಕೊಳುವಿಕೆ'ಯ ಕುರಿತು ತನಿಖೆ ನಡೆಸಲು ವಿಶೇಷ ತನಿಖಾ ತಂಡವನ್ನು (ಎಸ್ಐಟಿ) ರಚಿಸಬೇಕು ಎಂದು ಸುಪ್ರೀಂ ಕೋರ್ಟ್‌ಗೆ ಬುಧವಾರ ಅರ್ಜಿ ಸಲ್ಲಿಸಲಾಗಿದೆ.

ತನಿಖೆಯು ಸುಪ್ರೀಂ ಕೋರ್ಟ್ ನಿಗಾದಲ್ಲಿಯೇ ನಡೆಯಬೇಕು ಎಂದೂ ಕೇಳಲಾಗಿದೆ.

ಶೆಲ್ ಕಂಪನಿಗಳು ಹಾಗೂ ನಷ್ಟ ಅನುಭವಿಸುತ್ತಿರುವ ಕಂಪನಿಗಳೂ ಚುನಾವಣಾ ಬಾಂಡ್‌ಗಳನ್ನು ಖರೀದಿಸಿರುವುದಾಗಿ ಎಸ್‌ಬಿಐ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವ ದತ್ತಾಂಶ ಹೇಳುತ್ತದೆ. ಇಂತಹ ಕಂಪನಿಗಳ ಮೂಲ ಏನು ಎನ್ನುವುದನ್ನು ಪತ್ತೆ ಮಾಡಬೇಕು. ಆ ಹಣವನ್ನು ರಾಜಕೀಯ ಪಕ್ಷಗಳಿಂದ ಮರಳಿ ವಸೂಲು ಮಾಡುವ ಮಾರ್ಗವನ್ನೂ ಹುಡುಕುವಂತೆ ತನಿಖಾ ತಂಡಕ್ಕೆ ನಿರ್ದೇಶಿಸಬೇಕು ಎಂದು ಪ್ರಶಾಂತ್ ಭೂಷಣ್ ಅವರ ಮೂಲಕ ಸಲ್ಲಿಸಲಾದ ಅರ್ಜಿಯಲ್ಲಿ ಕೋರಲಾಗಿದೆ.

'ಕಾಮನ್ ಕಾಸ್' ಹಾಗೂ 'ಸೆಂಟರ್ ಫಾರ್ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್' ಸರ್ಕಾರೇತರ ಸಂಸ್ಥೆಗಳು, ಪ್ರಶಾಂತ್ ಭೂಷಣ್ ಅವರ ಮೂಲಕ ಅರ್ಜಿ ಸಲ್ಲಿಸಿವೆ.

ಚುನಾವಣಾ ಬಾಂಡ್ ಯೋಜನೆಯನ್ನು ಫೆಬ್ರುವರಿ 15ರಂದು ಸುಪ್ರೀಂ ಕೋರ್ಟ್‌ನ ಐವರು ಸದಸ್ಯರ ಪೀಠ ರದ್ದುಪಡಿಸಿ, ಆದೇಶ ನೀಡಿತ್ತು. 2018ರಲ್ಲಿ ಈ ಚುನಾವಣಾ ಬಾಂಡ್ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿತ್ತು.

ಎಸ್ಐಟಿ ರಚಿಸುವ ಭರವಸೆ: ಚುನಾವಣಾ ಬಾಂಡ್ ಕುರಿತು ಸುಪ್ರೀಂ ಕೋರ್ಟ್ ಎಸ್ಐಟಿ ತನಿಖೆಗೆ ತಂಡ ರಚಿಸುವುದನ್ನು ಎದುರು ನೋಡುತ್ತಿರುವುದಾಗಿ ಹೇಳಿರುವ ಸಿಪಿಐ ಮುಖಂಡ ಸೀತಾರಾಂ ಯಚೂರಿ, ಚುನಾವಣಾ ಬಾಂಡ್ ಎನ್ನುವುದು 'ವಸೂಲಿ ಮಾಫಿಯಾ ಮಾದರಿಯದ್ದು' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮುಖ್ಯಾಂಶಗಳು

- ನಷ್ಟ ಅನುಭವಿಸುತ್ತಿರುವ ಕಂಪನಿಗಳಿಂದಲೂ ಬಾಂಡ್ ಖರೀದಿ: ದತ್ತಾಂಶ
- ಪಕ್ಷಗಳಿಂದ ಹಣ ವಸೂಲಿಗೆ ಮಾರ್ಗ ಹುಡುಕಲು ತಂಡಕ್ಕೆ ನಿರ್ದೇಶಿಸಲು ಕೋರಿಕೆ

ಶಿಕ್ಷಕರ ನೇಮಕ ರದ್ದು: ಪಶ್ಚಿಮ ಬಂಗಾಳ ಕೋರ್ಟ್‌ಗೆ

ನವದೆಹಲಿ (ಪಿಟಿಐ): ರಾಜ್ಯಮಟ್ಟದ ಆಯ್ಕೆ ಪರೀಕ್ಷೆಯ ಮೂಲಕ 2016ರಲ್ಲಿ ನಡೆಸಿದ್ದ 25,753 ಸಾವಿರ ಶಿಕ್ಷಕರ ನೇಮಕಾತಿಯನ್ನು ಕಲ್ಕತ್ತ ಹೈಕೋರ್ಟ್ ರದ್ದುಪಡಿಸಿದ ಬೆನ್ನಲ್ಲೇ ಪಶ್ಚಿಮ ಬಂಗಾಳದ ಸರ್ಕಾರವು ಸುಪ್ರೀಂ ಕೋರ್ಟ್ ಮೊರೆಹೋಗಿದೆ.

ಸರ್ಕಾರಿ, ಅನುದಾನಿತ ಶಾಲೆಗಳ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಭರ್ತಿಗೆ ಪಶ್ಚಿಮ ಬಂಗಾಳ ರಾಜ್ಯ ಶಾಲಾ ಸೇವಾ ಪ್ರಾಧಿಕಾರಕ್ಕೆ (ಎಸ್ಎಸ್‌ಸಿ) ನಡೆಸಿದ್ದ ನೇಮಕಾತಿ ಪ್ರಕ್ರಿಯೆಯನ್ನು ಅಸಿಂಧು ಎಂದು ಹೈಕೋರ್ಟ್ ಘೋಷಿಸಿತ್ತು. ಈ ಹುದ್ದೆಗಳ ಭರ್ತಿಗಾಗಿ ಮತ್ತೆ ಪ್ರಕ್ರಿಯೆ ಆರಂಭಿಸಬೇಕು ಎಂದೂ ಆದೇಶಿಸಿತ್ತು.

ಅಲ್ಲದೆ, ಆಗ ಈ ಹುದ್ದೆಗಳಿಗೆ ನೇಮಕವಾಗಿದ್ದವರು ಇದುವರೆಗೆ ಪಡೆದಿರುವ ವೇತನದ ಮೊತ್ತವನ್ನು ವಾರ್ಷಿಕ ಶೇ 12ರ ಬಡ್ಡಿಯೊಂದಿಗೆ ಹಿಂದಿರುಗಿಸಬೇಕು ಎಂದೂ ಪೀಠ ಹೇಳಿತ್ತು.

ಹೈಕೋರ್ಟ್‌ನ ಈ ಆದೇಶವನ್ನು ಪ್ರಶ್ನಿಸಿ, ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿರುವ ಪಶ್ಚಿಮ ಬಂಗಾಳ ಸರ್ಕಾರ, 'ಹೈಕೋರ್ಟ್ ಸ್ವೇಚ್ಛಾನುಸಾರವಾಗಿ ಈ ನೇಮಕಾತಿ ಪ್ರಕ್ರಿಯೆಯನ್ನು ರದ್ದುಪಡಿಸಿದೆ' ಎಂದು ಹೇಳಿದೆ.

'ತಕ್ಷಣದಿಂದಲೇ ಜಾರಿಗೆ ಬರುವಂತೆ ಎಲ್ಲ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ನೇಮಕ ಪ್ರಕ್ರಿಯೆಯನ್ನು ರದ್ದುಗೊಳಿಸಿರುವ ಹೈಕೋರ್ಟ್, ಅದರಿಂದಾಗುವ ಪರಿಣಾಮಗಳನ್ನು ಸರಿಯಾಗಿ ಗ್ರಹಿಸಿದಂತಿಲ್ಲ. ಅಲ್ಲದೇ ಇಂಥ ತುರ್ತು ವಿಚಾರವನ್ನು ಸಮರ್ಥವಾಗಿ ನಿರ್ವಹಿಸಲು ಸರ್ಕಾರಕ್ಕೆ ಸಾಕಷ್ಟು ಕಾಲಾವಕಾಶವನ್ನೂ ಹೈಕೋರ್ಟ್ ನೀಡಿಲ್ಲ' ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

ಬಂಧನ ಪ್ರಶ್ನಿಸಿ ಸುಪ್ರೀಂ ಮೆಟ್ಟಿಲೇರಿದ ಸೊರೇನ್

ನವದೆಹಲಿ(ಪಿಟಿಐ): ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ತಮ್ಮನ್ನು ಬಂಧಿಸಿರುವುದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿ ಕುರಿತಂತೆ ಹೈಕೋರ್ಟ್ ತೀರ್ಪು ಪ್ರಕಟಿಸುತ್ತಿಲ್ಲ ಎಂದು ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಸುಪ್ರೀಂ ಕೋರ್ಟ್‌ಗೆ ಬುಧವಾರ ಮೇಲ್ಮನವಿ ಸಲ್ಲಿಸಿದ್ದಾರೆ.

ಸೊರೇನ್ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, 'ಸೊರೇನ್ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಪೂರ್ಣಗೊಳಿಸಿರುವ ಹೈಕೋರ್ಟ್ ಫೆಬ್ರುವರಿ 28ರಂದು ತೀರ್ಪು ಕಾಯ್ದಿರಿಸಿದೆ. ಈ ವರೆಗೂ ತನ್ನ ನಿರ್ಧಾರ ಪ್ರಕಟಿಸಿಲ್ಲ' ಎಂದು ನ್ಯಾಯಪೀಠಕ್ಕೆ ತಿಳಿಸಿದರು. ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ದೀಪಂಕರ್ ದತ್ತಾ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

'ಸೊರೇನ್ ಅವರನ್ನು ಇ.ಡಿ ಬಂಧಿಸಿದ್ದನ್ನು ಪ್ರಶ್ನಿಸಿ ಫೆಬ್ರುವರಿ 2ರಂದು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದೆವು. ಈ ಪ್ರಕರಣದಲ್ಲಿ ಪರಿಹಾರ ಕೋರಿ ಹೈಕೋರ್ಟ್ ಮೊರೆಹೋಗುವಂತೆ ನ್ಯಾಯಪೀಠ ನಿರ್ದೇಶನ ನೀಡಿತು. ಅದರಂತೆ, ಫೆಬ್ರುವರಿ 4ರಂದು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದೆವು. ವಿಚಾರಣೆ ಪೂರ್ಣಗೊಂಡಿದ್ದರೂ ಈ ವರೆಗೂ ತೀರ್ಪು ಪ್ರಕಟಿಸಿಲ್ಲ' ಎಂದು ಸಿಬಲ್ ವಿವರಿಸಿದರು.

'ನಮ್ಮ ಅರ್ಜಿಯನ್ನು ಶುಕ್ರವಾರ ವಿಚಾರಣೆ ನಡೆಸುವುದಕ್ಕಾಗಿ ಪಟ್ಟಿಗೆ ಸೇರಿಸಬೇಕು' ಎಂದು ಮನವಿ ಮಾಡಿದರು. ಇದಕ್ಕೆ 'ಅರ್ಜಿಯನ್ನು ವಿಚಾರಣಾ ಪಟ್ಟಿಗೆ ಸೇರಿಸುವ ಕುರಿತು ನ್ಯಾಯಮೂರ್ತಿಗಳ ಕಾರ್ಯಾಲಯವೇ ತೀರ್ಮಾನಿಸಲಿದೆ. ಹೀಗಾಗಿ ಈ ಬಗ್ಗೆ ನಾನೇನು ಹೇಳಲಾಗದು' ಎಂದಿತು.

ಗಂಗಾಜಲ ಗಂಗಾನದಿಯಿಂದ ಪವಿತ್ರ ನೀರು ಹೊತ್ತು ತಂದ ಭಕ್ತರು ಉತ್ತರಪ್ರದೇಶದ ಮಿರ್ಜಾಪುರದಲ್ಲಿರುವ ವಿಧ್ಯಾಂಚಲ ಧಾಮದಲ್ಲಿ ಪೂಜೆಗಾಗಿ ಸರತಿ ಸಾಲಿನಲ್ಲಿ ನಿಂತರು –ಪಿಟಿಐ ಚಿತ್ರ

ರಾವುತ್ ಆಪ್ತರ ಆಸ್ತಿ ಜಪ್ತಿ

ನವದೆಹಲಿ (ಪಿಟಿಐ): ಶಿವಸೇನಾ (ಉದ್ಧವ್ ಬಣ) ಸಂಸದ ಸಂಜಯ್ ರಾವುತ್ ಅವರ ಆಪ್ತ ಪ್ರವೀಣ್ ರಾವುತ್ ಮತ್ತಿತರರಿಗೆ ಸಂಬಂಧಿಸಿದ ₹73.62 ಕೋಟಿ ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಬುಧವಾರ ತಿಳಿಸಿದೆ.

ಮುಂಬೈನ ಪಾತ್ರಾ ಚಾಲ್ ನವೀಕರಣದಲ್ಲಿ ಅವ್ಯವಹಾರ ನಡೆದಿದೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಇ.ಡಿ ಈ ಕ್ರಮ ಕೈಗೊಂಡಿದೆ.

ಪಾಲ್ಘರ್, ದಾಪೋಲಿ, ರಾಯಗಢ ಮತ್ತು ಠಾಣೆಯಲ್ಲಿದ್ದ ಪ್ರವೀಣ್ ಮತ್ತು ಅವರ ಸಂಬಂಧಿಕರ ಸ್ಥಿರಾಸ್ತಿಯನ್ನು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿಯಲ್ಲಿ ಜಪ್ತಿ ಮಾಡಲಾಗಿದೆ ಎಂದು ಇ.ಡಿ ಹೇಳಿಕೆ ಮೂಲಕ ತಿಳಿಸಿದೆ.

ಪ್ರಕರಣದಲ್ಲಿ ಸಂಜಯ್ ರಾವುತ್ ಮತ್ತು ಪ್ರವೀಣ್ ರಾವುತ್ ಅವರನ್ನು ಇ.ಡಿ ಬಂಧಿಸಿದ್ದು, ಸದ್ಯ ಅವರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ.

ರಾಂಚಿಯಲ್ಲಿ ಹಕ್ಕಿಜ್ವರದ ಭೀತಿ

ರಾಂಚಿ (ಜಾರ್ಖಂಡ್) (ಪಿಟಿಐ): ರಾಜ್ಯ ಸರ್ಕಾರ ಇಲ್ಲಿ ನಡೆಸುವ ಫಾರ್ಮ್ ಒಂದರಲ್ಲಿ ಹಕ್ಕಿಜ್ವರ ಕಾಣಿಸಿಕೊಂಡಿದ್ದರಿಂದ ಮುಂಜಾಗ್ರತಾ ಕ್ರಮವಾಗಿ 2196 ಹಕ್ಕಿಗಳನ್ನು ಕೊಲ್ಲಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹೋಟ್ವಾರ್ ಎಂಬಲ್ಲಿನ ಪ್ರಾದೇಶಿಕ ಫಾರ್ಮ್‌ನಲ್ಲಿ ಕೊಲ್ಲಲಾದ ಹಕ್ಕಿಗಳಲ್ಲಿ 1,745 ಕೋಳಿಗಳೂ ಸೇರಿದ್ದವು. 1697 ಮೊಟ್ಟೆಗಳನ್ನೂ ನಾಶಪಡಿಸಲಾಗಿದೆ ಎಂದರು. ಎಚ್5ಎನ್1 ಇನ್‌ಫ್ಲುಯೆಂಜಾ ವೈರಸ್ ಪತ್ತೆಯಾಗಿದ್ದರಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಬಿಸಿಗಾಳಿ: ತ್ರಿಪುರಾ ಶಾಲೆಗಳಿಗೆ ರಜೆ

ಅಗರ್ತಲಾ (ಪಿಟಿಐ): ತ್ರಿಪುರಾದಲ್ಲಿ ಬಿಸಿಲಿನ ಝಳ ಹೆಚ್ಚಾಗಿದ್ದು, ಬಿಸಿಗಾಳಿ ವ್ಯಾಪಕವಾಗುತ್ತಿರುವ ಪರಿಣಾಮ ಏಪ್ರಿಲ್ 24ರಿಂದ 27ರವರೆಗೆ ರಾಜ್ಯದ ಎಲ್ಲಾ ಶಾಲೆಗಳಿಗೆ ಸರ್ಕಾರ ರಜೆ ಘೋಷಿಸಿದೆ ಎಂದು ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ರಾಜ್ಯದಲ್ಲಿ ಬುಧವಾರ 37 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದ್ದು, ಇದು ಸಾಮಾನ್ಯ ದಿನಗಳಲ್ಲಿ ದಾಖಲಾಗುವ ತಾಪಮಾನಕ್ಕಿಂತಲೂ 3 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚು. ಈಶಾನ್ಯ ಭಾರತದ ಈ ರಾಜ್ಯದಲ್ಲಿ ಈ ವಾರದಲ್ಲಿ ತಾಪಮಾನ 39 ಡಿಗ್ರಿ ಸೆಲ್ಸಿಯಸ್‌ಗೆ ತಲುಪುವ ಭೀತಿ ಇದೆ ಎಂದು ಭಾರತೀಯ ಹವಾಮಾನ ಇಲಾಖೆಯ ಬುಲೆಟಿನ್ ತಿಳಿಸಿದೆ.

ಮಹಾರಾಷ್ಟ್ರದಲ್ಲೂ ಎಚ್ಚರಿಕೆ: ಮುಂಬೈ (ವರದಿ): ಮಹಾರಾಷ್ಟ್ರದ ರಾಜಧಾನಿ ಮುಂಬೈನ ಕೆಲವು ಭಾಗಗಳು, ಠಾಣೆ, ರಾಯಗಡ ಜಿಲ್ಲೆಗಳಲ್ಲಿ ಏಪ್ರಿಲ್ 27ರಿಂದ 29ರವರೆಗೆ ಭಾರಿ ಪ್ರಮಾಣದ ಬಿಸಿ ಗಾಳಿಯ ತಾಪ ಇರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಬುಧವಾರ ಎಚ್ಚರಿಕೆ ನೀಡಿದೆ.

ಬಿಹಾರದ ನಾಲ್ಕು ಕ್ಷೇತ್ರಗಳಲ್ಲಿ ಮತದಾನದ ಅವಧಿ ವಿಸ್ತರಣೆ: ನವದೆಹಲಿ (ವರದಿ): ಬಿಸಿಲಿನ ಝಳ ಹೆಚ್ಚಾದ ಕಾರಣಕ್ಕೆ ಬಿಹಾರದ ನಾಲ್ಕು ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿನ ವಿಧಾನಸಭೆ ಭಾಗಗಳಲ್ಲಿ ಮತದಾನದ ಅವಧಿಯನ್ನು ಚುನಾವಣಾ ಆಯೋಗವು ಎರಡು ಗಂಟೆಗಳ ಕಾಲ ವಿಸ್ತರಣೆ ಮಾಡಿದೆ.

ಟವರ್ ಏರಿ ಪ್ರತಿಭಟಿಸಿದ ರೈತರು

ನವದೆಹಲಿ (ಪಿಟಿಐ): ಬೆಳೆಗಳಿಗೆ ಉತ್ತಮ ಬೆಂಬಲ ಬೆಲೆಗೆ ಹಾಗೂ ನದಿ ಜೋಡಣೆ ವಿಚಾರವಾಗಿ ನಿರ್ಧಾರ ತೆಗೆದುಕೊಳ್ಳುವಂತೆ ಆಗ್ರಹಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ಮಹಿಳೆ ಸೇರಿದಂತೆ ತಮಿಳುನಾಡಿನ ಕೆಲವು ರೈತರು ಬುಧವಾರ ಮೊಬೈಲ್ ಟವರ್ ಏರಿ ಪ್ರತಿಭಟನೆ ನಡೆಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮರ ಮತ್ತು ಮೊಬೈಲ್ ಟವರ್ ಅನ್ನು ಹತ್ತಿದ್ದ ತಮಿಳುನಾಡಿನ ಕೆಲ ರೈತರನ್ನು ಪೊಲೀಸರು ಅಗ್ನಿಶಾಮಕ ದಳದ ಕ್ರೇನ್ ಬಳಸಿ ಮೊಬೈಲ್ ಟವರ್‌ನಿಂದ ಕೆಳಗೆ ಕರೆತರಲಾಗಿದೆ ಎಂದು ಅವರು ತಿಳಿಸಿದ್ದಾರೆ.

ನದಿಗಳ ಜೋಡಣೆಗಾಗಿ ಸುಮಾರು 50 ರೈತರು ಬಂದಿದ್ದು, ಅವರಲ್ಲಿ ಇಬ್ಬರು ಮೊಬೈಲ್ ಟವರ್ ಅನ್ನು ಹತ್ತಲು ಪ್ರಯತ್ನಿಸಿದರು. ಆಗ ಅವರನ್ನು ಕೆಳಗೆ ಇಳಿಸಲಾಯಿತು. ಮತ್ತೆ ಅದೇ ಸ್ಥಳದಲ್ಲಿ ಇದ್ದ ಮರಗಳನ್ನು ಕೆಲವರು ಹತ್ತಲು ಪ್ರಯತ್ನಿಸಿದರು ಎಂದು ದೆಹಲಿಯ ಪೊಲೀಸ್ ಅಧಿಕಾರಿ ದೇವೇಶ್ ಕುಮಾರ್ ಮಹಲಾ ಹೇಳಿದ್ದಾರೆ.

ಪ್ರತಿಭಟನೆಯಲ್ಲಿ ತಮಿಳುನಾಡಿನ ಸುಮಾರು 100 ರೈತರು ಭಾಗ ವಹಿಸಿದ್ದರು. ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ, ಲೋಕಸಭೆ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಎದುರು ವಾರಾಣಸಿ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ರೈತರು ಹೇಳಿದ್ದಾರೆ.

ನವದೆಹಲಿಯ ಜಂತರ್ ಮಂತರ್‌ನಲ್ಲಿ ತಮಿಳುನಾಡಿನ ರೈತರು ಬುಧವಾರ ಪ್ರತಿಭಟನೆ ನಡೆಸಿದಾಗ ಮರ ಹತ್ತಿದ್ದ ರೈತಮಹಿಳೆಯೊಬ್ಬರನ್ನು ಪೊಲೀಸರು ಕೆಳಗೆ ಇಳಿಸಲು ಮುಂದಾದರು – ಪಿಟಿಐ ಚಿತ್ರ

ಕಚ್ಚಾಬಾಂಬ್: ಮಣಿಪುರದಲ್ಲಿ ಮೇಲ್ಸೇತುವೆಗೆ ಹಾನಿ

ಇಂಫಾಲ್ (ಪಿಟಿಐ): ಹಿಂಸಾಚಾರ ಪೀಡಿತ ಮಣಿಪುರದ ಕಾಂಗ್‌ಪೋಕ್ಪಿ ಜಿಲ್ಲೆಯಲ್ಲಿನ ರಾಷ್ಟ್ರೀಯ ಹೆದ್ದಾರಿ–2ರಲ್ಲಿ ಮಂಗಳವಾರ ಮಧ್ಯರಾತ್ರಿ ಸಂಭವಿಸಿದ ಪ್ರಬಲ ಕಚ್ಚಾಬಾಂಬ್ ಸ್ಫೋಟದಿಂದಾಗಿ ಹೆದ್ದಾರಿಯಲ್ಲಿದ್ದ ಮೇಲ್ಸೇತುವೆಯ ಕೆಲವು ಭಾಗ ಹಾನಿಗೀಡಾಗಿದೆ. ಇದರಿಂದ ಈ ಮಾರ್ಗದಲ್ಲಿ ಹಲವು ಗಂಟೆಗಳ ಕಾಲ ಸಂಚಾರ ದಟ್ಟಣೆ ಉಂಟಾಗಿದ್ದು, 150ಕ್ಕೂ ಹೆಚ್ಚು ಸರಕು ಸಾಗಣೆ ವಾಹನಗಳು ಸಾಲುಗಟ್ಟಿ ನಿಂತಿದ್ದವು ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸಪರ್‌ಮೀನಾ ಮತ್ತು ಕೌಬ್ರು ಲೀಖಾ ಎಂಬ ಪ್ರದೇಶಗಳ ಮಧ್ಯೆ ಇರುವ ಮೇಲ್ಸೇತುವೆ ಮೇಲೆ ರಾತ್ರಿ 12.45ರ ವೇಳೆಗೆ ಬಾಂಬ್ ಸ್ಫೋಟ ಸಂಭವಿಸಿದೆ. ಹೀಗಾಗಿ ಮಣಿಪುರ ರಾಜಧಾನಿ ಇಂಫಾಲ್ ಮತ್ತು ನಾಗಾಲ್ಯಾಂಡ್‌ನ ದೀಮಾಪುರವನ್ನು ಸಂಪರ್ಕಿಸುವ ಈ ಮೇಲ್ಸೇತುವೆಗೆ ವಾಹನಗಳು ಬಾರದಂತೆ ತಡ್ಡೆಯೊಡ್ಡಲಾಯಿತು. ಇದರಿಂದಾಗಿ ಭಾರಿ ದಟ್ಟಣೆ ಉಂಟಾಗಿತ್ತು. ಅದೃಷ್ಟಾವಶತ್ ಸಾವು–ನೋವಿನ ವರದಿಯಾಗಿಲ್ಲ ಎಂದು ಅಧಿಕಾರಿ ಹೇಳಿದ್ದಾರೆ.

ಕಳೆದ ವರ್ಷ ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವಿನ ಸಂಘರ್ಷದಲ್ಲಿ 200ಕ್ಕೂ ಹೆಚ್ಚು ಮಂದಿ ಬಲಿಯಾಗಿದ್ದು, ಸಾವಿರಾರು ಮಂದಿ ನಿರಾಶ್ರಿತರಾಗಿದ್ದರು.

ಕೇಜ್ರಿವಾಲ್ ಭೇಟಿಯಾದ ಸಚಿವ

ದೆಹಲಿ ಜನರ ಆಶೀರ್ವಾದದೊಂದಿಗೆ ಹೋರಾಟ ಮುಂದುವರಿಸುವ ಸಂದೇಶ

ಸೌರಭ್ ಭಾರದ್ವಾಜ್

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ತಿಹಾರ್ ಜೈಲಿನಲ್ಲಿ ಬುಧವಾರ ಭೇಟಿಯಾದ ದೆಹಲಿ ಸಚಿವ ಸೌರಭ್ ಭಾರದ್ವಾಜ್ ಅವರು 30 ನಿಮಿಷ ಮಾತುಕತೆ ನಡೆಸಿದರು.

ಈ ವೇಳೆ ಕೇಜ್ರಿವಾಲ್ ಅವರು ತನ್ನ ಬಗ್ಗೆ ಚಿಂತಿಸಬೇಡಿ ಎಂದು ದೆಹಲಿ ಜನರಿಗೆ ಸಂದೇಶ ಕಳುಹಿಸಿದ್ದಾರೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಮುಲಾಕಾತ್ ಜಂಗ್ಲಾ'ದಲ್ಲಿ ಕೇಜ್ರಿವಾಲ್ ಅವರನ್ನು ಭೇಟಿಯಾಗಿ, ಅವರೊಂದಿಗೆ ದೂರವಾಣಿಯಲ್ಲಿ ಅರ್ಧಗಂಟೆ ಸಂಭಾಷಣೆ ನಡೆಸಿದೆ. ತಾನು ಬಲಶಾಲಿಯಾಗಿದ್ದು, ದೆಹಲಿ ಜನರ ಆಶೀರ್ವಾದದೊಂದಿಗೆ ಹೋರಾಟ ಮುಂದುವರಿಸುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ ಎಂದು ಸೌರಭ್ ವಿವರಿಸಿದರು.

'ಮುಲಾಕಾತ್ ಜಂಗ್ಲಾ' ಎಂಬುದು ಕಬ್ಬಿಣ ಜಾಲರಿಯಾಗಿದ್ದು, ಜೈಲಿನೊಳಗಿನ ಕೊಠಡಿಯಲ್ಲಿ ಸಂದರ್ಶಕರಿಂದ ಕೈದಿಯನ್ನು ಪ್ರತ್ಯೇಕಿಸುತ್ತದೆ. ಸಂದರ್ಶಕ ಮತ್ತು ಕೈದಿ ಜಾಲರಿಯ ವಿವಿಧ ಬದಿಗಳಲ್ಲಿ ಕುಳಿತು ಪರಸ್ಪರ ಮಾತನಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.

ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ಮಾರ್ಚ್ 21ರಂದು ಕೇಜ್ರಿವಾಲ್ ಅವರನ್ನು ಬಂಧಿಸಿತ್ತು. ಇದಕ್ಕೂ ಮುನ್ನಾ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್, ಎಎಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಸಂದೀಪ್ ಪಾಠಕ್ ಅವರು ಏಪ್ರಿಲ್ 15ರಂದು ತಿಹಾರ್ ಜೈಲಿನಲ್ಲಿ ಕೇಜ್ರಿವಾಲ್ ಅವರನ್ನು ಭೇಟಿಯಾಗಿದ್ದರು.

ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ್ದ ಪಾಠಕ್ ಅವರು, ಮುಖ್ಯಮಂತ್ರಿ ಅವರು ಪ್ರತಿ ವಾರ ಇಬ್ಬರು ಸಚಿವರನ್ನು ಭೇಟಿ ಮಾಡಿ, ಆಯಾ ಇಲಾಖೆಗಳ ಪ್ರಗತಿ ಪರಿಶೀಲಿಸುತ್ತಾರೆ ಎಂದು ಹೇಳಿದ್ದರು.

ಆತಿಶಿಗೆ ಸಿಗದ ಅವಕಾಶ

ನವದೆಹಲಿ (ಪಿಟಿಐ): ಅರವಿಂದ ಕೇಜ್ರಿವಾಲ್ ಅವರೊಂದಿಗೆ ದೆಹಲಿ ಸಚಿವೆ ಆತಿಶಿ ಅವರು ಮಾತನಾಡುವ ಅವಕಾಶ ಕೋರಿದ್ದು, ತಿಹಾರ್ ಜೈಲು ಆಡಳಿತವು ಕೊನೆ ಕ್ಷಣದಲ್ಲಿ ಅದನ್ನು ರದ್ದುಗೊಳಿಸಿದೆ ಎಂದು ಎಎಪಿ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಬುಧವಾರ ಆರೋಪಿಸಿದರು.

'ಬ್ರಿಟಿಷ್ ಆಡಳಿತ ಸಹ ಈ ರೀತಿ ನಡೆದುಕೊಂಡಿರಲಿಲ್ಲ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಬೇಸರ ವ್ಯಕ್ತಪಡಿಸಿದರು.

'ಸಚಿವ ಸೌರಭ್ ಜೊತೆಗೆ ಆತಿಶಿ ಅವರೂ ಅರ್ಜಿ ಸಲ್ಲಿಸಿದ್ದರು. ಆದರೆ ಕೊನೆಕ್ಷಣದಲ್ಲಿ ಆತಿಶಿ ಅವರಿಗೆ ಅವಕಾಶ ನಿರಾಕರಿಸಲಾಗಿದೆ' ಎಂದು ಅವರು ವಿವರಿಸಿದರು.

ಸೌರಭ್ ಜತೆಯಲ್ಲಿ ಕೇಜ್ರಿವಾಲ್ ಅವರನ್ನು ಭೇಟಿಯಾಗಲು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಸಂದೀಪ್ ಪಾಠಕ್ ಅವರೂ ತೆರಳಬೇಕಿತ್ತು. ಆದರೆ ಬುಧವಾರ ಬೆಳಿಗ್ಗೆ 9.30ರ ಸುಮಾರಿಗೆ ಪಾಠಕ್ ಅವರ ಅನುಮತಿಯನ್ನು ರದ್ದುಪಡಿಸಿರುವ ಮಾಹಿತಿ ನೀಡಲಾಯಿತು. ಮುಂದೆ ಕೇಜ್ರಿವಾಲ್ ಅವರ ಪತ್ನಿಯ ಭೇಟಿಯನ್ನೂ ರದ್ದುಗೊಳಿಸಬಹುದು ಎಂದು ಅವರು ದೂರಿದರು.

ಪ್ರತಿ ಹೇಳಿಕೆ ಸಲ್ಲಿಸಲು ಸಮಯಾವಕಾಶ

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ (ಇ.ಡಿ) ನೀಡಿದ ಸಮನ್ಸ್‌ಗೆ ಸ್ಪಂದಿಸಿಲ್ಲ ಎಂಬ ಆರೋಪಕ್ಕೆ ಸಂಬಂಧಿಸಿದ ಆದೇಶದಲ್ಲಿ ಮಾರ್ಪಾಡು ಮಾಡಬೇಕು ಎಂದು ಕೋರಿ ಸಲ್ಲಿಸಿರುವ ಎರಡು ಅರ್ಜಿಗಳಿಗೆ ಇ.ಡಿ. ಸಲ್ಲಿಸಿದ ಪ್ರತಿಕ್ರಿಯೆಗೆ ಪ್ರತಿಹೇಳಿಕೆ ಸಲ್ಲಿಸಲು ದೆಹಲಿಯ ನ್ಯಾಯಾಲಯವೊಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಎರಡು ವಾರಗಳ ಸಮಯಾವಕಾಶ ನೀಡಿದೆ.

ಆದೇಶದ ಮಾರ್ಪಾಡು ಕೋರಿ ಕೇಜ್ರಿವಾಲ್ ಅರ್ಜಿ ಸಲ್ಲಿಸಿದ್ದಾರೆ. ಸಮನ್ಸ್‌ಗಳಿಂದ ಅವರು ತಪ್ಪಿಸಿಕೊಳ್ಳುತ್ತಿದ್ದಾರೆ ಎಂದು ಇ.ಡಿ. ಸಲ್ಲಿಸಿದ ದೂರು ಆಧರಿಸಿ ಮ್ಯಾಜಿಸ್ಟೀರಿಯಲ್ ನ್ಯಾಯಾಲಯವೊಂದು ಕೇಜ್ರಿವಾಲ್ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಆದೇಶಿಸಿತ್ತು. ಇದನ್ನು ಕೇಜ್ರಿವಾಲ್ ಅವರು ವಿಶೇಷ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಾರೆ.

ಕೇಜ್ರಿವಾಲ್ ಜೈಲಿನಲ್ಲಿ ಇರುವ ಕಾರಣ ಮಾಹಿತಿ ಪಡೆದುಕೊಳ್ಳುವುದು ಆಗುತ್ತಿಲ್ಲ ಎಂದು ಅವರ ವಕೀಲರು ತಿಳಿಸಿದರು. ಅದನ್ನು ಪರಿಗಣಿಸಿ ಎರಡು ವಾರಸಮಯಾವಕಾಶ ನೀಡಿತು. ಅರ್ಜಿಯ ವಿಚಾರಣೆಯನ್ನು ಮೇ 14ಕ್ಕೆ ಮುಂದೂಡಲಾಗಿದೆ.

'ವಿಜ್ಞಾನದಲ್ಲಿ ಆಸಕ್ತಿ ಮೂಡಿಸುವುದೇ 'ಚಂದ್ರಯಾನ–3'ರ ತಿರುಳು'

ಕೋಲ್ಕತ್ತ(ಪಿಟಿಐ): 'ಚಂದ್ರಯಾನ–3'ರ ಯಶಸ್ಸು ಕೇವಲ ಬಾಹ್ಯಾಕಾಶ ಕುರಿತ ಅಧ್ಯಯನಕ್ಕೆ ಸೀಮಿತವಾಗದು. ಎಂಜಿನಿಯರಿಂಗ್ ಮತ್ತು ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಳ್ಳುವಲ್ಲಿ ಆಸಕ್ತಿ ಮೂಡಿಸುವುದು ಹಾಗೂ ಕ್ರಿಯಾಶೀಲವಾದ ವೈಜ್ಞಾನಿಕ ಸಮುದಾಯವೊಂದನ್ನು ಪೋಷಿಸುವುದೇ ಈ ಕಾರ್ಯಕ್ರಮದ ತಿರುಳಾಗಿದೆ ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಹೇಳಿದ್ದಾರೆ.

ಪಿಟಿಐ ಜೊತೆ ಮಾತನಾಡಿರುವ ಅವರು, 'ಅಂತರಿಕ್ಷ ಅನ್ವೇಷಣೆಗೆ ಉತ್ತೇಜನ ನೀಡುವ ಜೊತೆಗೆ ಬಾಹ್ಯಾಕಾಶ ಕ್ಷೇತ್ರಕ್ಕೆ ನಂಟಿರುವ ಉದ್ದಿಮೆಗಳನ್ನು ಬೆಳೆಸುವುದು ಕೂಡ ಮುಖ್ಯ' ಎಂದು ಪ್ರತಿಪಾದಿಸಿದ್ದಾರೆ.

'ಬಾಹ್ಯಾಕಾಶ ಕ್ಷೇತ್ರ ಮಾತ್ರವಲ್ಲ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸಂಶೋಧನೆಯಲ್ಲಿ ತೊಡಗುವಂತೆ ಯುವ ಪೀಳಿಗೆಯಲ್ಲಿ ಆಸಕ್ತಿ ಮೂಡಿಸಬೇಕಿದೆ. ಇದಕ್ಕಾಗಿ, ಈ ಕ್ಷೇತ್ರಗಳಲ್ಲಿ ಎದುರಾಗುವ ಸವಾಲುಗಳು ಹಾಗೂ ಬೆಳವಣಿಗೆಗಳನ್ನು ವಿವರಿಸುವ ಮೂಲಕ ಯುವ ಪೀಳಿಗೆಯನ್ನು ಆಕರ್ಷಿಸುವ ನಿಟ್ಟಿನಲ್ಲಿ ಚಂದ್ರಯಾನ–3 ಪ್ರಮುಖಪಾತ್ರ ವಹಿಸುತ್ತದೆ' ಎಂದರು.

'ಐಟಿ ಕ್ಷೇತ್ರದಲ್ಲಿ ದೇಶ ಮುಂಚೂಣಿಯಲ್ಲಿದೆ. ಈ ಕ್ಷೇತ್ರದಲ್ಲಿ ಗಮನಾರ್ಹ ಪ್ರಮಾಣದ ಉದ್ಯೋಗದಾತರನ್ನು ಹೊಂದಿದ್ದೇವೆ' ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಶಸ್ತ್ರಾಸ್ತ್ರ ತ್ಯಜಿಸಿದ 18 ನಕ್ಸಲರು

ದಾಂತೇವಾಡ (ಪಿಟಿಐ): ಛತ್ತೀಸಗಢದ ದಾಂತೇವಾಡದಲ್ಲಿ ಮೂವರು ಮಹಿಳೆಯರು ಸೇರಿದಂತೆ 18 ನಕ್ಸಲೀಯರು ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಶರಣಾಗಿದ್ದಾರೆ. ಈ ಮೂಲಕ ಸಮಾಜದ ಮುಖ್ಯವಾಹಿನಿಯ ಭಾಗವಾಗಲು ನಿರ್ಧರಿಸಿದ್ದಾರೆ ಎಂದು ದಂತೇವಾಡ ಪೊಲೀಸ್ ವರಿಷ್ಠಾಧಿಕಾರಿ ಗೌರವ್ ರಾಯ್ ತಿಳಿಸಿದ್ದಾರೆ.

ಹುರೇಪಾಲ್ ಪಂಚಾಯತ್ ಮಿಲಿಷಿಯಾ ಪ್ಲಾಟೂನ್ ವಿಭಾಗದ ಕಮಾಂಡರ್ ಆಗಿದ್ದ ಹಿಡ್ಮಾ ಒಯಾಮ್ (34), ಮೂವರು ಮಹಿಳಾ ನಕ್ಸಲೀಯರ ಪೈಕಿ ಉಪ ಕಮಾಂಡರ್ ಆಗಿದ್ದ ಸಂಬತಿ ಒಯಾಮ್ (23), ನಿಷೇಧಿತ ಸಿಪಿಐನ (ಮಾವೋವಾದಿ) ಕಾಕಡಿ ಪಂಚಾಯತ್ ಕ್ರಾಂತಿಕಾರಿ ಮಹಿಳಾ ಆದಿವಾಸಿ ಸಂಘಟನೆಯ ಉಪಾಧ್ಯಕ್ಷೆ ಗಂಗಿ ಮಡ್ಕಮ್ (28) ಹಾಗೂ ಮಾವೋವಾದಿ ಸಂಘಟನೆಯ ಸದಸ್ಯೆ ಹುಂಗಿ ಒಯಾಮ್ (20) ಶರಣಾದ ಪ್ರಮುಖರು.

ಈ ಮೂಲಕ ದಂತೇವಾಡ ಜಿಲ್ಲೆಯಲ್ಲಿ 738 ನಕ್ಸಲೀಯರು ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಸಮಾಜದ ಮುಖ್ಯವಾಹಿನಿಗೆ ಬಂದಂತಾಗಿದೆ.

ಉಗ್ರರ ಪತ್ತೆಗೆ ತೀವ್ರ ಶೋಧ

ಶ್ರೀನಗರ (ಪಿಟಿಐ): 'ಜಮ್ಮು ಮತ್ತು ಕಾಶ್ಮೀರದ ಬಂಡಿಪೋರಾ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಮತ್ತು ಭಯೋತ್ಪಾದಕರ ನಡುವೆ ಬುಧವಾರ ಎನ್‌ಕೌಂಟರ್ ನಡೆದಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಎನ್‌ಕೌಂಟರ್ ಬೆನ್ನಲ್ಲೇ, ಅಡಗುದಾಣಗಳಲ್ಲಿನ ಉಗ್ರರು ಪಾರಾಗದಂತೆ ತಡೆಯಲು ಹೆಲಿಕಾಪ್ಟರ್‌ಗಳ ಮೂಲಕ ವೈಮಾನಿಕ ಕಣ್ಗಾವಲು ನಡೆಸಲಾಗುತ್ತಿದೆ. ಘಟನೆಯಲ್ಲಿ ಸಂಭವಿಸಿರಬಹುದಾದ ಸಾವು– ನೋವಿನ ಬಗ್ಗೆ ಯಾವುದೇ ಮಾಹಿತಿ ಇಲ್ಲ' ಎಂದಿದ್ದಾರೆ.

'ವಿಷ ಪತ್ತೆ ಆಗಿಲ್ಲ'

ಲಖನೌ (ಪಿಟಿಐ): ಉತ್ತರ ಪ್ರದೇಶದ ಕಾರಾಗೃಹದಲ್ಲಿ ಕಳೆದ ತಿಂಗಳು ಮೃತಪಟ್ಟ ಗ್ಯಾಂಗ್‌ಸ್ಟರ್ ಮತ್ತು ಮಾಜಿ ಶಾಸಕ ಮುಖ್ತಾರ್ ಅನ್ಸಾರಿ ಅವರ ಕರುಳಿನಲ್ಲಿ ವಿಷಕಾರಿ ಅಂಶ ಪತ್ತೆಯಾಗಿಲ್ಲ ಎಂದು ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

'ಅನ್ಸಾರಿ ಕರುಳಿನಲ್ಲಿ ವಿಷದ ಅಂಶ ಕಂಡುಬಂದಿಲ್ಲ ಎಂಬ ವಿಧಿವಿಜ್ಞಾನದ ವರದಿಯನ್ನು ಈ ಕುರಿತು ತನಿಖೆ ನಡೆಸುತ್ತಿರುವ ಸಮಿತಿಗೆ ಈ ಸಲ್ಲಿಸಲಾಗುವುದು' ಎಂದು ಹಿರಿಯ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದರು.

ಬಿಜೆಪಿ ವಿರುದ್ಧ ಶಿವಸೇನಾ (ಯುಬಿಟಿ) ಟೀಕೆ

ಬಹುಕೋಟಿ 'ಹಗರಣ': ಸುನೇತ್ರ ಆರೋಪಮುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರ ರಾಜ್ಯ ಸಹಕಾರ ಬ್ಯಾಂಕ್ (ಎಂಎಸ್‌ಸಿಬಿ) ನಲ್ಲಿ ₹25 ಸಾವಿರ ಕೋಟಿ ಮೊತ್ತದ ಅವ್ಯವಹಾರ ನಡೆದಿದೆ ಎನ್ನಲಾದ ಪ್ರಕರಣದಲ್ಲಿ ಉಪಮುಖ್ಯಮಂತ್ರಿ ಅಜಿತ್ ಪವಾರ್ ಪತ್ನಿ ಹಾಗೂ ಬಾರಾಮತಿ ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಆಗಿರುವ ಸುನೇತ್ರ ಪವಾರ್ ಅವರನ್ನು ಮುಂಬೈ ಪೊಲೀಸರು ದೋಷಮುಕ್ತಗೊಳಿಸಿದ್ದಾರೆ.

ಈ ಹಗರಣ ಕುರಿತು ತನಿಖೆ ಕೈಗೊಂಡಿದ್ದ ಮುಂಬೈ ಪೊಲೀಸ್‌ನ ಆರ್ಥಿಕ ಅಪರಾಧಗಳ ವಿಭಾಗವು (ಇಒಡಬ್ಲ್ಯು), ಪ್ರಕರಣ ಮುಕ್ತಾಯಗೊಳಿಸಿ ಜನವರಿಯಲ್ಲಿ ವರದಿ ಸಲ್ಲಿಸಿದೆ.

'ಅಜಿತ್ ಪವಾರ್ ಹಾಗೂ ಸುನೇತ್ರ ಪವಾರ್ ಅವರ ಜೊತೆ ನಂಟಿತ್ತು ಎಂದು ಆರೋಪಿಸಲಾದ ಹಣಕಾಸು ವ್ಯವಹಾರದಲ್ಲಿ ಯಾವುದೇ ಕ್ರಿಮಿನಲ್ ಅಪರಾಧ ನಡೆದಿಲ್ಲ' ಎಂದು ಇಒಡಬ್ಲ್ಯು ತನ್ನ ವರದಿಯಲ್ಲಿ ತಿಳಿಸಿದೆ ಎಂದು ಮೂಲಗಳನ್ನು ಉಲ್ಲೇಖಿಸಿ 'ಎನ್‌ಡಿಟಿವಿ' ವರದಿ ಮಾಡಿದೆ.

ಸುನೇತ್ರ ಪವಾರ್

ಸುನೇತ್ರ ಅವರು ಎನ್‌ಸಿಪಿ (ಶರದ್ ಪವಾರ್ ಬಣ) ಭದ್ರಕೋಟೆ ಎನಿಸಿರುವ ಬಾರಾಮತಿ ಕ್ಷೇತ್ರದಲ್ಲಿ ಶರದ್ ಪವಾರ್ ಪುತ್ರಿ ಸುಪ್ರಿಯಾ ಸುಳೆ ಅವರನ್ನು ಎದುರಿಸುತ್ತಿದ್ದಾರೆ.

'ಅಜಿತ್ ಪವಾರ್ ಅವರ ಜೊತೆ ನಂಟು ಹೊಂದಿರುವ ಜರಂಡೇಶ್ವರ ಸಕ್ಕರೆ ಕಾರ್ಖಾನೆಗೆ ಸಾಲ ಅಥವಾ ಮಾರಾಟ ಕುರಿತು ಮಂಜೂರಾತಿ ನೀಡಿದ ಪ್ರಕ್ರಿಯೆಯಲ್ಲಿ ಮಹಾರಾಷ್ಟ್ರ ರಾಜ್ಯ ಸಹಕಾರ ಬ್ಯಾಂಕಿಗೆ ಯಾವುದೇ ರೀತಿಯ ನಷ್ಟ ಉಂಟಾಗಿಲ್ಲ' ಎಂದು ಇಒಡಬ್ಲ್ಯು ತನ್ನ ವರದಿಯಲ್ಲಿ ಹೇಳಿದೆ.

'ಸುನೇತ್ರ ಪವಾರ್ ಅವರು ಜೈ ಅಗ್ರೋಟೆಕ್ ಕಂಪನಿಯ ನಿರ್ದೇಶಕಿ ಸ್ಥಾನಕ್ಕೆ 2008ರಲ್ಲಿ ರಾಜೀನಾಮೆ ನೀಡಿದ್ದರು. ಎರಡು ವರ್ಷಗಳ ನಂತರ ಈ ಕಂಪನಿಯು ಜರಂಡೇಶ್ವರ ಸಕ್ಕರೆ ಕಾರ್ಖಾನೆಗೆ ₹20.25 ಕೋಟಿ ನೀಡಿತ್ತು. ಆ ವೇಳೆ ನಡೆದಿದ್ದ ಹರಾಜಿನಲ್ಲಿ, ಗುರು ಕಮಾಡಿಟಿ ಎಂಬ ಕಂಪನಿಯು ಈ ಸಕ್ಕರೆ ಕಾರ್ಖಾನೆಯನ್ನು ₹65.75 ಕೋಟಿಗೆ ಖರೀದಿಸಿತ್ತು. ನಂತರ, ಬೇರೊಂದು ಕಂಪನಿಗೆ ಈ ಕಾರ್ಖಾನೆಯನ್ನು ಲೀಸ್‌ಗೆ ನೀಡಲಾಯಿತು. ರಾಜೇಂದ್ರ ಘಾಡ್ಗೆ ಸೇರಿದಂತೆ ಅಜಿತ್ ಪವಾರ್ ಅವರ ಕೆಲ ಸಂಬಂಧಿಕರು ಈ ಕಂಪನಿಯ ನಿರ್ದೇಶಕರಾಗಿದ್ದರು' ಎಂದೂ ವರದಿಯಲ್ಲಿ ತಿಳಿಸಲಾಗಿದೆ.

'ಲೀಸ್ ಮೇಲೆ ಸಕ್ಕರೆ ಕಾರ್ಖಾನೆಯನ್ನು ಪಡೆದಿದ್ದ ಕಂಪನಿಯು ಗುರು ಕಮಾಡಿಟಿ ಸಂಸ್ಥೆಗೆ ಬಾಡಿಗೆಯಾಗಿ ₹65.53 ಕೋಟಿ ನೀಡಿತ್ತು. ಈ ವ್ಯವಹಾರದಲ್ಲಿ ಯಾವುದೇ ಅಕ್ರಮ ನಡೆದಿದ್ದು ಕಂಡುಬಂದಿಲ್ಲ' ಎಂದು ಇಒಡಬ್ಲ್ಯು ಹೇಳಿದೆ.

'ವಾಷಿಂಗ್ ಮಶಿನ್ ಹೇಳಿಕೆಗೆ ಸಮರ್ಥನೆಯಂತಿದೆ'

ಸುನೇತ್ರ ಪವಾರ್ ಅವರನ್ನು ₹25 ಸಾವಿರ ಕೋಟಿ ಹಗರಣದಲ್ಲಿ ಆರೋಪ ಮುಕ್ತರನ್ನಾಗಿ ಮಾಡಿರುವ ಕ್ರಮವನ್ನು ಶಿವಸೇನಾ (ಉದ್ಧವ್ ಠಾಕ್ರೆ ಬಣ) ಟೀಕಿಸಿದೆ.

'ಬಿಜೆಪಿಯು ವಾಷಿಂಗ್ ಮಶಿನ್ ಇದ್ದಂತೆ ಎಂಬ ವಿರೋಧ ಪಕ್ಷಗಳ ಹೇಳಿಕೆಗೆ ಮುಂಬೈ ಪೊಲೀಸರ ಈ ಕ್ರಮ ಪುರಾವೆಯಂತಿದೆ' ಎಂದು ಶಿವಸೇನಾ (ಯುಬಿಟಿ) ನಾಯಕ ಆನಂದ ದುಬೆ ಟೀಕಿಸಿದ್ದಾರೆ.

'ಸ್ವತಃ ಪ್ರಧಾನಿ ನರೇಂದ್ರ ಮೋದಿ ಅವರೇ ಸುನೇತ್ರ ಅವರ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದ್ದರು. ಈಗ ಅವರನ್ನು ಆರೋಪ ಮುಕ್ತರನ್ನಾಗಿ ಮಾಡಲಾಗಿದೆ. ಇದು ಬಿಜೆಪಿ ಕುರಿತು ವಿರೋಧ ಪಕ್ಷಗಳು ಮಾಡುತ್ತಿರುವ ಆರೋಪಗಳನ್ನು ಪುಷ್ಟೀಕರಿಸುವಂತಿದೆ' ಎಂದಿದ್ದಾರೆ.

'ಯಾವ ನಾಯಕರ ವಿರುದ್ಧ ಬಿಜೆಪಿ ಭ್ರಷ್ಟಾಚಾರದ ಆರೋಪಗಳನ್ನು ಮಾಡಿತ್ತೊ, ಅವರೆಲ್ಲಾ ಆ ಪಕ್ಷವನ್ನು ಸೇರಿದ ನಂತರ ಆರೋಪಮುಕ್ತರಾಗಿದ್ದಾರೆ' ಎಂದೂ ದುಬೆ ಟೀಕಿಸಿದ್ದಾರೆ.

ರೋಚಕ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡಕ್ಕೆ 4 ರನ್ ಸೋಲು

ಡೆಲ್ಲಿ ಗೆಲುವಿನಲ್ಲಿ ಮಿಂಚಿದ ಪಂತ್

ನವದೆಹಲಿ (ಪಿಟಿಐ): ಆಕ್ರಮಣಕಾರಿ ಅರ್ಧ ಶತಕದ ಆಟದೊಡನೆ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ರಿಷಭ್ ಪಂತ್ ಅವರು ಭಾರತ ಟಿ20 ತಂಡದ ವಿಕೆಟ್ ಕೀಪರ್ ಸ್ಥಾನವನ್ನು ಬಹುತೇಕ ಖಚಿತಪಡಿಸಿಕೊಂಡರು. ಬುಧವಾರ ರೋಚಕ ಹೋರಾಟ ಕಂಡ ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ತಂಡ, ಗುಜರಾತ್ ಟೈಟನ್ಸ್ ತಂಡದ ತೀವ್ರ ಹೋರಾಟವನ್ನು ಮೆಟ್ಟಿನಿಂತು ನಾಲ್ಕು ರನ್‌ಗಳ ಗೆಲುವು ಪಡೆಯುವಲ್ಲಿ ಯಶಸ್ವಿಯಾಯಿತು.

ಡೆಲ್ಲಿಗೆ ಮಹತ್ವದ್ದಾದ ಈ ಪಂದ್ಯದಲ್ಲಿ ನಾಯಕ ಪಂತ್ (88, 43 ಎ, 4x5, 6x8) ಮತ್ತು ಅಕ್ಷರ್ ಪಟೇಲ್ (66, 43 ಎಸೆತ) ಕೇವಲ 68 ಎಸೆತಗಳಲ್ಲಿ 113 ರನ್ ಜೊತೆಯಾಟವಾಡಿ ಡೆಲ್ಲಿ ತಂಡ 4 ವಿಕೆಟ್‌ಗೆ 224 ರನ್‌ಗಳ ದೊಡ್ಡ ಮೊತ್ತ ಗಳಿಸಲು ಕಾರಣರಾದರು. ಕೊನೆಯ ಐದು ಓವರ್‌ಗಳಲ್ಲಿ ಡೆಲ್ಲಿ 95 ರನ್‌ಗಳನ್ನು ಬಾಚಿಕೊಂಡಿತು. ಇದಕ್ಕೆ ಟ್ರಿಸ್ಟನ್ ಸ್ಟಬ್ಸ್ (26, 7ಎಸೆತ) ಅವರ ಕೊಡುಗೆಯೂ ಇತ್ತು.

ಇದಕ್ಕೆ ಉತ್ತರವಾಗಿ ಗುಜರಾತ್ ಟೈಟನ್ಸ್, ಸಾಯಿ ಸುದರ್ಶನ್ (65, 29ಎ) ಮತ್ತು ಡೇವಿಡ್ ಮಿಲ್ಲರ್ (55, 23) ಅವರ ಮಿಂಚಿನ ಅರ್ಧ ಶತಕಗಳ ನೆರವಿನಿಂದ ಹೋರಾಟ ತೋರಿತು. ಕೊನೆಯಲ್ಲಿ ರಶೀದ್ ಖಾನ್ (ಔಟಾಗದೇ 21, 11ಎ) ಅವರು ದಡ ಸೇರಿಸುವಂತೆ ಕಂಡರೂ, ವೇಗದ ಬೌಲರ್ ಮುಕೇಶ್ ಕುಮಾರ್ ಅದಕ್ಕೆ ಅವಕಾಶ ನೀಡಲಿಲ್ಲ. ಅಂತಿಮ ಓವರಿನಲ್ಲಿ 19 ರನ್ ಬೇಕಿದ್ದಾಗ ಅವರು 14 ರನ್‌ಗಳನ್ನಷ್ಟೇ (ಎರಡು ಬೌಂಡರಿ, ಒಂದು ಸಿಕ್ಸರ್) ನೀಡಿದರು. ತಂಡ 8 ವಿಕೆಟ್‌ಗೆ 220 ರನ್ ಗಳಿಸಿ ನಿರಾಸೆ ಅನುಭವಿಸಿತು.

ನೂರನೇ ಪಂದ್ಯ ಆಡಿದ ಟೈಟನ್ಸ್ ನಾಯಕ ಶುಭಮನ್ ಗಿಲ್ (6) ಅದನ್ನು ಸ್ಮರಣೀಯವಾಗಿಸಲಿಲ್ಲ. ವೃದ್ಧಿಮಾನ್ ಸಹಾ (39) ಮತ್ತು ಸಾಯಿ ಸುದರ್ಶನ್ 82 ರನ್ ಜೊತೆಯಾಟವಾಡಿ ಮೊತ್ತ ಬೆಳೆಸಿದರು. ನಂತರ ಡೆಲ್ಲಿ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಳ್ಳತೊಡಗಿತು. ಮಧ್ಯಮ ಹಂತದಲ್ಲಿ ಆರು ಬೌಂಡರಿ, ಮೂರು ಸಿಕ್ಸರ್‌ಗಳನ್ನು ಬಾರಿಸಿದ ಮಿಲ್ಲರ್ ಏಳನೆಯವರಾಗಿ ನಿರ್ಗಮಿಸಿದರು.

ಪಂತ್ ಅಬ್ಬರ: ಇದಕ್ಕೆ ಮೊದಲು ಪಂತ್ ಅವರ ಅಬ್ಬರ ಆಟ ಗಮನ ಸೆಳೆಯಿತು. ತಮ್ಮಲಯದ ಬಗ್ಗೆ ಇದ್ದ ಸಂದೇಹಗಳನ್ನು ನಿವಾರಿಸಿದಂತೆ ಅವರು ಪ್ರಬುದ್ಧ ಇನಿಂಗ್ಸ್ ಪ್ರದರ್ಶಿಸಿದರು. ಎರಡು ಒಳ್ಳೆಯ ಕ್ಯಾಚ್‌ಗಳನ್ನೂ ಹಿಡಿದರು.

ಅರ್ಧ ಶತಕ ಗಳಿಸಿದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ರಿಷಬ್ ಪಂತ್ ಪಿಟಿಐ ಚಿತ್ರ

ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಡೆಲ್ಲಿ ತಂಡಕ್ಕೆ ಜೇಕ್ ಫ್ರೇಸರ್ ಮೆಕ್‌ಗುರ್ಕ್ (23, 14ಎ) ಮತ್ತು ಪಾರ್ಥಿವ್ ಪಟೇಲ್ (11) ಬಿರುಸಿನ ಆರಂಭ ನೀಡಿ 3 ಓವರುಗಳಲ್ಲಿ 34 ರನ್ ಸೇರಿಸಿದ್ದರು. ಆದರೆ ಸಂದೀಪ್ ವಾರಿಯರ್ ಎರಡು ಓವರುಗಳ ಅಂತರದಲ್ಲಿ ಮೆಕ್‌ಗುರ್ಕ್, ಪಾರ್ಥಿವ್ ಮತ್ತು ಶಾಯಿ ಹೋಪ್ ಅವರ ವಿಕೆಟ್‌ಗಳನ್ನು ಪಡೆದರು.

ಪಂತ್ ಮತ್ತು ಅಕ್ಷರ್ ಮೊದಲು ವಿವೇಚನೆಯಿಂದ ಆಡಿ ಇನಿಂಗ್ಸ್ ಕಟ್ಟಿದರು. ಬೇರೂರಿದ ಮೇಲೆ ಆಕ್ರಮಣಕಾರಿಯಾದರು.

ಫ್ಲಿಕ್, ಕಟ್, ಪುಲ್ ಹೊಡೆತಗಳ ಮೂಲಕ ಪಂತ್ ಗುಜರಾತ್ ಬೌಲರ್‌ಗಳ ಮೇಲೆ ಸವಾರಿ ಮಾಡಿದರು.

ನೂರ್ ಅಹ್ಮದ್ ಮಾಡಿದ 17ನೇ ಓವರ್‌ನಲ್ಲಿ ಬೆನ್ನುಬೆನ್ನಿಗೆ ಎರಡು ಸಿಕ್ಸರ್ ಎತ್ತಿದ ಅಕ್ಷರ್, ಮತ್ತೊಂದಕ್ಕೆ ಯತ್ನಿಸಿ ಲಾಂಗ್‌ಆನ್‌ನಲ್ಲಿ ನಂದಕಿಶೋರ್ ಅವರಿಗೆ ಕ್ಯಾಚಿತ್ತರು.

ಮೋಹಿತ್ ಶರ್ಮಾ ಅವರ ಕೊನೆಯ ಓವರ್‌ನಲ್ಲಿ ಪಂತ್ ನಾಲ್ಕು ಸಿಕ್ಸರ್, ಒಂದು ಬೌಂಡರಿ ಸಹಿತ 31 ರನ್ ಹೊಡೆದರು. ಮೋಹಿತ್ ನಾಲ್ಕು ಓವರ್‌ಗಳಲ್ಲಿ 73 ರನ್ ನೀಡಿ ದುಬಾರಿಯಾದರು.

ಸಂಕ್ಷಿಪ್ತ ಸ್ಕೋರ್: ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 224 (ಜೇಕ್ ಫ್ರೆಸರ್ ಮೆಕ್‌ಗುರ್ಕ್ 23, ಅಕ್ಷರ್ ಪಟೇಲ್ 66, ರಿಷಭ್ ಪಂತ್ ಔಟಾಗದೇ 88, ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 26; ಸಂದೀಪ್ ವಾರಿಯರ್ 15ಕ್ಕೆ 3, ನೂರ್ ಅಹ್ಮದ್ 36ಕ್ಕೆ 1); ಗುಜರಾತ್ ಟೈಟನ್ಸ್: 8 ವಿಕೆಟ್‌ಗೆ 220 (ವೃದ್ಧಿಮಾನ್ ಸಹಾ 39, ಸಾಯಿ ಸುದರ್ಶನ್ 65, ಡೇವಿಡ್ ಮಿಲ್ಲರ್ 55, ರಶೀದ್ ಖಾನ್ ಔಟಾಗದೇ 21; ರಾಸಿಖ್ ಸಲಾಂ 44ಕ್ಕೆ3, ಕುಲದೀಪ್ ಯಾದವ್ 29ಕ್ಕೆ2).
ಪಂದ್ಯದ ಆಟಗಾರ: ರಿಷಭ್ ಪಂತ್.

ಅಕ್ಷರ್ ಪಟೇಲ್ ಬ್ಯಾಟಿಂಗ್ ವೈಖರಿ ಎಎಫ್‌ಪಿ ಚಿತ್ರ

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	8	7	1	14	0.698
ಕೋಲ್ಕತ್ತ ನೈಟ್ ರೈಡರ್ಸ್	7	5	2	10	1.206
ಸನ್‌ರೈಸರ್ಸ್ ಹೈದರಾಬಾದ್	7	5	2	10	0.914
ಲಖನೌ ಸೂಪರ್ ಜೈಂಟ್ಸ್	8	5	3	10	0.148
ಚೆನ್ನೈ ಸೂಪರ್ ಕಿಂಗ್ಸ್	8	4	4	8	0.415
ಡೆಲ್ಲಿ ಕ್ಯಾಪಿಟಲ್ಸ್	9	4	5	8	-0.386
ಗುಜರಾತ್ ಟೈಟನ್ಸ್	9	4	5	8	-0.974
ಮುಂಬೈ ಇಂಡಿಯನ್ಸ್	8	3	5	6	-0.277
ಪಂಜಾಬ್ ಕಿಂಗ್ಸ್	8	2	6	4	-0.292
ಆರ್‌ಸಿಬಿ (ಬೆಂಗಳೂರು)	8	1	7	2	-1.046

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (379 ರನ್)

ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಯಜುವೇಂದ್ರ ಚಾಹಲ್, ಹರ್ಷ ಪಟೇಲ್ (13 ವಿಕೆಟ್)

ಆರ್‌ಸಿಬಿಗೆ ‘ಸನ್’ ಶಾಖದ ಆತಂಕ

ಸೋಲಿನ ಸರಪಳಿ ಕಳಚುವುದೇ ಫಫ್ ಡುಪ್ಲೆಸಿ ಪಡೆ?

ಹೈದರಾಬಾದ್ (ಪಿಟಿಐ): ‘ಶಕ್ತಿಶಾಲಿ’ ಬ್ಯಾಟಿಂಗ್ ಸರದಿಯ ಮೂಲಕ ಎದುರಾಳಿಗಳ ಬೌಲಿಂಗ್ ಅನ್ನು ನಿರ್ದಯವಾಗಿ ದಂಡಿಸುತ್ತಿರುವ ಸನ್‌ರೈಸರ್ಸ್ ಹೈ ದರಾಬಾದ್ ತಂಡ, ಅಂಕಪಟ್ಟಿಯ ತಳದಲ್ಲಿರುವ ರಾಯಲ್ ಚಾಲೆಂಜರ್ ಬೆಂಗಳೂರು ತಂಡವನ್ನು ಗುರುವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಎದುರಿಸಲಿದೆ.

ಐಪಿಎಲ್‌ನ ಈ ಆವೃತ್ತಿಯೊಂದರಲ್ಲೇ ಹೈದರಾಬಾದ್ ತಂಡ ಮೂರು ಬಾರಿ 250ಕ್ಕಿಂತ ಹೆಚ್ಚು ಮೊತ್ತ ಪೇರಿಸಿದೆ. ದಾಖಲೆಗಳ ಮೇಲೆ ದಾಖಲೆಗಳನ್ನು ಬರೆಯುತ್ತಿದೆ. ಮುಂಬೈ ಇಂಡಿಯನ್ಸ್ ಮೇಲೆ 277 ರನ್ ಹೊಡೆದಿದ್ದ ಪ್ಯಾಟ್ ಕಮಿನ್ಸ್ ಬಳಗ, ನಂತರ ಆರ್‌ಸಿಬಿ ವಿರುದ್ಧ ಬೆಂಗಳೂರಿನಲ್ಲಿ 3 ವಿಕೆಟ್‌ಗೆ 287 ರನ್‌ಗಳ ದಾಖಲೆ ಮೊತ್ತ ಗಳಿಸಿತು. ಇದು ಸಾಲದೆಂಬಂತೆ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಪವರ್‌ಪ್ಲೇ ಅವಧಿಯಲ್ಲೇ ವಿಕೆಟ್ ನಷ್ಟವಿಲ್ಲದೇ 125 ರನ್ ಚಚ್ಚಿ ಐಪಿಎಲ್‌ನಲ್ಲಿ ಮೊದಲ ಬಾರಿ 300ರ ಬಳಿ ಸಾಗುವ ಸೂಚನೆ ನೀಡಿತ್ತು.

ದುರ್ಬಲ ಬೌಲಿಂಗ್ ಹೊಂದಿರುವ ಆರ್‌ಸಿಬಿ ವಿರುದ್ಧವೂ ಹೈದರಾಬಾದ್ ತನ್ನ ದಂಡಯಾತ್ರೆಯನ್ನು ಮುಂದುವರಿಸಿದಲ್ಲಿ ಅಚ್ಚರಿಯೇನಿಲ್ಲ. ಏಳು ವಿಕೆಟ್‌ಗಳೊಡನೆ ಆರ್‌ಸಿಬಿಯ ಉತ್ತಮ ಬೌಲರ್ ಎನಿಸಿರುವ ಯಶ್ ದಯಾಳ್ ಬೌಲರ್‌ಗಳ ಪಟ್ಟಿಯಲ್ಲಿ 24ನೇ ಸ್ಥಾನದಲ್ಲಿದ್ದಾರೆ ಎಂದರೆ ತಂಡದ ಬೌಲಿಂಗ್ ಶಕ್ತಿ ಊಹಿಸಬಹುದು.

ಆಡಿದ ಎಂಟರಲ್ಲಿ ಆರ್‌ಸಿಬಿ ಗೆದ್ದಿರುವುದು ಒಂದು ಮಾತ್ರ– ಅದು ತವರಿನಲ್ಲಿ ಪಂಜಾಬ್ ಕಿಂಗ್ಸ್ ಎದುರು. ಪ್ಲೇ ಆಫ್ ಆಸೆ ಬತ್ತಿಹೋಗಿದೆ. ಬೌಲಿಂಗ್ ದೌರ್ಬಲ್ಯ ಮರೆಗೆ ಸರಿಸಲು ಬ್ಯಾಟರ್‌ಗಳು ಶಕ್ತಿ ಮೀರಿ ಶ್ರಮ ಹಾಕಿದ್ದಾರೆ. ಆದರೆ ಅದು ಫಲ ನೀಡುತ್ತಿಲ್ಲ.



ವಿರಾಟ್ ಕೊಹ್ಲಿ ಎಎಫ್‌ಪಿ ಚಿತ್ರ

ಟ್ರಾವಿಸ್ ಹೆಡ್ ಎಎಫ್‌ಪಿ ಚಿತ್ರ

ಈ ಹಿಂದಿನ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಪಂದ್ಯದಲ್ಲಿ 223 ರನ್‌ಗಳ ಗುರಿ ಬೆನ್ನಟ್ಟುವಾಗ ಆರ್‌ಸಿಬಿ ಹೋರಾಟ ನಡೆಸಿ, ದುರದೃಷ್ಟಕರ ರೀತಿಯಲ್ಲಿ ಒಂದು ರನ್‌ನಿಂದ ಸೋತಿತ್ತು. ಬ್ಯಾಟರ್‌ಗಳು ಸಾಂಘಿಕ ಪ್ರದರ್ಶನ ನೀಡಿದರು. ಪ್ರಮುಖ ಆಟಗಾರ ವಿರಾಟ್ ಕೊಹ್ಲಿ ಅವರು ಈಗಲೂ ತಂಡದ ಬ್ಯಾಟಿಂಗ್ ಆಧಾರಸ್ಥಂಭ. 379 ರನ್‌ಗಳೊಡನೆ ಆರೆಂಜ್ ಕ್ಯಾಪ್ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ.

ಟ್ರಾವಿಸ್ ಹೆಡ್ ಮೊದಲ ಕೆಲವು ಪಂದ್ಯಗಳಲ್ಲಿ ಗಮನ ಸೆಳೆದಿರಲಿಲ್ಲ. ಆದರೆ ಇತ್ತೀಚಿನ ಪಂದ್ಯಗಳಲ್ಲಿ ಬೌಲರ್‌ಗಳ ಪಾಲಿಗೆ ಸಿಂಹಸ್ವಪ್ನವಾಗಿದ್ದಾರೆ. ಗ್ಯಾಪ್‌ಗಳನ್ನು ಕಂಡುಕೊಂಡು ಬೌಂಡರಿಗಳನ್ನು ಹೊಡೆಯುವ ಜೊತೆಗೆ ಸಿಕ್ಸರ್‌ಗಳ ಮೂಲಕ ಮೊತ್ತವನ್ನು ಒಂದೇ ಸಮನೇ ಏರಿಸುತ್ತಿದ್ದಾರೆ. ಅಭಿಷೇಕ್ ಶರ್ಮಾ ಅವರಿಗೆ ಒಳ್ಳೆಯ ಸಾಥ್ ನೀಡಿದ್ದಾರೆ. ಹೆನ್ರಿಚ್ ಕ್ಲಾಸೆನ್ ಕೂಡ ಈ ರನ್ ಸೂರೆಯಲ್ಲಿ ಸೇರಿಕೊಂಡಿದ್ದಾರೆ.

ಬ್ಯಾಟರ್‌ಗಳ ಈ ಅಬ್ಬರದಿಂದ ಸನ್‌ರೈಸರ್ಸ್ ಬೌಲರ್‌ಗಳ ಮೇಲೆ ಒತ್ತಡ ಕಡಿಮೆಯಾಗಿದೆ. ತಂಡ ಏಳು ಪಂದ್ಯಗಳಿಂದ 10 ಪಾಯಿಂಟ್ಸ್ ಕಲೆಹಾಕಿದೆ.



ಪಂದ್ಯ ಆರಂಭ: ರಾತ್ರಿ 7.30.
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಸಿನಿಮಾ ಆ್ಯಪ್

ವಿಶ್ವ 10ಕೆ ಓಟ: ₹3 ಕೋಟಿ ನಿಧಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಟಿಸಿಎಸ್ ವಿಶ್ವ 10ಕೆ ಬೆಂಗಳೂರು-2024’ ಭಾಗವಾಗಿ ಮಾನವೀಯ ಮತ್ತು ಸಾಮಾಜಿಕ ಕಾರ್ಯಕ್ಕೆ ₹3 ಕೋಟಿ ನಿಧಿ ಸಂಗ್ರಹಿಸಲಾಗಿದೆ.

ಇದೇ 28ರಂದು ಉದ್ಯಾನನಗರಿಯಲ್ಲಿ 16ನೇ ಆವೃತ್ತಿಯ ವಿಶ್ವ 10ಕೆ ಓಟ ನಡೆಯಲಿದೆ.

ಮೂರು ತಿಂಗಳ ಅವಧಿಯಲ್ಲಿ ನಿಧಿ ಸಂಗ್ರಹಕ್ಕೆ 70ಕ್ಕೂ ಅಧಿಕ ಸ್ವಯಂಸೇವಾ ಸಂಸ್ಥೆಗಳು, ಕಾರ್ಪೊರೇಟ್ ಕಂಪನಿಗಳು, ವೈಯಕ್ತಿಕ ನಿಧಿ ಸಂಗ್ರಹಕಾರರು ಕೈಜೋಡಿಸಿದ್ದಾರೆ. ಏಡ್‌ಬೀಸ್ ನೇತೃತ್ವದಲ್ಲಿ ನಿಧಿ ಸಂಗ್ರಹ ಅಭಿಯಾನವು ಮೇ 10 ರವರೆಗೆ ಮುಂದುವರಿಯಲಿದೆ ಎಂದು ಪ್ರಾಯೋಜಕರು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬೆಂಗಳೂರಿನಲ್ಲಿ ನಡೆಯುವ ವಿಶ್ವ 10ಕೆ ಓಟವು ದಕ್ಷಿಣ ಭಾರತದ ಏಕೈಕ ಅತಿ ದೊಡ್ಡ ನಿಧಿ ಸಂಗ್ರಹ ವೇದಿಕೆಯಾಗಿದೆ.

ಈವರೆಗೆ 400ಕ್ಕೂ ಅಧಿಕ ಸಾಮಾಜಿಕ ಸೇವಾ ಸಂಸ್ಥೆಗಳಿಂದ ₹53 ಕೋಟಿಗೂ ಅಧಿಕ ಹಣ ಸಂಗ್ರಹಿಸಲಾಗಿದೆ. ಈ ಬಾರಿಯ ನಿಧಿ ಸಂಗ್ರಹ ಅಭಿಯಾನಕ್ಕೆ ದೇಶದಾದ್ಯಂತ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದು ಹೇಳಿದರು.

‘ಅಂಗವಿಕಲರಿಗಾಗಿ ಭಾರತದ ಮೊದಲ ಟೆನಿಸ್ ಗಾಲಿಕುರ್ಚಿ ಕೇಂದ್ರವನ್ನು ಚಿಕ್ಕಬಳ್ಳಾಪುರದಲ್ಲಿ ನಿರ್ಮಿಸಲು ನಿಧಿಯನ್ನು ಸಂಗ್ರಹಿಸುತ್ತಿದೆ’ ಎಂದು ಇಂಡಿಯನ್ ವೀಲ್‌ಚೇರ್ ಟೆನಿಸ್ ಟೂರ್‌ನ ಅಧ್ಯಕ್ಷ ಸುನಿಲ್ ಕುಮಾರ್ ಜೈನ್ ಹೇಳಿದರು.

ಟಿಸಿಎಸ್ ವಿಶ್ವ10ಕೆ ನಿಧಿ ಸಂಗ್ರಹ ಅಭಿಯಾನದ ಭಿತ್ತಿಪತ್ರವನ್ನು ಬುಧವಾರ ಅನಾವರಣ ಮಾಡಲಾಯಿತು. ರೀಚಿಂಗ್ ಹ್ಯಾಂಡ್‌ನ ಮ್ಯಾಥ್ಯೂ ಅಬ್ರಹಾಂ, ಇಂಡಿಯನ್ ವೀಲ್‌ಚೇರ್ ಟೆನಿಸ್ ಟೂರ್‌ನ ಅಧ್ಯಕ್ಷ ಸುನಿಲ್ ಕುಮಾರ್ ಜೈನ್, ರೀಚಿಂಗ್ ಹ್ಯಾಂಡ್‌ನ ಮಕ್ಕಳಾದ ಭಾವನಾ, ಬಿಂದು, ರೈಟ್ ಟು ಲೈವ್‌ನ ಆದ್ಯ ಕೋಟೆ, ವೆಸ್ಟರ್ನ್ ಡಿಜಿಟಲ್‌ನ ಪ್ರಸಾದ್ ಎಸ್, ವಕೀಲ ಅಖಿಲೇಶ್ ಕಾಮತ್, ಏಡ್ಬೀಸ್ ಸಂಸ್ಥಾಪಕ ನಿರ್ದೇಶಕಿ ರಶ್ಮಿ ಕುಮಾರ್, ಪ್ರೊಕ್ಯಾಮ್ ಇಂಟರ್‌ನ್ಯಾಷನಲ್ ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಸಿಂಗ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ವೆಸ್ಟ್ ಇಂಡೀಸ್–ಅಮೆರಿಕದಲ್ಲಿ ನಡೆಯಲಿರುವ ಟೂರ್ನಿ

ಟಿ20 ವಿಶ್ವಕಪ್ ರಾಯಭಾರಿ ಬೋಲ್ಟ್

ದುಬೈ (ಪಿಟಿಐ): ವೆಸ್ಟ್ ಇಂಡೀಸ್ ಮತ್ತು ಅಮೆರಿಕ ಸಹಭಾಗಿತ್ವದಲ್ಲಿ ಜೂನ್ 1 ರಿಂದ 29 ರವರೆಗೆ ನಡೆಯಲಿರುವ ಟಿ20 ವಿಶ್ವಕಪ್‌ನ ರಾಯಭಾರಿಯಾಗಿ ಸ್ಪ್ರಿಂಟ್ ದಂತಕಥೆ ಉಸೇನ್ ಬೋಲ್ಟ್ ಅವರನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಬುಧವಾರ ನೇಮಕ ಮಾಡಿದೆ.

ಜಮೈಕಾದ ಬೋಲ್ಟ್ 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ 100 ಮೀಟರ್, 200 ಮೀಟರ್ ಮತ್ತು 4 × 100 ಮೀಟರ್ ಓಟಗಳಲ್ಲಿ ಪೂರೈಸಿ ವಿಶ್ವ ದಾಖಲೆ ನಿರ್ಮಿಸಿದ್ದರು.

ಬೋಲ್ಟ್ ಪ್ರಸ್ತುತ 100 ಮೀಟರ್, 200 ಮೀಟರ್ ಮತ್ತು 4 × 100 ಮೀಟರ್ ರಿಲೇ ಓಟದಲ್ಲಿ (ಕ್ರಮವಾಗಿ 9.58 ಸೆಕೆಂಡು, 19.19 ಸೆಕೆಂಡು ಮತ್ತು 36.84 ಸೆಕೆಂಡು) ವಿಶ್ವ ದಾಖಲೆಗಳ ಒಡೆಯರಾಗಿದ್ದಾರೆ.

ವಿಶ್ವಕಪ್‌ನಲ್ಲಿ ತಮ್ಮ ಹೊಸ ಪಾತ್ರದ ಬಗ್ಗೆ ಬೋಲ್ಟ್ ಸಂತಸ ವ್ಯಕ್ತಪಡಿಸಿದ್ದಾರೆ.

‘ಐಸಿಸಿ ಪುರುಷರ ಟಿ20 ವಿಶ್ವಕಪ್‌ಗೆ ರಾಯಭಾರಿ ಆಗಿರುವುದಕ್ಕೆ ರೋಮಾಂಚನಗೊಂಡಿದ್ದೇನೆ. ಕ್ರಿಕೆಟ್ ಜೀವನದ ಭಾಗವಾಗಿರುವ ಕೆರಿಬಿಯನ್‌ನಿಂದ ಬಂದ ಈ ಕ್ರೀಡೆ ಯಾವಾಗಲೂ ನನ್ನ ಹೃದಯದಲ್ಲಿ ವಿಶೇಷ ಸ್ಥಾನವನ್ನು ಹೊಂದಿದೆ’ ಎಂದು ಬೋಲ್ಟ್ ಐಸಿಸಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಸೇನ್ ಬೋಲ್ಟ್

‘ನಾನು ವಿಶ್ವಕಪ್‌ನಲ್ಲಿ ವೆಸ್ಟ್ ಇಂಡೀಸ್ ತಂಡವನ್ನು ಬೆಂಬಲಿಸುತ್ತೇನೆ. ಅಮೆರಿಕಕ್ಕೆ ಈ ಕ್ರೀಡೆ ದೊಡ್ಡ ಮಾರುಕಟ್ಟೆ ಒದಗಿಸಲಿದೆ. ಟಿ20 ವಿಶ್ವಕಪ್ 2028ರ ಲಾಸ್ ಏಂಜಲಿಸ್ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಸೇರ್ಪಡೆಗೆ ಕಾರಣವಾಗುವ ದೊಡ್ಡ ಅವಕಾಶ’ ಎಂದು ಅವರು ಹೇಳಿ ದರು.

ರಾಯಭಾರಿಯಾಗಿ ಬೋಲ್ಟ್ ಟಿ20 ಉತ್ತೇಜಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದ್ದಾರೆ. ಮುಂದಿನ ವಾರ ಟೂರ್ನಿಯ ಅಧಿಕೃತ ಗೀತೆಯ ಬಿಡುಗಡೆಯಲ್ಲಿ ಕಲಾವಿದರಾದ ಸೀನ್ ಪಾಲ್ ಮತ್ತು ಕೆಸ್ ಅವರೊಂದಿಗೆ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಐಸಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜೆಫ್ ಅಲ್ಲಾರ್ಡೈಸ್ ಮಾತನಾಡಿ, ‘ಉಸೇನ್ ಬೋಲ್ಟ್ ಜಾಗತಿಕ ಐಕಾನ್. ಅವರನ್ನು ಟಿ20 ವಿಶ್ವಕಪ್ ರಾಯಭಾರಿಯಾಗಿ ಹೊಂದಿರುವುದು ರೋಮಾಂಚನ ಮೂಡಿಸಿದೆ. ಕ್ರಿಕೆಟ್ ಬಗ್ಗೆ ಅವರ ಪ್ರೀತಿ ಎಲ್ಲರಿಗೂ ಗೊತ್ತಿರುವುದೇ. ಈ ಪಾತ್ರಕ್ಕೆ ಅವರು ಸರಿಯಾಗಿ ಹೊಂದಿಕೆಯಾಗುತ್ತಾರೆ’ ಎಂದು ಹೇಳಿದ್ದಾರೆ.

4ರಿಂದ ಕ್ಯು ಸ್ಪೋರ್ಟ್ಸ್ ಲೀಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರದ ಮತ್ತು ರಾಜ್ಯದ ಪ್ರಮುಖ ಆಟಗಾರರ ಜೊತೆ ಆತಿಥೇಯ ಬೌರಿಂಗ್ ಇನ್‌ಸ್ಟಿಟ್ಯೂಟ್ ಆಟಗಾರರು, ಮೇ 4ರಂದು ಇಲ್ಲಿ ಆರಂಭವಾಗುವ ಮೊದಲ ಆವೃತ್ತಿಯ ಕ್ಯೂ ಸ್ಪೋರ್ಟ್ಸ್ ಪ್ರೀಮಿಯರ್ ಲೀಗ್‌ನಲ್ಲಿ ಭಾಗವಹಿಸುವ ಎಂಟು ತಂಡಗಳಲ್ಲಿ ಆಡಲಿದ್ದಾರೆ.

ಬೌರಿಂಗ್ ಇನ್‌ಸ್ಟಿಟ್ಯೂಟ್‌ನ ಸ್ನೂಕರ್ ಅರೇನಾದಲ್ಲಿ ಏಳು ದಿನ ನಡೆಯುವ ಲೀಗ್‌ನಲ್ಲಿ– ಲೈಟ್ನಿಂಗ್ ಲೀಜನ್, ಸೈಕ್ಲೋನ್ ಕುಸೇಡರ್ಸ್, ಸಮ್ಮರ್ ಟಸ್ಕರ್ಸ್, ಹರಿಕೇನ್ ಹಾಕ್ಸ್, ಥಂಡರ್‌ಸ್ಟಾರ್ಮ್ ಟೈಟನ್ಸ್, ಟಾರ್ನೆಡೊ ಟೈಗರ್ಸ್, ವರ್ಲ್‌ವಿಂಡ್ ವಾರಿಯರ್ಸ್ ಮತ್ತು ಮಾನ್ಸೂನ್ ಮಾವೆರಿಕ್ಸ್ ತಂಡಗಳು ಪಾಲ್ಗೊಳ್ಳಲಿವೆ.

ಪ್ರತಿ ತಂಡಗಳಲ್ಲಿ ಏಳು ಮಂದಿ ಆಟಗಾರರಿದ್ದು, ಇಬ್ಬರು ರಾಷ್ಟ್ರೀಯ ಆಟಗಾರರು, ಇಬ್ಬರು ರಾಜ್ಯ ಮಟ್ಟದ ಆಟಗಾರರು ಮತ್ತು ಮೂರು ಮಂದಿ ಬೌರಿಂಗ್ ಇನ್‌ಸ್ಟಿಟ್ಯೂಟ್ ಆಟಗಾರರು ಇರುತ್ತಾರೆ.

ಏಪ್ರಿಲ್ 20ರಂದು ಆಟಗಾರರ ಬಿಡ್ ಪ್ರಕ್ರಿಯೆ ನಡೆದಿದ್ದು, ಒಂದೊಂದು ಫ್ರಾಂಚೈಸಿಗೆ ತಲಾ ₹2 ಕೋಟಿವರೆಗೆ ತೊಡಗಿಸಲು ಅವಕಾಶವಿತ್ತು.

ರೌಂಡ್‌ರಾಬಿನ್ ಮಾದರಿಯಲ್ಲಿ ಪಂದ್ಯಗಳು ನಡೆಯಲಿದ್ದು, ಮೊದಲ ನಾಲ್ಕು ತಂಡಗಳು ಕ್ವಾಲಿಫೈರ್ ತಲುಪಲಿವೆ.

ಪ್ಲೇ ಆಫ್ ಪಂದ್ಯಗಳು ಐಪಿಎಲ್ ಮಾದರಿಯಲ್ಲಿ ನಡೆಯಲಿವೆ. ಮೇ 10ರಂದು ಫೈನಲ್ ನಡೆಯಲಿದೆ.

ಪ್ರತಿ ಪಂದ್ಯವು ಏಳು ಫ್ರೇಮ್‌ಗಳನ್ನು ಒಳಗೊಂಡಿದೆ. ಮೂರು ಸಿಂಗಲ್ಸ್, ಮೂರು ಡಬಲ್ಸ್ ಮತ್ತು ಒಂದು ಶೌಟ್ ಮಾದರಿ.

ಕ್ಯೂ ಸ್ಪೋರ್ಟ್ಸ್ ಪ್ರೀಮಿಯರ್ ಲೀಗ್‌ನ ವಿವರಗಳನ್ನು ನೀಡಿದ ಪಂಕಜ್ ಅಡ್ವಾಣಿ. ಎಂಬಿಸಿ ಗ್ರೂಪ್‌ನ ರಾಜೇಶ್ ಬಜಾಜ್ ಅವರೂ ಇದ್ದಾರೆ. ಪ್ರಜಾವಾಣಿ ಚಿತ್ರ

ಇನ್‌ಸ್ಟಿಟ್ಯೂಟ್ ಏಳು ಸ್ನೂಕರ್ ಟೇಬಲ್‌ಗಳನ್ನು ಹೊಂದಿದೆ.

‘ಈ ಲೀಗ್ ವಿಭಿನ್ನವಾಗಿದೆ. ರಾಷ್ಟ್ರೀಯ, ರಾಜ್ಯ ಆಟಗಾರರ ಜೊತೆ ಕ್ಲಬ್ ಮಟ್ಟದ ಆಟಗಾರರು ಆಡಲು ಅವಕಾಶವಾಗುತ್ತದೆ. ರಾಷ್ಟ್ರೀಯ, ವಿಶ್ವ ಚಾಂಪಿಯನ್ ಆಟಗಾರರ ಆಟ ನೋಡಿ ಕಲಿತುಕೊಳ್ಳಲು ಅವಕಾಶ ದೊರೆಯಲಿದೆ. ಅವರಿಗೆ ಇಂಥ ಅವಕಾಶ ಸಿಗುವುದು ಕಡಿಮೆ’ ಎಂದು 27 ಬಾರಿಯ ವಿಶ್ವ ಚಾಂಪಿಯನ್ ಪಂಕಜ್ ಅಡ್ವಾಣಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದರು.

ಪಂಕಜ್ ಜೊತೆ ರಾಷ್ಟ್ರೀಯ ಆಟಗಾರರಾದ ಬ್ರಿಜೇಶ್ ದಮಾನಿ, ಆದಿತ್ಯ ಮೆಹ್ತ, ಸೌರವ್ ಕೊಥಾರಿ, ಮನನ್ ಚಂದ್ರ, ಕಮಲ್ ಚಾವ್ಲಾ ಮೊದಲಾದವರು ಭಾಗವಹಿಸಲಿದ್ದಾರೆ.\

ಐಬಿಎಸ್‌ಎಫ್ 6-ರೆಡ್ ಸ್ನೂಕರ್ ಚಾಂಪಿಯನ್ ವಿದ್ಯಾ ಪಿಳ್ಳೈ ಅವರು ಮಾನ್ಸೂನ್ ಮಾವೆರಿಕ್ಸ್ ಪರ ಆಡಲಿದ್ದಾರೆ.

ಟೈಗರ್ ಕಪ್ 16 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿ

ಚಿರಾಗ್ ಮಿಂಚು: ಪಿಇಎಸ್‌ಸಿಎ ತಂಡಕ್ಕೆ ಜಯ

ಬೆಂಗಳೂರು: ಚಿರಾಗ್ ಹರ್ಷ ಅವರ ಅರ್ಧಶತಕದ ಬಲದಿಂದ ಪಿಇಎಸ್‌ಸಿಎ ತಂಡವು ಟೈಗರ್ ಕಪ್ 16 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ 41 ರನ್‌ಗಳಿಂದ ಡಿಜೆಸಿಎ ತಂಡವನ್ನು ಮಣಿಸಿತು.

ಬಿ.ಕೆ. ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಮೊದಲ ಬ್ಯಾಟಿಂಗ್ ಮಾಡಿದ ಪಿಇಎಸ್‌ಸಿಎ ತಂಡವು 30 ಓವರ್‌ಗಳಲ್ಲಿ ಐದು ವಿಕೆಟ್‌ಗೆ 211 ರನ್ ಕಲೆಹಾಕಿತು. ಚಿರಾಗ್ 93 ರನ್ ಗಳಿಸಿ ಉಪಯುಕ್ತ ಕಾಣಿಕೆ ನೀಡಿದರು. ಈ ಗುರಿಯನ್ನು ಬೆನ್ನತ್ತಿದ ಡಿಜೆಸಿಎ ತಂಡವು 29.4 ಓವರ್‌ಗಳಲ್ಲಿ 170 ರನ್‌ಗಳಿಸಿ ಆಲೌಟ್ ಆಯಿತು.

ಸಂಕ್ಷಿಪ್ತ ಸ್ಕೋರ್: ಪಿಇಎಸ್‌ಸಿಎ: 30 ಓವರ್‌ಗಳಲ್ಲಿ 5 ವಿಕೆಟ್‌ಗೆ 211 (ಚಿರಾಗ್ ಹರ್ಷ 93, ಅಧೃತ್ ಕೆ. 34, ಕಲ್ಲೇಶ್ ಎ.ಜಿ. 3). ಡಿಜೆಸಿಎ: 29.4 ಓವರ್‌ಗಳಲ್ಲಿ 170 (ಶರಣ್ ಮಣಿಕಂಠನ್ 44, ಅಭಿನವ್ ನಾಗ್ 27ಕ್ಕೆ3, ಅಧೃತ್ ಕೆ. 32ಕ್ಕೆ 3). ಫಲಿತಾಂಶ: ಪಿಇಎಸ್‌ಸಿಎ ತಂಡಕ್ಕೆ 41 ರನ್‌ಗಳ ಜಯ

ಸಿಕ್ಸ್ ಕ್ರಿಕೆಟ್ ಅಕಾಡೆಮಿ: 30 ಓವರ್‌ಗಳಲ್ಲಿ 6 ವಿಕೆಟ್‌ಗೆ 152 (ಧ್ರುವ ಕೃಷ್ಣನ್ 50, ಉದ್ಗೀತ್ ಎಸ್. ನಂದನ್ 49) ಸಿಬಿಟಿ ಮಕುಶ್ಲಾ: 28.4 ಓವರ್‌ಗಳಲ್ಲಿ 148 (ಶರ್ವೇಶ್ 27, ಮನೀಶ್ ವಿ. ಪಾಟೀಲ 29ಕ್ಕೆ 2). ಫಲಿತಾಂಶ: ಸಿಕ್ಸ್ ಕ್ರಿಕೆಟ್ ಅಕಾಡೆಮಿಗೆ 4 ರನ್‌ಗಳ ಜಯ.

ಆರ್‌ಎಕ್ಸ್‌ಸಿಎ: 30 ಓವರ್‌ಗಳಲ್ಲಿ 4 ವಿಕೆಟ್‌ಗೆ 220 (ವಿಸ್ಮಯ್ ರಾಜ್ 86, ರಥಿನ್ ಸಂಜಯ್ 68, ಮಿಲನ್ ಧಾಮಿ 37) ಡಿಜೆಸಿಎ: 30 ಓವರ್‌ಗಳಲ್ಲಿ 9 ವಿಕೆಟ್‌ಗೆ 110 (ಅಹಾನ್ 33, ಮಿಲನ್ ಧಾಮಿ 8ಕ್ಕೆ 3, ಎರಿಕ್ರೂಪ್ರಿಯೊ 14ಕ್ಕೆ 2). ಫಲಿತಾಂಶ: ಆರ್‌ಎಕ್ಸ್‌ಸಿಎ ತಂಡಕ್ಕೆ 110 ರನ್‌ಗಳ ಜಯ

ಗೋಪಾಲನ್: 30 ಓವರ್‌ಗಳಲ್ಲಿ 9 ವಿಕೆಟ್‌ಗೆ 150 (ರಥನ್ 22ಕ್ಕೆ 3, ರಾಯನ್ ಖಾನ್ 29ಕ್ಕೆ 2). ಯಂಗ್ ಲಯನ್ಸ್: 29.3 ಓವರ್‌ಗಳಲ್ಲಿ 6 ವಿಕೆಟ್‌ಗೆ 151 (ಕರಣ್ ರಾಘವೇಂದ್ರ 71, ಅರ್ಜುನ್ ಪೊಟ್ಟಿ 30, ಕುಶ್ ಕುಮಾರ್ 29ಕ್ಕೆ 3). ಫಲಿತಾಂಶ: ಯಂಗ್ ಲಯನ್ಸ್‌ಗೆ ನಾಲ್ಕು ವಿಕೆಟ್‌ಗಳ ಜಯ.

ಸಿಫ್ಟ್ ಕೌರ್, ನೀರಜ್‌ಗೆ ಅಗ್ರಸ್ಥಾನ

ನವದೆಹಲಿ (ಪಿಟಿಐ): ಏಷ್ಯನ್ ಗೇಮ್ಸ್ ಸ್ವರ್ಣ ವಿಜೇತೆ ಸಿಫ್ಟ್ ಕೌರ್ ಸಮ್ರಾ ಅವರು ಮೊದಲ ಒಲಿಂಪಿಕ್ ಟ್ರಯಲ್ಸ್‌ನ ಮಹಿಳೆಯರ 50 ಮೀ. ರೈಫಲ್–3 ಪೊಸಿಷನ್ಸ್ ಸ್ಪರ್ಧೆಯಲ್ಲಿ ವಿಜೇತರಾದರು. ಬುಧವಾರ ನಡೆದ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ನೀರಜ್ ಕುಮಾರ್, ನಾಲ್ಕು ಎದುರಾಳಿಗಳ ಸ್ಪರ್ಧೆಯನ್ನು ಮೀರಿ ವಿಜೇತರಾದರು.

ಈ ಸ್ಪರ್ಧೆಯಲ್ಲಿ ವಿಶ್ವದಾಖಲೆ ಹೊಂದಿರುವ ಸಿಫ್ಟ್, ಮೊದಲ 15 ‘ನೀಲಿಂಗ್ ಪೊಸಿಷನ್’ ಶಾಟ್‌ಗಳ ನಂತರ ಆಶಿ ಚೋಕ್ಸಿ ಎದುರು ಹಿನ್ನಡೆಯಲ್ಲಿದ್ದರು. ಆದರೆ ಸಿಫ್ಟ್ ನಂತರ ಚೇತರಿಸಿ ಮುನ್ನಡೆದರು. ಅಂತಿಮವಾಗಿ ಸಿಫ್ಟ್ 466.4 ಸ್ಕೋರ್ ಪಡೆದರೆ, ಆಶಿ 462.6 ಸ್ಕೋರ್ ಗಳಿಸಿದರು. ಒಲಿಂಪಿಯನ್ ಅಂಜುಮ್ ಮೌದ್ಗಿಲ್ (449.2) ಮೂರನೇ ಸ್ಥಾನ ಪಡೆದರು.

ನಿಶ್ಚಲ್ (433.6) ಮತ್ತು ಪ್ಯಾರಿಸ್ ಕೋಟಾ ವಿಜೇತ ಶ್ರೀಯಾಂಕಾ ಸದಂಗಿ (416.7) ಅವರು ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನಕ್ಕೆ ಸರಿದರು. ಪುರುಷರ 50 ಮೀ. ರೈಫಲ್ 3 ಪೊಸಿಷನ್ ಸ್ಪರ್ಧೆಯಲ್ಲಿ ನೀರಜ್, 462.2 ಸ್ಕೋರ್ ಗಳಿಸಿ ಗೆಲ್ಲುವ ಹಾದಿಯಲ್ಲಿ ಕೆಲವು ನೆಚ್ಚಿನ ಸ್ಪರ್ಧಿಗಳನ್ನು ಹಿಂದೆಹಾಕಿದರು. ಪ್ಯಾರಿಸ್ ಒಲಿಂಪಿಕ್ಸ್ ಕೋಟಾ ಹೊಂದಿರುವ ಸ್ವಪ್ನಿಲ್ ಕುಸಲೆ (460.9) ಎರಡನೇ ಸ್ಥಾನ ಗಳಿಸಿದರೆ, ಐಶ್ವರಿ ತೋಮಾರ್ (450.5) ಮೂರನೇ ಸ್ಥಾನ ಗಳಿಸಿದರು. ಚೈನ್ ಸಿಂಗ್ (439.8) ಮತ್ತು ಅಖಿಲ್ ಶೆವೊರಾನ್ (429.1) ಕ್ರಮವಾಗಿ ನಾಲ್ಕು ಮತ್ತು ಐದನೆಯವರಾದರು.

ಸಂಕ್ಷಿಪ್ತ ಸುದ್ದಿ

ಮಹಿಳಾ ಫುಟ್‌ಬಾಲ್ ತಂಡಕ್ಕೆ ಚಾವೋಬಾ ಮುಖ್ಯ ಕೋಚ್

ನವದೆಹಲಿ (ಪಿಟಿಐ): ಭಾರತ ತಂಡದ ಮಾಜಿ ಡಿಫೆಂಡರ್ ಲಂಗಮ್ ಚಾವೊಬಾ ದೇವಿ ಅವರನ್ನು ರಾಷ್ಟ್ರೀಯ ಮಹಿಳಾ ಫುಟ್‌ಬಾಲ್ ತಂಡದ ಮುಖ್ಯ ಕೋಚ್ ಆಗಲು ಸಜ್ಜಾಗಿದ್ದಾರೆ.

ಲಂಗಮ್

ಐ.ಎಂ. ವಿಜಯನ್ ನೇತೃತ್ವದ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ತಾಂತ್ರಿಕ ಸಮಿತಿಯು ಬುಧವಾರ 51 ವರ್ಷದ ಚಾವೊಬಾ ದೇವಿ ಅವರ ಹೆಸರನ್ನು ಶಿಫಾರಸು ಮಾಡಿದೆ.

1999ರಲ್ಲಿ ಫಿಲಿಪೀನ್ಸ್‌ನಲ್ಲಿ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ರಾಷ್ಟ್ರೀಯ ತಂಡದ ನಾಯಕತ್ವ ವಹಿಸಿದ್ದ ಅವರು ಈ ಹಿಂದೆ ಭಾರತ ತಂಡದ ಸಹಾಯಕ ಕೋಚ್ ಆಗಿದ್ದರು.

‘ವಿಸ್ತೃತವಾದ ಚರ್ಚೆಗಳ ನಂತರ ತಾಂತ್ರಿಕ ಸಮಿತಿಯು ಲಂಗಮ್ ಚೋಬಾ ದೇವಿ ಅವರನ್ನು ಕೋಚ್ ಸ್ಥಾನಕ್ಕೆ ಶಿಫಾರಸು ಮಾಡಿದೆ. ಎಐಎಫ್‌ಎಫ್ ಕಾರ್ಯಕಾರಿ ಸಮಿತಿಯು ತನ್ನ ಮುಂದಿನ ಸಭೆಯಲ್ಲಿ ಅದನ್ನು ಅನುಮೋದಿಸಲಿದೆ’ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಹೇಳಿಕೆಯಲ್ಲಿ ತಿಳಿಸಿದೆ.

ಕುಸ್ತಿ ಸಂಸ್ಥೆ: ಅಧ್ಯಕ್ಷರಾಗಿ ನರಸಿಂಗ್ ಆಯ್ಕೆ

ವಾರಾಣಸಿ (ಪಿಟಿಐ): ಕಾಮನ್‌ವೆಲ್ತ್ ಕ್ರೀಡಾಕೂಟದ ಚಿನ್ನದ ಪದಕ ವಿಜೇತ, ಮಾಜಿ ಕುಸ್ತಿಪಟು ನರಸಿಂಗ್ ಪಂಚಮ್ ಯಾದವ್ ಅವರು ಭಾರತ ಕುಸ್ತಿ ಫೆಡರೇಷನ್‌ನ ಅಥ್ಲೀಟ್ ಪ್ಯಾನಲ್‌ನ ಅಧ್ಯಕ್ಷರಾಗಿ ಬುಧವಾರ ನೇಮಕಗೊಂಡಿದ್ದಾರೆ.

ನರಸಿಂಗ್ ಪಂಚಮ್ ಯಾದವ್

ಪ್ಯಾನಲ್‌ನ ಏಳು ಸದಸ್ಯ ಸ್ಥಾನಗಳಿಗೆ 8 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಮತಪತ್ರಗಳ ಮೂಲಕ ಚುನಾವಣೆ ನಡೆಯಿತು. ಆಯ್ಕೆಯಾದ ಏಳು ಅಭ್ಯರ್ಥಿ ಗಳು ನಂತರ ನರಸಿಂಗ್ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿಕೊಂಡರು.

ಸಾಹಿಲ್ (ದೆಹಲಿ), ಎ.ಎಸ್.ಸ್ಮಿತಾ (ಕೇರಳ), ಭಾರತಿ ಭಾಘೀ (ಉತ್ತರಪ್ರದೇಶ), ಖುಷ್ಬೂ ಎಸ್. ಪವಾರ್ (ಗುಜರಾತ್), ನಿಕ್ಕಿ (ಹರಿಯಾಣ) ಹಾಗೂ ಶ್ವೇತಾ ದುಬೆ (ಪಶ್ಚಿಮ ಬಂಗಾಳ) ಸಮಿತಿಗೆ ಆಯ್ಕೆಯಾದ ಇತರ ಸದಸ್ಯರು. ಭಾರತ ಕುಸ್ತಿ ಫೆಡರೇಷನ್ ಮೇಲೆ ಹೇರಿದ್ದ ನಿಷೇಧ ವಾಪಸ್ ಪಡೆಯುವ ಸಂದರ್ಭದಲ್ಲಿ ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ (ಯುಡಬ್ಲ್ಯುಡಬ್ಲ್ಯು) ವಿಧಿಸಿದ್ದ ಷರತ್ತುಗಳಲ್ಲಿ ಅಥ್ಲೀಟ್‌ಗಳ ಪ್ಯಾನಲ್ ರಚನೆಯೂ ಒಂದಾಗಿತ್ತು.

ಭುವನೇಶ್ವರದಲ್ಲಿ ಪೂರ್ವಸಿದ್ಧತಾ ಶಿಬಿರ

ನವದೆಹಲಿ (ಪಿಟಿಐ): ಕುವೈತ್ ಮತ್ತು ಕತಾರ್ ವಿರುದ್ಧದ ನಿರ್ಣಾಯಕ ಎರಡನೇ ಸುತ್ತಿನ ಫಿಫಾ ವಿಶ್ವಕಪ್ 2026 ಅರ್ಹತಾ ಪಂದ್ಯಗಳಿಗೆ ಮುಂಚಿತವಾಗಿ ಭಾರತ ಫುಟ್‌ಬಾಲ್ ತಂಡವು ಮೇ 10 ರಿಂದ ಭುವನೇಶ್ವರದಲ್ಲಿ ನಾಲ್ಕು ವಾರಗಳ ಪೂರ್ವಸಿದ್ಧತಾ ಶಿಬಿರ ನಡೆಸಲಿದೆ.

ಜೂನ್ 6 ರಂದು ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ ಕುವೈತ್ ವಿರುದ್ಧ ಬ್ಲೂ ಟೈಗರ್ಸ್ (ಭಾರತ) ಪಂದ್ಯಕ್ಕೆ ಮುಂಚಿತವಾಗಿ ಅಂತಿಮ ತಂಡ ಜೂನ್ 2 ರಂದು ಕೋಲ್ಕತ್ತಾಗೆ ತೆರಳಲಿದೆ.

‘ಭಾರತ ಸೀನಿಯರ್ ಪುರುಷರ ರಾಷ್ಟ್ರೀಯ ತಂಡವು ಮೇ 10 ರಿಂದ ಭುವನೇಶ್ವರದಲ್ಲಿ 4 ವಾರಗಳ ಪೂರ್ವಸಿದ್ಧತಾ ಶಿಬಿರವನ್ನು ನಡೆಸಲಿದೆ’ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಶನ್ (ಎಐಎಫ್‌ಎಫ್) ಬುಧವಾರ ಟ್ವೀಟ್ ಮಾಡಿದೆ.

ಗೋಪಾಲ್ ರಾವ್ ನಿಧನ

ಬೆಂಗಳೂರು: ಕರ್ನಾಟಕ ಈಜು ಸಂಸ್ಥೆಯ ಅಜೀವ ಸದಸ್ಯ, ದೂರ ಅಂತರದ ಈಜು ಪ್ರವೀಣರಾಗಿದ್ದ ಗೋಪಾಲ್ ರಾವ್ (78) ಅವರು ಮಂಗಳವಾರ ಪಾಕ್ ಜಲಸಂಧಿಯಲ್ಲಿ ಈಜಾಡುವ ವೇಳೆ ಹೃದಯಸ್ತಂಭನದಿಂದ ನಿಧನರಾದರು.

ಗೋಪಾಲ್ ರಾವ್

ಗೋಪಾಲ್ ಅವರು 2018ರಲ್ಲಿ ಇಂಗ್ಲಿಷ್ ಕಡಲ್ಗಾಲುವೆಯನ್ನು ಯಶಸ್ವಿಯಾಗಿ ದಾಟಿದ್ದರು. ಒಂದು ವರ್ಷದ ನಂತರ ಅಮೆರಿಕದಲ್ಲಿ ಕ್ಯಾಟಲಿನಾ ಕಡಲ್ಗಾಲುವೆಯಲ್ಲೂ ಈಜಿದ್ದರು. 2023ರಲ್ಲಿ ಶ್ರೀಲಂಕಾ ಮತ್ತು ಭಾರತ ನಡುವಿನ ಪಾಕ್ ಜಲಸಂಧಿಯನ್ನು ಯಶಸ್ವಿಯಾಗಿ ದಾಟಿದ್ದರು. ಮತ್ತೆ ಅದೇ ಪ್ರಯತ್ನದಲ್ಲಿದ್ದಾಗ ದುರ್ಘಟನೆ ಸಂಭವಿಸಿದೆ ಎಂದು ಈಜು ಸಂಸ್ಥೆಯ ಮೂಲಗಳು ತಿಳಿಸಿವೆ. ಹಲವಾರು ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ವಾಟರ್ ಪೋಲೊ ಆಟಗಾರನಾಗಿ ರಾಜ್ಯವನ್ನು ಗೋಪಾಲ್ ಪ್ರತಿನಿಧಿಸಿದ್ದರು. ಅವರು, 10ಕೆ ಈಜು ಕೂಟಗಳಲ್ಲಿ ಸ್ಪರ್ಧಿಸಿದ್ದರು. ಮಾಸ್ಟರ್ಸ್ ಚಾಂಪಿಯನ್‌ಷಿಪ್‌ಗಳಲ್ಲೂ ಪ್ರಶಸ್ತಿಗಳನ್ನು ಗೆದ್ದಿದ್ದರು. ಕರ್ನಾಟಕ ಈಜು ಅಸೋಸಿಯೇಷನ್‌ನ ಕಾರ್ಯಕಾರಿ ಸಮಿತಿ ಸದಸ್ಯರಾಗಿಯೂ ಕರ್ತವ್ಯ ನಿರ್ವಹಿಸಿದ್ದರು.

ಕುಂಡ್ಯೋಳಂಡ ಕಪ್ ಹಾಕಿ ಟೂರ್ನಿ

ಕ್ವಾರ್ಟರ್‌ಗೆ ಕುಲ್ಲೇಟಿರ, ಚೆಪ್ಪುಡಿರ

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು ಜಿಲ್ಲೆ): ಕುಲ್ಲೇಟಿರ, ಚೆಪ್ಪುಡಿರ, ಚೇದಂಡ ಹಾಗೂ ಬೋವ್ವೆರಿಯಂಡ ತಂಡಗಳು, ಕುಂಡ್ಯೋಳಂಡ ಕಪ್ ಹಾಕಿ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಜಯ ಸಾಧಿಸಿ, ಕ್ವಾರ್ಟರ್ ಫೈನಲ್ ಪ್ರವೇಶಿಸಿದವು.

ಇಲ್ಲಿನ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಚೆಪ್ಪುಡಿರ ತಂಡವು ಚೇತನ್ (2 ಗೋಲು), ಗಗನ್ ಬೆಳ್ಯಪ್ಪ (1), ಕಾರ್ಯಪ್ಪ (1) ಅವರ ಗೋಲುಗಳ ಬಲದಿಂದ 4–0 ಅಂತರದಲ್ಲಿ ಚೆಕ್ಕೆರ ವಿರುದ್ಧ ಭರ್ಜರಿ ಜಯ ಸಾಧಿಸಿತು.

ಕುಲ್ಲೇಟಿರ ತಂಡವು ಐನಂಡ ವಿರುದ್ಧ 3–0 ಅಂತರದಿಂದ ಗೆಲುವು ಪಡೆಯಿತು. ಕುಲ್ಲೇಟಿರ ಪರ ರೋಷನ್, ಸಚಿತ್ ಹಾಗೂ ಅರ್ಜುನ್ ತಲಾ ಒಂದು ಗೋಲು ಗಳಿಸಿದರು.

ಚೇಂದಂಡ ತಂಡವು ಕರಿನೆರವಂಡ ತಂಡವನ್ನು 2–1 ಗೋಲುಗಳಿಂದ, ಬೊವ್ವೇರಿಯಂಡ ತಂಡವು ಐಚೆಟ್ಟಿರ ತಂಡವನ್ನು 2–1 ಅಂತರದಿಂದ ಮಣಿಸಿ ಎಂಟರ ಘಟ್ಟ ತಲುಪಿದವು.

ಒಲಿಂಪಿಕ್ ಕೂಟದಲ್ಲಿ ದೇಶ ಪ್ರತಿನಿಧಿಸಿದ್ದ ಮನೆಯಪಂಡ ಅಶ್ವಿನಿ ನಾಚಪ್ಪ, ಬಾಳೆಯಡ ಕೆ.ಸುಬ್ರಮಣಿ ಹಾಗೂ ಚೇಂದಂಡ ನಿಕಿನ್ ತಿಮ್ಮಯ್ಯ ಪಂದ್ಯಗಳನ್ನು ವೀಕ್ಷಿಸಿದರು.

8 ತಂಡಗಳು ಗುರುವಾರ ನಡೆಯುವ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಸೆಣಸಲಿವೆ.

ಶನಿವಾರ ಸೆಮಿಫೈನಲ್ ಹಾಗೂ ಭಾನುವಾರ ಫೈನಲ್ ಪಂದ್ಯ ನಡೆಯಲಿದೆ.

ಕುಂಡ್ಯೋಳಂಡ ಕಪ್ ಹಾಕಿ ಟೂರ್ನಿಯಲ್ಲಿ ಬುಧವಾರ ಗೋಲು ಗಳಿಸಲು ಚೆಪ್ಪುಡಿರ ಮತ್ತು ಚೆಕ್ಕೆರ ತಂಡಗಳ ಆಟಗಾರರ ಪೈಪೋಟಿ